ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

'ನವದೆಹಲಿ ಘೋಷಣೆ'ಗೆ 'ಜಿ–20' ಒಮ್ಮತದ ಮುದ್ರೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಜಿ–20 ಶೃಂಗಸಭೆಯ ಮೊದಲನೆಯ ದಿನವಾದ ಶನಿವಾರವೇ ಜಾಗತಿಕ ನಾಯಕರು ಪರಸ್ಪರ ವಿಸ್ತೃತ ಚರ್ಚೆಯ ಮೂಲಕ 'ನವದೆಹಲಿ ಘೋಷಣೆ' ಕುರಿತು ಒಮ್ಮತ ಅಭಿಪ್ರಾಯಕ್ಕೆ ಬಂದಿದ್ದಾರೆ.

ಉಕ್ರೇನ್ ವಿರುದ್ಧ ವಿಶೇಷ ಸೇನಾ ಕಾರ್ಯಾಚರಣೆ ನಡೆಸಿದ ರಷ್ಯಾವನ್ನು ಖಂಡಿಸುವುದರಿಂದ ದೂರ ಉಳಿಯಲು ಸದಸ್ಯ ರಾಷ್ಟ್ರಗಳ ನಾಯಕರು ತೀರ್ಮಾನಿಸಿದ್ದಾರೆ. ಆದರೆ, ಯುದ್ಧದಿಂದ ವಿಶ್ವದ ಆರ್ಥಿಕತೆ, ಆಹಾರ ಮತ್ತು ಇಂಧನದ ಮೇಲೆ ಉಂಟಾಗಿರುವ ಪರಿಣಾಮವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ.

ಭಾರತದ ಅಧ್ಯಕ್ಷತೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಶನಿವಾರ ಆರಂಭವಾಗಿರುವ ಜಿ–20 18ನೇ ಶೃಂಗಸಭೆಯಲ್ಲಿ 'ನವದೆಹಲಿ ಘೋಷಣೆ' ಸೇರಿದಂತೆ ಹಲವು ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ಉಕ್ರೇನ್ ಯುದ್ಧದ ಬಗ್ಗೆ ಕರಡುವಿನಲ್ಲಿದ್ದ ಉಲ್ಲೇಖದ ಕುರಿತು ಸದಸ್ಯ ರಾಷ್ಟ್ರಗಳ ನಡುವೆ ಹಲವು ಸುತ್ತಿನ ಮಾತುಕತೆ ನಡೆಯಿತು. ಬಳಿಕ ಎಲ್ಲ ರಾಷ್ಟ್ರಗಳು ನಿರ್ಣಯದ ಕುರಿತು ಒಮ್ಮತದ ಅಭಿಪ್ರಾಯಕ್ಕೆ ಬಂದವು. ನವದೆಹಲಿ ಘೋಷಣೆಗೆ ತ್ವರಿತಗತಿಯಲ್ಲಿ ಅಂಗೀಕಾರ ಸಿಕ್ಕಿದ್ದು ಭಾರತದ ಪಾಲಿಗೆ ದೊಡ್ಡ ಮೈಲಿಗಲ್ಲು ಎಂದು ಬಣ್ಣಿಸಲಾಗಿದೆ.

ದಿನದ ಎರಡನೇ ಅಧಿವೇಶನದಲ್ಲಿ ಜಂಟಿ ಹೇಳಿಕೆ ಬಿಡುಗಡೆಗೊಳಿಸಿದ ಭಾರತದ ಪ್ರಧಾನಿ ನರೇಂದ್ರ ಮೋದಿ, 'ಸ್ನೇಹಿತರೇ, ಈಗ ನಮಗೆ ಒಳ್ಳೆಯ ಸುದ್ದಿ ಬಂದಿದೆ' ಎಂದರು.

7ನೇ ಪುಟ ನೋಡಿ



ಅಮೆರಿಕ ಅಧ್ಯಕ್ಷ ಜೋ ಬೈಡನ್, ಪ್ರಧಾನಿ ನರೇಂದ್ರ ಮೋದಿ, ಬ್ರೆಜಿಲ್ ಅಧ್ಯಕ್ಷ ಲೂಯಿಸ್ ಇನಾಸಿಯೊ ಲುಲಾ ಡ ಸಿಲ್ವ ಅವರು 'ಜೈವಿಕ ಇಂಧನ ಕೂಟ'ಕ್ಕೆ ಚಾಲನೆ ನೀಡಿದ ಬಳಿಕ ಒಗ್ಗಟ್ಟು ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

- ಜಿ20 ಗುಂಪಿಗೆ ಆಫ್ರಿಕನ್ ಒಕ್ಕೂಟ ಹೊಸದಾಗಿ ಸೇರ್ಪಡೆ
- ವಿಶ್ವದಾದ್ಯಂತ ಶೇ 20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆ ಹೆಚ್ಚಿಸುವ ಜಾಗತಿಕ ಜೈವಿಕ ಇಂಧನ ಕೂಟ ರಚನೆಯ ಘೋಷಣೆ
- ಭಾರತ , ಮಧ್ಯಪ್ರಾಚ್ಯ, ಯುರೋಪ್ ನಡುವೆ ಆರ್ಥಿಕ ಕಾರಿಡಾರ್ ಯೋಜನೆಗೆ ಚಿಂತನೆ
- ಜಿ20 ರಾಷ್ಟ್ರಗಳ ಪರಿಸರ ಮತ್ತು ಹವಾಮಾನ ವೀಕ್ಷಣೆಗಾಗಿ ಉಪಗ್ರಹ ಯೋಜನೆ
- ಭಾರತ ಮತ್ತು ಬ್ರಿಟನ್ ನಡುವೆ ವ್ಯಾಪಾರ, ಹೂಡಿಕೆ ಕುರಿತು ಮೋದಿ ಹಾಗೂ ರಿಷಿ ಸುನಕ್ ದ್ವಿಪಕ್ಷೀಯ ಮಾತುಕತೆ
- ವಾಣಿಜ್ಯ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಭಾರತ ಮತ್ತು ಜಪಾನ್ ನಡುವೆ ಪರಸ್ಪರ ಸಹಕಾರಕ್ಕೆ ಸಮ್ಮತಿ
- ವ್ಯಾಪಾರ, ವಾಣಿಜ್ಯ, ರಕ್ಷಣೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಒಟ್ಟಾಗಿ ಕೆಲಸ ಮಾಡಲು ಭಾರತ–ಇಟಲಿ ಒಪ್ಪಿಗೆ
- ಔತಣಕೂಟಕ್ಕೆ ಆಗಮಿಸಿದ ನಾಯಕರಿಗೆ ಸ್ವಾಗತ ಕೋರಿದ ರಾಷ್ಟ್ರಪತಿ ದ್ರೌಪದಿ ಮುರ್ಮು

G20 भारत 2023 INDIA



ಮಂಗಳೂರಿನ ಬಂದರಿನಲ್ಲಿ ಮೀನುಗಾರಿಕಾ ದೋಣಿಗಳು ಲಂಗರು ಹಾಕಿರುವುದು– ಪ್ರಜಾವಾಣಿ ಚಿತ್ರ

ಬಂದರು ವಿಸ್ತರಣೆಗೆ ನಿರಾಸಕ್ತಿ

ದೋಣಿಗಳಿಂದ ಗಿಜಿಗುಡುವ ದಕ್ಕೆಗಳು • ತೊಂದರೆಯಲ್ಲಿ ಮೀನುಗಾರರು

• ಪ್ರವೀಣ್ ಕುಮಾರ್ ಪಿ.ವಿ

ಒಳನೋಟ
ಮೀನುಗಾರಿಕೆಗೆ 'ಹೊಡೆತ'
ಪ್ರತಿಕ್ರಿಯಿಸಿ: 9606038256
feedback@prajavani.co.in

ಮಂಗಳೂರು: ನಿರೀಕ್ಷಿಸಿದಷ್ಟು ಮೀನು ಸಿಕ್ಕಿಲ್ಲ ಎಂಬುದಕ್ಕಿಂತಲೂ ದಕ್ಕೆಯಲ್ಲಿ ಬೋಟು ನಿಲ್ಲಿಸಲು ಜಾಗ ಸಿಗುತ್ತದೋ ಇಲ್ಲವೋ ಎಂಬುದೇ 'ಆದಿಲ್' ದೋಣಿಯ ಚಾಲಕ ಗಣಪತಿ ಅವರ ಚಿಂತೆ. ಸಮುದ್ರಕ್ಕೆ ತೆರಳಿದ್ದ ಅವರು ನಗರದ ಹಳೆ ಮೀನುಗಾರಿಕಾ ಬಂದರಿನಲ್ಲಿ ದೋಣಿ ನಿಲ್ಲಿಸಲು ಜಾಗ ಸಿಕ್ಕಾಗ ತುಸು ನಿರಾಳರಾದರು.

'ಸಮುದ್ರದಲ್ಲಿ ಇವತ್ತಲ್ಲದಿದ್ದರೆ ನಾಳೆ ಯಾದರೂ ಮೀನು ಸಿಗುತ್ತದೆ ಎಂಬ ಭರವಸೆ ನಮಗಿದೆ. ಆದರೆ, ದಕ್ಕೆಯಲ್ಲಿ ಬೋಟು ನಿಲ್ಲಿಸಲಿಕ್ಕೆ ಜಾಗ ಸಿಗುತ್ತದೆ ಎಂದು ಎಳ್ಳಿನಿತೂ ವಿಶ್ವಾಸ ಇರುವುದಿಲ್ಲ. ಬೋಟು ನಿಲ್ಲಿಸಲು ಜಾಗ ಸಿಕ್ಕರೆ, ಆ ದಿನದ ಮಟ್ಟಿಗೆ ನಾವು ಪುಣ್ಯವಂತರು' ಎನ್ನುತ್ತಾರೆ ದೋಣಿಯ ಮಾಲೀಕ ಇಬ್ರಾಹಿಂ ಬೆಂಗ್ರೆ.


'ಒಂದಕ್ಕೊಂದು ಅಂಟಿಕೊಂಡಂತೆ ನಿಂತಿರುವ ಬೋಟುಗಳ ನಡುವೆಯೇ ತುಸು ಜಾಗ ಮಾಡಿಕೊಂಡು ದೋಣಿಯನ್ನು ನಿಲ್ಲಿಸಬೇಕು. ಕಿಷ್ಕಿಂದೆಯಂತಾಗಿರುವ ದಕ್ಕೆಯಲ್ಲಿ ಬೋಟುಗಳನ್ನು ತಂದು ನಿಲ್ಲಿಸುವಾಗ ಮತ್ತು ಹೊರ ತೆಗೆಯುವಾಗ ಇನ್ನೊಂದು ಬೋಟ್‌ಗೆ ಡಿಕ್ಕಿ ಸಂಭವಿಸಿ ಹಾನಿ ಉಂಟಾಗುವ ಫಜೀತಿ ಯಾರಿಗೂ ಬೇಡ' ಎನ್ನುತ್ತಾರೆ ದೋಣಿಯ ಮಾಲೀಕ ಮೋಹನ್ ಬೆಂಗ್ರೆ.

4,646 ರಾಜ್ಯದ ಬಂದರುಗಳಲ್ಲಿ ಕಾರ್ಯಾಚರಿಸುವ ಯಾಂತ್ರೀಕೃತ ದೋಣಿಗಳು	**10,961** ರಾಜ್ಯದ ಬಂದರುಗಳಲ್ಲಿರುವ ಮೋಟಾರೀಕೃತ ದೋಣಿಗಳು
8657 ರಾಜ್ಯದ ಬಂದರುಗಳಲ್ಲಿರುವ ಸಾಂಪ್ರದಾಯಿಕ ದೋಣಿಗಳು	**8** ರಾಜ್ಯದಲ್ಲಿರುವ ಮೀನುಗಾರಿಕಾ ಬಂದರುಗಳು
16 ರಾಜ್ಯದಲ್ಲಿರುವ ಮೀನು ಇಳಿದಾಣ (ಫಿಷ್ ಲ್ಯಾಂಡಿಂಗ್) ಕೇಂದ್ರಗಳು	**91** ರಾಜ್ಯದ ಕಿನಾರೆಯಲ್ಲಿ ಮೀನುಗಾರಿಕೆ ನಡೆಯುವ ಪ್ರದೇಶಗಳು (ಬೀಚ್ ಲ್ಯಾಂಡಿಂಗ್ ಪಾಯಿಂಟ್ಸ್)

ಮಂಗಳೂರಿನ ಹಳೆ ಬಂದರಿನ ದಕ್ಕೆಯಲ್ಲಿ ಮೀನುಗಾರಿಕಾ ದೋಣಿಯನ್ನು ನಿಲ್ಲಿಸುವುದು ಎಷ್ಟು ಕಷ್ಟ ಎಂಬುದು ಈ ಮೀನುಗಾರರ ಮಾತುಗಳಲ್ಲೇ ವೇದ್ಯವಾಗುತ್ತದೆ. ಇದು ಇಲ್ಲಿನ ಹಳೆ ಬಂದರು ದಕ್ಕೆಯೊಂದರ ಸ್ಥಿತಿ ಮಾತ್ರವಲ್ಲ; ರಾಜ್ಯದ ಬಹುತೇಕ ಮೀನುಗಾರಿಕಾ ಬಂದರುಗಳಲ್ಲಿ ಇಂತಹದ್ದೇ ಸ್ಥಿತಿ ಇದೆ.

4ನೇ ಪುಟ ನೋಡಿ

ಚಂದ್ರಬಾಬು ನಾಯ್ಡು ಬಂಧನ



ಅಮರಾವತಿ (ಪಿಟಿಐ): ಕೌಶಲ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಪ್ರಕರಣಕ್ಕೆ ಸಂಬಂಧಿಸಿ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ತೆಲುಗುದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರನ್ನು ಸಿಐಡಿ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಅಂದಾಜು ₹550 ಕೋಟಿ ಹಣ ದುರುಪಯೋಗ ಪ್ರಕರಣದಲ್ಲಿ ಚಂದ್ರಬಾಬು ನಾಯ್ಡು ಮಾತ್ರವಲ್ಲದೆ ಟಿಡಿಪಿ ಸಹ ಫಲಾನುಭವಿ ಎಂಬುದು ತನಿಖೆಯಿಂದ ತಿಳಿದು ಬಂದಿದೆ' ಎಂದು ಆಂಧ್ರಪ್ರದೇಶದ ಸಿಐಡಿಯ ಎಡಿಜಿಪಿ ಎನ್. ಸಂಜಯ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅಂದಾಜು ₹3,300 ಕೋಟಿ ಯೋಜನಾ ವೆಚ್ಚದ, ಉತ್ಕೃಷ್ಟತಾ ಕೇಂದ್ರಗಳ ಕ್ಲಸ್ಟರ್ ಸ್ಥಾಪನೆಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ನಡೆದಿರುವ ಅವ್ಯವಹಾರದಿಂದಾಗಿ ರಾಜ್ಯ ಸರ್ಕಾರಕ್ಕೆ ₹300 ಕೋಟಿ ನಷ್ಟ ಉಂಟಾಗಿತ್ತು ಎಂದು ಅವರು ವಿವರಿಸಿದ್ದಾರೆ.

'ಚಂದ್ರಬಾಬು ನಾಯ್ಡು ಅವರೇ ಈ ಪ್ರಕರಣದ ಪ್ರಮುಖ ಸಂಚುಕೋರರಾಗಿದ್ದು, ಅವರ ಅರಿವಿನಲ್ಲೇ ಸಾರ್ವಜನಿಕರ ಹಣವನ್ನು ಖಾಸಗಿ ಸಂಸ್ಥೆಗಳಿಗೆ ಶೆಲ್ ಕಂಪನಿಗಳ ಮೂಲಕ ವರ್ಗಾಯಿಸಲಾಗಿತ್ತು' ಎಂದು ಸಂಜಯ್ ಹೇಳಿದ್ದಾರೆ.

9ನೇ ಪುಟ ನೋಡಿ

'ಪಂಚೆಯೊಳಗೆ ಖಾಕಿ ಚಡ್ಡಿಯನ್ನು ಧರಿಸುವುದು ಸಮಾಜವಾದವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹ್ಯೂಬ್ಲೋ ವಾಚ್ ಕಟ್ಟಿಕೊಂಡು, ಪಂಚೆ ಉಟ್ಟುಕೊಂಡು ಒಳಗೆ ಖಾಕಿ ಚಡ್ಡಿ ಧರಿಸುವುದು ಸಮಾಜವಾದವಲ್ಲ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ಈಡಿಗ ಮತ್ತು ಅತಿ ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆ ಹರಿಪ್ರಸಾದ್ ಅವರ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯರ ಹೆಸರು ಹೇಳದೆಯೇ ಭಾಷಣದುದ್ದಕ್ಕೂ ಅವರ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಈಡಿಗ, ಬಂಜಾರ, ಛಲವಾದಿ, ಕುಂಬಾರ, ಕೊರಚ, ಮೇದಾರ, ಪಿಂಜಾರ, ವಿಶ್ವಕರ್ಮ, ಕೋಲಿ ಸೇರಿದಂತೆ ಹಿಂದುಳಿದ, ಅತಿ ಹಿಂದುಳಿದ ಸಮುದಾಯಗಳ ಮಠಾಧೀಶರು ಮತ್ತು ಮುಖಂಡರು ವೇದಿಕೆಯಲ್ಲಿದ್ದರು. ಈ ಎಲ್ಲ ಸಮುದಾಯಗಳಿಗೂ ಸಾಮಾಜಿಕ ನ್ಯಾಯ ಒದಗಿಸುವಂತೆ ಹರಿಪ್ರಸಾದ್ ಆಗ್ರಹಿಸಿದರು.

'ಬಿಜೆಪಿ ಬಾಗಿಲು ಬಡಿದಿರಲಿಲ್ಲ': 'ನಾನು ಅಧಿಕಾರ ಸಿಕ್ಕಿಲ್ಲ ಎಂದು ಅಡ್ವಾಣಿ ಅವರನ್ನು ಭೇಟಿ ಮಾಡಿ, ಅವರ ಮನೆಯಲ್ಲಿ ಉಪಾಹಾರ ಸ್ವೀಕರಿಸಿ ಬಿಜೆಪಿ ಸೇರಲು ಹೋಗಿರಲಿಲ್ಲ. ಯಾರು ಹೋಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿದ್ದ ವೆಂಕಯ್ಯ ನಾಯ್ಡು, ಅರವಿಂದ ಲಿಂಬಾವಳಿ ಈಗಲೂ ಇದ್ದಾರೆ' ಎಂದು ಹೇಳಿದರು.

5ನೇ ಪುಟ ನೋಡಿ

ಮೊರೊಕ್ಕೊ ಭೂಕಂಪ: 1,300ಕ್ಕೂ ಹೆಚ್ಚು ಜನ ಸಾವು

ಮಾರುಕೇಶ್ (ಮೊರೊಕ್ಕೊ) (ಎಪಿ): ನಗರದಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ 7.2ರಷ್ಟು ತೀವ್ರತೆಯ ಭೂಕಂಪದಲ್ಲಿ 1,305 ಮಂದಿ ಮೃತಪಟ್ಟು, 1,832 ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ 1,220 ಜನರ ಸ್ಥಿತಿ ಗಂಭೀರವಾಗಿದೆ

ದಕ್ಷಿಣ ಮಾರುಕೇಶ್‌ನಿಂದ 70 ಕಿ.ಮೀ ದೂರದಲ್ಲಿರುವ ಐಘಿಲ್ ನಗರದಲ್ಲಿ ಭೂಕಂಪನ ಕೇಂದ್ರ ಬಿಂದು ಇತ್ತು ಎಂದು ಇಲ್ಲಿನ ಒಳಾಡಳಿತ ಸಚಿವಾಲಯ ಶನಿವಾರ ತಿಳಿಸಿದೆ.

ಹಲವು ಕಟ್ಟಡಗಳು ನೆಲಸಮಗೊಂಡಿದ್ದು, ಅವಶೇಷಗಳಡಿ ಹಲವು ಜನರು ಸಿಲುಕಿಕೊಂಡಿದ್ದಾರೆ, ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ. ಭೂಕಂಪ ಪೀಡಿತ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆ ಚುರುಕುಗೊಂಡಿದೆ.

ಇನ್ನೊಂದು ಸುದ್ದಿ 8

ಚಿನಕುರಳಿ
ಪ್ರಕಾಶ್ ಶೆಟ್ಟಿ



ಟಿ.ಎನ್. ಶೇಷನ್ ಆತ್ಮಕಥೆ ಬಿಡುಗಡೆ

ಚೆನ್ನೈ (ಪಿಟಿಐ): ಮಾಜಿ ಮುಖ್ಯ ಚುನಾವಣಾ ಆಯುಕ್ತ, ದಿವಂಗತ ಟಿ.ಎನ್. ಶೇಷನ್ ಅವರ ಆತ್ಮಕಥೆ 'ಥ್ರೂ ದಿ ಬ್ರೋಕನ್ ಗ್ಲಾಸ್' ಅನ್ನು ಸಂಕಲ್ಪ್ ಬ್ಯೂಟಿಫುಲ್ ವರ್ಲ್ಡ್ (ಎಸ್‌ಬಿಡಬ್ಲ್ಯು) ಅಧ್ಯಕ್ಷ ಲಚುಮನಾಧಾಸ್ ಕಾಳಿದಾಸ್ ಅವರು ಇತ್ತೀಚೆಗೆ ಬಿಡುಗಡೆ ಮಾಡಿದರು.

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಚುನಾವಣಾ ಆಯೋಗದ ಮಾಜಿ ಮುಖ್ಯಸ್ಥ ಟಿ.ಎಸ್. ಕೃಷ್ಣಮೂರ್ತಿ 'ಚುನಾವಣಾ ಆಯೋಗದ ಇತಿಹಾಸವನ್ನು ಬರೆಯಬೇಕಾದರೆ ಅದನ್ನು ಶೇಷನ್ ಪೂರ್ವ ಮತ್ತು ನಂತರ ಎಂದು ಎರಡು ಭಾಗಗಳಾಗಿ ವಿಂಗಡಿಸಬೇಕು' ಎಂದು ಹೇಳಿದರು.

ಪುಸ್ತಕದ ಮೊದಲ ಪ್ರತಿಯನ್ನು ಕಾರಾಗೃಹದ ಡಿಜಿಪಿ ಅಮರೇಶ ಪೂಜಾರಿ ಅವರಿಗೆ ಕೃಷ್ಣಮೂರ್ತಿ ಅವರು ಹಸ್ತಾಂತರಿಸಿದರು. ಪುಸ್ತಕ ಖರೀದಿಗೆ https://www.sankalpbeautifulworld.org ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಬೇಸರ • ಬಹುರೂಪಿಯಿಂದ ಹತ್ತು ಪುಸ್ತಕಗಳು ಬಿಡುಗಡೆ

'ಪಠ್ಯದಲ್ಲಿ ಸಿದ್ಧಾಂತ ತುರುಕಲಾಗುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಪಠ್ಯಗಳಿಗೆ ಚೌಕಟ್ಟು ಹಾಕಿ, ಸಿದ್ಧಾಂತಗಳನ್ನು ತುರುಕುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಬಹುರೂಪಿ ಪ್ರಕಾಶನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಸಂಬಂಧಿಸಿದ 10 ಅನುವಾದಿತ ಕೃತಿಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಮಕ್ಕಳಿಗೆ ಅವರ ಲೋಕವನ್ನು ಉಳಿಸಿ ಹೋಗಲು ಸಾಧ್ಯವೆ? ಎಲ್ಲ ಮಕ್ಕಳನ್ನು ಮಕ್ಕಳೆಂದು ಸ್ವೀಕರಿಸುವ ವಾತಾವರಣ ಇದೆಯೆ? ಮಕ್ಕಳ ಬೇಕು ಬೇಡಗಳನ್ನು ನಿರ್ಧರಿಸುವವರು ಯಾರು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಷ್ಟ. ಮಕ್ಕಳಿಗೆ ಉತ್ತಮ ಪಠ್ಯವನ್ನು ಒದಗಿಸಬೇಕು. ಆದರೆ, ಈ ಕೆಲಸ ಮಾಡಬೇಕಾದವರು ಪಠ್ಯದಲ್ಲಿ ವಿಷಬೀಜವನ್ನು ಬಿತ್ತುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕಲಿಕೆಗೆ ಚೌಕಟ್ಟುಗಳನ್ನು ಹಾಕುತ್ತಿರುವುದರಿಂದ ಮಕ್ಕಳು ಸಂಕುಚಿತರಾಗುತ್ತಿದ್ದಾರೆ. ಪಠ್ಯಪುಸ್ತಕ ಪ್ರಕಟಣೆಯಲ್ಲಿಯೂ ಭ್ರಷ್ಟಾಚಾರ ತಾಂಡವವಾಡುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಹತ್ತು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) ಅನುವಾದಕಿ ವಿ.ಗಾಯತ್ರಿ, ಕೋಟಿಗಾನಹಳ್ಳಿ ರಾಮಯ್ಯ, ನಾಗೇಶ್ ಹೆಗಡೆ, ಎಂ.ಡಿ.ಪಲ್ಲವಿ ಹಾಗೂ ಟಾಟಾ ಟ್ರಸ್ಟ್‌ನ ಲಕ್ಷ್ಮಿ ಕರುಣಾಕರನ್ ಇದ್ದಾರೆ – ಪ್ರಜಾವಾಣಿ ಚಿತ್ರ

ವಿಜ್ಞಾನ ಬರಹಗಾರ ನಾಗೇಶ್ ಹೆಗಡೆ, 'ಗ್ರಾಮೀಣ ಭಾರತದಲ್ಲಿ ಉಳಿಯಬೇಕಾದದ್ದು ಉಳಿಯುತ್ತಿಲ್ಲ, ಕಳೆಯಬೇಕಾದದ್ದು ಕಳೆಯುತ್ತಿಲ್ಲ. ಕಲಾ ವೈವಿಧ್ಯತೆ, ಜೀವ ವೈವಿಧ್ಯತೆಗಳು ಗ್ರಾಮೀಣ ಭಾಗದಿಂದ ಮರೆಯಾಗುತ್ತಿವೆ. ಆದರೆ, ಮೂಢನಂಬಿಕೆಯಂತಹ ಆಚರಣೆಗಳು ಇನ್ನೂ ಜೀವಂತವಾಗಿಯೇ ಉಳಿದಿವೆ. ಹೀಗಾಗಿ, ವಿಶಿಷ್ಟ ಕಾಲಘಟ್ಟದಲ್ಲಿ ನಾವಿದ್ದೇವೆ. ಪುಸ್ತಕಗಳನ್ನು ಓದುಗರಿಗೆ ತಲುಪಿಸಲು ಸಹ ಹಲವಾರು ಅಡೆತಡೆಗಳಿವೆ. ಕನ್ನಡದ ಪುಸ್ತಕಗಳನ್ನು ಶಾಲೆಗಳಿಗೆ ನೀಡಬೇಕೆಂದರೆ ಕನ್ನಡ ಮಾಧ್ಯಮ ಶಾಲೆಗಳೇ ಕಣ್ಮರೆಯಾಗುತ್ತಿವೆ. ಕನ್ನಡ ಓದುವ ಮಕ್ಕಳೂ ಸಿಗುತ್ತಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ, ಸಾಹಿತ್ಯ ಅಕಾಡೆಮಿಯಂತಹ ಸಂಸ್ಥೆಗಳು ಪುಸ್ತಕಗಳನ್ನು ತಲುಪಿಸುವ ಕೆಲಸ ಮಾಡಬೇಕು' ಎಂದು ಹೇಳಿದರು.

ಗಾಯಕಿ ಎಂ.ಡಿ. ಪಲ್ಲವಿ, 'ಮಕ್ಕಳ ಕಥೆಗಳು ಹಾಗೂ ಪದ್ಯಗಳು ಅಷ್ಟಾಗಿ ನಮ್ಮ ಭಾಷೆಯಲ್ಲಿ ಇಲ್ಲ. ಹಾಗಾಗಿ, ಅವುಗಳನ್ನು ಸೃಷ್ಟಿಸುವ ಕೆಲಸ ಆಗಬೇಕು' ಎಂದು ತಿಳಿಸಿದರು.

ಬಿಡುಗಡೆಯಾದ ಪುಸ್ತಕಗಳು

'ಸ್ನೇಹಗ್ರಾಮದ ಸಂಸತ್ತು', 'ನಂದಿನಿ ಎಂಬ ಜಾಣೆ', 'ಮರಳಿ ಮನೆಗೆ', 'ಟಿಕೆಟ್ ಇಲ್ಲ, ಪ್ರಯಾಣ ನಿಲ್ಲಲ್ಲ', 'ಗೆದ್ದೇ ಬಿಟ್ಟೆ..!', 'ಲೇಡಿ ಟಾರ್ಜಾನ್!', 'ಸೀರೆ ಉಡುವ ರಾಕ್‌ಸ್ಟಾರ್', 'ಈ ಪಿಕ್ ಯಾರ ಕ್ಲಿಕ್?', 'ಸುಂದರಬಾಗ್ ಬೀದಿಯಲ್ಲಿ ಸಡಿಯಿತೊಂದು ವಿಸ್ಮಯ' ಹಾಗೂ 'ಮರ ಏರಲಾಗದ ಗುಮ್ಮ' ಕೃತಿ ಬಿಡುಗಡೆಯಾಯಿತು. ಪ್ರೀತಿ ಡೇವಿಡ್, ಅಪರ್ಣಾ ಕಾರ್ತಿಕೇಯನ್, ಸಬೂಹಿ ಜಿವಾನಿ, ವಿಶಾಖ ಜಾರ್ಜ್, ನಿವೇಧಾ ಗಣೇಶ್, ಪರ್ಲ್ ಡಿಸಿಲ್ವ, ನಂದಿತಾ ದಾ ಕುನ್ಹಾ, ತಾನ್ಯಾ ಮಜುಂದಾರ್, ಲಾವಣ್ಯ ಕಾರ್ತೀಕ್ ಅವರು ಮೂಲ ಲೇಖಕರಾಗಿದ್ದು, ಕನ್ನಡಕ್ಕೆ ರಾಜಾರಾಂ ತಲ್ಲೂರು, ವಿ.ಗಾಯತ್ರಿ, ಅಬ್ಬೂರು ಪ್ರಕಾಶ್, ಪ್ರಸಾದ್ ನಾಯ್ಕ್, ಸಂತೋಷ ತಾಮ್ರಪರ್ಣಿ, ಎಂ.ಡಿ. ಪಲ್ಲವಿ, ರಶ್ಮಿ ಎಸ್., ದೀಪದಮಲ್ಲಿ ಹಾಗೂ ಶ್ರೀಜಾ ವಿ.ಎನ್. ಅನುವಾದ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಗಣೇಶ ಹಬ್ಬ: 63 ಏಕಗವಾಕ್ಷಿ ಕೇಂದ್ರಗಳ ಸ್ಥಾಪನೆ

ಬೆಂಗಳೂರು: ಪರಿಸರಕ್ಕೆ ಪೂರಕವಾಗಿ ಗಣೇಶ ಚತುರ್ಥಿ ಹಬ್ಬ ಆಚರಿಸಲು ಬಿಬಿಎಂಪಿ ಕೆಲವು ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡಿದೆ. ನಗರದ ವಿವಿಧೆಡೆ 63 ಏಕಗವಾಕ್ಷಿ ಕೇಂದ್ರಗಳನ್ನು ಸ್ಥಾಪನೆ ಮಾಡಿದೆ.

ಗಣೇಶ ಮೂರ್ತಿಯ ತಯಾರಿಕೆಗೆ ರಾಸಾಯನಿಕ ಬಣ್ಣ, ಥರ್ಮಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರಿಸ್‌ಗಳನ್ನು ಬಳಸಬಾರದು. ಈ ರೀತಿಯ ವಸ್ತುಗಳನ್ನು ಬಳಸಿ ತಯಾರಿಸುವ ಗಣೇಶ ಮೂರ್ತಿಗಳನ್ನು ವಶಪಡಿಸಿಕೊಳ್ಳಲಾಗುವುದು. ಹಬ್ಬ ಆಚರಣೆಯಿಂದ ಉತ್ಪತ್ತಿಯಾಗುವ ಹಸಿತ್ಯಾಜ್ಯವನ್ನು ಪಾಲಿಕೆಯ ಸಂಸ್ಕರಣಾ ಘಟಕಗಳಿಗೆ ಸಂಸ್ಕರಣೆಗಾಗಿ ಕಳುಹಿಸಲು ಮತ್ತು ಪರಿಸರಸ್ನೇಹಿ ಗಣೇಶ ಹಬ್ಬ ಆಚರಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ಅವರು ವಲಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಹಾಗೂ ಕಾರ್ಯಕ್ರಮ ಆಯೋಜಿಸುವ ಸಂಬಂಧ, ಬಿಬಿಎಂಪಿ, ಬೆಸ್ಕಾಂ, ಪೊಲೀಸ್ ಹಾಗೂ ಅಗ್ನಿಶಾಮಕ ಇಲಾಖೆಗಳನ್ನು ಒಳಗೊಂಡಂತೆ 63 ಉಪ ವಿಭಾಗಗಳಲ್ಲಿ ಏಕಗವಾಕ್ಷಿ ಕೇಂದ್ರಗಳ ಮೂಲಕ ಪೂರ್ವಾನುಮತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

'ಮಾನವೀಯ ಮೌಲ್ಯ ಕಲಿಸಿ'



ರಾಜರಾಜೇಶ್ವರಿನಗರ: ಮಕ್ಕಳಿಗೆ ಶಿಸ್ತು, ಸಂಸ್ಕಾರ, ವಿದ್ಯೆ, ಬುದ್ಧಿ, ಮಾನವೀಯತೆ, ಸಮಾಜಮುಖಿ ಸೇವೆ ಮಾಡುವಂತಹ ವಾತಾವರಣ ನಿರ್ಮಾಣ ಮಾಡುವ ಶಿಕ್ಷಕರು ಕಣ್ಣಿಗೆ ಕಾಣುವ ನಿಜವಾದ ದೇವರು ಎಂದು ಕಾಂಗ್ರೆಸ್ ಮುಖಂಡ ಲಗ್ಗೆರೆ ನಾರಾಯಣಸ್ವಾಮಿ ಹೇಳಿದರು.

ಮಾರುತಿನಗರದ ಬಿಬಿಎಂಪಿ ಶಾಲೆಯಲ್ಲಿ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ದೇಶದ ಆಸ್ತಿ, ಬಾಲ್ಯದಲ್ಲಿಯೇ ಗುಣಮಟ್ಟದ ಅಕ್ಷರ, ಜ್ಞಾನಕೊಡುವ ಮೂಲಕ, ವಿಜ್ಞಾನಿ, ಕವಿ, ವೈದ್ಯ, ಎಂಜಿನಿಯರ್ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ತಯಾರು ಮಾಡುವ ಶಿಕ್ಷಕರನ್ನು ಮಕ್ಕಳು ಸೇರಿ ಶಿಕ್ಷಕರಿಗೆ ಹಮ್ಮಿಕೊಂಡಿದ್ದ ಸನ್ಮಾನಿಸುವ ಕಾರ್ಯಕ್ರಮ ಸಿಕ್ಕಿರುವುದು ಪೂರ್ವಜನ್ಮದ ಪುಣ್ಯ ಎಂದರು.

ಮುಖ್ಯ ಶಿಕ್ಷಕ ಗೋವಿಂದರಾಜು ಮಾತನಾಡಿ, ವಿದ್ಯಾರ್ಥಿಗಳು, ಉನ್ನತ ಶಿಕ್ಷಣ ಪಡೆದು ಉನ್ನತ ಅಧಿಕಾರಿಗಳಾದರೂ ತನ್ನೂರು, ಪೋಷಕರು, ನೊಂದವರು, ಕಡುಬಡವರ ಸೇವೆ ಸಲ್ಲಿಸಿದಾಗ ಮಾತ್ರ ಶಿಕ್ಷಕರು ಕಲಿಸಿದ ವಿದ್ಯೆಗೆ ಅರ್ಥಸಿಗುತ್ತದೆ ಎಂದು ಹೇಳಿದರು.

ಶಿಕ್ಷಕಿಯರಾದ ಪುಷ್ಪಾವತಿ, ರತ್ನಮ್ಮ ಇದ್ದರು.

'ದೇಶದಲ್ಲಿ ಅನಕ್ಷರತೆ: ವಿಷಾದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ್ಯ ದೊರೆತು 76 ವರ್ಷವಾದರೂ ರಾಜ್ಯದಲ್ಲಿ ಇಂದಿಗೂ ದೇಶದಲ್ಲಿ ಅನಕ್ಷರತೆ ಇರುವುದು ವಿಷಾದನೀಯ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತೆ ಬಿ.ಬಿ. ಕಾವೇರಿ ಅವರು ಹೇಳಿದರು.

ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಸಾಕ್ಷರತಾ ಭಿತ್ತಿಪತ್ರ ಹಾಗೂ 2022–23ರಲ್ಲಿ ಯಶಸ್ವಿಗೊಳಿಸಿದ ಸಾಕ್ಷರತಾ ಕಾರ್ಯಕ್ರಮಗಳ ಮಾಹಿತಿಯುಳ್ಳ ಕಿರು ಹೊತ್ತಿಗೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಶಿಕ್ಷಣ ಇಲಾಖೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲಾಗಿದೆ. ಅದರಂತೆ, ಇಲಾಖೆಯ ಎಲ್ಲ ಅಧಿಕಾರಿಗಳು ಹಾಗೂ ಶಿಕ್ಷಕರು ಹೆಚ್ಚಿನ ಆಸಕ್ತಿಯಿಂದ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ' ಎಂದು ಅವರು ತಿಳಿಸಿದರು.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ನಿರ್ದೇಶಕಿ ಸುಮಂಗಲ. ವಿ ಇದ್ದರು.

ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ ಮನದಾಳದ ಮಾತು

'ಲಕ್ಷ್ಮಣನಿಗೆ ಪೋಲಿ ಕವಿಯೆಂದರೆ ನೋವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕವಿ ಬಿ.ಆರ್. ಲಕ್ಷ್ಮಣರಾವ್ ಅವರ ಕವಿತೆಗಳಲ್ಲಿ ಪ್ರಣಯ, ವಾತ್ಸಲ್ಯ ಹಾಗೂ ಪ್ರೀತಿಯಲ್ಲಿಯೂ ಗಾಂಭೀರ್ಯತೆ ಇದೆ. ಆದ್ದರಿಂದ ಅವರನ್ನು ಕನ್ನಡದ ಪೋಲಿ ಕವಿ ಅಂತ ಕರೆದರೆ ನೋವಾಗುತ್ತದೆ' ಎಂದು ಕವಿ ಎಚ್.ಎಸ್. ವೆಂಕಟೇಶಮೂರ್ತಿ ತಿಳಿಸಿದರು.

ತೇಜು ಪಬ್ಲಿಕೇಷನ್ಸ್ ಹಾಗೂ ಸಿ.ವಿ.ಜಿ. ಪ್ರಕಾಶನ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ 'ಬಿ.ಆರ್.ಎಲ್–77' ಕಾರ್ಯಕ್ರಮದಲ್ಲಿ ಅವರ 'ಬಿನ್ನಹಕೆ ಬಾಯಿಲ್ಲವಯ್ಯ' (ಈವರೆಗಿನ ಲೇಖನಗಳ ಸಂಗ್ರಹ) ಹಾಗೂ 'ಬೆಳದಿಂಗಳ ಬಾಲೆ' (ನಗೆಗವಿತೆಗಳು) ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಲಕ್ಷ್ಮಣರಾವ್ ಅವರು ತಾಯಿ–ಹೆಂಡತಿಯ ಬಗ್ಗೆ ಯಾವಾಗಲೂ ಲಘುವಾಗಿ ಬರೆದಿಲ್ಲ. ಹೆಣ್ಣನ್ನು ಗಹನವಾದ ಗೌರವದಿಂದ ನೋಡುವ ಕವಿಗಳಲ್ಲಿ ಇವರು ಮುಂಚೂಣಿಯಲ್ಲಿದ್ದಾರೆ. ಅವರು ಏನೇ ಬರೆದರೂ ಅನಂತ ಅರ್ಥಛಾಯೆ ಹುದುಗಿಸಬಹುದಾದ ಶಕ್ತಿ ಹೊಂದಿದ್ದಾರೆ. ಆದ್ದರಿಂದಲೇ ಅವರು ಆಸಕ್ತಿದಾಯಕ ಕವಿ. ಕನ್ನಡದ ಗಂಭೀರ ಕವಿ ಆಗಿರುವ ಅವರು, ಕೆ.ಎಸ್. ನರಸಿಂಹಸ್ವಾಮಿ ಅವರ ಉತ್ತರಾಧಿಕಾರಿ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಎಚ್.ಎಸ್. ವೆಂಕಟೇಶಮೂರ್ತಿ (ಮಧ್ಯದವರು) ಅವರು ಬಿ.ಆರ್. ಲಕ್ಷ್ಮಣರಾವ್ (ಎಡದಿಂದ ನಾಲ್ಕನೆಯವರು) ಅವರ 'ಬಿನ್ನಹಕೆ ಬಾಯಿಲ್ಲವಯ್ಯ' ಮತ್ತು 'ಬೆಳದಿಂಗಳ ಬಾಲೆ' ಕೃತಿಯನ್ನು ಲೋಕಾರ್ಪಣೆ ಮಾಡಿದರು. (ಎಡದಿಂದ) ಶ್ರೀನಿವಾಸ ಪ್ರಭು, ವೆಂಕಟರಮಣ ರೆಡ್ಡಿ ಮತ್ತು ಡುಂಡಿರಾಜ್ ಇದ್ದಾರೆ –ಪ್ರಜಾವಾಣಿ ಚಿತ್ರ

'ಕೆಲವರಿಗೆ ವಯಸ್ಸನ್ನು ಹೆಚ್ಚಿಸಿಕೊಳ್ಳುವ, ಕುಗ್ಗಿಸಿಕೊಳ್ಳುವ ಹುಚ್ಚು ಇರುತ್ತದೆ. ನನಗೆ 80 ವರ್ಷ ಆಗದಿದ್ದರೂ 80 ವರ್ಷ ಎನ್ನುತ್ತೇನೆ. ಲಕ್ಷ್ಮಣರಾವ್ ಅವರಿಗೆ 78 ವರ್ಷವಾಗಿದ್ದರೂ 77 ವರ್ಷ ಅಂತ ಹೇಳಿಕೊಳ್ಳುತ್ತಾರೆ. ಅವರು ಯಾವಾಗಲೂ ಯೌವ್ವನ ಶಾಲಿಯಾಗಿ ಇರಬೇಕು ಅಂತ ಬಯಸುತ್ತಾರೆ. ಅದೇ ರೀತಿ ಇದ್ದಾರೆ. ಅವರಲ್ಲಿ ಅನೇಕ ಪ್ರೇಮ ಕವಿತೆಗಳಿದ್ದು, ಅವೆಲ್ಲವೂ ವಿಪ್ರಲಂಭ ಶೃಂಗಾರದ ಕವಿತೆಗಳು. ಸಂಭೋಗ ಶೃಂಗಾರ ಅವರಲ್ಲಿ ಇಲ್ಲವೇ ಇಲ್ಲ' ಎಂದರು. ಜಯನಗರ ನ್ಯಾಷನಲ್ ಕಾಲೇಜಿನ ಅಧ್ಯಕ್ಷ ಪಿ.ಎಲ್. ವೆಂಕಟರಾಮರೆಡ್ಡಿ, 'ಲಕ್ಷ್ಮಣರಾವ್ ಅವರು ಇನ್ನಷ್ಟು ಪುಸ್ತಕಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಲಿ' ಎಂದರು.

ಲಕ್ಷ್ಮಣರಾವ್ ಅವರು ತಮ್ಮ ಸ್ನೇಹಿತರ ಒಡನಾಟವನ್ನು ಸ್ಮರಿಸಿಕೊಂಡು, ಧನ್ಯವಾದ ತಿಳಿಸಿದರು. 'ಬಿನ್ನಹಕೆ ಬಾಯಿಲ್ಲವಯ್ಯ' ಕೃತಿಯ ಬಗ್ಗೆ ಕಲಾವಿದ ಶ್ರೀನಿವಾಸ ಪ್ರಭು ಹಾಗೂ 'ಬೆಳದಿಂಗಳ ಬಾಲೆ' ಕೃತಿಯ ಬಗ್ಗೆ ಕವಿ ಎಚ್. ಡುಂಡಿರಾಜ್ ಮಾತನಾಡಿದರು. ವರ್ಷಾ ಸುರೇಶ್, ಚಿನ್ಮಯಿ ಚಂದ್ರಶೇಖರ್ ಹಾಗೂ ವಿಶ್ವಾಸ್ ವಶಿಷ್ಠ ಅವರು ಲಕ್ಷ್ಮಣರಾವ್ ಅವರು ರಚಿಸಿದ ಭಾವಗೀತೆಗಳನ್ನು ಹಾಡಿದರು.







ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

‘ಜ್ಯೋತಿ ಸಂಜೀವಿನಿ’ ವಿಸ್ತರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಜ್ಯೋತಿ ಸಂಜೀವಿನಿ ಯೋಜನೆ ವಿಸ್ತರಣೆ ಸಂಬಂಧ ಮುಖ್ಯಮಂತ್ರಿ ಜತೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು.

ರಾಜ್ಯದ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ನಗರದಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಜ್ಯೋತಿ ಸಂಜೀವಿನಿ ಯೋಜನೆಯಲ್ಲಿ ರಾಜ್ಯ ಸರ್ಕಾರಿ ನೌಕರರು ಫಲಾನುಭವಿಗಳಾಗಿದ್ದಾರೆ. 7 ಆರೋಗ್ಯ ಸೇವೆಗಳನ್ನು ಉಚಿತವಾಗಿ ಯೋಜನೆ ಮೂಲಕ ಒದಗಿಸಲಾಗುತ್ತಿದೆ. ಅನುದಾನಿತ ಶಾಲಾ ಶಿಕ್ಷಕರನ್ನೂ ಯೋಜನೆ ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ಮುಂದಿನ ವಾರವೇ ಸಭೆ ಕರೆಯಲಾಗುವುದು. ಸಭೆಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನೂ ಆಹ್ವಾನಿಸಲಾಗುವುದು. ಅನುದಾನ ಹಾಗೂ ಪ್ರೀಮಿಯಂ ಪಾವತಿ ವಿಚಾರವನ್ನು ಸಂಘದ ಪ್ರಮುಖರ ಜೊತೆಗೂ ಚರ್ಚಿಸಲಾಗುವುದು’ ಎಂದು ಹೇಳಿದರು.


ಬೆಂಗಳೂರಿನಲ್ಲಿ ಶನಿವಾರ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಆಯೋಜಿಸಿದ್ದ ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ವಿವಿಧ ಜಿಲ್ಲೆಗಳ ಶಿಕ್ಷಕರಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಕಾಂಗ್ರೆಸ್ ಮುಖಂಡ ಪುಟ್ಟಣ್ಣ, ರಾಮೋಜಿಗೌಡ, ಎಚ್.ಕೆ.ಶ್ರೀಕಂಠ, ಎ.ಪಿ.ರಂಗನಾಥ, ಚಿತ್ರಕಲಾ ಸಿ.ಎಂ. ನಾಗರಾಜ್ ಇದ್ದರು – ಪ್ರಜಾವಾಣಿ ಚಿತ್ರ

‘ಜ್ಯೋತಿ ಸಂಜೀವಿನಿ ಯೋಜನೆ ಆರೋಗ್ಯ ಇಲಾಖೆ ಕಾರ್ಯಕ್ರಮವಲ್ಲ. ಸುವರ್ಣ ಆರೋಗ್ಯ ಟ್ರಸ್ಟ್ ಮೂಲಕ ಸರ್ಕಾರ ನೀಡುವ ಅನುದಾನವನ್ನು ನಿಗದಿತ ಆಸ್ಪತ್ರೆಗೆ ಆರೋಗ್ಯ ಇಲಾಖೆ ನೀಡುತ್ತಿದೆ. ಹಾಗಾಗಿ, ಅನುದಾನಿತ ಶಾಲಾ ಶಿಕ್ಷಕರನ್ನೂ ಆ ಯೋಜನೆ ವ್ಯಾಪ್ತಿಗೆ ತರುವುದಕ್ಕೆ ಸರ್ಕಾರದ ಮಟ್ಟದಲ್ಲೇ ತೀರ್ಮಾನ ತೆಗೆದುಕೊಳ್ಳಬೇಕಿದೆ’ ಎಂದು ಹೇಳಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ‘ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆಗಳನ್ನು ಶೀಘ್ರದಲ್ಲೇ ಈಡೇರಿಸುವ ಪ್ರಯತ್ನ ಮಾಡುತ್ತೇವೆ. ಮನವಿಯನ್ನು ಮುಖ್ಯಮಂತ್ರಿಗೆ ತಲುಪಿಸಲಾಗುವುದು’ ಎಂದು ಭರವಸೆ ನೀಡಿದರು.

‘ಮಕ್ಕಳಿಗೆ ಶಿಕ್ಷಕರು ಉತ್ತಮ ಶಿಕ್ಷಣ ನೀಡಬೇಕು. ಅದನ್ನು ಹೊರತು ಪಡಿಸಿ ಶಿಕ್ಷಕ ವೃತ್ತಿಯಲ್ಲಿ ಇರುವಾಗಲೇ ರಾಜಕಾರಣ ಮಾಡುವುದು ಸರಿಯಲ್ಲ. ಬೇಕಿದ್ದರೆ ನೇರವಾಗಿ ಚುನಾವಣೆಗೆ ಸ್ಪರ್ಧಿಸಲಿ’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಎಚ್ಚರಿಸಿದರು.

ಸಂಘದ ರಾಜ್ಯ ಅಧ್ಯಕ್ಷ ಎನ್. ರಾಜಗೋಪಾಲ್ ಮಾತನಾಡಿ, ‘ಹಳೆ ಪಿಂಚಣಿ ಯೋಜನೆಯನ್ನೇ ಜಾರಿಗೆ ತರಬೇಕು. ಹೆಚ್ಚುವರಿ ಶಿಕ್ಷಕರ ನೆಪವೊಡ್ಡಿ ಶಿಕ್ಷಕರ ನೇಮಕಾತಿ ತಡೆ ಹಿಡಿಯಲಾಗಿದೆ. ಮತ್ತೆ ನೇಮಕಾತಿಗೆ ಅವಕಾಶ ಕಲ್ಪಿಸಬೇಕು. ಅನುದಾನಿತ ಶಾಲಾ ಮಕ್ಕಳಿಗೂ ಸಮವಸ್ತ್ರ, ಶೂ ವಿತರಣೆ ಮಾಡಬೇಕು. ಮಾನ್ಯತೆ ನವೀಕರಣ ಸರಳೀಕರಿಸಬೇಕು. ಅನುದಾನಿತ ಶಾಲಾ ಶಿಕ್ಷಕಿಯರಿಗೂ ಶಿಶುಪಾಲನಾ ರಜೆ ಮಂಜೂರು ಮಾಡಬೇಕು’ ಎಂದು ಕೋರಿದರು.

ಶೈಕ್ಷಣಿಕ ಕ್ಷೇತ್ರಕ್ಕೆ ಅಜೀಂ ಪ್ರೇಮ್‌ಜಿ ನೆರವಿನ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಾಲಾ ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿಗೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಅಡಿ ನೆರವು ನೀಡಬೇಕೆಂಬ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರ ಮನವಿಗೆ ಉದ್ಯಮಿ ಅಜೀಂ ಪ್ರೇಮ್‌ಜಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಅಜೀಂ ಪ್ರೇಮ್‌ಜಿ ಅವರು ತಮ್ಮ ಮಗ ರಿಷದ್ ಪ್ರೇಮ್‌ಜಿ ಮತ್ತು ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಅನುರಾಗ್ ಬೆಹರ್ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಸುಧಾಕರ್ ಕೂಡ ಭೇಟಿ ವೇಳೆ ಇದ್ದರು.

ಈ ಸಂದರ್ಭದಲ್ಲಿ ಪ್ರಸ್ತಾವವೊಂದನ್ನು ಮುಂದಿಟ್ಟ ಸಚಿವರು, ಉನ್ನತ ಶಿಕ್ಷಣ ಕ್ಷೇತ್ರಕ್ಕೆ ₹ 3,256 ಕೋಟಿ ನೆರವಿನ ಅಗತ್ಯವಿದೆ. ಸರ್ಕಾರಿ ಪದವಿ ಕಾಲೇಜುಗಳಿಗೆ ₹ 1,997 ಕೋಟಿ, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳಿಗೆ ₹ 852 ಕೋಟಿ, ಕೌಶಲಾಭಿವೃದ್ಧಿ ಪ್ರಯೋಗಾಲಯಗಳಿಗೆ ₹ 386 ಕೋಟಿ, ಯೂನಿವರ್ಸಿಟಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿಗೆ ₹ 14 ಕೋಟಿ ಮತ್ತು ಡಾ.ಬಿ. ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ₹ 6 ಕೋಟಿ ನೆರವಿನ ಅಗತ್ಯವಿದೆ ಎಂದು ವಿವರಿಸಿದರು.

ಸಿಎಸ್‌ಆರ್ ನಿಧಿ ಅಡಿಯಲ್ಲಿ ಆರ್ಥಿಕ ನೆರವಿನ ಜತೆಯಲ್ಲೇ ಶೈಕ್ಷಣಿಕ ನೆರವನ್ನೂ ಒದಗಿಸುವಂತೆ ಸುಧಾಕರ್ ಮನವಿ ಮಾಡಿದರು.

ಈ ಕುರಿತು ಸ್ಪಷ್ಟವಾದ ಯೋಜನೆಯೊಂದಿಗೆ ಬರುವುದಾಗಿ ಅಜೀಂ ಪ್ರೇಮ್‌ಜಿ ಭರವಸೆ ನೀಡಿದ್ದಾರೆ.

ಭೇಟಿ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಅಜೀಂ ಪ್ರೇಮ್‌ಜಿ ರಾಜ್ಯಕ್ಕೆ ದೊಡ್ಡ ಆಸ್ತಿ. ಅವರ ಪ್ರಯತ್ನಗಳಿಗೆ ಸರ್ಕಾರ ಬೆಂಬಲ ನೀಡಲಿದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆ ಸಮಸ್ಯೆ ಪರಿಹಾರಕ್ಕೆ ನೆರವಾಗುವ ಭರವಸೆಯನ್ನು ಅವರು ನೀಡಿದ್ದಾರೆ’ ಎಂದು ತಿಳಿಸಿದರು.


ನೆದರ್ಲೆಂಡ್ಸ್ ಪ್ರಧಾನಿ ನಗರದ ಚರ್ಚ್ ಸ್ಟ್ರೀಟ್‌ಗೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಭದ್ರತೆ ವ್ಯವಸ್ಥೆಯ ಪರಿಶೀಲನೆ ಶನಿವಾರ ನಡೆಯಿತು.

ನಾಳೆ ಬೆಂಗಳೂರಿಗೆ ನೆದರ್ಲೆಂಡ್ಸ್ ಪ್ರಧಾನಿ

ಬೆಂಗಳೂರು: ದೆಹಲಿಯಲ್ಲಿ ನಡೆಯುತ್ತಿರುವ ಜಿ20 ಶೃಂಗಸಭೆಯಲ್ಲಿ ಪಾಲ್ಗೊಂಡಿರುವ ನೆದರ್ಲೆಂಡ್ಸ್ ಪ್ರಧಾನಿ ಮಾರ್ಕ್ ರುಟ್ಟೆ ಅವರು ಸೆ.11ರಂದು (ಸೋಮವಾರ) ಬೆಂಗಳೂರಿಗೂ ಭೇಟಿ ನೀಡುತ್ತಿದ್ದಾರೆ.

ನಗರದಲ್ಲಿ ನಡೆಯುವ ‘ಎಕನಾಮಿಕ್ಸ್ ಮಿಷನ್’ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ನೆದರ್ಲೆಂಡ್ ಕಾನ್ಸುಲೇಟ್ ಜನರಲ್‌ಗೂ ಭೇಟಿ ನೀಡಲಿದ್ದಾರೆ. ನೆದರ್ಲೆಂಡ್ಸ್ ಜತೆಗೆ ವ್ಯಾಪಾರ ಸಂಬಂಧ ಹೊಂದಿರುವ ಭಾರತದ ಕಂಪನಿಗಳ ಪ್ರತಿನಿಧಿಗಳ ಜತೆಗೆ ಸಂವಾದ ನಡೆಸಲಿದ್ದಾರೆ. ಎನ್‌ಎಕ್ಸ್‌ಪಿ ಪ್ರಯೋಗಾಲಯಕ್ಕೆ ಭೇಟಿ ನೀಡುತ್ತಿದ್ದಾರೆ. ಅದಾದ ಮೇಲೆ ದುಂಡುಮೇಜಿನ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೆಲುಗು ಸ್ಮಾರ್ತ ವೇದಿಕಾ’ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 90ರಷ್ಟು ಅಂಕಗಳಿಸಿದ ಸ್ಮಾರ್ತ ಬ್ರಾಹ್ಮಣ ವಿದ್ಯಾರ್ಥಿಗಳು ಸೆ. 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕೆ.ಎಸ್. ವೆಂಕಟೇಶ ಶಾಸ್ತ್ರಿ, ಪ್ರಧಾನ ಕಾರ್ಯದರ್ಶಿ, ನಂ. 79/33, ಶಂಕರ ಕೃಪಾ, 7ನೇ ಮುಖ್ಯರಸ್ತೆ, 5ನೇ ಕ್ರಾಸ್, ಶ್ರೀನಿವಾಸನಗರ, ಬೆಂಗಳೂರು-560050, ಮಾಹಿತಿಗೆ: 080-26692979, 98453 26041ಗೆ ಸಂಪರ್ಕಿಸಬಹುದು.

ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಸಭೆ ಇಂದು

ಬೆಂಗಳೂರು: ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆ ಸೆ.10 ರಂದು ನಡೆಯಲಿದೆ. ಗಿಡದಕೊನೇನಹಳ್ಳಿಯ ಮುದ್ದಿನಪಾಳ್ಯ ಬಳಿಯ ಮಲ್ಲತ್ತ ಹಳ್ಳಿ ಕ್ಲಬ್ ಸಭಾಂಗಣದಲ್ಲಿ ಭಾನುವಾರ ಬೆಳಿಗ್ಗೆ 10 ಗಂಟೆಗೆ ಸಭೆ ನಡೆಯಲಿದೆ ಎಂದು ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಗಂಗಾಧರ ಮೊದಲಿಯಾರ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಸೊಂಟದ ಬೆಲ್ಟ್‌ನಲ್ಲಿ ಪೇಸ್ಟ್ ಚಿನ್ನ ಕಳ್ಳಸಾಗಣೆ

ದೇವನಹಳ್ಳಿ: ದುಬೈನಿಂದ ಎಮಿರೇಟ್ಸ್ ವಿಮಾನದಲ್ಲಿ ಶನಿವಾರ ರಾತ್ರಿ ಬೆಂಗಳೂರಿಗೆ ಬಂದಿಳಿದ ಪ್ರಯಾಣಿಕರಿಬ್ಬರಿಂದ ಅಂದಾಜು ₹1.54 ಕೋಟಿ ಮೌಲ್ಯದ 2.8 ಕೆ.ಜಿ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸೊಂಟದ ಬೆಲ್ಟ್‌ಗೆ ಇನ್ಸುಲೇಷನ್ ಟೇಪ್‌ನಲ್ಲಿ ಮೆಟಲ್ ಪೇಸ್ಟ್ ರೂಪದ ಚಿನ್ನ ಸುತ್ತಿಕೊಂಡು ಕಳ್ಳಸಾಗಣೆಗೆ ಯತ್ನಿಸಿದ ಪ್ರಯಾಣಿಕರು ತಪಾಸಣೆ ವೇಳೆ ಕಸ್ಟಮ್ಸ್ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದಿದ್ದಾರೆ. ಇಬ್ಬರೂ ಪ್ರಯಾಣಿಕರನ್ನು ಬಂಧಿಸಲಾಗಿದೆ.

ಸುಧಾ ಮಯೂರ ಓದಿರಿ


ಮಿತ್ರ ಹಬ್ಬ ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಶನಿವಾರ ನಡೆದ ‘ಮಿತ್ರ ಹಬ್ಬ’ದಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದ್ದ ವಸ್ತುಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿದರು.

ವಿಮಾನದ ಎಂಜಿನ್‌ನಲ್ಲಿ ಹೊಗೆ: ತಪ್ಪಿದ ಅನಾಹುತ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ ಟರ್ಮಿನಲ್ 2ರಲ್ಲಿ ನಿಂತಿದ್ದ ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯ ಏರ್ ಬಸ್ ಎ320 ವಿಮಾನಕ್ಕೆ ಏರೊ ಬ್ರಿಡ್ಜ್ (ಮೆಟ್ಟಿಲು) ಅಳವಡಿಸುವ ವೇಳೆ ಎಂಜಿನ್‌ನಲ್ಲಿ ಹೊಗೆ ಕಾಣಿಸಿಕೊಂಡಿದೆ.

ತಕ್ಷಣ ಎಚ್ಚೆತ್ತುಕೊಂಡ ವಿಮಾನ ನಿಲ್ದಾಣದ ಅಗ್ನಿ ಶಾಮಕ ದಳದ ಸಿಬ್ಬಂದಿ ವಾಟರ್‌ಜೆಟ್ ಮೂಲಕ ಬೆಂಕಿ ನಂದಿಸಿದರು. ಬಳಿಕ ವಿಮಾನವನ್ನು ತಾಂತ್ರಿಕ ಪರಿಶೀಲನೆಗಾಗಿ ಕಳುಹಿಸಿ, ಸಮಸ್ಯೆ ಸರಿಪಡಿಸಲಾಗಿದೆ.

ಎಂಜಿನ್ ಚಾಲ್ತಿಯಲ್ಲಿದ್ದ ಕಾರಣ ಫ್ಯಾನ್ ರಭಸಕ್ಕೆ ಕೆಲವೇ ಕ್ಷಣಗಳಲ್ಲಿ ಹೊಗೆ ಆವರಿಸಿಕೊಂಡಿದೆ. ಹತ್ತಿರದಲ್ಲಿಯೇ ಇದ್ದ ವಿಮಾನ ಸಿಬ್ಬಂದಿ ಮತ್ತು ರನ್‌ವೇ ತಾಂತ್ರಿಕ ವರ್ಗದ ಸಿಬ್ಬಂದಿಯನ್ನು ಅಲ್ಲಿಂದ ದೂರ ಕಳಿಸಲಾಯಿತು. ಈ ವೇಳೆ ವಿಮಾನದಲ್ಲಿ ಪ್ರಯಾಣಿಕರು ಇರಲಿಲ್ಲ.

ಭಾಗವತ್‌ರದ್ದು ಅವಕಾಶವಾದಿ ನಿಲುವಲ್ಲವೇ: ಪ್ರೊ.ಬಿಕೆಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2006ರಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿ ಸರ್ಕಾರವು ಐಐಎಂ, ಐಐಟಿಯಂಥ ಉನ್ನತ ಶಿಕ್ಷಣದಲ್ಲೂ ಮೀಸಲಾತಿ ಜಾರಿಗೆ ತಂದಿದ್ದನ್ನು ಖಂಡಿಸಿದ್ದ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು, ಈಗ ಮೀಸಲಾತಿ ಪರವಾಗಿ ಹೇಳಿಕೆ ನೀಡಿರುವುದು ಅವಕಾಶವಾದಿ ನಿಲುವಲ್ಲವೇ ಎಂದು ಕಾಂಗ್ರೆಸ್ ಮುಖಂಡ ಪ್ರೊ. ಬಿ.ಕೆ. ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

‘ನಮ್ಮ ಸಮಾಜದಲ್ಲಿ ತಾರತಮ್ಯ ಇರುವವರೆಗೂ ಮೀಸಲಾತಿ ಇರಲಿ’ ಎಂದು ಈಗ ಭಾಗವತ್ ಹೇಳಿದ್ದಾರೆ. ಲೋಕಸಭೆ ಚುನಾವಣೆ ಹತ್ತಿರುವಾಗುತ್ತಿರುವಾಗ ಈ ರೀತಿಯ ಹೇಳಿಕೆ ನೀಡಿರುವುದು ಅವಕಾಶವಾದಿ ರಾಜಕಾರಣ ಅಲ್ಲವೇ ಎಂದು ಕೇಳಿದ್ದಾರೆ.

ಎರಡು ದಿನಗಳ ಹಿಂದೆ ನಾಗಪುರದಲ್ಲಿ ಭಾಗವತ್ ನೀಡಿದ್ದ ಹೇಳಿಕೆಗೆ ಚಂದ್ರಶೇಖರ್ ಪ್ರತಿಕ್ರಿಯಿಸಿದ್ದಾರೆ.

‘ಆರೆಸ್ಸೆಸ್ ಪತ್ರಿಕೆ ‘ಆರ್ಗನೈಸರ್’ನ 2006 ಜೂನ್ 18ರ ಸಂಚಿಕೆಯಲ್ಲಿ ‘ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ಮೀಸಲಾತಿ ಎನ್ನುವುದು ಸಮಾಜವನ್ನು ಹಿಂದಕ್ಕೆ ಚಲಿಸುವ ಹೆಜ್ಜೆ. ಪ್ರಾಥಮಿಕ ಶಿಕ್ಷಣ ನಮ್ಮ ಹಕ್ಕು. ಆದರೆ, ಉನ್ನತ ಶಿಕ್ಷಣ ನಮ್ಮ ಹಕ್ಕಲ್ಲ. ಅದು ನಮ್ಮ, ನಮ್ಮ ಸಾಧನೆ ಆಧಾರಿತವಾದದ್ದು. ಕಾಂಗ್ರೆಸ್ ನೇತೃತ್ವದ ಸರ್ಕಾರ ಅರ್ಹತೆ, ಯೋಗ್ಯತೆಗಷ್ಟೇ ಪ್ರವೇಶ ಇರುವ ಕಡೆಯ ಭದ್ರಕೋಟೆಯನ್ನು ಮೀಸಲಾತಿ ಕಲ್ಪಿಸುವ ಮೂಲಕ ಭೇದಿಸಿದೆ. ಸಾಮಾಜಿಕವಾಗಿ ಹಿಂದುಳಿದಿರುವ ಸಮುದಾಯಗಳ ವಿದ್ಯಾರ್ಥಿಗಳಿಗೆ, ಐಐಎಂ, ಐಐಟಿ ಇತ್ಯಾದಿ ಶೈಕ್ಷಣಿಕ ಸಂಸ್ಥೆಗಳಿಗೆ ಅರ್ಹತೆಯನ್ನು ಕಡೆಗಣಿಸಿ, ಮೀಸಲಾತಿ ಕೋಟಾದಲ್ಲಿ ಪ್ರವೇಶ ಕಲ್ಪಿಸಿದೆ’ ಎಂದು ಭಾಗವತ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದರು’ ಎಂದು ಅವರು ಹೇಳಿದ್ದಾರೆ.

ಚಿರಂಜೀವಿ ಸಿಂಘ್‌ಗೆ ‘ವಿ.ಕೃ. ಗೋಕಾಕ್ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ನೀಡುವ 2023ನೇ ಸಾಲಿನ ‘ವಿ.ಕೃ. ಗೋಕಾಕ್ ಪ್ರಶಸ್ತಿ’ಗೆ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹ 25 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.


ಚಿರಂಜೀವಿ

ಟ್ರಸ್ಟ್ ಅಧ್ಯಕ್ಷ ಬಿ.ಎಸ್. ವಿಶ್ವನಾಥ್, ಕಾರ್ಯದರ್ಶಿ ಅನಿಲ್ ಗೋಕಾಕ್, ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್. ಎನ್ ಸುರೇಶ್ ಹಾಗೂ ಅಭಿನವ ರವಿಕುಮಾರ್ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ಇದೇ 28ರಂದು ಬೆಳಿಗ್ಗೆ 11 ಗಂಟೆಗೆ ಇಲ್ಲಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಕೆಆರ್‌ಜಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ.

ಪತ್ರಕರ್ತ ಸುಗತ ಶ್ರೀನಿವಾಸರಾಜು ಅವರು ಅಭಿನಂದನಾ ನುಡಿಗಳನ್ನಾಡುತ್ತಾರೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.



PROPERTY CORNER ಕ್ಲಾಸಿಫೈಡ್ಸ್

BUILDING FOR SALE



BDA PROPERTY
Behind Talaghatpura Police Station, near BDA Lake. Kanakapura Road.
Stilt + Ground + 3 Floors. Fully Furnished.
Ready to Move in
Contact: 73384 91811

FOR SALE

RESIDENTIAL 60X40 SITE, MALLESWARAM

West facing site on 11th Main Road near Cluny Convent.- Minutes from Mantri & Orion Malls.- Easy access to Bellary Highway to KIAL & to Metro & Rail Networks CLEAR TITLE; 100% WHITE DEAL ONLY; Rs. 6.75 CRORES OR HIGHER ONLY.

Contact Owner: Jay 9900864168


ಸೈಟುಗಳು ಮಾರಾಟಕ್ಕಿವೆ

ನೆಲಮಂಗಲ ಹಾಗು ದಾಬಸ್‌ಪೇಟೆ ಹತ್ತಿರ
ರೂ. 4.5 20x30 ಸೈಟ್ ಲಕ್ಷದಿಂದ ಪ್ರಾರಂಭ
ಸಂಪರ್ಕಿಸಿ: 8880660099

Divine Euphoria

AGRICULTURAL Farmland FOR Sale @ KANAKAPURA
600+ CUSTOMERS 65+ COTTAGES BUILT
• Fully Developed • Swimming Pool • Clubhouse • Children Play area • Temple • Meditation Center • Birds & Animals • Adventure Sports
Rs. 14.5 Lakhs
77605 74999-78921 54461
www.divineeuphoria.co.in

BDA SITE 5 BHK HOUSE FOR SALE



Hosakerehalli
Lift, modular kitchen, commercial space in basement floor, Built-up: 2900 sft (Basement+Gr+3 flrs) South east corner. 620 sqft Site Area
Call: 7406 219 219

DS-MAX SAMYAK

PRM/KA/RERA/1251/310/PR/150223/005721
DR. K V SATISH, CHAIRMAN
DS MAX ISO 9001:2015 COMPANY
BOOK YOUR DREAM HOME IN BANGALORE'S MOST HAPPENING LOCATION
MYSORE ROAD
NEAR R R DENTAL COLLEGE
LUXURIOUS 2 & 3-BHK APARTMENTS
Rs. 42.80 - 71.85 Lakhs*
BDA APPROVED



*T & C Apply
8880 003 003
www.dsmaxproperties.com

READY TO MOVE IN

₹ 39* Lacs 2 BHK FLAT FULLY FURNISHED including AC & WARDROBE
* All inclusive except Registration Loan upto 90%
RENTAL POTENTIAL RS. 20,000 P.M FOR THIS APARTMENT
Chandapura, Near Narayana Hrudayalaya & Metro Station, on Hosur Main Road
NISARGA BUILDERS Call for site visit 6366 864 500

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA. Brokers excuse.
Genuine Party Contact 9108133206

Kanakpura

FOR SALE 23 Guntas Agricultural land in Marasandra village, Kanakapura taluk, 8 KM from Harohalli, Expecting Rs 90 lakhs, contact Owner -9845380312

Sites

Arkavathi Layout

BDA SITE for Sale 20x30 East Facing Arkavathy Layout, No. 2885, 7th Block, 48.5 Lakhs Contact: 9844816600

***ARKHAVATHY 2ND** Block* Lake view 40x60 BDA SITE FOR SALE. Contact: 9945079777

Banashankari

BANASHANKARI 6TH STAGE- ANJANAPURA BDA- Available/ Wanted 20x30 30x40 40x60 50x80 Sites 'BRINDAVAN ASSOCIATES'- 9980863245

BANASHANKARI 6TH Stage 3rd Block, Residential 40x60 North facing BDA site 40'Road 2,50,00,000/- -9740292904.

BANASHANKARI 6TH Stage 1st Block 60x100 West Facing 11,000/= Sft Commercial/ Residential/ Banks/ Hotels. 98456-09477

BDA Site for Sale at Banashankari 6th Stage 30x40 East Near R.V.College. 9845210990, 9663284962

Bannerghatta Road

SALE 40X60 Nobel Residency Bannerghatta Road South/West Corner opposite Menakshi Tample Rs.7500 Per sqft Call:9845210269

Electronic City

ELECTRONIC CITY Near KHB ,Suryanagara 2nd Phase Site For Sale C Sector 30x50 Bangalore: 9980816305

Anjanapura

SITE FOR SALE ANJANAPURA 30x40 N/F 7TH BLOCK NEAR BDA COMPLEX, CENTRALPARK GENUINE BUYERS: 9880776950

Indiranagar

80X100 SITE For-Sale In The Most Prestigious Location Of Indiranagar Defence Colony For Details Niti Estates 9900001973

J P Nagar

J.P.NAGAR 8TH Phase 60'Road 30x40 Prime Commercial BDA site 13,000/-Sft. behind H.M.World City Apartment, Contact -9845000299.

SITE FOR Sale at RBI Layout, 30x52 West facing J.P.Nagar 7th Phase. Direct Buyer Contact: 9901549488

Koramangala

KORAMANGALA RESIDENTIAL/ COMMERCIAL 30X41 NF, 30X50 EF, 40X60 NE, SITES WITH BUILDINGS FOR SALE: 9845156191

Kanakapura Road

40X60 EAST Facing Site Sale, Nitesh Rio (Adjacent to Vakil Garden City). Kanakapura Road. 9901244511.

KANAKAPURA ROAD Attached to Krishnam Hotel Bagegowda Layout, 30X50,North,BBMP A'Khata Site 12600/- Negotioble :9845704509

Kempegowda Layout

KEMPEGOWDA LAYOUT BDA COMMERCIAL/ RESIDENTIAL SITE FOR SALE 30x40, 40x60, 50x80 Contact KUMAR: 9945112279

Magadi Road

BEL BHARTHNAGAR 40X60 South Face 2nd Stage 60ft Road Rs. 11000/- Per Sqft Negotiable: 7411685851

Mahalakshmi Layout

60X40 BDA Site for sale at Shankar Nagar, Near Ahoka Heights. Facing Play Ground with compounded, Clear Title . Contact : 9844252259, 9739029111

Nagarabhavi

SITE FOR Sale-Nagarabavi 12th Block, Near Nammura Thindi, BDA Site No.264, West Facing, 40 Feet Road, measuring 30x42sft. Contact Owner: 9844009086, 9343368313

SITE FOR Sale Nagarbhavi D Group Layout BDA Katha 30X50 West Face Good Location 8105688602

Kengeri

BDA/ RERA Approved Sites available @ Kengeri, just 2 km from Global Tech Park. Contact: 9972220339

Rajarajeshwari Nagar

'A' KHATA Property for Sale in Rajarajeshwari Nagar 400 mtrs from Sub Registrar office, 40x60, East facing Sites. Call: 9448288522

Sahakarnagar

SAHAKARANAGAR 1620 sft Site North West Corner Top Location For Sale Contact: 9341260828 9738111222

Tumkur Road

40X60 NORTH Facing Site for Sale, Residential Plot, HMT Layout, Nellagadaranahalli Tumkur Road, Rs.11000 /sft. Negotiable. 8183032277

Tumkur



SITES FOR-SALE
TUDA Approved, Hirehalli, Tumkur, 1 Hour from Bangalore, 30x40 Plots, Rs.1600/sq.ft Ph-7899028881

Vishweshwariah Layout

"AVAILABLE VISHVESHWARAIH Layout 30x40, 40x60 good location Sites, Owner meeting. Genuine Buyers only Contact: 7892224597"

"VISVESHWARAIAH 5,7,8TH-BLOCK East, 'D' Group Layout BDA Khatha 30x40 West Facing Sites sale. 9164089633/ 9663226688"

806 SITE Sale 40X60 Vishveshwaraiah Layout 6th Block, 3109 Site 40X60 East 4th Block 7100 Sqft. Contact: 9591313666

30X35, NORTH, Revenue Site Sale, Opposite Podar International School, Vishweswaraiah Layout, Rate 4,000/- negotiable. 8105251219

VISHWESHWARAIAH 6TH BLOCK BDA 50x80 EF 60FT ROAD NEAR 100FT ROAD BDA COMPLEX NEAR VIDYANIKETAN: 6360050356

Vijayanagar

"30X45 EAST-FACING Vijaynagar (Hampinagar) 20000/- P.Sft negotiable & 30x40 South-facing Vishveshwaraiah 2nd Block. Brokers Excuse. 9845500019/ 7019314962"

Chikkaballapura

SITES: SALE Chikkaballapura Apranje Times Square DC Converted Good Investment/ Immediate Construction 1200sq EF Broker Excuse: 9886006491

Vasanth Nagar

NW CORNER 60x40 site with 4000 Sq.ft Old House at Chakravarthy Layout, Behind KIA Motors on Palace Road. Price 8 CR. 9945323691

Nelamangala

SITE: SALE Nelamangala Snehamayee Housing Society DC Converted Good Investment/Immediate Construction 1000,1200, 1500sq EF Brokers Excuse: 9886006491

ಓಂ ಶ್ರೀ ಇನ್ಫ್ರಾಸ್ಟ್ರಕ್ಚರ್

OM SRI INFRASTRUCTURE

BHOOMI SKANDA

OM SRI PRISTINE

ನೀವು ಸೈಟು ಖರೀದಿ ಮಾಡಿದಾಗ, ಭವಿಷ್ಯದಲ್ಲಿ ನಿಮಗೆ ಆಸರೆಯಾಗಬೇಕಲ್ಲವೇ ?
ಬಿಎಂಆರ್‌ಡಿಎ ಮತ್ತು ರೇರಾ ಮಾನ್ಯತೆ ಪಡೆದ ನಿವೇಶನವನ್ನೇ ಖರೀದಿಸಿ

BMRDA & RERA Approved Premium **Villa Sites** @Nelamangala Town



APPROVED PLAN NO. NPA/LAO/36/2021-2022 Date 06-05-2023
Individual 'E' Khata ('A' Khata)
APPROVED AUTHORITY BMRDA
UPTO 90% LOANS AVAILABLE FROM ICICI Bank Home Loans, IDBI BANK, SBI, HDFC BANK, LIC HFL
RERA APPROVED PRM/KA/RERA/1251/309/PR/091122/005427

CONTACT FOR SITE VISIT & BOOKING
953 881 1119
omsripristine@gmail.com
www.omsriinfrastructure.com
PRM/KA/RERA/RA/1251/309/PR/091122/005427

Sri M. Huchegowda 98450 40942
Sri H.Yogesh 94481 29005

- Ready For Registration & Construction
- Developed Layout
- 100% Release Sites
- 100% Clear Title
- World Class Amenities

AMENITIES
Arch & Entrance Gate, Asphalted Roads, Solar Street Lights, Developed Parks-5, All Round Compound Wall, CC Camera, S.T.P, Children's Play Area, Rain Harvesting Plant, Over Head Water Tanks, 24 hrs Security

OM SRI INFRASTRUCTURE : #87, 1st Floor, Above Pizza Hut, Siddhaiah Puranik Road, LIC Colony, 1st Block, Near Chord Road Hospital, 3rd Stage, Basaveshwaranagar, Bangalore-560 079

House

Jayanagar

JAYANAGAR 4TH T`Block 40x65-North 25,000/, 40x60-West 28,000/-, 30x40-West 3,00,00,000/- Mahalaxmi Enterprise -9845144365

SALE 30X48 3 BHK Duplex-House East Facing East End 9th Block Jayanagar Contact: 9611844667 8123515830

SALE (OLD-HOUSE) 46x40 Corner Semi Commercial 2nd Block Jayanagar Call Vani Estates 9845012548

FOR SALE, Jayanagar 2nd Block, Near Ashoka pillar 20×32,South Facing, with Building, Contact : 9886373275

Kengeri

LUXURY DUPLEX 4 BHK House, Ground 2 BHK 30x40 Vinayakanagar, Kodipalya, Kengeri, 2.45Cr. 9148914809, 9886763146.

Nagarabhavi

SALE 30X42 east 5 BHK triplex house' with lift Annapoorneshwarinagar, Nagarbavi BDA complex. 9071666699/ 9071666677.

"SALE: 30X40 4BHK Duplex House with Lift, 'D'.Group Layout, Nagarabhavi near Arun Ice-cream. 9844520548"

Nandini Layout

SALE BDA 37X40, South East Corner old house for sale at Railway Layout, Nandini Layout, Call 9844039482

Vijayanagar

35 ×51 B D A site With 2'5 floor Building for sale At vijayanagar 7th main. 9242197954. Brokers excuse.

Vishweshwariah Layout

FOR SALE: 3 Floor New Building with lift, 5 houses on 40×60 site attached to SMV Layout 9th block. Brokers excuse. 9242197954

Vidyaranyapura

SEMI FURNISHED Independent 4 BHK Duplex House, Garage -2400 sft- South facing Prime Location :9449059015

HOUSE FOR Sale 30*50 East facing, 3 floor Building, N.T.I. Layout. Price 2.50 Cr. 9482947527.

Magadi

SALE GF Single Bedroom House 1st & 2nd Floor 3Bed House Kadabagere Contact Gangadhar: 9632824856

J P Nagar

20X30,EF,GF CARPARKING,4BHK, Triplex,1.20Cr,30x40,NF_ 4BHKTriplex 2.80Cr,New 800/1000sft 2BHK 3Units 1.80Cr,2.30Cr:8904210201

Flat

Banashankari

"POORNAPRAGNA LAYOUT, 3BHK Luxury Flat, Ready to occupy 2100 Sq.ft Teak-wood Italian marble A-katha 1.50 crore. Contact: 9845286505"

Jeevanbimanagar

MURUGESHPALYA 2BHK 1150 Sft FLAT with Carpark for SALE. Rs. 55 Lakhs. Contact: 9901778787/ 9343728200

Jayanagar

Superb Duplex 4 BHK Apartment @ Jayanagar 5th Block for SALE.



High-end fittings and luxurious interiors.
Fully Furnished with all Fixed Furniture & Kitchen. East Facing and 100% Vastu Compliant.
Area: 3460 sft + 700 sft Private Terrace area.
Please call / WhatsApp
TANVI HOLDINGS
95132 21216

Kanakapura Road

3-BHK-FLAT SALE 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343722162

Rajajinagar

PURVA BLUEBELLE Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

DNR HIGHLINE @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

Sanjaynagar

SANJAYNAGAR KALPANA Chawla Road 3-BHK Flat 1770sqft North Facing Semi Furnished Vastu Compliance, Rs.1.85 Cr, Owner: 9448787599

Vijayanagar

"FLAT FOR-SALE Vijayanagar Sampige Layout, Gopalan Brindavan Apartments 2BHK, 1530 SQFT Good Interiors done. 9663226688/ 9164089633"

ಕಾಲೇಜುಗಳ ಮುಖ್ಯಸ್ಥರ ಶೃಂಗಸಭೆಯಲ್ಲಿ ಇಸ್ರೊ ವಿಜ್ಞಾನಿ ಮೈಲಸ್ವಾಮಿ ಅಣ್ಣಾದೊರೈ

ಚಂದ್ರನ ದಕ್ಷಿಣ ಧ್ರುವದಲ್ಲಿ ನೀರು!

ಪ್ರಜಾವಾಣಿ ವಾರ್ತೆ

ಆನೇಕಲ್: ಚಂದ್ರನ ದಕ್ಷಿಣ ಧ್ರುವದಲ್ಲಿ ನೀರು, ಅನಿಲ ಮತ್ತು ದ್ರವರೂಪದ ಖನಿಜಾಂಶಗಳಿರುವ ಸಾಧ್ಯತೆ ಹೆಚ್ಚಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸಂಶೋಧನೆ ನಡೆಸಲಾಗುವುದು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ಇಸ್ರೊ) ವಿಜ್ಞಾನಿ ಡಾ.ಮೈಲಸ್ವಾಮಿ ಅಣ್ಣಾದೊರೈ ಅವರು ಹೇಳಿದ್ದಾರೆ.

ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ ಅಂತರರಾಷ್ಟ್ರೀಯ ಶಾಲೆ, ಕಾಲೇಜುಗಳ ಮುಖ್ಯಸ್ಥರ ಶೃಂಗಸಭೆ ಉದ್ಘಾಟಿಸಿ ಅವರು ಮಾತನಾಡಿದರು.

‘ಇಸ್ರೊದ ಚಂದ್ರಯಾನದ ನಂತರ ಚಂದ್ರನಲ್ಲಿರುವ ವಿವಿಧ ಖನಿಜಾಂಶಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುತ್ತಿದೆ. ಅನಿಲ ಮತ್ತು ದ್ರವರೂಪದ ಖನಿಜಗಳಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಮುಂಬರುವ ದಿನಗಳಲ್ಲಿ ಚಂದ್ರನಲ್ಲಿರುವ ಖನಿಜಾಂಶಗಳು ಮನುಕುಲದ ಉದ್ಧಾರಕ್ಕೆ ಸದ್ಬಳಕೆ ಆಗಲಿವೆ’ ಎಂದು ಹೇಳಿದರು.

ಅಲಯನ್ಸ್ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳೊಂದಿಗೆ ಅವರು ಸಂವಾದ ನಡೆಸಿದರು. ಶೃಂಗಸಭೆಯಲ್ಲಿ ದೇಶ ಮತ್ತು ವಿದೇಶಗಳ ನೂರಕ್ಕೂ ಹೆಚ್ಚು ಕಾಲೇಜುಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.

ಅಲಯನ್ಸ್ ವಿಶ್ವವಿದ್ಯಾಲಯದ ಕುಲಪತಿ ಅಭಯ್ ಚೆಬ್ಬಿ, ಸಹ ಉಪಕುಲಪತಿ ಪ್ರೀಸ್ಲಿ ಶಾನ್, ರಿಜಿಸ್ಟ್ರಾರ್ ಜನರಲ್ ಸುರೇಖಾ ಶೆಟ್ಟಿ ಇದ್ದರು.



ಆನೇಕಲ್ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಶಾಲಾ ಕಾಲೇಜುಗಳ ಮುಖ್ಯಸ್ಥರ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಕಾಲೇಜುಗಳ ಮುಖ್ಯಸ್ಥರು

ವೆಂಕಟೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಡೆ ಶ್ರಾವಣ ಶನಿವಾರ ಅಂಗವಾಗಿ ಎ. ನಾರಾಯಣಪುರದ ವೆಂಕಟೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸಮೀಪದ ಎ.ನಾರಾಯಣಪುರ ಮತ್ತು ಉದಯನಗರದ ಪ್ರಮುಖ ರಸ್ತೆ ಮತ್ತು ಬೀದಿಗಳಲ್ಲಿ ಪೂಜಾ ಕುಣಿತ, ತಮಟೆ ವಾದ್ಯ, ಡೊಳ್ಳು ಕುಣಿತದೊಂದಿಗೆ ಮೆರವಣಿಗೆ ನಡೆಸಲಾಯಿತು.

ದೇವಾಲಯದಲ್ಲಿ ಉತ್ಸವ ದೇವರಿಗೆ ವಿಶೇಷ ಪೂಜೆ, ವಿವಿಧ ದ್ರವ್ಯಗಳಿಂದ ಅಭಿಷೇಕ, ಹೋಮ, ಹವನ ಹಾಗೂ ಮಹಾಮಂಗಳಾರತಿ, ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೇರಿಸಲಾಯಿತು.

ದೇವಾಲಯದಲ್ಲಿ ಬಗೆ ಬಗೆಯ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ನಾಲ್ಕನೇ ಶ್ರಾವಣ ಶನಿವಾರ ಪ್ರಯುಕ್ತ ಹಮ್ಮಿಕೊಂಡಿದ್ದ ಬ್ರಹ್ಮರಥೋತ್ಸವದಲ್ಲಿ ಎ.ನಾರಾಯಣಪುರ, ಟಿನ್ ಫ್ಯಾಕ್ಟರಿ, ಪೈಲೇಔಟ್, ಅಕಾಶ್ ಬಡಾವಣೆ, ಜ್ಯೋತಿಪುರ ಮುಂತಾದ ವಿವಿಧ ಪ್ರದೇಶಗಳಿಂದ ಆಗಮಿಸಿದ ನೂರಾರು ಭಕ್ತರು ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡು ತಮ್ಮ ಇಷ್ಟಾರ್ಥ ಈಡೇರಿಕೆಗಾಗಿ ರಥಕ್ಕೆ ಬಾಳೆಹಣ್ಣು ಎಸೆಯುವ ಮೂಲಕ ಧನ್ಯತಾಭಾವ ಮೆರೆದರು.

ಬ್ರಹ್ಮ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತರಿಗೆ ಅನ್ನ ದಾಸೋಹ ಏರ್ಪಡಿಸಲಾಗಿತ್ತು.

ಬಿಬಿಎಂಪಿ ಮಾಜಿ ಸದಸ್ಯ ವಿ.ಸುರೇಶ್, ಮುಖಂಡರಾದ ಪ್ರದೀಪ್ ರೆಡ್ಡಿ, ಸಂತೋಷ, ಯಶವಂತ್, ವಸಂತ್, ಗಿರಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



ಕೆ.ಆರ್.ಪುರ ಸಮೀಪದ ಎ.ನಾರಾಯಣಪುರದಲ್ಲಿ ಕಡೆ ಶ್ರಾವಣ ಶನಿವಾರ ಅಂಗವಾಗಿ ವೆಂಕಟೇಶ್ವರ ಸ್ವಾಮಿ ರಥೋತ್ಸವ ನಡೆಯಿತು.

ಪ್ರಜಾವಾಣಿ

ಬಂದರು ವಿಸ್ತರಣೆಗೆ ನಿರಾಸಕ್ತಿ

ರಾಜ್ಯದಲ್ಲಿ ಕಡಲ ಮೀನು ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)

5.89 2021-22 | **7.30** 2022-23

ರಾಜ್ಯದಿಂದ ಸಾಗರೋತ್ಪನ್ನ ರಫ್ತು ಮೌಲ್ಯ **₹1,962** ಕೋಟಿ 2021-22

ಒಂದನೇ ಪುಟದಿಂದ

'ದೋಣಿಗಳ ಸಂಖ್ಯೆ ಹೆಚ್ಚಾದಂತೆ ಅದಕ್ಕೆ ಅನುಗುಣವಾಗಿ ಬಂದರುಗಳನ್ನು ವಿಸ್ತರಿಸಲು ಸರ್ಕಾರ ಕ್ರಮ ವಹಿಸುತ್ತಿಲ್ಲ' ಎಂಬ ಅಸಮಾಧಾನ ಮೀನುಗಾರರ ಸಮುದಾಯದಲ್ಲಿ ಮನೆಮಾಡಿದೆ.

'ಕಡಲ ಮೀನು ಉತ್ಪಾದನೆ ಹಾಗೂ ರಫ್ತು ಹೆಚ್ಚಳವಾದರೂ ಮೀನುಗಾರಿಕಾ ಬಂದರುಗಳ ಅಭಿವೃದ್ಧಿ ಹಾಗೂ ವಿಸ್ತರಣೆ ಕನಸಿನ ಗಂಟಾಗಿಯೇ ಉಳಿದಿದೆ' ಎಂದು ಬೇಸರದಿಂದಲೇ ಹೇಳುತ್ತಾರೆ ಅಖಿಲ ಕರ್ನಾಟಕ ಪರ್ಸಿನ್ ಮೀನುಗಾರರ ಸಂಘದ ಉಪಾಧ್ಯಕ್ಷ ನವೀನ್ ಬಂಗೇರ.

ರಾಜ್ಯದ ಪ್ರಮುಖ ಬಂದರುಗಳಲ್ಲಿ ಒಂದಾದ ಮಂಗಳೂರಿನ ಮೀನುಗಾರಿಕಾ ಬಂದರಿನ ಮೂರನೇ ವಿಸ್ತರಣೆ ಕಾಮಗಾರಿ ಆರಂಭವಾಗಿದ್ದು 2010-11ನೇ ಸಾಲಿನಲ್ಲಿ. ಈ ಬಂದರಿನಲ್ಲಿ ಯಾಂತ್ರಿಕೃತ ಮೀನುಗಾರಿಕಾ ದೋಣಿಗಳ (ಪರ್ಸಿನ್ ಮತ್ತು ಟ್ರಾಲರ್ ದೋಣಿಗಳು) ನಿಲುಗಡೆ ಸಾಮರ್ಥ್ಯವನ್ನು 1,050ಕ್ಕೆ ಹೆಚ್ಚಿಸುವ ಉದ್ದೇಶದಿಂದ ಆರಂಭಿಸಿದ ಕಾಮಗಾರಿ 13 ವರ್ಷಗಳ ಬಳಿಕವೂ ಪೂರ್ಣಗೊಂಡಿಲ್ಲ. ಆದರೆ, ಮೀನುಗಾರಿಕಾ ದೋಣಿಗಳ ಸಂಖ್ಯೆ ದುಪ್ಪಟ್ಟಾಗಿದೆ. ಇಲ್ಲಿನ ದಕ್ಕೆಯಲ್ಲಿ 1,456 ದೋಣಿಗಳನ್ನು ನಿಲ್ಲಿಸಬೇಕಾದ ಸ್ಥಿತಿ ಬಂದೊದಗಿದೆ.

ಬಂದರಿನ ಸಮೀಪದಲ್ಲಿ ಹರಿಯುವ ತೊರೆಗೆ ಮೂರನೇ ಹಂತದ ವಿಸ್ತರಣೆ ಕಾಮಗಾರಿಯಿಂದ ಅಡ್ಡಿ ಆಗುತ್ತದೆ ಎಂದು ಆರೋಪಿಸಿ ಸ್ಥಳೀಯರೊಬ್ಬರು ಈ ಕಾಮಗಾರಿಗೆ ಹಸಿರು ನ್ಯಾಯ ಮಂಡಳಿಯಿಂದ 2012 ಮಾ.15ರಂದು ತಡೆಯಾಜ್ಞೆ ತಂದಿದ್ದರು. ಇದು ತೆರವಾಗಲು 2016ರ ಮೇ 3ರವರೆಗೆ ಕಾಯಬೇಕಾಯಿತು. ಕಾಮಗಾರಿಗಾಗಿ ಬಂದರು ಇಲಾಖೆಯ ಜಾಗವನ್ನು ಮೀನುಗಾರಿಕಾ ಇಲಾಖೆಗೆ ಹಸ್ತಾಂತರಿಸುವಾಗಲೂ ಸಾಕಷ್ಟು ವಿಳಂಬವಾಯಿತು. ತಾಂತ್ರಿಕ ಸಮಸ್ಯೆಗಳೆಲ್ಲ ನೀಗಿದವು ಎನ್ನುವಷ್ಟರಲ್ಲಿ, ಈ ಕಾಮಗಾರಿಯ ಗುತ್ತಿಗೆ ಪಡೆದ ಯೋಜಕಾ ಸಂಸ್ಥೆ, 'ಹಳೆಯ ದರಪಟ್ಟಿ ಪ್ರಕಾರ ಕಾಮಗಾರಿ ಮುಂದುವರಿಸಲು ಸಾಧ್ಯವಿಲ್ಲ' ಎಂದು ತಗಾದೆ ತೆಗೆಯಿತು. ಈ ಕಾಮಗಾರಿಯಡಿ ಒಟ್ಟು 780 ಮೀ. ಉದ್ದದ ಜೆಟ್ಟಿ ನಿರ್ಮಿಸಬೇಕಿತ್ತು. ಆದರೆ, 450 ಮೀ. ಉದ್ದದ ಜೆಟ್ಟಿ ಮಾತ್ರ ನಿರ್ಮಾಣವಾಗಿದೆ. 2016ರ ಬಳಿಕ ಈ ಕಾಮಗಾರಿಯಲ್ಲಿ ಯಾವುದೇ ಪ್ರಗತಿ ಆಗಿಲ್ಲ. ಕೆಲಸ ಮುಂದುವರಿಸಲು ಯೋಜಕ ಸಂಸ್ಥೆ ಆಸಕ್ತಿ ತೋರಿಸಲಿಲ್ಲ. ಗುತ್ತಿಗೆದಾರರು ನಡಸಿದ್ದಷ್ಟು ಕಾಮಗಾರಿಗೆ ಹಣ (₹ 57.1 ಕೋಟಿ) ಪಾವತಿಸಿ, ಹೊಸತಾಗಿ ಟೆಂಡರ್ ಕರೆಯಲು ಬಂದರು ಇಲಾಖೆ ನಿರ್ಧರಿಸಿದೆ.

ಈ ಜೆಟ್ಟಿಯ ಪ್ರದೇಶದಲ್ಲಿ ಹೂಳೆತ್ತುವುದು, ಕಾಂಕ್ರೀಟ್ ಗೋಡೆ, ಸುಸಜ್ಜಿತ ರಸ್ತೆಗಳು, ಮೋರಿಗಳು, 3 ಕಡೆ ಕಾಂಕ್ರೀಟ್ ಇಳಿಜಾರು, ಮೀನು ಇಳಿಸುವುದಕ್ಕೆ ವ್ಯವಸ್ಥೆ ಮತ್ತು ಹರಾಜು ಕಟ್ಟೆ, ಕಾರ್ಮಿಕರ ವಿಶ್ರಾಂತಿ ಕೊಠಡಿ, ಬಲೆ ಹೆಣೆಯುವ ಶೆಡ್, ರೆಸ್ಟೋರೆಂಟ್, ಸಾರ್ವಜನಿಕ ಶೌಚಾಲಯ, ಭದ್ರತಾ ಕೊಠಡಿಗಳ ನಿರ್ಮಾಣ, ಶುದ್ಧ ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆ ಕಲ್ಪಿಸುವ ಕೆಲಸಗಳು ಇನ್ನಷ್ಟೇ ಆಗಬೇಕಿವೆ. ಈ ಕಾಮಗಾರಿ ಪೂರ್ಣಗೊಳಿಸಲು ₹49.5 ಕೋಟಿ ಮೊತ್ತದ ಪರಿಷ್ಕೃತ ಪ್ರಸ್ತಾವವನ್ನು ಬಂದರು ಇಲಾಖೆಯ ಸ್ಥಳೀಯ ಅಧಿಕಾರಿಗಳು ಸಿದ್ಧಪಡಿಸಿದ್ದಾರೆ. ಇದಕ್ಕೆ ಇನ್ನೂ ಹಣಕಾಸು ಇಲಾಖೆಯ ಅನುಮೋದನೆ ನೀಡಿಲ್ಲ.

'ಈ ಕಾಮಗಾರಿ ಮುಗಿಯದ ಹೊರತು ಮೀನುಗಾರರ ನಿತ್ಯದ ಗೋಳು ತಪ್ಪುವುದಿಲ್ಲ' ಎಂದು ಪರ್ಸಿನ್ ದೋಣಿಯ ಮಾಲೀಕ ನವೀನ್ ಬಂಗೇರ ಹೇಳಿದರು.

ರಾಜ್ಯದ ಅತಿದೊಡ್ಡ ಮೀನುಗಾರಿಕಾ ಬಂದರಾಗಿರುವ ಉಡುಪಿಯ ಮಲ್ಪೆ ಬಂದರಿನ ಮೂರು ಕಡೆಗಳಲ್ಲಿ ದಕ್ಕೆಗಳನ್ನು ವಿಸ್ತರಣೆ ಮಾಡಲಾಗಿದೆ. ಆದರೂ ದಟ್ಟಣೆ ಸಮಸ್ಯೆ ಪರಿಹಾರವಾಗಿಲ್ಲ. 1,000 ದೋಣಿಗಳನ್ನು ನಿಲ್ಲಿಸುವ ಸಾಮರ್ಥ್ಯವಿರುವ ಬಂದರಿನಲ್ಲಿ ನಾಡದೋಣಿ ಹಾಗೂ ಯಾಂತ್ರಿಕೃತ ದೋಣಿಗಳು ಸೇರಿ 2,500ಕ್ಕೂ ಹೆಚ್ಚು ದೋಣಿಗಳನ್ನು ನಿಲ್ಲಿಸಲಾಗುತ್ತಿದೆ.

'ಮೀನುಗಾರಿಕೆಗೆ ಕಡಲಿಗೆ ತೆರಳುವಾಗ ಹಾಗೂ ದಕ್ಕೆಗೆ ಮರಳುವಾಗ ಬೋಟ್‌ಗಳು ಒಂದಕ್ಕೊಂದು ಡಿಕ್ಕಿಯಾಗಿ ಹಾನಿ ಸಂಭವಿಸುವುದು ಇಲ್ಲಿ ಸಾಮಾನ್ಯ. ಹೊರ ವರ್ತುಲ ಬಂದರು ವಿಸ್ತರಣೆ ಮಾಡಿದರೆ ಸಮಸ್ಯೆ ನಿವಾರಿಸಬಹುದು. ಸರ್ಕಾರ ಮೀನುಗಾರರ ಪರ ಯೋಚನೆ ಮಾಡಬೇಕು' ಎನ್ನುತ್ತಾರೆ ಮಲ್ಪೆ ಮೀನುಗಾರರ ಸಂಘದ ಅಧ್ಯಕ್ಷರಾದ ದಯಾನಂದ ಸುವರ್ಣ.

ಉತ್ತರ ಕನ್ನಡಕ್ಕೆ ಹೊಸ ಬಂದರು?

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಬೇಲೆಕೇರಿ ಬಂದರುಗಳ ವಿಸ್ತರಣೆ ಮಾಡುವ ಬೇಡಿಕೆ ಇದ್ದರೂ, ವಿಸ್ತರಣೆ ಬದಲು ಹೊಸ ಬಂದರು ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಕಾರವಾರ ತಾಲ್ಲೂಕಿನ ಮಾಜಾಳಿ, ಅಂಕೋಲಾ ತಾಲ್ಲೂಕಿನ ಬೇಲೆಕೇರಿ, ಕೇಣಿಯಲ್ಲಿ ಹೊಸ ಬಂದರು ಸ್ಥಾಪನೆಗೆ ತಲಾ ₹250 ಕೋಟಿ ಅನುದಾನವನ್ನು ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಈ ಹಿಂದೆಯೆ ಘೋಷಿಸಲಾಗಿದೆ. ಈ ಕಾಮಗಾರಿಗಳನ್ನು ಆರಂಭಿಸಲು ಕರಾವಳಿ ನಿಯಂತ್ರಣ ಪ್ರಾಧಿಕಾರದ ಅನುಮತಿಯ ಅಗತ್ಯವಿದ್ದು, ಈ ಪ್ರಕ್ರಿಯೆ ಇನ್ನೂ ಮುಗಿದಿಲ್ಲ.

'ಕಾರವಾರದಲ್ಲಿ ವಾಣಿಜ್ಯ ಬಂದರಿಗೆ ಸಮೀಪದಲ್ಲೇ ಮೀನುಗಾರಿಕೆ ಬಂದರು ಇದೆ. ವಾಣಿಜ್ಯ ಬಂದರು ವಿಸ್ತರಿಸುವ ನೆಪದಲ್ಲಿ ಮೀನುಗಾರಿಕೆ ಬಂದರು ಸ್ಥಗಿತಗೊಳಿಸುವ ಹುನ್ನಾರ ನಡೆಸಲಾಗುತ್ತಿದೆ. ಅದರ ಭಾಗವಾಗಿಯೇ ದೂರದ ಮಾಜಾಳಿಯಲ್ಲಿ ಹೊಸ ಬಂದರು ಸ್ಥಾಪಿಸಿ ಮೀನುಗಾರರನ್ನು ಅಲ್ಲಿಗೆ ಸ್ಥಳಾಂತರಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಇದನ್ನು ಮೀನುಗಾರರು ವಿರೋಧಿಸುತ್ತಾರೆ' ಎನ್ನುತ್ತಾರೆ ವಿನಾಯಕ ಹರಿಕಂತ್ರ.

ನಾಡದೋಣಿಗಳ ನಿಲುಗಡೆಗೆ ಮಂಗಳೂರು ನಗರದ ಹೊರವಲಯದ ಬೆಂಗರೆ ಪ್ರದೇಶದಲ್ಲಿ ₹65 ಕೋಟಿ ಮೊತ್ತದಲ್ಲಿ ಹೊಸ ದಕ್ಕೆಯನ್ನು ನಿರ್ಮಿಸಲಾಗುತ್ತಿದೆ. ಇದರ ಜೆಟ್ಟಿ ನಿರ್ಮಾಣದ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಮೀನುಗಾರಿಕಾ ಬಂದರಿನ ಒಂದನೇ ಮತ್ತು ಎರಡನೇ ಹಂತದ ವಿಸ್ತರಣೆ ಸಂದರ್ಭದಲ್ಲಿ ನಿರ್ಮಾಣವಾಗಿದ್ದ ಜೆಟ್ಟಿಗಳು ಶಿಥಿಲವಾಗಿದೆ. ಇಲ್ಲಿರುವ ಕಲ್ಲಿನ ಜೆಟ್ಟಿಗಳು ಕಿತ್ತು ಬರುತ್ತಿವೆ. ಈ ದಕ್ಕೆಗಳನ್ನು ನವೀಕರಿಸಲು ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಅನುದಾನ ಪಡೆಯಲು ಕೇಂದ್ರ ಸರ್ಕಾರಕ್ಕೆ ₹37.5 ಕೋಟಿಯ ಪ್ರಸ್ತಾವ ಸಲ್ಲಿಸಲಾಗಿದೆ. ಇದಕ್ಕಿನ್ನೂ ಮಂಜುರಾತಿ ಸಿಕ್ಕಿಲ್ಲ.

ಉಳ್ಳಾಲ ಕೋಡಿಯಲ್ಲಿ ನಾಡದೋಣಿ ಜೆಟ್ಟಿ ಅಭಿವೃದ್ಧಿಗೆ ನಬಾರ್ಡ್ ಅಡಿ ₹6.5 ಕೋಟಿಯ ಪ್ರಸ್ತಾವ ಸಲ್ಲಿಸಲಾಗಿದೆ. ಕುಳಾಯಿಯಲ್ಲಿ ನವಮಂಗಳೂರು ಪ್ರಾಧಿಕಾರದವರು ಸಾಮಾಜಿಕ ಹೊಣೆಗಾರಿಕೆ ನಿಧಿಯ ಅನುದಾನ ಬಳಸಿ ಹೊಸ ಮೀನುಗಾರಿಕಾ ಬಂದರನ್ನು ನಿರ್ಮಿಸುತ್ತಿದ್ದಾರೆ. ಈ ಯೋಜನೆಯ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ.



'ಅಪ್ಪಿತಪ್ಪಿ ದೋಣಿಗಳು ಢಿಕ್ಕಿ ಹೊಡೆದರೆ ಅವುಗಳ ದುರಸ್ತಿಗೇ ಎರಡು ಮೂರು ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ಕೆಲವೊಮ್ಮೆ ಸಮುದ್ರದಲ್ಲಿ ಮೀನು ಸಿಗದೇ ಖಾಲಿ ದೋಣಿಗಳು ಮರಳುವುದೂ ಇದೆ. ಇಂತಹ ಪರಿಸ್ಥಿತಿಯಲ್ಲಿ ದೋಣಿ ದುರಸ್ತಿಗೂ ಹಣ ಹೊಂದಿಸುವುದು ಬಹಳ ಕಷ್ಟ' ಎಂದು ಮಂಗಳೂರಿನ ದೋಣಿ ಮಾಲೀಕ ಇಬ್ರಾಹಿಂ ಅಳಲು ತೋಡಿಕೊಂಡರು.

ಹೊಸ ದೋಣಿಗಳಿಗಿಲ್ಲ ಪರವಾನಗಿ: ಸಾಗರ ಸಂಪನ್ಮೂಲದ ಬಳಕೆ ಹೆಚ್ಚಿಸಲು ಕೇಂದ್ರ ಸರ್ಕಾರ ನೀಲಿ ಕ್ರಾಂತಿ ಯೋಜನೆ ಹಮ್ಮಿಕೊಂಡಿದೆ. ಮೀನುಗಾರರಿಗೆ ಉತ್ತೇಜನ ನೀಡಲು ದೋಣಿ ಖರೀದಿಗೆ ಸಹಾಯಧನವನ್ನೂ ಒದಗಿಸುತ್ತಿದೆ. ಬಂದರು ವಿಸ್ತರಣೆ ಕಾರ್ಯ ನಿಂತ ನೀರಿನಂತಾಗಿರುವ ಕಾರಣ ಇಂತಹ ಸವಲತ್ತುಗಳ ಪ್ರಯೋಜನ ಹೊಸ ಫಲಾನುಭವಿಗಳಿಗೆ ಸಿಗುತ್ತಲೇ ಇಲ್ಲ. ಬಂದರುಗಳಲ್ಲಿ ಬೋಟುಗಳನ್ನು ನಿಲ್ಲಿಸಲು ಜಾಗದ ಕೊರತೆ ಇರುವುದರಿಂದ ಮೀನುಗಾರಿಕಾ ಇಲಾಖೆ ಹೊಸ ದೋಣಿಗಳಿಗೆ ಪರವಾನಗಿ ನೀಡುವುದನ್ನೇ ಸ್ಥಗಿತಗೊಳಿಸಿದೆ. ಈಗಾಗಲೇ ನೋಂದಣಿ ಮಾಡಿಸಿರುವ ದೋಣಿಗಳ ಮಾಲೀಕರಿಗಷ್ಟೇ ತಮ್ಮ ಹಳೆಯ ದೋಣಿಗಳನ್ನು ನವೀಕರಿಸಲು ಅಥವಾ ದೋಣಿಯ ಗಾತ್ರವನ್ನು ಹೆಚ್ಚಿಸಲು ಅವಕಾಶ ನೀಡಲಾಗುತ್ತಿದೆ.

2016ರಿಂದ ಈಚೆಗೆ ಮೀನುಗಾರಿಕಾ ಇಲಾಖೆ ಗರಿಷ್ಠ 24 ಮೀಟರ್ ಉದ್ದದ ಗರಿಷ್ಠ 7 ಮೀಟರ್ ಅಗಲದ ದೋಣಿಗಳನ್ನು ಹೊಂದುವುದಕ್ಕೆ ಅನುಮತಿ ನೀಡುತ್ತಿದೆ. ಅದಕ್ಕೂ ಮುನ್ನ ಸಣ್ಣ ಸಣ್ಣ ದೋಣಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಅವುಗಳ ಉದ್ದ ಗರಿಷ್ಠ 20 ಮೀಟರ್ ಮೀರುತ್ತಿರಲಿಲ್ಲ. 24 ಮೀಟರ್ ಉದ್ದದ ದೋಣಿಯು ದಕ್ಕೆಯಲ್ಲಿ ನಾಲ್ಕೈದು ಸಣ್ಣ ದೋಣಿಗಳನ್ನು ನಿಲ್ಲಿಸಲು ಬೇಕಾಗುವಷ್ಟು ಜಾಗವನ್ನು ಕಬಳಿಸುತ್ತದೆ. ಹಾಗಾಗಿ ಇತ್ತೀಚಿನ ವರ್ಷಗಳಲ್ಲಿ ಜಾಗದ ಸಮಸ್ಯೆ ವಿಪರೀತವಾಗಿದೆ. ಇಕ್ಕಟ್ಟಿನಿಂದಾಗಿ ಉಂಟಾಗುವ ಅವಘಡಗಳು ಮೀನುಗಾರರ ನಡುವೆ ತಿಕ್ಕಾಟಕ್ಕೂ ಕಾರಣವಾಗುತ್ತಿವೆ ಎಂದು ದೂರುತ್ತಾರೆ ಬೋಟ್ ಮಾಲೀಕರು.

'ಇತರ ರಾಜ್ಯಗಳಿಗೆ ಹೋಲಿಸಿದರೆ, ರಾಜ್ಯದ ವ್ಯಾಪ್ತಿಯಲ್ಲಿ ಅರಬ್ಬೀ ಸಮುದ್ರದಲ್ಲಿ ಮತ್ಸ್ಯ ಸಂಪತ್ತು ಹೇರಳವಾಗಿದೆ. ಗೋವಾ, ಮಹಾರಾಷ್ಟ್ರ, ಕೇರಳ ಹಾಗೂ ತಮಿಳುನಾಡಿನ ಮೀನುಗಾರರು ನಮ್ಮ ರಾಜ್ಯದ ವ್ಯಾಪ್ತಿಯ ಕಡಲಿನಲ್ಲಿ ಬಂದು ಮೀನು ಹಿಡಿಯುತ್ತಾರೆ. ಆದರೆ, ರಾಜ್ಯದ ಮೀನುಗಾರಿಕಾ ಬಂದರುಗಳ ಅಭಿವೃದ್ಧಿ ನಿರೀಕ್ಷಿತ ವೇಗದಲ್ಲಿ ನಡೆಯದ ಕಾರಣ ಮತ್ಸ್ಯ ಸಂಪತ್ತಿನ ಸಂಪೂರ್ಣ ಬಳಕೆ ಇನ್ನೂ ಮರೀಚಿಕೆಯಾಗಿಯೇ ಇದೆ ' ಎನ್ನುತ್ತಾರೆ ಬೋಟ್ ಮಾಲಿಕ ಇಬ್ರಾಹಿಂ.


'ಒಂದು ಪರ್ಸಿನ್ ದೋಣಿ 30ರಿಂದ 40 ಮೀನುಗಾರರಿಗೆ, ಟ್ರಾಲರ್ ದೋಣಿ 15ರಿಂದ 20 ಮಂದಿಗೆ ನೇರ ಉದ್ಯೋಗ ಕಲ್ಪಿಸುತ್ತದೆ. ಮಂಜುಗಡ್ಡೆ ಘಟಕದ ಕಾರ್ಮಿಕರು, ಮೀನು ಇಳಿಸುವವರು, ಮೀನು ಸಾಗಿಸುವ ವಾಹನಗಳ ಚಾಲಕರು ಮತ್ತು ಸಿಬ್ಬಂದಿ, ಮೀನು ಮಾರಾಟಗಾರು ಸಂಖ್ಯೆಯನ್ನೂ ಪರಿಗಣಿಸಿದರೆ ಒಂದು ದೋಣಿಯಿಂದಾಗಿ ಏನಿಲ್ಲವೆಂದರೂ 100 ಮಂದಿಗೆ ಉದ್ಯೋಗ ಸಿಗುತ್ತದೆ. ಒಂದು ಸಲ ಮೀನುಗಾರಿಕೆಗೆ ತೆರಳುವಾಗ ದೋಣಿಗೆ ಕಡಿಮೆ ಎಂದರೂ ಒಂಬತ್ತು ಸಾವಿರ ಲೀಟರ್ ಡೀಸೆಲ್ ತುಂಬಿಕೊಂಡು ಹೋಗುತ್ತೇವೆ. ಇದಕ್ಕೆ ನಮಗೆ ಮಾರಾಟ ತೆರಿಗೆಯಿಂದ ವಿನಾಯಿತಿ ಇದೆ. ಆದರೆ ಪ್ರತಿ ಲೀಟರ್ ಡೀಸೆಲ್ ಬಳಸಿದಾಗಲೂ ಸರ್ಕಾರದ ಬೊಕ್ಕಸಕ್ಕೆ ನಮ್ಮಿಂದ ತೆರಿಗೆ ಪಾವತಿಯಾಗುತ್ತದೆ. ಆದರೆ ಬಂದರು ವಿಸ್ತರಣೆ ಮಾಡದ ಸರ್ಕಾರ ಮೀನುಗಾರರಿಗೆ ಅನ್ಯಾಯ ಮಾಡುತ್ತಲೇ ಬಂದಿದೆ. ಬಂದರು ವಿಸ್ತರಣೆ ಕಾರ್ಯವನ್ನು ಬೇಗ ಕೈಗೊಂಡರೆ ಅದರಿಂದ ಸರ್ಕಾರದ ಬೊಕ್ಕಸಕ್ಕೂ ಹೆಚ್ಚಿನ ವರಮಾನ ಬರಲಿದೆ' ಎಂದು ನವೀನ್ ಬಂಗೇರ ಅಭಿಪ್ರಾಯಪಟ್ಟರು.



ಬಂದರು–ಸೌಕರ್ಯ ಒದಗಿಸಲು ಬದ್ಧ: ಸಚಿವ ಮಂಕಾಳ ವೈದ್ಯ

'ರಾಜ್ಯದ ಎಲ್ಲ ಮೀನುಗಾರಿಕಾ ಬಂದರುಗಳಲ್ಲಿ ಅಗತ್ಯ ಮೂಲ ಸೌಕರ್ಯ ಒದಗಿಸಲು ಸರ್ಕಾರ ಬದ್ಧವಿದೆ. ಡೀಸೆಲ್ ಬಂಕ್, ಮಹಿಳೆಯರ ವಿಶ್ರಾಂತಿ ಗೃಹವೂ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಪೂರೈಸುವಲ್ಲಿ ತಪ್ಪಾಗದಂತೆ ಎಚ್ಚರಿಕೆ ವಹಿಸಲಾಗುತ್ತದೆ. ಮೀನುಗಾರರ ಸಮಸ್ಯೆಗೆ ಪರಿಹಾರ ಒದಗಿಸುವ ದೃಷ್ಟಿಯಿಂದ ಇಲಾಖೆ ಕೆಲಸ ಮಾಡಲಿದೆ' ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ ಎಸ್. ವೈದ್ಯ ತಿಳಿಸಿದರು.

'ದಕ್ಷಿಣ ಕನ್ನಡ, ಉಡುಪಿ ಮೀನುಗಾರಿಕೆ ಚಟುವಟಿಕೆಯಲ್ಲಿ ಮುಂಚೂಣಿಯಲ್ಲಿವೆ. ಅದೇ ಮಾದರಿಯಲ್ಲಿ ಉತ್ತರ ಕನ್ನಡದಲ್ಲೂ ಮೀನುಗಾರಿಕೆ ಚಟುವಟಿಕೆಯ ಉತ್ತೇಜನಕ್ಕೆ ಕ್ರಮವಹಿಸುತ್ತೇನೆ. ಕಾರವಾರದ ಮಾಜಾಳಿಯಲ್ಲಿ ಮೀನುಗಾರಿಕೆ ಬಂದರು ಸ್ಥಾಪನೆಗೆ ಈಗಾಗಲೆ ₹250 ಕೋಟಿ ಬಿಡುಗಡೆಯಾಗಿದೆ. ಬಂದರು ನಿರ್ಮಾಣಕ್ಕೆ ಅಗತ್ಯ ಪ್ರಕ್ರಿಯೆಗೆ ವೇಗ ನೀಡಲಾಗುವುದು' ಎಂದರು



ಮೋಟಾರ್ ಚಾಲಿತ ದೋಣಿಗಳು ಉಡುಪಿಯ ಮಲ್ಪೆ ಬಂದರಿನಲ್ಲಿ ಲಂಗರು ಹಾಕಿರುವ ದೃಶ್ಯ – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

> ಗರಿಷ್ಠ ಸಾಮರ್ಥ್ಯದ ಎರಡು ಪಟ್ಟು ಬೋಟ್‌ಗಳು ಮಲ್ಪೆ ಬಂದರಿನಲ್ಲಿ ನಿಲ್ಲುತ್ತಿವೆ. ಬೋಟ್‌ಗಳನ್ನು ಹೊರಗೆ ತೆಗೆಯುವಾಗ, ಮೀನುಗಾರಿಕೆ ಮುಗಿಸಿ ದಕ್ಕೆಗೆ ಮರಳುವಾಗ ಅವುಗಳಿಗೆ ಹಾನಿಯಾಗುತ್ತಿದೆ. ಬಂದರು ವಿಸ್ತರಣೆ, ನಿಯಮಿತವಾಗಿ ಹೂಳೆತ್ತುವಿಕೆಯೇ ಇದಕ್ಕೆ ಪರಿಹಾರ
>
> **ದಯಾನಂದ ಸುವರ್ಣ,** ಮಲ್ಪೆ ಮೀನುಗಾರರ ಸಂಘದ ಅಧ್ಯಕ್ಷ




> ಮೀನುಗಾರಿಕೆ ಬಂದರುಗಳಲ್ಲಿ ಪರ್ಸಿನ್, ಟ್ರಾಲರ್ ಬೋಟ್‌ಗಳ ನಿಲುಗಡೆಗೆ ಸೂಕ್ತ ಸ್ಥಳಾವಕಾಶ ಆಗುವಂತೆ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಮೀನುಗಾರರ ಹಲವು ವರ್ಷಗಳ ಬೇಡಿಕೆ. ಅದನ್ನು ಸರ್ಕಾರ ಆದ್ಯತೆಯಾಗಿ ಪರಿಗಣಿಸಲಿ.
>
> **ರಾಜು ತಾಂಡೇಲ್,** ಜಿಲ್ಲಾ ಸಹಕಾರ ಮೀನು ಮಾರಾಟ ಫೆಡರೇಶನ್ ಅಧ್ಯಕ್ಷ



ಬಂದರಿನಲ್ಲಿ ಹೂಳು–ಕಡಲ ಮಕ್ಕಳ ಗೋಳು:

ಅದು 2020ರ ಸೆಪ್ಟೆಂಬರ್. ಮೀನುಗಾರಿಕೆ ಚಟುವಟಿಕೆ ಆಗತಾನೆ ಗರಿಬಿಚ್ಚಿದ್ದ ಕಾಲ. 'ಸೇಂಟ್ ಆ್ಯಂಟನಿ' ಪರ್ಸಿನ್ ಬೋಟ್ ಹತ್ತಾರು ಟನ್ ಮೀನು ಬಲೆಗೆ ಬೀಳಿಸಿಕೊಂಡು ಬಂದರಿನತ್ತ ಮರಳುತ್ತಿತ್ತು. 'ಇನ್ನೇನು ಬಂದರನ್ನು ತಲುಪಲಿದ್ದೇವೆ' ಎಂಬ ಖುಷಿಯಲ್ಲಿ ತೇಲುತ್ತಿದ್ದ ಮೀನುಗಾರ ಮುಖದಲ್ಲಿ ಏಕಾಏಕಿ ದುಗುಡ ಕಾಣಿಸಿತು. 'ಜೀವ ಉಳಿಸಿಕೊಂಡರೆ ಸಾಕು' ಎಂಬ ಸ್ಥಿತಿಗೆ ಅವರು ತಲುಪಿದ್ದರು.



ಬಂದರಿನ ಸಮೀಪ ಸಮುದ್ರದಲ್ಲಿದ್ದ ಹೂಳು ದೋಣಿಯನ್ನೇ ತಡೆದು ನಿಲ್ಲಿಸಿತ್ತು. ಅಲೆಗಳ ಅಬ್ಬರಕ್ಕೆ ಸಿಲುಕಿ ನಿಂತಲ್ಲೇ ಅತ್ತಿಂದಿತ್ತ ವಾಲುತ್ತಿದ್ದ ದೋಣಿ ನೋಡನೋಡುತ್ತಲೇ ಮುಳುಗುವ ಹಂತಕ್ಕೆ ತಲುಪಿತು. ಆ ದೋಣಿ ಮತ್ತೆ ಬಳಸಲು ಆಗದಷ್ಟು ಹಾನಿಗೊಳಗಾಯಿತು.

ಬೈತಕೋಲದ ಬಂದರಿಗೆ ಮೀನು ಹೇರಿಕೊಂಡು ಹೋಗುತ್ತಿದ್ದ 'ನಾಗಾರ್ಜುನ' ಟ್ರಾಲರ್ ಬೋಟ್ ಕೂಡಾ ಹೂಳಿನಲ್ಲಿ ಸಿಲುಕಿ ಹಾನಿಗೆ ಒಳಗಾಯಿತು. ಆ ದೋಣಿಯ ಮಾಲೀಕ ಅದನ್ನು ಮೇಲೆತ್ತಲು ಲಕ್ಷಾಂತರ ರೂಪಾಯಿ ವ್ಯಯಿಸಬೇಕಾಯಿತು.

ಇವು ಎರಡು ಘಟನೆ ಉದಾಹರಣೆಗಳಷ್ಟೆ. ಇಂತಹ ಹತ್ತಾರು ಘಟನೆಗೆ ಅರಬ್ಬೀ ಸಮುದ್ರದ ಮೀನುಗಾರಿಕಾ ಬಂದರುಗಳ ಗುಣಮಟ್ಟಕ್ಕೆ ಸಾಕ್ಷಿಯಾಗುತ್ತಿವೆ. 'ಎರಡು ದಶಕಗಳ ಹಿಂದೆ ನಿರ್ಮಿಸಲಾದ ಬೈತಕೋಲ ಬಂದರಿನಲ್ಲಿ ಹೂಳು ತುಂಬಿಕೊಂಡಿದೆ. 10 ವರ್ಷದ ಹಿಂದೊಮ್ಮೆ ಹೂಳೆತ್ತಲಾಗಿತ್ತು. ತದನಂತರ ಈ ಪ್ರಕ್ರಿಯೆಯೇ ನಡೆದಿಲ್ಲ' ಎನ್ನುತ್ತಾರೆ ಟ್ರಾಲರ್ ಬೋಟ್ ಮಾಲೀಕ ಪ್ರಶಾಂತ ಹರಿಕಂತ್ರ.

'ಹೊನ್ನಾವರದ ಶರಾವತಿ ಅಳಿವೆ ಅಪಾಯಕಾರಿ ಪ್ರದೇಶ. ಇಲ್ಲಿಂದಲೇ ಮೀನುಗಾರಿಕೆ ಬೋಟುಗಳು ಹಾಯ್ದು ಬಂದರಿಗೆ ತಲುಪಬೇಕು. ಹೂಳು ಭರ್ತಿಯಾಗಿ ಇಲ್ಲಿ ದೋಣಿ ಸಾಗಲು ಸಮಸ್ಯೆ ಆಗುತ್ತಿದೆ. ದೋಣಿಗಳ ನಿಲುಗಡೆಗೆ ದೊಡ್ಡ ಜಾಗದ ಅಗತ್ಯವಿರುವ ಕಾರಣ ಬಂದರು ವಿಸ್ತರಣೆಗೆ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆದರೆ ನಮ್ಮ ಮನವಿಗೆ ಬೆಲೆಯೇ ಇಲ್ಲದಂತಾಗಿದೆ' ಎನ್ನುತ್ತಾರೆ ಮೀನುಗಾರ ಮುಖಂಡ ರಾಜು ತಾಂಡೇಲ್.

ಉತ್ತರ ಕನ್ನಡದ ಎಂಟು ಮೀನುಗಾರಿಕಾ ಬಂದರುಗಳ ಪೈಕಿ ಭಟ್ಕಳ ತಾಲ್ಲೂಕಿನ ಅಳ್ವೆಕೋಡಿ, ತೆಂಗಿನಗುಂಡಿ ಬಂದರುಗಳನ್ನು ₹86.05 ಕೋಟಿ ವೆಚ್ಚದಲ್ಲಿ ಹೂಳೆತ್ತಲಾಗಿದ್ದು, ಜತೆಗೆ ಅಲ್ಲಿ ಅಲೆ ತಡೆಗೋಡೆಯನ್ನೂ ನಿರ್ಮಿಸಲಾಗಿದೆ. ಮಾವಿನಕುರ್ವೆ ಬಂದರಲ್ಲಿ ₹5 ಕೋಟಿ ವೆಚ್ಚದಲ್ಲಿ ಹೂಳೆತ್ತಲಾಗಿದೆ. ಕಾರವಾರ ತಾಲ್ಲೂಕಿನ ಬೈತಕೋಲ ಬಂದರು ಹೂಳೆತ್ತಲು ₹3.50 ಕೋಟಿ ವೆಚ್ಚದ ಕಾಮಗಾರಿಗೆ ಅನುಮೋದನೆ ಸಿಕ್ಕಿದೆ. ಉಳಿದಂತೆ ಮುದಗಾ ಬಂದರು ಹೂಳೆತ್ತಲು ₹6.50 ಕೋಟಿ, ಕುಮಟಾ ತಾಲ್ಲೂಕಿನ ತದಡಿ ಬಂದರು ಹೂಳೆತ್ತಲು ₹4.50 ಕೋಟಿ ಮೊತ್ತದ ಪ್ರಸ್ತಾವ ಸಲ್ಲಿಕೆಯಾಗಿದೆ.

'ನಾಲ್ಕು ವರ್ಷಗಳ ಹಿಂದೆ ಸುಮಾರು ₹3 ಕೋಟಿ ವೆಚ್ಚದಲ್ಲಿ ಅಂಕೋಲಾ ತಾಲ್ಲೂಕಿನ ಬೇಲೇಕೇರಿ ಬಂದರು ಹೂಳೆತ್ತುವ ಕೆಲಸ ನಡೆದಿತ್ತು. ಅದಾದ ಬಳಿಕ ಹೂಳೆತ್ತುವ ಪ್ರಕ್ರಿಯೆ ನಡೆದಿರಲಿಲ್ಲ. ಈವರೆಗೆ ಐದರಿಂದ ₹10 ಕೋಟಿ ಮೊತ್ತ ಮಾತ್ರ ಹೂಳೆತ್ತಲು ವ್ಯಯಿಸಿರುವ ಅಂದಾಜಿದೆ. ಆದರೆ ಈಗ ಜಿಲ್ಲೆಯ ಮೀನುಗಾರಿಕಾ ಬಂದರು ಹೂಳೆತ್ತಿ ಅಭಿವೃದ್ಧಿಪಡಿಸಲು ದೊಡ್ಡ ಮೊತ್ತವೇ ಬೇಕು' ಎನ್ನುತ್ತಾರೆ ಬಂದರು ಜಲಸಾರಿಗೆ ಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ತಾರಾನಾಥ ರಾಠೋಡ್.

ಉಡುಪಿ ಜಿಲ್ಲೆಯಲ್ಲೂ ಹೂಳಿನ ಸಮಸ್ಯೆ: ಬಂದರಿನಲ್ಲಿ ಕೆಲಸ ಮಾಡುವಾಗ ಆಯತಪ್ಪಿ ಸಮುದ್ರಕ್ಕೆ ಬಿದ್ದು ಹೂಳಿನಡಿ ಸಿಲುಕಿ ನೂರಾರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 2017ರಿಂದ 2022ರವರೆಗಿನ ಅವಧಿಯಲ್ಲೇ ಜಿಲ್ಲೆಯಲ್ಲಿ 54 ಮೀನುಗಾರರು ಸಮುದ್ರಕ್ಕೆ ಬಿದ್ದು ಮೃತಪಟ್ಟಿದ್ದಾರೆ ಎನ್ನುತ್ತವೆ ಇಲ್ಲಿನ ಪೊಲೀಸ್ ಠಾಣೆಯ ಅಂಕಿಅಂಶಗಳು. ಪ್ರತಿವರ್ಷ ಹೂಳೆತ್ತಬೇಕು ಎಂಬುದು ಮೀನುಗಾರರ ಪ್ರಮುಖ ಬೇಡಿಕೆ.

'ಮಲ್ಪೆ ಬಂದರಿನ ಹೂಳೆತ್ತುವ ₹3 ಕೋಟಿ ಮೊತ್ತದ ಕಾಮಗಾರಿಗೆ ಕಳೆದ ವರ್ಷ ಚಾಲನೆ ದೊರೆತಿದೆ. ಇದುವರೆಗೂ ಶೇ 80ರಷ್ಟು ಹೂಳೆತ್ತಲಾಗಿದೆ. 2022ರಲ್ಲಿ ₹2 ಕೋಟಿ ಮೊತ್ತದಲ್ಲಿ ಕೊಡೇರಿ ಬಂದರಿನ ಹೂಳೆತ್ತಲಾಗಿದೆ. ಗಂಗೊಳ್ಳಿ ಬಂದರು ಹೂಳೆತ್ತಲು ₹4.6 ಕೋಟಿ ವೆಚ್ಚದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಸೆಪ್ಟೆಂಬರ್‌ನಲ್ಲಿ ಕಾಮಗಾರಿ ಆರಂಭವಾಗಲಿದೆ' ಎನ್ನುತ್ತಾರೆ ಬಂದರು ಇಲಾಖೆಯ ಅಧಿಕಾರಿ ವೀರಣ್ಣ.

ಸೌಕರ್ಯ ಕೊರತೆ: ಮೀನುಗಾರರು ತತ್ತರ

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರವಾರದ ಬೈತಕೋಲ, ಮುದಗಾ, ಕುಮಟಾ ತಾಲ್ಲೂಕಿನ ತದಡಿ, ಅಂಕೋಲಾ ತಾಲ್ಲೂಕಿನ ಬೇಲೇಕೇರಿ, ಹೊನ್ನಾವರ ತಾಲ್ಲೂಕಿನ ಕಾಸರಕೋಡ, ಭಟ್ಕಳ ತಾಲ್ಲೂಕಿನ ಮಾವಿನಕುರ್ವೆ, ಅಳಿವೆಕೋಡಿ, ತೆಂಗಿನಗುಂಡಿ ಬಂದರುಗಳಿವೆ. ಅವುಗಳ ದುಃಸ್ಥಿತಿಯಿಂದಾಗಿ ಮೀನುಗಾರಿಕೆ ನಿರೀಕ್ಷಿತ ಪ್ರಗತಿ ಕಾಣುತ್ತಿಲ್ಲ ಎಂಬುದು ಮೀನುಗಾರರ ಅಳಲು.

ಬೈತಕೋಲ, ತದಡಿ, ಕಾಸರಕೋಡ ಸೇರಿದಂತೆ ಬಹುತೇಕ ಎಲ್ಲ ಬಂದರುಗಳಲ್ಲೂ ಮೀನುಗಾರರಿಗೆ, ಕಾರ್ಮಿಕರಿಗೆ ನೀರು, ನೆರಳಿನ ವ್ಯವಸ್ಥೆಯಿಲ್ಲ. ಹೊನ್ನಾವರ ತಾಲ್ಲೂಕಿನ ಕಾಸರಕೋಡ ಮೀನುಗಾರಿಕಾ ಬಂದರು ಜಿಲ್ಲೆಯಲ್ಲೇ ಅತಿ ದೊಡ್ಡದು. ಇಲ್ಲಿ 120ಕ್ಕೂ ಹೆಚ್ಚು ಪರ್ಸಿನ್, 150ಕ್ಕೂ ಅಧಿಕ ಟ್ರಾಲರ್ ಬೋಟ್‌ಗಳನ್ನು ನಿಲ್ಲಿಸಲಾಗುತ್ತದೆ. ಇದರ ವಿಸ್ತರಣೆಯ ಬೇಡಿಕೆಯೂ ನನೆಗುದಿಗೆ ಬಿದ್ದಿದೆ. ಒಟ್ಟಾರೆ ಕರಾವಳಿಯ ಮತ್ಸ್ಯೋದ್ಯಮ ಒಂದೇ ತರಹದ ಸಮಸ್ಯೆಯ ಸುಳಿಯಲ್ಲಿ ಸಿಲುಕಿದೆ. ಇದಕ್ಕೆ ಪರಿಹಾರ ಬೇಕಿದೆ.

ಪೂರಕ ಮಾಹಿತಿ: ಗಣಪತಿ ಹೆಗಡೆ (ಕಾರವಾರ), ಬಾಲಚಂದ್ರ ಎಚ್. (ಉಡುಪಿ).

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 10-9-1998

● ಅಣ್ಣಾ ಹಜಾರೆಗೆ 3 ತಿಂಗಳು ಜೈಲು ಶಿಕ್ಷೆ

ಮುಂಬೈ, ಸೆ. 9 (ಪಿಟಿಐ, ಯುಎನ್‌ಐ)– ಮಹಾರಾಷ್ಟ್ರದ ಸಮಾಜ ಕಲ್ಯಾಣ ಸಚಿವ ಬಬನ್ ರಾವ್ ಘೋಲಪ್ ಅವರು ಹೂಡಿದ್ದ ಮಾನನಷ್ಟ ಮೊಕದ್ದಮೆ ಸಂಬಂಧದಲ್ಲಿ ಸಮಾಜ ಸೇವಕ ಮತ್ತು ಭ್ರಷ್ಟಾಚಾರ ವಿರುದ್ಧ ಹೋರಾಟ ನಡೆಸುತ್ತಿರುವ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಅಣ್ಣಾ ಹಜಾರೆ ಅವರಿಗೆ ಮೂರು ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ.

ಇಲ್ಲಿನ ಮೆಟ್ರೋಪಾಲಿಟನ್ ನ್ಯಾಯಾಲಯವೊಂದರ ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ಕೆ.ಎಚ್. ಹೊಲಾಂಬೆ ಅವರು ಇಂದು ಈ ಬಗ್ಗೆ ತೀರ್ಪು ನೀಡಿದರು.

50 ವರ್ಷಗಳ ಹಿಂದೆ

ಸೋಮವಾರ, 10-9-1973

● ಭತ್ತಕ್ಕೆ ಲಾಭದಾಯಕ ಸಂಗ್ರಹಣೆ ಬೆಲೆ: ಮುಖ್ಯಮಂತ್ರಿ ಭರವಸೆ

ಬೆಂಗಳೂರು, ಸೆ. 9– ಭತ್ತದ ಸಗಟು ವ್ಯಾಪಾರ ವಹಿಸಿಕೊಳ್ಳಲು ಸರ್ಕಾರ ದೃಢ ನಿರ್ಧಾರ ಕೈಗೊಂಡಿದೆ ಎಂದು ರಾಜ್ಯದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಇಂದಿಲ್ಲಿ ಹೇಳಿದರು.

ಕರ್ನಾಟಕ ಆಹಾರ ಮತ್ತು ನಾಗರಿಕರ ಸರಬರಾಜು ಕಾರ್ಪೊರೇಷನ್ನಿನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅರಸು ಅವರು, 'ಈ ಸಲ ರೈತರಿಗೆ ಅನ್ಯಾಯ ಆಗದಂತೆ ಭತ್ತ ಸಂಗ್ರಹಣೆ ಬೆಲೆ ನಿಗದಿ ಮಾಡಲಾಗುವುದು' ಎಂದು ಭರವಸೆ ನೀಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಸೆಪ್ಟೆಂಬರ್ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದ್ವಾದಶಿ ಗಂ. 23-53 ನಕ್ಷತ್ರ: ಪುಷ್ಯ ಗಂ. 20-01 ಯೋಗ: ಪರಿಘ ಗಂ. 24-13 ಕರಣ: ಕೌಲವ ಗಂ. 10-40, ಸಿಂಹ ಮಾಸದ 24 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 4.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-23 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 24 ಸಫರ್
ಅದೃಷ್ಟ ಸಂಖ್ಯೆ : 1, 8

ಮೇಷ: ಪ್ರಕೃತಿ ವಿಕೋಪದ ಕಾರಣದಿಂದ ಮನೆಯ ಸಣ್ಣ-ಪುಟ್ಟ ರಿಪೇರಿ ಕೆಲಸ ಮಾಡಿಸಬೇಕಾದ ಅನಿವಾರ್ಯವಾಗುವುದು. ಆರ್ಥಿಕ ಸುಧಾರಣೆಯಿಂದ ಕುಟುಂಬದ ಹಲವಾರು ತೊಂದರೆಗಳು ನಿವಾರಣೆಯಾಗುವುದು.

ವೃಷಭ: ಇಂಟೀರಿಯರ್ ಡೆಕೋರೇಷನ್, ಆನಿಮೇಷನ್, ಡಿಸೈನ್‌ಗೆ ಸಂಬಂಧಪಟ್ಟಂಥ ವ್ಯವಹಾರದವರಿಗೆ ಅಥವಾ ಓದಿನಲ್ಲಿರುವವರಿಗೆ ಒಳ್ಳೆಯ ಪ್ರಗತಿ. ಮಕ್ಕಳ ವಿದ್ಯಾವರ್ಧನೆಗೆ ಶಾರದೆಯನ್ನು ಪೂಜಿಸಿ.

ಮಿಥುನ: ಕೌಟುಂಬಿಕ ವಾದ ವಿವಾದಗಳು ನಡೆಯದಂತೆ, ಎಲ್ಲರಲ್ಲೂ ಹೊಂದಾಣಿಕೆ ಇರುವಂತೆ ನಿಮ್ಮ ನಡುವಳಿಕೆಗಳು ಇರಲಿ. ನಿಮ್ಮ ಸ್ವಂತ ಸಮಸ್ಯೆ ನೀವೇ ನಿವಾರಿಸಿಕೊಳ್ಳುವಂತೆ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ.

ಕರ್ಕಾಟಕ: ಮಕ್ಕಳ ಮಾನಸಿಕ ಬೆಳವಣಿಗೆ ಮತ್ತು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ, ಏಕಾಗ್ರತೆಯನ್ನು ಕಾಯ್ದುಕೊಳ್ಳುವ ಮಾರ್ಗ ಕಂಡುಕೊಳ್ಳಿರಿ. ಈ ಹಿಂದೆ ನಡೆದ ವೃತ್ತಿಯ ತಪ್ಪುಗಳ ಪರಿಣಾಮ ಈಗ ಅನುಭವಕ್ಕೆ ಬರುವುದು.

ಸಿಂಹ: ಸಾಂಸಾರಿಕ ವಿಷಯದಲ್ಲಿ ನಿಮ್ಮ ಪತಿ ಅಥವಾ ಪತ್ನಿಯ ಮಾತು ಮೀರದಿರುವುದು ಲೇಸು. ನೀವಿಂದು ಕೃಷಿ ಕ್ಷೇತ್ರದಲ್ಲಿನ ನಿಮ್ಮ ಯಾವುದೇ ಪ್ರಯತ್ನವನ್ನು ನಿಲ್ಲಿಸದೆ ಜಾಗರೂಕತೆಯಿಂದ ಕೆಲಸವನ್ನು ಮುಂದುವರಿಸಿ.

ಕನ್ಯಾ: ಸ್ನೇಹಿತರ ವ್ಯವಹಾರದಲ್ಲಿ ಸಂಶಯ, ಅಪನಂಬಿಕೆ ಬಾರದಂತೆ ನಡೆದುಕೊಳ್ಳುವುದರಿಂದ ಸಂಬಂಧ ಗಟ್ಟಿಯಾಗಿರುತ್ತದೆ. ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ನಿಮ್ಮ ಅನುಭವಕ್ಕೆ ಬರಲಿವೆ.

ತುಲಾ: ಮಾನಸಿಕ ಸಮಾಧಾನ ದೊರೆತು ಹಂತ ಹಂತವಾಗಿ ಅನುಕೂಲ ವಾತಾವರಣದ ಅನುಭವ ದೊರಕಲಿದೆ. ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿಯು ತಕ್ಷಣವೇ ಅನುಭವಕ್ಕೆ ಬರಲಿದೆ.

ವೃಶ್ಚಿಕ: ಉದ್ಯೋಗದ ಬದಲಾವಣೆ ಉತ್ಸಾಹವನ್ನು ಹೆಚ್ಚಿಸುವುದು. ಪೊಲೀಸ್ ಹುದ್ದೆಯಲ್ಲಿರುವವರಿಗೆ ಮುಂಬಡ್ತಿಯ ಸಾಧ್ಯತೆ ಇದೆ. ಕಬ್ಬಿಣ, ತಾಮ್ರದ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದಂತಾಗುತ್ತದೆ.

ಧನು: ವ್ಯವಹಾರದಲ್ಲಿ ಅದರಲ್ಲೂ ಮುಖ್ಯವಾಗಿ ಹಣಕಾಸಿನ ವಿಚಾರದಲ್ಲಿ ತಪ್ಪುಗಳಾಗದಂತೆ ಜಾಗರೂಕತೆ ವಹಿಸಿರಿ. ಮಾತೃವರ್ಗದವರ ನೆರವಿನಿಂದ ಆರ್ಥಿಕ ಚೇತರಿಕೆ. ಸಂತಾನಾಪೇಕ್ಷಿಗಳು ಫಲವನ್ನು ಪಡೆಯುವಿರಿ.

ಮಕರ: ವಿರುದ್ಧ ದಿಕ್ಕಿನೆಡೆಗೆ ಸಾಗುತ್ತಿರುವ ನಿಮ್ಮನ್ನು ಮನೆಯವರು ಸರಿದಾರಿಗೆ ತರಲಿದ್ದಾರೆ. ತಾತ್ಕಾಲಿಕವಾಗಿ ಕೆಲವೊಂದು ಕೆಲಸದಲ್ಲಿ ಅಡಚಣೆ ಉಂಟಾಗಿ ನಿಮ್ಮ ಮನಸ್ಸಿಗೆ ನೋವು ಆಗಬಹುದು. ಪ್ರಯಾಣದಲ್ಲಿ ಸುಖವಿರುವುದು.

ಕುಂಭ: ಅತಿಯಾದ ಆಲಸ್ಯ, ಅಹಂಕಾರ, ಸಂದರ್ಭಕ್ಕೆ ಉಚಿತವಲ್ಲದ ಮಾತುಗಾರಿಕೆ ನಿಮ್ಮ ಗೌರವವನ್ನು ಕಡಿಮೆ ಮಾಡುವುದು. ರಕ್ತ ಸಂಬಂಧಿ ಖಾಯಿಲೆ ಹೊಂದಿದವರು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.


ಮೀನ: ಎಲ್ಲ ಸಮಸ್ಯೆಗಳಿಗೂ ಪರಿಹಾರ ಇದ್ದೇ ಇದೆ ಎಂದು ತಿಳಿಯುವುದಕ್ಕಿಂತ ಸಮಸ್ಯೆಗಳು ಬರದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳುವ ಬಗ್ಗೆ ಗಮನಹರಿಸಿ. ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಸಲ್ಲದು.

ಪದಬಂಧ 5437

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಹುರಿಯಿದ್ದಾಗ ಕಾಣಿಸಿದ ಸ್ವೇಚ್ಛಾ ವೃತ್ತಿ (4)
3.ಕತೆಯೊಳಗೆ ಉಕ್ಕಿದ ಪ್ರೀತಿ! (4)
5.ಪುರಿಯಲ್ಲಿರುವ ಮುಂದಾಳು (3)
7.ಉದರಕ್ಕೆ ಅಂಟಿರುವ ಎದೆ! (2)
8.ಕಿತಾಪತಿ ಮಾಡುತ್ತಿರುವ ಯಜಮಾನ! (2)
10.ಹೂವು ಇಲ್ಲಿದೆ (3)
11.ಸಧ್ಯದ ಪರಿಸ್ಥಿತಿ (3)
13.ರಭಸದಲ್ಲಿರುವ ದ್ರವ (2)
15.ಆಸ್ಥಾನದಲ್ಲಿಯೇ ಸಿಕ್ಕ ಜಾಗ! (2)
16.ಹುಟ್ಟಿದ ಕಾಲದ ತಿಥಿ ನಕ್ಷತ್ರ ಇತ್ಯಾದಿ ತಿಳಿಸುವ ಪತ್ರಿಕೆ (3)
18.ಕುದುರೆಯ ಬಾಯಿಗೆ ಹಾಕುವ ಉಕ್ಕಿನ ತುಂಡು (4)
19.ರತ್ನಗಳನ್ನೊಳಗೊಂಡ ಸಮುದ್ರ (4)

ಮೇಲಿಂದ ಕೆಳಕ್ಕೆ
1.ಕೈಯನ್ನಿಟ್ಟು ಮಧ್ಯೆ ಪ್ರವೇಶಿಸುವಿಕೆ! (4)
2.ಪುಢಾರಿ ಹತ್ತಿರವೇ ಶತ್ರು ಇದ್ದಾನಲ್ಲಾ! (2)
3.ಪಾಪ! ಕಮರಿಯಲ್ಲಿ ಬಿದ್ದಿದೆ ಈ ಆನೆ! (2)
4.ತೆರ ಬಾಕಿ ಉಳಿಸಿಕೊಂಡಿರುವ ದಡ್ಡ (3)
6.ಹೀಗೆ ಹೊಳಪು ಮಾಡು (3)
7.ಚಾರ ಕೊನೆಗಿದ್ದು ಮಾಡಿದ ಶುಶ್ರೂಷೆ (4)
9.ಕಾಣದಂತಾಗುವಿಕೆ (4)
12.ಕಡಿದಾದ ಕೊರಕಲು (3)
14.ವರ ನೋಡುತ್ತಿರುವ ಕೊಳ (4)
15.ಈತ ನೆಲೆಗೊಳಿಸಿದವನು (3)
16.ಕಾಜಾಣವನ್ನು ನೋಡುತ್ತಿರುವವನು ದಡ್ಡನಲ್ಲ! (2)
17.ಕಠೋರ ಕೆಲಸ ಮಾಡಿದ ಕೈಯಿದು (2)



5436ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಧೋಮುಖ 3.ಕಷಾಯ
5.ಗರ್ಭಿಣಿ 7.ಒಸಡು
8.ಕಕ್ಷೆ
9.ಸಮೂಹಗಾನ 11.ಅಗ್ಗ
12.ಗಲಾಟೆ 13.ಬತೇರಿ
16.ಪರೋಕ್ಷ 17.ಆಜುಬಾಜು

ಮೇಲಿಂದ ಕೆಳಕ್ಕೆ:
1.ಅಭ್ಯಂಗ 2.ಖರ್ಚು
3.ಕರಡು 4.ಯಮಶಿಕ್ಷೆ
6.ಣಿರಸ 7.ಒಣಹರಟೆ
10.ನವಾಬ 11.ಅನುಲೇಪ
12.ಗವಾಕ್ಷ 14.ರಿವಾಜು
15.ಸೆಳ

ಸುಡೊಕು 5823

5	6		8	7			9	3
								4
	8		5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5822 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನೈರುತ್ಯ ರೈಲ್ವೆ ವಲಯ ವ್ಯಾಪ್ತಿಯ ವಿವಿಧ ನಿಲ್ದಾಣಗಳಲ್ಲಿ ಕುಡಿಯುವ ನೀರು, ಪಾರ್ಕಿಂಗ್ ವ್ಯವಸ್ಥೆಗೆ ಒತ್ತಾಯ

ಪ್ಲಾಟ್‌ಫಾರ್ಮ್ ಕೊರತೆ: ಆಗಬೇಕಿದೆ ಸುಧಾರಣೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೇಂದ್ರ ಸರ್ಕಾರವು ನೈರುತ್ಯ ರೈಲ್ವೆ ವಲಯ ವ್ಯಾಪ್ತಿಯ 47 ರೈಲು ನಿಲ್ದಾಣಗಳನ್ನು 'ಅಮೃತ್ ಭಾರತ್' ರೈಲು ನಿಲ್ದಾಣ ಯೋಜನೆಯಡಿ ₹947 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಮುಂದಾಗಿದೆ. ಆದರೆ, ರಾಜ್ಯದ ಹಲವು ನಿಲ್ದಾಣಗಳಲ್ಲಿ ಪ್ಲಾಟ್‌ಫಾರ್ಮ್‌ಗಳ ವ್ಯವಸ್ಥೆಯೇ ಸಮರ್ಪಕವಾಗಿಲ್ಲ.

ಮೊದಲ ಹಂತದಲ್ಲಿ ರಾಜ್ಯದ 13 ರೈಲು ನಿಲ್ದಾಣಗಳು ನವೀಕರಣ ಗೊಳ್ಳಲಿವೆ. ನೈರುತ್ಯ ರೈಲ್ವೆ ವಲಯವು ₹172.2 ಕೋಟಿ ವೆಚ್ಚದಲ್ಲಿ ಹುಬ್ಬಳ್ಳಿ ವಿಭಾಗದ 6 ಮತ್ತು ಮೈಸೂರು ವಿಭಾಗದ 2 ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಿದೆ. ಕೇಂದ್ರ ರೈಲ್ವೆ ವಲಯದಿಂದ 3 ಮತ್ತು ದಕ್ಷಿಣ ಕೇಂದ್ರ ರೈಲ್ವೆ ವಲಯ ಮತ್ತು ದಕ್ಷಿಣ ರೈಲ್ವೆ ವಲಯದಿಂದ ತಲಾ ಒಂದು ನಿಲ್ದಾಣ ಅಭಿವೃದ್ಧಿಯಾಗಲಿದೆ. ಘಟಪ್ರಭಾ, ಗೋಕಾಕ ರಸ್ತೆ, ಅಳ್ನಾವರ, ಬಳ್ಳಾರಿ, ಕೊಪ್ಪಳ, ಗದಗ, ಹರಿಹರ, ಅರಸೀಕೆರೆ, ಕಲಬುರಗಿ, ಶಹಾಬಾದ್, ವಾಡಿ, ಬೀದರ್ ಮತ್ತು ಮಂಗಳೂರು



ಹಗರಿಬೊಮ್ಮನಹಳ್ಳಿ ರೈಲು ಮಾರ್ಗ ಬ್ರಾಡ್ ಗೇಜ್ ಆಗಿ ದಶಕಗಳೇ ಕಳೆದರೂ ಪ್ಲಾಟ್‌ಫಾರಂ ಎತ್ತರಗೊಳ್ಳಲಿಲ್ಲ. ಹೀಗಾಗಿ ನಿಲ್ದಾಣದಲ್ಲಿ ರೈಲು ಹತ್ತುವುದು, ಇಳಿಯುವುದು ಪ್ರಯಾಣಿಕರಿಗೆ ಕಷ್ಟವಾಗುತ್ತಿದೆ

ಜಂಕ್ಷನ್ ನಿಲ್ದಾಣಗಳು ಹೊಸ ಸ್ವರೂಪ ಪಡೆಯಲಿವೆ.

ಆದರೆ, 'ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲು ಯಾರ ಆಕ್ಷೇಪವೂ ಇಲ್ಲ. ಇದು ಆಗಬೇಕಾದ ಕೆಲಸವೇ. ಆದರೆ, ಪ್ಲಾಟ್‌ಫಾರ್ಮ್‌ಗಳ ತೀವ್ರ ಕೊರತೆ ಇರುವ ನಿಲ್ದಾಣಗಳಲ್ಲಿ ಅವುಗಳ ಸಂಖ್ಯೆಯನ್ನು ಮೊದಲು ಹೆಚ್ಚಿಸಬೇಕು' ಎಂದು ಪ್ರಯಾಣಿಕರು ಅಭಿಪ್ರಾಯಪಡುತ್ತಾರೆ.

'ಹೊಸಪೇಟೆ ನಿಲ್ದಾಣದಲ್ಲಿ 3 ಪ್ಲಾಟ್‌ಫಾರ್ಮ್‌ಗಳಿವೆ. ಹೆಚ್ಚುವರಿಯಾಗಿ 4 ಮತ್ತು 5ನೇ ಪ್ಲಾಟ್‌ಫಾರ್ಮ್‌ಗಳ ಅಗತ್ಯವಿದೆ. ಸದ್ಯ ಪ್ಲಾಟ್‌ಫಾರ್ಮ್‌ನಲ್ಲಿ 650 ಮೀಟರ್ ಉದ್ದದವರೆಗೆ ಮಾತ್ರ ಚಾವಣಿ ಇದ್ದು, ಉಳಿದ ಎರಡೂ ಬದಿಗಳಲ್ಲಿ ಚಾವಣಿ ನಿರ್ಮಿಸಿದರೆ ಅನುಕೂಲವಾಗುವುದು' ಎಂದು ಅವರು ಹೇಳುತ್ತಾರೆ.

ದಾವಣಗೆರೆ, ತುಮಕೂರಿನಲ್ಲಿ ಹೆಚ್ಚುವರಿ ಪ್ಲಾಟ್‌ಫಾರ್ಮ್‌ಗಳ ಅವಶ್ಯಕತೆಯಿದ್ದು, ಕುಡಿಯುವ ನೀರಿನ ವ್ಯವಸ್ಥೆಯೂ ಆಗಬೇಕಿದೆ. ಅಲ್ಲದೆ, ವಾಹನಗಳ ಪಾರ್ಕಿಂಗ್ ವ್ಯವಸ್ಥೆಗೂ ಇಲ್ಲಿ ಜಾಗದ ವ್ಯವಸ್ಥೆಯನ್ನೂ ಮಾಡಬೇಕಿದೆ. ಮರಿಯಮ್ಮನಹಳ್ಳಿ ನಿಲ್ದಾಣದಲ್ಲಿ ಮೀಟರ್‌ಗೇಜ್ ಇದ್ದ ವೇಳೆ ನಿರ್ಮಿಸಲಾದ ಪ್ಲಾಟ್‌ಫಾರ್ಮ್‌ನ ಎತ್ತರವನ್ನು ಹೆಚ್ಚಳ ಮಾಡಿಲ್ಲ.

ಬೆಳಗಾವಿ ಜಿಲ್ಲೆಯ ಕುಡಚಿಯಲ್ಲಿ ಪ್ಲಾಟ್‌ಫಾರ್ಮ್‌ಗಳ ಕೊರತೆಯಿದೆ. ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಯಲವಿಗಿ ಗ್ರಾಮದ ಹಳೆ ರೈಲು ನಿಲ್ದಾಣ ಪಾಳು ಬಿದ್ದಿದ್ದು, ಹೊಸ ನಿಲ್ದಾಣಕ್ಕೆ ಹೋಗಲು ಸೂಕ್ತ ರಸ್ತೆ ವ್ಯವಸ್ಥೆ ಇಲ್ಲ.

ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ 9 ರೈಲು ನಿಲ್ದಾಣಗಳಲ್ಲಿ ಹೊಸ ಪ್ಲಾಟ್‌ಫಾರ್ಮ್ ಅಗತ್ಯವಿದ್ದು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ. ಮೈಸೂರು– ಹಾಸನ ರೈಲು ಮಾರ್ಗದ ಬೀರಹಳ್ಳಿ, ಹಾಸನ–ಮಂಗಳೂರು ರೈಲು ಮಾರ್ಗದ ಎಡಮಂಗಲ, ನೇರಲಕಟ್ಟೆ, ನರಿಮೊಗರು, ಕಾಣಿಯೂರು, ಬಾಜಿಕೆರೆ, ಶಿವಮೊಗ್ಗದ ಕೋಡಿಯಂಬಾಳ, ಚಿತ್ರದುರ್ಗದ ಚಳ್ಳಕೆರೆಯಲ್ಲಿ ಪ್ಲಾಟ್‌ಫಾರ್ಮ್ ಅಗತ್ಯವಿದೆ. ನೇರಲಕಟ್ಟೆಯಲ್ಲಿ 2 ಪ್ಲಾಟ್‌ಫಾರ್ಮ್ ಸೇರಿ ಉಳಿದ ಕಡೆ ಒಂದು ಪ್ಲಾಟ್‌ಫಾರ್ಮ್ ಅಗತ್ಯವಿದೆ.

'ಬೆಂಗಳೂರು– ಮೈಸೂರು ಮಾರ್ಗದ ಪಾಂಡವಪುರ ನಿಲ್ದಾಣದ ಪ್ಲಾಟ್‌ಫಾರ್ಮ್‌ನಲ್ಲಿ ರಾತ್ರಿ ಬೆಳಕು ಇಲ್ಲ. ಮಂಡ್ಯ–ಪಾಂಡವಪುರ ನಡುವಿನ ದೊಡ್ಡ ಬ್ಯಾಡರಹಳ್ಳಿ, ಹಾಸನ–ಮೈಸೂರು ನಡುವಿನ ಮಂದಗೆರೆ ರೈಲು ನಿಲ್ದಾಣದಲ್ಲೂ ಇದೇ ಪರಿಸ್ಥಿತಿ ಇದೆ' ಎಂದು ಪ್ರಯಾಣಿಕರು ದೂರುತ್ತಾರೆ.

ಬೆಂಗಳೂರು ವಿಭಾಗದ ನಿಲ್ದಾಣಗಳಲ್ಲೂ ಸಮಸ್ಯೆಗಳಿವೆ. ಯಶವಂತಪುರದಲ್ಲಿ ಪ್ಲಾಟ್‌ಫಾರ್ಮ್ ಕೊರತೆಯಿದ್ದರೆ, ವೈಟ್‌ಫೀಲ್ಡ್‌ನಲ್ಲಿ ಸೂಕ್ತ ಪ್ಲಾಟ್‌ಫಾರ್ಮ್ ವ್ಯವಸ್ಥೆಯಿಲ್ಲ.

ನೈರುತ್ಯ ರೈಲ್ವೆ ವಲಯ	
ವಿಭಾಗ	ರೈಲು ನಿಲ್ದಾಣಗಳು
ಬೆಂಗಳೂರು	130
ಹುಬ್ಬಳ್ಳಿ	153
ಮೈಸೂರು	118

ಕೆಂಗೇರಿಯಲ್ಲಿ ಒಂದು ಕಡೆಯಿಂದ ಮಾತ್ರ ಸಂಪರ್ಕ ಇದೆ. ಚಿಕ್ಕಬಾಣಾವರದಲ್ಲಿಯೂ ಇದೇ ಸಮಸ್ಯೆ.

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಲಿಫ್ಟ್ ಹಾಳಾಗಿದೆ. ಯಲಹಂಕ ನಿಲ್ದಾಣಕ್ಕೆ ಒಂದು ಕಡೆಯಿಂದ ಮಾತ್ರ ಸಂಪರ್ಕ ವ್ಯವಸ್ಥೆಯಿದ್ದು, ಪ್ರಯಾಣಿಕರು ಕಷ್ಟಪಡಬೇಕಾಗುತ್ತದೆ. ಮಲ್ಲೇಶ್ವರ, ಕೆಂಗೇರಿ, ಕೆ.ಆರ್.ಪುರ ರೈಲು ನಿಲ್ದಾಣಗಳಲ್ಲೂ ಸೌಲಭ್ಯದ ಅಗತ್ಯವಿದೆ. ಯಶವಂತಪುರ ನಿಲ್ದಾಣದ 2 ಮತ್ತು 3ನೇ ಪ್ಲಾಟ್‌ಫಾರ್ಮ್‌ಗೆ ಶಟರ್ ನಿರ್ಮಿಸಬೇಕು ಎಂಬ ದಶಕದ ಕೂಗು ಇನ್ನೂ ಈಡೇರಿಲ್ಲ ಎಂಬ ಬೇಸರ ಪ್ರಯಾಣಿಕರಲ್ಲಿದೆ.

(ಪೂರಕ ಮಾಹಿತಿ: ಮೈಸೂರು, ದಾವಣಗೆರೆ, ಬೆಂಗಳೂರು ಬ್ಯುರೊ)

ಕೇಂದ್ರದ ಬಜೆಟ್‌ನಲ್ಲಿ ನೈರುತ್ಯ ರೈಲ್ವೆಗೆ ₹9,200 ಕೋಟಿ ಸಿಕ್ಕಿದೆ. ಮೈಸೂರು ವಿಭಾಗದ ವಿವಿಧ ಅಭಿವೃದ್ಧಿ ಕಾಮಗಾರಿಗೆ ₹1,200 ಕೋಟಿ ಹಂಚಿಕೆಯಾಗಿದೆ

ಇ.ವಿಜಯಾ, ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕಿ, ಮೈಸೂರು

ನೈರುತ್ಯ ರೈಲ್ವೆ ವ್ಯಾಪ್ತಿಯ ಹುಬ್ಬಳ್ಳಿ ವಿಭಾಗದ 8 ರೈಲ್ವೆ ನಿಲ್ದಾಣಗಳನ್ನು ₹303 ಕೋಟಿ ವೆಚ್ಚದಲ್ಲಿ ನವೀಕರಿಸಲಾಗುವುದು

ಅನೀಶ್ ಹೆಗಡೆ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ನೈರುತ್ಯ ರೈಲ್ವೆವಲಯ

ಅಂಗವಿಕಲರು, ಹಿರಿಯ ನಾಗರಿಕರಿಗೂ ಅನುಕೂಲವಾಗುವಂತೆ ಬ್ಯಾಟರಿ ಚಾಲಿತ ಕಾರುಗಳ ಸೌಲಭ್ಯ ಕಲ್ಪಿಸಬೇಕು. ರೈಲ್ವೆ ಡಿಪೊ ನಿರ್ಮಿಸಬೇಕು

ರೋಹಿತ್.ಎಸ್.ಜೈನ್, ದಾವಣಗೆರೆ, ಪ್ರಯಾಣಿಕರ ಸಂಘದ ಕಾರ್ಯದರ್ಶಿ

ಉತ್ತರ ಕರ್ನಾಟಕದ ಪ್ರವಾಸಿ ತಾಣ, ಧಾರ್ಮಿಕ ಕ್ಷೇತ್ರಗಳಿಗೆ ನಿತ್ಯ ಸಾವಿರಾರು ಪ್ರವಾಸಿಗರು, ಭಕ್ತರು ರೈಲಿನಲ್ಲಿ ಬರುತ್ತಾರೆ. ಅವರಿಗೆ ಸೌಲಭ್ಯ ಕಲ್ಪಿಸಬೇಕು

ಮಹೇಂದ್ರ ಸಿಂಘಿ, ರೈಲ್ವೆ ಬಳಕೆದಾರರ ಸಮಾಲೋಚನಾ ಸಮಿತಿ ಸದಸ್ಯ, ಬೆಳಗಾವಿ

ಅಗತ್ಯವಿರುವ ಫ್ಲಾಟ್‌ಫಾರ್ಮ್‌ಗಳು	
ವಿಜಯನಗರ ಜಿಲ್ಲೆ ಹೊಸಪೇಟೆ ನಿಲ್ದಾಣ	2
ತುಮಕೂರು ನಗರದ ರೈಲು ನಿಲ್ದಾಣ	3
ಬೆಳಗಾವಿಯ ಕುಡಚಿ ನಿಲ್ದಾಣ	2
ದಾವಣಗೆರೆ ರೈಲು ನಿಲ್ದಾಣ	2
ಬೆಂಗಳೂರು–ಯಶವಂತಪುರ ರೈಲು ನಿಲ್ದಾಣ	2
ಮೈಸೂರು– ಹಾಸನ ರೈಲು ಮಾರ್ಗದ ಬೀರಹಳ್ಳಿ	1
ಹಾಸನ– ಮಂಗಳೂರು ರೈಲು ಮಾರ್ಗದ ಎಡಮಂಗಲ	1
ನೇರಲಕಟ್ಟೆ	2
ನರಿಮೊಗರು, ಕಾಣಿಯೂರು, ಬಾಜಿಕೆರೆ, ಶಿವಮೊಗ್ಗದ ಕೋಡಿಯಂಬಾಳ, ಚಿತ್ರದುರ್ಗದ ಚಳ್ಳಕೆರೆ	ತಲಾ1 ಫ್ಲಾಟ್‌ಫಾರ್ಮ್ ಅಗತ್ಯವಿದೆ

'ಪಂಚೆಯೊಳಗೆ ಖಾಕಿ ಚಡ್ಡಿಯನ್ನು ಧರಿಸುವುದು ಸಮಾಜವಾದವಲ್ಲ'

ಒಂದನೇ ಪುಟದಿಂದ

ದೀರ್ಘಕಾಲ ಕೆಪಿಸಿಸಿ ಅಧ್ಯಕ್ಷರಾಗಿದ್ದ ಜಿ. ಪರಮೇಶ್ವರ ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಆಗಿದ್ದರು. ಮುಖ್ಯಮಂತ್ರಿಯಾಗುವ ಎಲ್ಲ ಅರ್ಹತೆ ಅವರಿಗಿದೆ. ಆದರೆ, ಈ ಬಾರಿ ಮುಖ್ಯಮಂತ್ರಿ ಸ್ಥಾನ ಬಿಡಿ, ಡಿಸಿಎಂ ಸ್ಥಾನವನ್ನೂ ನೀಡದೇ ಹಿಂಬಡ್ತಿ ನೀಡಿರುವುದು ತಲೆ ತಗ್ಗಿಸುವ ವಿಚಾರ. ಆದಿವಾಸಿ ಸಮುದಾಯದ ಸತೀಶ ಜಾರಕಿಹೊಳಿಯನ್ನು ಉಪ ಮುಖ್ಯಮಂತ್ರಿ ಮಾಡಬಹುದಿತ್ತು. ಅಲ್ಪಸಂಖ್ಯಾತರನ್ನು ಉಪಮುಖ್ಯಮಂತ್ರಿ ಮಾಡಬಹುದಿತ್ತು, ಮಾಡಿಲ್ಲ. ಅರ್ಹತೆ ಇರುವವರಿಗೆ ಅಧಿಕಾರ ನೀಡುತ್ತಿಲ್ಲ ಎಂದು ಟೀಕಿಸಿದರು.

'ನನಗೆ ಅಧಿಕಾರ ಸಿಕ್ಕಿದೆ. ಇಷ್ಟ ಬಂದ ಹಾಗೇ ಮಾಡ್ತೀನಿ ಅಂದ್ರೆ ಜನ ತೀರ್ಮಾನ ಮಾಡುತ್ತಾರೆ. ಮಾತು ಮಾತಿಗೆ ದೇವರಾಜ ಅರಸು ಎಂದು ಹೇಳಿದರೆ ಆಗುವುದಿಲ್ಲ. ಅರಸು ಅವರ ಕಾರಿನಲ್ಲಿ ಕುಳಿತ ಮಾತ್ರಕ್ಕೆ ಅರಸು ಆಗಲು ಸಾಧ್ಯವಿಲ್ಲ. ಅರಸು ಅವರ ರೀತಿ ಸಣ್ಣ ಸಮುದಾಯಗಳ ಕೈ ಹಿಡಿಯುವ ಕೆಲಸ ಮಾಡಬೇಕು. ಅರಸು ಅವರ ಚಿಂತನೆ, ವಿಚಾರ ಅಳವಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸಭೆ ಉದ್ಘಾಟಿಸಿದ ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, 'ಇಲಿಗಳು ಸಂಘ ಕಟ್ಟಿದಾಗ ನಾಯಕ ಯಾರು ಎಂಬ ಚರ್ಚೆಯಾಗಿ ಎರಡು ಗುಂಪುಗಳಾದವು. ಒಂದು ಗುಂಪಿಗೆ ಹಾವು, ಇನ್ನೊಂದು ಗುಂಪಿಗೆ ಬೆಕ್ಕು ನಾಯಕರಾದರು. ಪರಸ್ಪರ ಅವು ಬೈದುಕೊಳ್ಳುತ್ತಲೇ ಒಳ ಒಪ್ಪಂದ ಮಾಡಿಕೊಂಡು ಇಲಿಗಳನ್ನು ತಿಂದು ಮುಗಿಸಿದವು. ಹಿಂದುಳಿದ ವರ್ಗದವರ ಸಂಘಟನೆಯ ಕಥೆ ಹೀಗಾಗಬಾರದು' ಎಂದು ಹೇಳಿದರು.

ರಾಷ್ಟ್ರೀಯ ಈಡಿಗ ಬಿಲ್ಲವ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸ್ವಾಗತ ಸಮಿತಿ ಅಧ್ಯಕ್ಷ ಎಚ್.ಆರ್. ಶ್ರೀನಾಥ್ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಎಎಪಿ ರಾಜ್ಯ ಘಟಕದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್, ವಿವಿಧ ಸಮುದಾಯಗಳ ಸ್ವಾಮೀಜಿಗಳು, ಮುಖಂಡರು ಮಾತನಾಡಿದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಷ್ಟ್ರೀಯ ಈಡಿಗ ಬಿಲ್ಲವ ಮಹಾಮಂಡಳಿ ಆಯೋಜಿಸಿದ್ದ ಈಡಿಗ ಮತ್ತು ಅತಿ ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆಯಲ್ಲಿ ಒಗ್ಗಟ್ಟು ಪ್ರದರ್ಶಿಸಲಾಯಿತು ಪ್ರಜಾವಾಣಿ ಚಿತ್ರ

ಪರಿಷತ್ತಿನಲ್ಲಿ ಸಭಾ ನಾಯಕನಾಗಿದ್ದಾಗ ಹರಿಪ್ರಸಾದ್ ವಿರೋಧ ಪಕ್ಷದ ನಾಯಕರು. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಅವರು ಸಭಾ ನಾಯಕರಾಗುತ್ತಾರೆ ಎಂದು ಭಾವಿಸಿದ್ದೆ

ಕೋಟ ಶ್ರೀನಿವಾಸ ಪೂಜಾರಿ, ಎಂಎಲ್‌ಸಿ

ಹಿಂದುಳಿದ ಮತ್ತು ಅತಿ ಹಿಂದುಳಿದ ಸಮುದಾಯದವರು ರಾಜಕೀಯ ಅಧಿಕಾರವನ್ನು ಹಿಡಿದು ಎಲ್ಲರಿಗೂ ಸಾಮಾಜಿಕ ನ್ಯಾಯ ನೀಡಬೇಕು

ಜೋಗಿ ರಮೇಶ್, ಆಂಧ್ರ ಪ್ರದೇಶದ ವಸತಿ ಸಚಿವ

ಸ್ವಾಮೀಜಿಗಳು ಭಾಗಿ: ಸೋಲೂರು ಈಡಿಗ ಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ, ಛಲವಾದಿ ಗುರುಪೀಠದ ಬಸವ ನಾಗಿದೇವ ಸ್ವಾಮೀಜಿ, ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಕುಂಬಾರ ಗುರು ಪೀಠದ ಕುಂಬಾರ ಗುಂಡಯ್ಯ ಸ್ವಾಮೀಜಿ, ಕೊರಚ ಗುರುಪೀಠದ ನುಲಿಯ ಚಂದಯ್ಯ ಸ್ವಾಮೀಜಿ, ಮೇದಾರ ಗುರುಪೀಠದ ಇಮ್ಮಡಿ ಬಸವ ಸ್ವಾಮೀಜಿ, ಸರ್ವಧರ್ಮ ಸಮನ್ವಯ ಪೀಠದ ಬಸವ ಸಂಗಮಾನಂದ ಸ್ವಾಮೀಜಿ, ವಿಶ್ವಕರ್ಮ ಏಕದಂಡಗಿ ಮಠದ ದೊಡ್ಡೇಂದ್ರ ಸ್ವಾಮೀಜಿ, ನಿಟ್ಟರಹಳ್ಳಿ ಮಠದ ನೀಲಕಂಠಾಚಾರ್ಯ ಸ್ವಾಮೀಜಿ, ಕೋಲಿ ಗುರುಪೀಠದ ವರಲಿಂಗೇಶ್ವರ ಸ್ವಾಮೀಜಿ, ಮೈಸೂರಿನ ನಾಗಲಿಂಗ ಸ್ವಾಮೀಜಿ, ತುಮಕೂರಿನ ರಘುರಾಮ ಸ್ವಾಮೀಜಿ ಇದ್ದರು.

ಸಭೆಯ ಹಕ್ಕೊತ್ತಾಯಗಳು

- ಜನಸಂಖ್ಯೆಗೆ ಅನುಗುಣವಾಗಿ ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ, ರಾಜ್ಯಸಭೆಯಲ್ಲಿ ಅತಿ ಹಿಂದುಳಿದ ಜಾತಿಗಳಿಗೆ ಪ್ರಾತಿನಿಧ್ಯ ನೀಡಬೇಕು
- ಹಿಂದುಳಿದ ವರ್ಗಗಳ ಪಟ್ಟಿಯನ್ನು ಪುನರ್ ಪರಿಶೀಲಿಸಿ ಅತಿ ಹಿಂದುಳಿದವರನ್ನು ಪ್ರತ್ಯೇಕಿಸಬೇಕು
- ಅತ್ಯಂತ ಹಿಂದುಳಿದ 73 ಜಾತಿಗಳನ್ನು ಕೇಂದ್ರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕು
- ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದ ಆಯೋಗ ನೀಡಿರುವ ವರದಿಯನ್ನು ತಿರಸ್ಕರಿಸಬೇಕು
- ಎಚ್. ಕಾಂತರಾಜು ವರದಿಯನ್ನು ಸ್ವೀಕರಿಸಿ, ಜಾರಿ ಮಾಡಬೇಕು
- ಸಾರಾಯಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡವರಿಗೆ ಪುನರ್ವಸತಿ ಕಲ್ಪಿಸಬೇಕು

'ಸಾರ್ವತ್ರಿಕ ಹೇಳಿಕೆಗೆ ಪ್ರತಿಕ್ರಿಯಿಸಲ್ಲ'

ಧಾರವಾಡ: ಅವರು (ಬಿ.ಕೆ.ಹರಿಪ್ರಸಾದ್) ನನ್ನ ಹೆಸರು ಹೇಳಿದ್ದಾರಾ? ಸಾರ್ವತ್ರಿಕ ಹೇಳಿಕೆಗಳಿಗೆ ನಾನು ಪ್ರತಿಕ್ರಿಯಿಸಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಿದರು.

'ಕೈಗೆ ಹ್ಯೂಬ್ಲೋ ವಾಚ್ ಕಟ್ಟಿಕೊಂಡು, ಪಂಚೆ ಕಟ್ಟಿಕೊಂಡು ಒಳಗೆ ಖಾಕಿ ಚಡ್ಡಿ ಧರಿಸುವುದು ಸಮಾಜವಾದವಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರ ಹೇಳಿಕೆಗೆ ಸಂಬಂಧಿಸಿದಂತೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಸಿದ್ದರಾಮಯ್ಯ ಹೀಗೆ ಪ್ರತಿಕ್ರಿಯೆ ನೀಡಿದರು.



ಹಸಿವನ್ನು ತಣಿಸುವ ಅಮೃತ ಯೋಜನೆ 'ಅನ್ನಭಾಗ್ಯ'

'ಅನ್ನ ಪರಬ್ರಹ್ಮ ಸ್ವರೂಪಂ' ಅನ್ನವೆಂದರೆ ಸಾಕ್ಷಾತ್ ಪರಬ್ರಹ್ಮ ಸ್ವರೂಪ. ಅನ್ನವೆಂದರೆ ಅನ್ನಪೂರ್ಣೇಶ್ವರಿ. ಸಕಲ ಜೀವರಾಶಿಗಳನ್ನು ಸಲಹುತ್ತಿರುವುದು ಅನ್ನ ಒಂದೇ. ಅನ್ನವೆಂದರೆ ಬರಿ ಅನ್ನವಲ್ಲ. ಹಸಿವನ್ನು ತಣಿಸುತ್ತಿರುವ ಅಮೃತ. ಅನ್ನವೆಂದರೆ ಶಕ್ತಿ, ಅನ್ನವೆಂದರೆ ಭಕ್ತಿ. ಅನ್ನವಿಲ್ಲದೆ ಬದುಕಲಾರೆವು. ಹಸಿದವನಿಗೆ ಅನ್ನವೇ ಶ್ರೇಷ್ಠ. ಆದ್ದರಿಂದಲೇ ದಾನದಲ್ಲಿ ಶ್ರೇಷ್ಠ ಅನ್ನದಾನ ಎಂಬ ಮಾತಿದೆ. 'ಅನ್ನ ದೇವರಿಗಿಂತ ಇನ್ನು ದೇವರು ಇಲ್ಲ' ಎಂಬ ಸರ್ವಜ್ಞ ಕವಿಯ ಮಾತುಗಳು ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ 'ಅನ್ನಭಾಗ್ಯ' ಯೋಜನೆಗೆ ಪೂರಕವಾಗಿದೆ.

ರಾಜ್ಯವನ್ನು ಹಸಿವು ಮುಕ್ತ ಮಾಡುವ ಗುರಿಯನ್ನು ಇಟ್ಟುಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನ್ನಭಾಗ್ಯ ಯೋಜನೆಯನ್ನು ರೂಪಿಸಿದರು. ಎರಡು ಹೊತ್ತು ಅನ್ನಕ್ಕಾಗಿ ನರಳುವ ಬಡವರನ್ನು ಗುರಿಯಾಗಿಸಿಕೊಂಡು ಚಾಲನೆಗೆ ತಂದ ಯೋಜನೆಯಲ್ಲಿ ಕೇವಲ ಹಸಿವನ್ನು ಮಾತ್ರ ದೂರಾಗಿಸುವುದಷ್ಟೇ ಅಲ್ಲ. ಅಪೌಷ್ಟಿಕತೆ ದೂರಾಗಿಸುವ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಿಸುವ ಉದ್ದೇಶವನ್ನೂ ಹೊಂದಿದೆ.

ಮೊದಲ ಬಾರಿಗೆ ಸಿಎಂ ಆಗಿ 2013ರಲ್ಲಿ ಅಧಿಕಾರ ಸ್ವೀಕರಿಸಿದ ಕೆಲವೇ ಕ್ಷಣಗಳಲ್ಲಿ ಜಗಜ್ಯೋತಿ ಬಸವಣ್ಣನವರ ದಾಸೋಹ ಸಂಸ್ಕೃತಿಯಂತೆ 'ಅನ್ನಭಾಗ್ಯ' ಯೋಜನೆಯನ್ನು ಘೋಷಿಸಿದ್ದರು. ಅಂದು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಕನಿಷ್ಠ 4 ಕೆಜಿ ಅಕ್ಕಿ ಮತ್ತು ಒಂದು ಕೆಜಿ ಗೋಧಿ. ಅಂದು ಪ್ರತಿ ಕೆಜಿಗೆ ಒಂದು ರೂ. ದರ ನಿಗದಿ ಮಾಡಲಾಗಿತ್ತು. ಆನಂತರ ಅದನ್ನು ಉಚಿತ ಮಾಡಲಾಯಿತು.

ಪ್ರಸಕ್ತ ವರ್ಷ ನಡೆದ ರಾಜ್ಯ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ, ಸರ್ಕಾರದ ಪ್ರಣಾಳಿಕೆಯಲ್ಲಿ ಕೊಟ್ಟ ಮಾತಿನಂತೆ 'ಐದು ಗ್ಯಾರಂಟಿ' ಯೋಜನೆಗಳಲ್ಲಿ ಒಂದಾದ 10 ಕೆಜಿ ಅಕ್ಕಿ ನೀಡುವ ಮಹತ್ವದ 'ಅನ್ನಭಾಗ್ಯ' ಯೋಜನೆಯನ್ನು ಸರ್ಕಾರ ಅನುಷ್ಠಾನಗೊಳಿಸಿ ಬಡವರ ಹಸಿವನ್ನು ತಣಿಸಲು ಪ್ರಯತ್ನಿಸಿದೆ.

ಪ್ರತಿ ತಿಂಗಳು ಫಲಾನುಭವಿಗಳಿಗೆ 5 ಕೆಜಿಯಂತೆ ಅಕ್ಕಿ ವಿತರಣೆ ಮಾಡಲು ರಾಜ್ಯಕ್ಕೆ 2.28 ಲಕ್ಷ ಮೆಟ್ರಿಕ್ ಟನ್ ಅಕ್ಕಿಯ ಅಗತ್ಯವಿದೆ. ಸರ್ಕಾರ 10 ಕೆಜಿ ನೀಡುವುದಕ್ಕೆ ಉದ್ದೇಶಿಸಿರುವುದರಿಂದ ಹೆಚ್ಚುವರಿಯಾಗಿ ಅಷ್ಟೇ ಪ್ರಮಾಣದ ಅಕ್ಕಿಯ ಅಗತ್ಯತೆ ಇದೆ. ಕೇಂದ್ರ ಆಹಾರ ನಿಗಮ ತಲಾ 1 ಕೆಜಿಗೆ 34 ರೂ.ನಂತೆ ನೀಡುವುದಾಗಿ ಒಪ್ಪಿ ಕಾರಣಾಂತರದಿಂದ ಹಿಂದೆ ಸರಿದಿರುವ ಘಟನೆಯೂ ನಡೆದಿದೆ.

10 ಕೆಜಿ ಅಕ್ಕಿ ನೀಡುವ ಗಟ್ಟಿ ನಿರ್ಧಾರ: ಬಡವರಿಗೆ ಅನ್ನ ನೀಡುವ ಈ ಯೋಜನೆಯಲ್ಲಿ ಹಲವಾರು ಅಡೆತಡೆಗಳು ಬಂದರೂ ಬಿಪಿಎಲ್ ಮತ್ತು ಅಂತ್ಯೋದಯ ಪಡಿತರದಾರರ ಕುಟುಂಬದ ಸದಸ್ಯರಿಗೆ ತಲಾ ಹತ್ತು ಕೆಜಿ ಅಕ್ಕಿಯನ್ನು ನೀಡುವ ಗಟ್ಟಿ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತೆಗೆದುಕೊಂಡಿದ್ದಾರೆ.

ಹಸಿವು ಮುಕ್ತ ಕರ್ನಾಟಕದ ಕನಸನ್ನು ನನಸಾಗಿಸುವ ಛಲವನ್ನು ಹೊತ್ತು ಕಾರ್ಯ ನಿರ್ವಹಿಸುತ್ತಿರುವ ಕಾಂಗ್ರೆಸ್ ಸರ್ಕಾರ ಹೆಚ್ಚುವರಿ ಅಕ್ಕಿಯ ಅಲಭ್ಯತೆಯ ನಡುವೆಯೂ ಎದೆಗುಂದಿಲ್ಲ. ಪ್ರತಿ ಸದಸ್ಯನಿಗೆ 5 ಕೆಜಿ ಅಕ್ಕಿಯ ಬದಲಾಗಿ ಪ್ರತಿ ಕೆಜಿಗೆ ₹34 ರಂತೆ ತಲಾ ₹170 ಕುಟುಂಬದ ಯಜಮಾನಿಯ ಖಾತೆಗೆ ಹಾಕುವ ಕ್ರಾಂತಿಕಾರಕ ಕ್ರಮವನ್ನು ಕೈಗೊಂಡಿದೆ.

ಫಲಾನುಭವಿ ಖಾತೆಗೆ ನೇರ ನಗದು ವರ್ಗಾವಣೆ: 'ನೆಮ್ಮದಿಯ ಬದುಕಿಗೆ ಆಹಾರ ಭದ್ರತೆ ಅನ್ನಭಾಗ್ಯ' ಎನ್ನುವ ಘೋಷವಾಕ್ಯದೊಂದಿಗೆ ಜಾರಿಗೆ ತಂದ ಅನ್ನಭಾಗ್ಯ ಯೋಜನೆಯ ಹೆಚ್ಚುವರಿ 5 ಕೆಜಿ ಅಕ್ಕಿಯ ಹಣವನ್ನು ಬಿಪಿಎಲ್ ಮತ್ತು ಅಂತ್ಯೋದಯ ಕುಟುಂಬದ ಫಲಾನುಭವಿಗಳಿಗೆ 'ನೇರ ನಗದು ವರ್ಗಾವಣೆ' (ಡಿಬಿಟಿ) ಮಾಡಲಾಗಿದೆ. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಇಲಾಖೆ ಜುಲೈ10ರಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಬಿಟಿಗೆ ಚಾಲನೆ ನೀಡಿದ್ದಾರೆ.



4.42 ಕೋಟಿ ಫಲಾನುಭವಿಗಳು

ಅನ್ನಭಾಗ್ಯ ಕ್ರಾಂತಿಕಾರಿ ಯೋಜನೆಯಲ್ಲಿ, 5ಕೆಜಿ ಆಹಾರ ಧಾನ್ಯ ಜತೆ ಹೆಚ್ಚುವರಿ 5 ಕೆಜಿ ಅಕ್ಕಿ ದೊರಕದ ಹಿನ್ನೆಲೆಯಲ್ಲಿ ಕುಟುಂಬದ ಪ್ರತಿ ಸದಸ್ಯರಿಗೆ ಐದು ಕೆಜಿಗೆ ಅಕ್ಕಿಗೆ ಸಮನಾಗಿ ತಲಾ ₹170ನ್ನು ಆಯಾ ಕುಟುಂಬದ ಯಜಮಾನಿಯ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ. ರಾಜ್ಯದ 1 ಕೋಟಿ 28 ಲಕ್ಷ 13 ಸಾವಿರದ 357 ಕುಟುಂಬಗಳು ಈ ಯೋಜನೆಯ ಲಾಭ ಪಡೆಯುತ್ತಿವೆ. ಡಿಬಿಟಿ ಮೂಲಕ ಹಣ ಪಾವತಿಸಲು ಪ್ರತಿ ತಿಂಗಳು ರಾಜ್ಯ ಸರ್ಕಾರಕ್ಕೆ ಅಂದಾಜು 780 ಕೋಟಿ ರೂ. ವೆಚ್ಚವಾಗುತ್ತಿದೆ. ಅಂದಾಜು 4.42 ಕೋಟಿ ಫಲಾನುಭವಿಗಳನ್ನು ಹೊಂದಿರುವ ಬಹುದೊಡ್ಡ ಯೋಜನೆ ಇದಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್



ಅನ್ನ ಭಾಗ್ಯದ ಯಶಸ್ಸಿನ ಬಗ್ಗೆ ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಯವರು ಹೀಗೆ ವಿಮರ್ಶಾತ್ಮವಾಗಿ ಹೇಳಿದ್ದಾರೆ. "ಅನ್ನಭಾಗ್ಯದ ಬಗ್ಗೆ ಕೆಲವರ ಆಕ್ಷೇಪ ಬಂದಿರಬಹುದು, ಆದರೆ ನಾವು ಅದರಿಂದ ಅದ ಪ್ರಯೋಜನ ಗಮನಿಸಬೇಕು'

ದುಡಿಯುವ ಕೈಗಳಿಗೆ ಶಕ್ತಿ



'ಹಸಿದ ಹೊಟ್ಟೆಗೆ, ದುಡಿಯುವ ಕೈಗಳಿಗೆ ಶಕ್ತಿ–ಚೈತನ್ಯ ತುಂಬುವ ಸಲುವಾಗಿ ಅನ್ನಭಾಗ್ಯ ಯೋಜನೆ ಜಾರಿಗೆ ತರಲಾಗಿದೆ. ಆದರೆ, ಕೇಂದ್ರ ಸರ್ಕಾರವು ಅನ್ನಭಾಗ್ಯ ಯೋಜನೆಗೆ ಹೆಚ್ಚುವರಿ ಅಕ್ಕಿ ನೀಡಲು ಆಗುವುದಿಲ್ಲ ಎಂದು ಹೇಳಿ, ಬಳಿಕ ಇ–ಹರಾಜು ಮೂಲಕ ಆ ಅಕ್ಕಿಯನ್ನು ಹರಾಜು ಹಾಕಲು ಮುಂದಾಯಿತು. ಆದರೆ, ಈಗ ಇ–ಹರಾಜು ಮೂಲಕ ಅಕ್ಕಿ ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ. ಇದು ಕೇಂದ್ರ ಸರ್ಕಾರಕ್ಕೆ ಬಡವರ ಮೇಲಿರುವ ನಿಲುವನ್ನು ತೋರಿಸುತ್ತದೆ.'

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಕೊಟ್ಟ ಭರವಸೆ ಈಡೇರಿಸಿದ್ದೇವೆ



ರಾಜ್ಯದ ಜನರಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿದ್ದೇವೆ. ಅನ್ನಭಾಗ್ಯ ಯೋಜನೆ ಯಶಸ್ವಿಯಾಗಿ ಜಾರಿ ಮಾಡಿದ್ದೇವೆ. ನಿರೀಕ್ಷೆಗೆ ತಕ್ಕಂತೆ ಅಕ್ಕಿ ಸಿಗದ ಹಿನ್ನೆಲೆಯಲ್ಲಿ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡಲಾಗುತ್ತಿದೆ. ಶೀಘ್ರ ಹೊರ ರಾಜ್ಯಗಳಿಂದ ಅಕ್ಕಿ ಖರೀದಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗುತ್ತಿದೆ. ಬರಪೀಡಿತ ತಾಲ್ಲೂಕುಗಳಿಗೆ 10 ಕೆಜಿ ಅಕ್ಕಿ ವಿತರಣೆ ಮಾಡಲು ಪ್ರಯತ್ನಿಸಲಾಗುತ್ತಿದೆ.

ಕೆ.ಎಚ್. ಮುನಿಯಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ



ನೇರ ನಗದು ವರ್ಗಾವಣೆಗೆ ಚಾಲನೆ ನೀಡುತ್ತಿರುವ ಸಿಎಂ ಮತ್ತು ಡಿಸಿಎಂ

'ಹಸಿದವನಿಗೆ ಗೊತ್ತು ಅನ್ನದ ಬೆಲೆ'

ನಾನು ಮತ್ತು ನನ್ನ ಪತ್ನಿ ರಸ್ತೆ ಬದಿಯಲ್ಲಿ ತಳ್ಳು ಗಾಡಿಯ ಮೇಲೆ ಬೆಳಗಿನ ಉಪಾಹಾರ ಕ್ಯಾಂಟೀನ್ ನಡೆಸುತ್ತೇವೆ. ನಾವು ಬಿಪಿಎಲ್ ಕಾರ್ಡ್ ಹೊಂದಿದ್ದೇವೆ. ಸಿದ್ದರಾಮಯ್ಯ ಸರ್ಕಾರ 10ಕೆಜಿ ಅಕ್ಕಿ ನೀಡುವ ಭರವಸೆ ನೀಡಿತ್ತು. ಆದರೆ, ಈಗ ಐದು ಕೆಜಿ ನೀಡಿದೆ. ಉಳಿದ 5ಕೆಜಿ ಬದಲಿಗೆ ಹಣ ನೀಡಿರುವುದು ನಮಗೆ ಇತರ ದಿನಸಿ ಕೊಳ್ಳಲು ಅನುಕೂಲವಾಗಿದೆ.

ಶಿವಪ್ಪ ರಾಮನಗರ

'ಬಹಳ ಸಂತೋಷವಾಗಿದೆ'

ಮಳೆಯಾಶ್ರಿತ ಜಮೀನು ಇರುವ ನಮಗೆ ಊಟಕ್ಕೆ ಅಕ್ಕಿಯನ್ನು ಅಂಗಡಿಯಿಂದ ತರಬೇಕಾಗುತ್ತದೆ. ಇದರಿಂದ ನಮಗೆ ಹೆಚ್ಚು ಹಣ ಖರ್ಚಾಗುತ್ತದೆ. ಸರ್ಕಾರ ನಮ್ಮಂತವರಿಗೆ ತಲಾ 10 ಕೆಜಿ ಅಕ್ಕಿಯನ್ನು ಅನ್ನಭಾಗ್ಯ ಯೋಜನೆಯಡಿ ನೀಡುತ್ತಿರುವುದು ಬಹಳ ಸಂತೋಷವಾಗಿದೆ.

ಸುನಿಲ್ ಎಂ. ಕ್ಯಾತನಹಳ್ಳಿ

ಲೈಂಗಿಕ ದೌರ್ಜನ್ಯ ಆರೋಪಿ ಬಂಧನ

ಬೆಂಗಳೂರು: ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪಿ ಶೃಂಗಾರ್‌ನನ್ನು ವಿ.ವಿ.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಂಡ್ಯದ ಶೃಂಗಾರ್, ಆಸ್ಪತ್ರೆಯೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಸಹಾಯಕ ಕೆಲಸ ಮಾಡುತ್ತಿದ್ದ. ಯುವತಿ ನೀಡಿರುವ ದೂರು ಆಧರಿಸಿ ಆರೋಪಿಯನ್ನು ಸೆರೆ ಹಿಡಿಯ ಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೀದರ್ ಜಿಲ್ಲೆಯ ಯುವತಿ, ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದಾರೆ. ಅದೇ ಆಸ್ಪತ್ರೆಯಲ್ಲಿ ಸಹಾಯಕನಾಗಿದ್ದ ಆರೋಪಿ, ರೋಗಿಗಳನ್ನು ಸ್ಕ್ಯಾನಿಂಗ್ ಕೇಂದ್ರಕ್ಕೆ ಕರೆದೊಯ್ಯುವುದು ಹಾಗೂ ಇತರೆ ಕೆಲಸ ಮಾಡುತ್ತಿದ್ದ. ಯುವತಿಯನ್ನು ಸ್ಕ್ಯಾನಿಂಗ್ ಕೇಂದ್ರಕ್ಕೆ ಕರೆದೊಯ್ಯುವಾಗ ಆರೋಪಿ ಅಂಗಾಂಗ ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಸಂಗತಿಯನ್ನು ಯುವತಿ ಪೋಷಕರಿಗೆ ತಿಳಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಶಾಲಾ ಮಕ್ಕಳ ಸಂಚಾರಕ್ಕೂ ತೊಂದರೆ: ಬಿಎಂಟಿಸಿಯಿಂದ ಹೆಚ್ಚುವರಿ ಬಸ್

ನಾಳೆ ಖಾಸಗಿ ವಾಹನ ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಸಾರಿಗೆಯನ್ನು ಸೆ.11ರಂದು ಬಂದ್ ಮಾಡಲು ಖಾಸಗಿ ಸಾರಿಗೆ ಸಂಸ್ಥೆಗಳ ಒಕ್ಕೂಟ ನಿರ್ಧರಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಹೀಗಾಗಿ, ಹೆಚ್ಚುವರಿಯಾಗಿ ಬಸ್‌ಗಳನ್ನು ನಿಯೋಜಿಸಿ, ಜನದಟ್ಟಣೆ ಸಮಸ್ಯೆ ಕಡಿಮೆ ಮಾಡಲು ಬಿಎಂಟಿಸಿ ನಿರ್ಧರಿಸಿದೆ.

ಟ್ಯಾಕ್ಸಿ, ಆಟೊ, ಮ್ಯಾಕ್ಸಿಕ್ಯಾಬ್, ಖಾಸಗಿ ಬಸ್‌ಗಳ ಚಾಲಕರು ಮತ್ತು ಮಾಲೀಕರು 30 ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬಂದ್‌ಗೆ ಕರೆ ನೀಡಿದ್ದಾರೆ.

'ನಮ್ಮ ಬೇಡಿಕೆಗಳಿಗೆ ಸಾರಿಗೆ ಸಚಿವರು, ಇಲಾಖೆಯ ಅಧಿಕಾರಿಗಳು ಸ್ಪಂದಿಸಿಲ್ಲ. ಹಾಗಾಗಿ ಬಂದ್‌ಗೆ ಅನಿವಾರ್ಯವಾಗಿ ಕರೆ ನೀಡ ಲಾಗಿದೆ. ಇದರಿಂದ ಜನರಿಗೆ ತೊಂದರೆಯಾಗುವುದು ನಿಜ. ಹಲವಾರು ದಿನಗಳಿಂದ ನಾವು ಅನುಭವಿಸುತ್ತಿರುವ ಸಮಸ್ಯೆಗಳನ್ನು ನೀಗಿಸಲು ಒಂದು ದಿನದ ಮಟ್ಟಿಗೆ ಸಾರ್ವಜನಿಕರು ಸಹಕರಿಸಬೇಕು' ಎಂದು ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ್ ಶರ್ಮ ತಿಳಿಸಿದ್ದಾರೆ.



ಸೆ.11ರಂದು ನಡೆಯಲಿರುವ ಖಾಸಗಿ ವಾಹನಗಳ ಬಂದ್ ಬಗ್ಗೆ ಪೋಸ್ಟರ್ ಅನ್ನು ಕಾರಿನ ಹಿಂಬದಿ ಗಾಜಿಗೆ ಅಂಟಿಸಿರುವುದು

'ಟ್ಯಾಕ್ಸಿ, ಆಟೊ, ಮ್ಯಾಕ್ಸಿಕ್ಯಾಬ್, ಖಾಸಗಿ ಬಸ್ ಮಾಲೀಕರ ಸಂಘಟನೆ ಸೇರಿದಂತೆ ಒಟ್ಟು 32 ಸಂಘಟನೆಗಳು ಸೇರಿ ಸೆ.10ರ ರಾತ್ರಿ 12ರಿಂದ ಸೆ.11ರ ರಾತ್ರಿ 12ರವರೆಗೆ ಮುಷ್ಕರಕ್ಕೆ ಕರೆ ನೀಡಿವೆ. ನಮಗೆ ಬೆಂಬಲ ನೀಡದೇ ಸಂಚರಿಸುವ ವಾಹನಗಳಿಗೆ ನಾವೇನು ಮಾಡುವುದಿಲ್ಲ. ಏನಾದರೂ ಹಾನಿಯಾದರೆ ನಾವು ಜವಾಬ್ದಾರರಲ್ಲ' ಎಂದು ಹೇಳಿದ್ದಾರೆ.

'ಶಾಲಾ ವಾಹನಗಳು ಸಹ ಇರುವುದಿಲ್ಲ. ಹೆಬ್ಬಾಳದ ವಿದ್ಯಾನಿಕೇತನ, ಬಸವೇಶ್ವರ ನಗರದ ಕಡಂಬಿ ಸ್ಕೂಲ್‌ಗಳಿಗೆ ಆಡಳಿತ ಮಂಡಳಿಯವರು ಸೋಮವಾರ ರಜೆ ನೀಡಿದ್ದಾರೆ. ಇನ್ನಷ್ಟು ಶಾಲೆಗಳು ರಜೆ ನೀಡುವ ಸಾಧ್ಯತೆ ಇದೆ' ಎಂದು ರಾಜ್ಯ ಶಾಲಾ ವಾಹನಗಳ ಮಾಲೀಕರ ಯೂನಿಯನ್ ಅಧ್ಯಕ್ಷ ಜಿ. ರವಿಕುಮಾರ್ ತಿಳಿಸಿದ್ದಾರೆ.

'ಖಾಸಗಿ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿರುವ ವಾಹನಗಳು ಅನಿವಾರ್ಯವಾಗಿ ಸಂಚರಿಸಬೇಕಾಗುತ್ತದೆ. ಇವಲ್ಲದೇ ಬೆಂಬಲ ನೀಡದವರ ವಾಹನಗಳು ಕೆಲವು ಸಂಚರಿಸಲಿವೆ. ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬಹುದಿತ್ತು. ಆದರೆ, ಪ್ರತಿಷ್ಠೆಗೆ ಬಿದ್ದಿದ್ದರಿಂದ ಇಂಥ ಪರಿಸ್ಥಿತಿ ಬಂದಿದೆ' ಎಂದು ವಾಹನ ಮಾಲೀಕರೊಬ್ಬರು ಹೇಳಿಕೊಂಡಿದ್ದಾರೆ.

ಹಳೇ ಸಮಸ್ಯೆಗಳು: 'ಶಕ್ತಿ ಯೋಜನೆ ಮತ್ತು ಕೆಲವು ರಸ್ತೆ ತೆರಿಗೆ ಹೊರತುಪಡಿಸಿ ಉಳಿದೆಲ್ಲವೂ ಹಳೇ ಸಮಸ್ಯೆಗಳು. ಪರಿಹಾರ ಮಾಡಲು ಸಾಧ್ಯ ಇರುವ ಬೇಡಿಕೆಗಳನ್ನು ಈಡೇರಿಸ ಬಹುದು. ಆದರೆ, ಬಸ್, ಆಟೊ ಸಹಿತ ಎಲ್ಲ ಖಾಸಗಿ ಸಾರಿಗೆ ವಾಹನ ಚಾಲಕರಿಗೆ ತಿಂಗಳಿಗೆ ₹ 10 ಸಾವಿರ ಪರಿಹಾರ ನೀಡಬೇಕು ಎಂದೆಲ್ಲ ಬೇಡಿಕೆ ಇಟ್ಟರೆ ಈಡೇರಿಸುವುದು ಹೇಗೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರಶ್ನಿಸಿದ್ದಾರೆ. 'ಬಂದ್ ಮಾಡಬೇಕು ಎಂದು ಮಾಡುತ್ತಿದ್ದಾರೆ. ಬಂದ್ ಮಾಡಲು ಎಲ್ಲರಿಗೂ ಹಕ್ಕಿದೆ. ಆದರೆ, ಬೇರೆಯವರಿಗೆ ತೊಂದರೆ ನೀಡಬಾರದು. ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರ ಜೊತೆಗೂ ಈ ಬಗ್ಗೆ ಮಾತನಾಡಿದ್ದೇನೆ. ಹೆಚ್ಚುವರಿ ಬಸ್‌ಗಳು ನಾಳೆ ರಸ್ತೆಗೆ ಇಳಿಯಲಿವೆ. ರಜೆ ಇದ್ದ ಸಿಬ್ಬಂದಿಯನ್ನೆಲ್ಲ ಕರೆಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಪೊಲೀಸ್ ಇಲಾಖೆಗೆ ಮಾಹಿತಿ ನೀಡಲಾಗಿದ್ದು, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಶಾಂತಿ ಕಾಪಾಡುವ ಕಾರ್ಯವನ್ನು ಅವರು ಮಾಡಲಿದ್ದಾರೆ' ಎಂದು ತಿಳಿಸಿದರು.

'ಬೆಂಗಳೂರು ಬಂದ್‌ಗೆ ಬೆಂಬಲ ಇಲ್ಲ'

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ಕರೆದು ಸಮಸ್ಯೆ ಆಲಿಸಿದ್ದರು. ಬೇಡಿಕೆಗಳನ್ನು ಪರಿಶೀಲಿಸಿ ಸ್ಪಂದಿಸುವುದಾಗಿ ಭರವಸೆಯನ್ನೂ ನೀಡಿದ್ದರು. ಹಾಗಾಗಿ ಬೆಂಗಳೂರು ಬಂದ್‌ಗೆ ನಮ್ಮ ಬೆಂಬಲ ಇಲ್ಲ' ಎಂದು ರಾಜ್ಯ ಬಸ್ ಮಾಲೀಕರ ಒಕ್ಕೂಟದ ಅಧ್ಯಕ್ಷ ಕೆ. ರಾಜವರ್ಮ ಬಲ್ಲಾಳ್ ತಿಳಿಸಿದ್ದಾರೆ.

'ಬಂದ್‌ಗೆ ಕರೆ ನೀಡಿರುವ ಸಂಘಟನೆಗಳು ಮುಖ್ಯಮಂತ್ರಿ ಕರೆದಿದ್ದ ಸಭೆಯನ್ನೇ ಬಹಿಷ್ಕರಿಸಿದ್ದವು' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ರ‍್ಯಾಪಿಡೊ ಸವಾರನ ಸುಲಿಗೆ

ಬೆಂಗಳೂರು: ಪ್ರಯಾಣಿಕನ ಸೋಗಿನಲ್ಲಿ ರ‍್ಯಾಪಿಡೊ ಬೈಕ್ ಕಾಯ್ದಿರಿಸಿ ಸವಾರನನ್ನು ಅಪಹರಿಸಿ ಸುಲಿಗೆ ಮಾಡಿದ್ದ ಆರೋಪಿ ಪವನ್‌ನನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಗಸ್ಟ್ 29ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ರ‍್ಯಾಪಿಡೊ ಬೈಕ್ ಟ್ಯಾಕ್ಸಿ ಸವಾರ ಮನು ಬಿ.ಸಿ. ದೂರು ನೀಡಿದ್ದರು. ಆರೋಪಿ ಪವನ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜೆ.ಪಿ. ನಗರ ನಿವಾಸಿ ಮನು, ರ‍್ಯಾಪಿಡೊ ಬೈಕ್ ಟ್ಯಾಕ್ಸಿ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಆ್ಯಪ್ ಬಳಕೆದಾರ ಕಿರಣ್, ಹೊಸಕೆರೆಹಳ್ಳಿ ಕ್ರಾಸ್‌ನಿಂದ ಪೀಣ್ಯಕ್ಕೆ ಹೋಗಲು ಟ್ಯಾಕ್ಸಿ ಕಾಯ್ದಿರಿಸಿದ್ದರು. ಮನು ಬೈಕ್ ಸಮೇತ ಸ್ಥಳಕ್ಕೆ ಬಂದಿದ್ದರು. ಕಿರಣ್, ತನ್ನ ಸ್ನೇಹಿತ ಪವನ್‌ನನ್ನು ಬೈಕ್‌ನಲ್ಲಿ ಕೂರಿಸಿ ಹೋಗಿದ್ದರು. ಸವಾರ ಮನುಗೆ ಚಾಕು ತೋರಿಸಿದ್ದ ಪವನ್, ಹಣ ನೀಡುವಂತೆ ಬೇಡಿಕೆ ಇರಿಸಿದ್ದ. ತಮ್ಮ ಬಳಿ ಹಣವಿಲ್ಲವೆಂದು ಮನು ಹೇಳಿದ್ದರು. ಮನು ಜೇಬಿನಲ್ಲಿ ಹುಡುಕಾಡಿದ್ದ ಆರೋಪಿ, ಎಟಿಎಂ ಕಾರ್ಡ್ ಹಾಗೂ ₹ 3,500 ನಗದು ಕಿತ್ತುಕೊಂಡಿದ್ದ. ನಂತರ, ಮನು ಅವರನ್ನು ಎಟಿಎಂ ಘಟಕಕ್ಕೆ ಕರೆದೊಯ್ದು ₹ 7,500 ಡ್ರಾ ಮಾಡಿಸಿಕೊಂಡಿದ್ದ. ನಂತರ, ಪೊಲೀಸರಿಗೆ ವಿಷಯ ತಿಳಿಸದಂತೆ ಬೆದರಿಸಿ ಬಿಟ್ಟು ಕಳುಹಿಸಿದ್ದ' ಎಂದು ತಿಳಿಸಿವೆ.

'ಪ್ರಕರಣದ ಕುರಿತು ದೂರು ದಾಖಲಾಗುತ್ತಿದ್ದಂತೆ, ಕಿರಣ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕಿರಣ್, ಕೇವಲ ₹ 100 ಪಾವತಿಸಿ ಸ್ಥಳದಿಂದ ಹೊರಟು ಹೋಗಿದ್ದರು. ಪ್ರಯಾಣ ದರ ಹೆಚ್ಚಿರುವುದಾಗಿ ಮನು ಹೇಳಿದ್ದರು. ಆದರೆ, ತನ್ನ ಬಳಿ ಹಣವಿಲ್ಲವೆಂದು ಪವನ್ ತಿಳಿಸಿದ್ದ. ಇದೇ ವಿಚಾರವಾಗಿ ಗಲಾಟೆ ಆಗಿತ್ತು. ಅವಾಗಲೇ ಪವನ್, ಮನು ಅವರನ್ನು ಅಪಹರಿಸಿ ಸುಲಿಗೆ ಮಾಡಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಡ್ರಾಪ್ ನೆಪದಲ್ಲಿ ಸುಲಿಗೆ: ಮೂವರ ಸೆರೆ

ಬೆಂಗಳೂರು: ಡ್ರಾಪ್ ನೆಪದಲ್ಲಿ ವ್ಯಕ್ತಿಯೊಬ್ಬರನ್ನು ಅಪಹರಿಸಿ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕ್ಯಾಬ್ ಚಾಲಕರಾದ ನಂಜುಂಡ, ಗಿರೀಶ್ ಹಾಗೂ ನವೀನ್ ಬಂಧಿತರು. ₹ 60,100 ಮೌಲ್ಯದ ಚಿನ್ನದ ಕಿವಿಯೋಲೆ, ಮೂರು ಮೊಬೈಲ್ ಹಾಗೂ ₹ 10 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸೆ. 2ರಂದು ಬೆಳಿಗ್ಗೆ 5 ಗಂಟೆ ಸುಮಾರಿಗೆ ಮಾಗಡಿಗೆ ಹೊರಟಿದ್ದ ದೂರುದಾರ, ಹೊರವರ್ತುಲ ರಸ್ತೆಯ ಸುಮನಹಳ್ಳಿ ಜಂಕ್ಷನ್ ಬಳಿ ನಿಂತಿದ್ದರು. ಟಾಟಾ ಟಿಗೋರ್ ಎಲೆಕ್ಟ್ರಿಕ್ ಕಾರಿನಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಮಾಗಡಿಗೆ ಹೊರಟಿರುವುದಾಗಿ ಹೇಳಿ ದೂರುದಾರರನ್ನು ಹತ್ತಿಸಿಕೊಂಡಿದ್ದರು. ನಂತರ, ಮಾಗಡಿಯತ್ತ ಕಾರು ಹೊರಟಿತ್ತು. ಮಾರ್ಗಮಧ್ಯೆ ದೂರುದಾರರಿಗೆ ಡ್ಯಾಗರ್ ತೋರಿಸಿದ್ದ ಆರೋಪಿಗಳು, ಕೊಲೆ ಮಾಡುವುದಾಗಿ ಬೆದರಿಸಿದ್ದರು. ದೂರುದಾರ ಕೂಗಾಡಲಾರಂಭಿಸಿದ್ದರು. ಆರೋಪಿಗಳು ಕಾರಿನಲ್ಲಿದ್ದ ಮ್ಯೂಸಿಕ್ ಪ್ಲೇಯರ್ ಶಬ್ದ ಹೆಚ್ಚಿಸಿದ್ದರು. ಬಳಿಕ, ದೂರುದಾರರ ಗೂಗಲ್ ಪೇಯಿಂದ ಹಣ ವರ್ಗಾವಣೆ ಮಾಡಿಸಿಕೊಂಡಿದ್ದರು. ಮೊಬೈಲ್ ಕಿತ್ತುಕೊಂಡು, ಮಾರ್ಗಮಧ್ಯೆಯೇ ಇಳಿಸಿ ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಸುಲಿಗೆ ಬಗ್ಗೆ ದೂರು ದಾಖಲಾಗುತ್ತಿದ್ದಂತೆ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಚಾಲಕರಾಗಿದ್ದ ಮೂವರು, ಹಣ ಸಂಪಾದನೆಗಾಗಿ ಸುಲಿಗೆ ಮಾಡುತ್ತಿದ್ದರು. ಮತ್ತಷ್ಟು ಕಡೆ ಕೃತ್ಯ ಎಸಗಿರುವ ಅನುಮಾನವಿದೆ' ಎಂದರು.



ವೆಡ್ಡಿಂಗ್ ಷೋ ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಆರಂಭವಾದ ಮೂರು ದಿನಗಳ 'ಏಷ್ಯಾ ವೆಡ್ಡಿಂಗ್ ಶೋ-2023'ಕ್ಕೆ ಮಾಜಿ ಶಾಸಕಿ ಸೌಮ್ಯ ರೆಡ್ಡಿ ಚಾಲನೆ ನೀಡಿದರು. 'ಶೀ ಫಾರ್ ಸೊಸೈಟಿ'ಯ ಹರ್ಷಿಣಿ ವೆಂಕಟೇಶ್ ಇದ್ದರು.

ಡ್ರಗ್ಸ್ ಅಮಲು: ಪೊಲೀಸರಿಗೆ ಒದ್ದ ಯುವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ವ್ಯಸನಿಯಾದ ಯುವತಿಯೊಬ್ಬರು ಮಹಿಳಾ ಪೊಲೀಸರಿಗೆ ಒದ್ದು ರಂಪಾಟ ಮಾಡಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ನಗರದ ಠಾಣೆಯೊಂದರಲ್ಲಿ ಚಿತ್ರೀಕರಿಸಲಾಗಿರುವ ವಿಡಿಯೊವನ್ನು ಹಲವರು ತಮ್ಮ ಫೇಸ್‌ಬುಕ್ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ.

'ನಗರದಲ್ಲಿ ಯುವಜನತೆ, ಡ್ರಗ್ಸ್ ವ್ಯಸನಿಗಳಾಗಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಆಗ್ರಹಿಸಿದ್ದಾರೆ.

'ಗಾಂಜಾ ಹಾಗೂ ಸಿಂಥೆಟಿಕ್ ಡ್ರಗ್ಸ್ ಎಲ್ಲೆಂದರಲ್ಲಿ ಸಿಗುತ್ತಿದೆ. ಮಾರಾಟವೂ ಹೆಚ್ಚಾಗಿದೆ. ಡ್ರಗ್ಸ್ ಸಾಗಣೆ ಹಾಗೂ ಮಾರಾಟಗಾರರ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಜನರು ಒತ್ತಾಯಿಸಿದ್ದಾರೆ.

ವಿಡಿಯೊದಲ್ಲಿ ಏನಿದೆ: 'ಕಾಲೇಜೊಂದರಲ್ಲಿ ಓದುತ್ತಿರುವ ಯುವತಿ, ಪೋಷಕರ ಜೊತೆ ವಾಸವಿದ್ದಾರೆ. ಕೆಲ ತಿಂಗಳಿನಿಂದ ಯುವತಿ, ಡ್ರಗ್ಸ್ ಸೇವನೆ ಮಾಡುತ್ತಿದ್ದರು. ಡ್ರಗ್ಸ್ ವ್ಯಸನಿಯಾಗಿ ಬದಲಾಗಿದ್ದರು. ಡ್ರಗ್ಸ್ ಖರೀದಿಸಲು ಹಣ ನೀಡುವಂತೆ ಪೋಷಕರನ್ನು ಒತ್ತಾಯಿಸುತ್ತಿದ್ದರು. ಪೋಷಕರು, ಹಣ ನೀಡುವುದನ್ನು ನಿಲ್ಲಿಸಿದ್ದರು. ಇದರ ನಡುವೆಯೇ ಯುವತಿ ವಿಚಿತ್ರವಾಗಿ ವರ್ತಿಸುತ್ತಿದ್ದು, ಪೋಷಕರ ಮೇಲೂ ಹಲ್ಲೆ ಮಾಡುತ್ತಿದ್ದರು' ಎಂದು ಗೊತ್ತಾಗಿದೆ.

ಮಗಳ ಪರಿಸ್ಥಿತಿ ಕಂಡು ಹೆದರಿದ್ದ ಪೋಷಕರು, ಠಾಣೆಗೆ ಮಾಹಿತಿ ನೀಡಿದ್ದರು. ಮನೆಗೆ ಹೋಗಿದ್ದ ಮಹಿಳಾ ಸಿಬ್ಬಂದಿ, ಜೀಪಿನಲ್ಲಿ ಯುವತಿಯನ್ನು ಠಾಣೆಗೆ ಕರೆತಂದಿದ್ದರು. ಈ ವೇಳೆಯೂ ಯುವತಿ ವಿಚಿತ್ರವಾಗಿ ವರ್ತಿಸಿ ರಂಪಾಟ ಮಾಡಿದ್ದರು. ಅವರನ್ನು ಹಿಡಿದುಕೊಂಡಿದ್ದ ಸಿಬ್ಬಂದಿ, ಕುರ್ಚಿ ಮೇಲೆ ಕೂರಿಸಿದ್ದರು. ಈ ವೇಳೆ ಮತ್ತಷ್ಟು ಆಕ್ರೋಶಗೊಂಡಿದ್ದ ಯುವತಿ, ಪೊಲೀಸರಿಗೆ ಒದ್ದಿದ್ದಾರೆ. ಇದರಿಂದ ಸಿಟ್ಟಾದ ಕೆಲ ಸಿಬ್ಬಂದಿ, ಯುವತಿ ಕಪಾಳಕ್ಕೆ ಹೊಡೆದಿದ್ದಾರೆ. ಈ ದೃಶ್ಯ ವಿಡಿಯೊದಲ್ಲಿದೆ.

ಆಸ್ಪತ್ರೆಗೆ ದಾಖಲು: ಸಿಬ್ಬಂದಿ, ಯುವತಿಯನ್ನು ಹಿಡಿದುಕೊಂಡು ಆಸ್ಪತ್ರೆಗೆ ದಾಖಲಿಸಿದ್ದಾರೆಂದು ತಿಳಿದುಬಂದಿದೆ. ಆದರೆ, ಯಾವ ಠಾಣೆಯಲ್ಲಿ ಈ ಘಟನೆ ನಡೆದಿದೆ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ.

ಪಬ್, ಬಾರ್‌ನಲ್ಲಿ ವಿದ್ಯಾರ್ಥಿಗಳು: ಶಿಕ್ಷಕರ ದೂರು, ಪೊಲೀಸರ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮದ್ಯ, ತಂಬಾಕು ಉತ್ಪನ್ನ, ಇತರೆ ನಿಷೇಧಿತ ವಸ್ತುಗಳನ್ನು ಅಪ್ರಾಪ್ತ ವಿದ್ಯಾರ್ಥಿಗಳಿಗೆ ಮಾರಾಟ ಮಾಡಲಾಗುತ್ತಿದೆ' ಎಂದು ಶಾಲೆ ಶಿಕ್ಷಕರು ದೂರು ನೀಡಿದ್ದ ಬೆನ್ನಲ್ಲೇ ನಗರದ ಪಬ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಮೇಲೆ ಪೊಲೀಸರು ಶುಕ್ರವಾರ ರಾತ್ರಿ ದಾಳಿ ಮಾಡಿದರು.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಇಂದಿರಾನಗರ, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಬಾಣಸವಾಡಿ, ಹೆಣ್ಣೂರಿನಲ್ಲಿರುವ ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್, ಹೋಟೆಲ್ ಹಾಗೂ ಇತರೆ ಸ್ಥಳಗಳ ಮೇಲೆ ದಾಳಿ ನಡೆದಿದೆ.

'ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್ ಹಾಗೂ ಇತರೆ ಸ್ಥಳಗಳಲ್ಲಿ ನಿಯಮ ಉಲ್ಲಂಘನೆ ಬಗ್ಗೆ ದೂರುಗಳು ಬಂದಿದ್ದವು. ಹೀಗಾಗಿ, ಪೊಲೀಸರ ವಿಶೇಷ ತಂಡಗಳನ್ನು ರಚಿಸಿ ಶುಕ್ರವಾರ ರಾತ್ರಿ ಏಕಕಾಲದಲ್ಲಿ ದಾಳಿ ಮಾಡಲಾಗಿದೆ' ಎಂದು ಕಮಿಷನರ್ ಬಿ. ದಯಾನಂದ್ ಹೇಳಿದರು.

701 ಸ್ಥಳಗಳಲ್ಲಿ ಪರಿಶೀಲನೆ, 506 ಪ್ರಕರಣ: 'ನಗರದ 701 ಸ್ಥಳಗಳನ್ನು ಗುರುತಿಸಲಾಗಿತ್ತು. ಪ್ರತಿಯೊಂದು ಸ್ಥಳದ ಮೇಲೂ ವಿಶೇಷ ತಂಡಗಳು ದಾಳಿ ಮಾಡಿದವು. ಕೆಲವು ಸ್ಥಳಗಳಲ್ಲಿ ಅಪ್ರಾಪ್ತರು ಪತ್ತೆಯಾದರು. ಅವರೆಲ್ಲರಿಗೂ ಬುದ್ಧಿವಾದ ಹೇಳಿ, ಮನೆಗೆ ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'390 ಸ್ಥಳಗಳಲ್ಲಿ ನಿಯಮ ಉಲ್ಲಂಘನೆ ಪತ್ತೆಯಾಗಿದೆ. ಬಾಲನ್ಯಾಯ ಕಾಯ್ದೆ, ಅಬಕಾರಿ ಕಾಯ್ದೆ, ಕೋಟ್ಪಾ ಕಾಯ್ದೆಯಡಿ ಒಟ್ಟು 506 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಕೆಲವೆಡೆ ಮಾಲೀಕರು ಹಾಗೂ ಸಿಬ್ಬಂದಿಯನ್ನು ವಶಕ್ಕೆ ಪಡೆಯಲಾಗಿದೆ. ಎಲ್ಲ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ' ಎಂದು ತಿಳಿಸಿವೆ.

'ಬಾಲಕ ಹಾಗೂ ಬಾಲಕಿಯರಿಗೆ ಪ್ರವೇಶ ನೀಡಲಾಗುತ್ತಿತ್ತು. ಅವರಿಗೆ ಮದ್ಯ, ತಂಬಾಕು ಉತ್ಪನ್ನ ಹಾಗೂ ಇತರೆ ನಿಷೇಧಿತ ವಸ್ತುಗಳನ್ನು ವಿತರಣೆ ಮಾಡುತ್ತಿರುವುದು ಪತ್ತೆಯಾಗಿದೆ' ಎಂದು ಹೇಳಿವೆ.

'ವಿದ್ಯಾರ್ಥಿಗಳು ಕ್ರಮೇಣ ವ್ಯಸನಿಗಳಾಗುತ್ತಿದ್ದರು. ಇದರಿಂದಾಗಿ ಓದಿನಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ಶಿಕ್ಷಕರು ದೂರು ನೀಡಿದ್ದರು' ಎಂದು ತಿಳಿಸಿವೆ.

ಮಾಲೀಕರಿಗೆ ಎಚ್ಚರಿಕೆ: 'ಪರವಾನಗಿ ಸಂದರ್ಭದಲ್ಲಿ ಸೂಚಿಸಿರುವ ನಿಯಮ, ಷರತ್ತು ಹಾಗೂ ಸೂಚನೆಗಳನ್ನು ಪಾಲಿಸುವಂತೆ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ' ಎಂದು ಬಿ. ದಯಾನಂದ್ ಹೇಳಿದರು.

'ಗಂಭೀರ ಸ್ವರೂಪದ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಮಾಲೀಕರ ಪಟ್ಟಿ ಸಿದ್ಧಪಡಿಸಲಾಗಿದೆ. ಅವರಿಗೆ ನೀಡಿರುವ ಪರವಾನಗಿ ರದ್ದು-ಪಡಿಸುವಂತೆ ಸಂಬಂಧಪಟ್ಟ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದರು.

ಕಲಾಂಗೆ ಅವಹೇಳನ: ಯತಿ ನರಸಿಂಹನಂದ ವಿರುದ್ಧ ಪ್ರಕರಣ

ಗಾಜಿಯಾಬಾದ್ (ಉತ್ತರಪ್ರದೇಶ) (ಪಿಟಿಐ): ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಬಗ್ಗೆ ಅವಹೇಳನಕರ ಹೇಳಿಕೆ ನೀಡಿರುವ ಆರೋಪದ ಮೇಲೆ ದಾಸನದೇವಿ ದೇವಸ್ಥಾನದ ಅರ್ಚಕ ಯತಿ ನರಸಿಂಹನಂದ ಸರಸ್ವತಿ ಅವರ ವಿರುದ್ಧ ಶನಿವಾರ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಶುಕ್ರವಾರ ರಾತ್ರಿ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿದ ವಿಡಿಯೊ ತುಣುಕು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. 16 ಸೆಕೆಂಡ್‌ಗಳ ವಿಡಿಯೊದಲ್ಲಿ ಯತಿ ಅವರು ಮಾಜಿ ರಾಷ್ಟ್ರಪತಿ ಕಲಾಂ ಅವರ ಬಗ್ಗೆ ಅವಹೇಳನಕರ ಹೇಳಿಕೆಗಳನ್ನು ನೀಡಿದ್ದಾರೆ. ಮುಸ್ಲಿಮರ ಕುರಿತು ಆಕ್ಷೇಪಾರ್ಹ ಭಾಷೆ ಬಳಸಿದ್ದಾರೆ. ಇದು ದ್ವೇಷ ಹರಡುವಂತಿದ್ದು, ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟು ಮಾಡುತ್ತದೆ' ಎಂದು ಪೊಲೀಸ್ ಕಮಿಷನರ್ ಅಜಯ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

ಅಪಘಾತ: ತಾಯಿ ಸಾವು, ಮಗು ಪಾರು

ದೊಡ್ಡಬಳ್ಳಾಪುರ: ನಗರದ ಕೊಂಗಾಡಿಯಪ್ಪ ಕಾಲೇಜು ರಸ್ತೆಯಲ್ಲಿ ಶನಿವಾರ ಲಾರಿ ಮತ್ತು ದ್ವಿಚಕ್ರ ವಾಹನ ನಡುವೆ ಸಂಭವಿಸಿದ ಅಪಘಾತದಲ್ಲಿ ಯುವತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಕರೇನಹಳ್ಳಿ ನಿವಾಸಿ ಆರ್.ನಂದಿನಿ (28) ಮೃತ ಯುವತಿ. ಬೈಕ್‌ನಲ್ಲಿದ್ದ ಇವರ ಅತ್ತೆ ಹಾಗೂ ಒಂದು ವರ್ಷದ ಮಗುವಿಗೆ ಸಣ್ಣಪುಟ್ಟ ಗಾಯವಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಡಿಕ್ಕಿಯ ರಭಸಕ್ಕೆ ನಂದಿನಿ ಅವರ ತಲೆಗೆ ಗಂಭೀರ ಪೆಟ್ಟಾಗಿ, ತೀವ್ರ ರಕ್ತಸ್ರಾವ ಆಗುತ್ತಿತು. ಈ ವೇಳೆ ಆಂಬುಲೆನ್ಸ್‌ಗೆ ಕರೆ ಮಾಡಲಾಯಿತು. ಸರ್ಕಾರಿ ಆಸ್ಪತ್ರೆಯಿಂದ ಕೇವಲ ಒಂದು ಕಿ.ಮೀ ಅಂತರದಲ್ಲಿ ನಡೆದ ಅಪಘಾತದ ಸ್ಥಳಕ್ಕೆ ಆಂಬುಲೆನ್ಸ್ 20 ನಿಮಿಷ ಕಳೆದರೂ ಬರಲಿಲ್ಲ. ಕೊನೆಗೆ ಆಟೊದಲ್ಲಿ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಲಾಯಿತು. ವೈದ್ಯರು ನಂದಿನಿ ಮೃತಪಟ್ಟಿರುವುದನ್ನು ದೃಢಪಡಿಸಿದರು.

ಹೆದ್ದಾರಿಯಲ್ಲಿ ಅಪಘಾತ: ಇಬ್ಬರು ಮಕ್ಕಳು ಸಾವು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಪಟ್ಟಣದ ಹೊರವಲಯದ ಐಶ್ವರ್ಯ ಕಾನ್ವೆಂಟ್ ಬಳಿ ಶನಿವಾರ ಸಂಜೆ ನಿಯಂತ್ರಣ ತಪ್ಪಿದ ಕ್ಯಾಂಟರ್ ಕಾರಿಗೆ ಡಿಕ್ಕಿಯಾದ ಪರಿಣಾಮ ಇಬ್ಬರು ಮಕ್ಕಳು ಸಾವಿಗೀಡಾದರು.

ಬೆಂಗಳೂರು ಮೂಲದ ರಘು ಎಂಬುವವರ ಮಗ ಸಾತ್ವಿಕ್ (9) ಹಾಗೂ ಅಕ್ಕನ ಮಗಳು ಸಮನ್ವಯ (9) ಮೃತರು.

ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ರಘು ಅವರು ಪ್ರಯಾಣಿಸು-ತ್ತಿದ್ದ ಕಾರಿಗೆ ಕ್ಯಾಂಟರ್ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ ಇನ್ನುಳಿದ ನಾಲ್ವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ.

ಈ ಸಂಬಂಧ ಮದ್ದೂರು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರೂಪದ ತಿಮಿಂಗಿಲದ ಮೃತದೇಹ ಪತ್ತೆ

ಕಾರವಾರ: ಹೊನ್ನಾವರ ತಾಲ್ಲೂಕಿನ ಮುಗಳಿ ಕಡಲಧಾಮ ದಲ್ಲಿ ಶನಿವಾರ ಅಳಿವಿನಂಚಿನಲ್ಲಿರುವ ಬೃಹತ್ ಗಾತ್ರದ ನೀಲಿ ತಿಮಿಂಗಿಲವೊಂದರ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ತಿಮಿಂಗಿಲವು ಸುಮಾರು 35 ಮೀ. ಉದ್ದವಿತ್ತು. ಅದರ ಮೃತದೇಹ ದೊರೆತ ಬಗ್ಗೆ ಸ್ಥಳೀಯ ಮೀನುಗಾರರ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು.

'ಬಲೀನ್ ತಳಿಗೆ ಸೇರಿದ ತಿಮಿಂಗಿಲ ಇದಾಗಿದ್ದು, ಮೃತಪಟ್ಟು ಹಲವು ದಿನ ಕಳೆದಿರುವ ಸಾಧ್ಯತೆ ಇದ್ದು, ಅಲೆಗಳ ರಭಸಕ್ಕೆ ಈಗ ದಡಕ್ಕೆ ಬಂದು ಬಿದ್ದಿದೆ. ಸಾವಿಗೆ ಕಾರಣ ಏನು ಎಂಬುದು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಸ್ಪಷ್ಟವಾಗಲಿದೆ' ಎಂದು ಕಾರವಾರದ ಕಡಲ ಜೀವಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಶಿವಕುಮಾರ ಹರಗಿ 'ಪ್ರಜಾವಾಣಿ'ಗೆ ತಿಳಿಸಿದರು.


ಬಲೀನ್ ತಿಮಿಂಗಿಲದ ಮೃತದೇಹ

'ಸಮುದ್ರದ ತಣ್ಣನೆಯ ಪ್ರದೇಶದಿಂದ ಉಷ್ಣ ಪ್ರದೇಶಕ್ಕೆ ಸಂತಾನೋತ್ಪತ್ತಿ ವೇಳೆ ಈ ತಿಮಿಂಗಿಲಗಳು ಬರುತ್ತವೆ. ನೇತ್ರಾಣಿ ದ್ವೀಪ, ಮುಗಳಿ ಕಡಲಧಾಮದ ಬಳಿ ವಲಸೆ ಬರುವುದು ಹೆಚ್ಚು. ಶಾರ್ಕ್ ಮೀನುಗಳ ದಾಳಿಯಿಂದ ಮೃತಪಟ್ಟಿರುವ ಸಾಧ್ಯತೆ ಇದೆ' ಎಂದು ಸಂಶೋಧಕ ಪ್ರಕಾಶ ಮೇಸ್ತ ಹೇಳಿದರು.

ನಗರದಲ್ಲಿ ಇಂದು

ಮನೆ ಮನೆಗೆ ಮಣ್ಣಿನ ಗಣಪ-2023: 'ಮಣ್ಣಿನ ಗಣಪ ಮಾಡುವ ಕಾರ್ಯಾಗಾರ': ಅತಿಥಿಗಳು: ಪಿ.ಸಿ. ಮೋಹನ್, ರಿಜ್ವಾನ್ ಅರ್ಷದ್, ಜಿ.ಸಿ. ಚಂದ್ರಶೇಖರ್, ರಾಜೀವ್ ಗೌಡ, ತುಷಾರ್ ಗಿರಿನಾಥ್, ರೇವತಿ ಅಶೋಕ, ಆಯೋಜನೆ: ಬಿ.ಪ್ಯಾಕ್, ಸ್ಥಳ: ಹಲಸೂರು ಕೆರೆ, ಶಿವಾಜಿನಗರ, ಬೆಳಿಗ್ಗೆ 9ರಿಂದ

ಉದ್ಯೋಗ ಮೇಳ: ಉದ್ಘಾಟನೆ: ರವಿಕಾಂತೇಗೌಡ, ಅತಿಥಿಗಳು: ಚಿದಾನಂದಗೌಡ, ಬಿ. ಕೆಂಚಪ್ಪಗೌಡ, ಸಿ.ಎನ್. ಬಾಲಕೃಷ್ಣ, ಅಧ್ಯಕ್ಷತೆ: ತಲಕಾಡು ಚಿಕ್ಕರಂಗೇಗೌಡ, ಆಯೋಜನೆ: ಗೌಡತಿಯರ ಸೇನೆ, ಗೌಡರ ಯುವಸೇನೆ, ಸ್ಥಳ: ಒಕ್ಕಲಿಗರ ಸಂಘದ ಪಿ.ಯು. ಕಾಲೇಜು, ಶ್ರೀಗಂಧದ ಕಾವಲ್, ಬೆಳಿಗ್ಗೆ 9

'ಸಾಧಕನಾರಿ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಪ್ರದೀಪ್ ಈಶ್ವರ್, ಅತಿಥಿಗಳು: ಕಲಾವತಿ ಮಧುಸೂದನ್, ಫಯಾಜ್ ಅಹ್ಮದ್ ಗುಡಿಬಂಡೆ, 'ಕಾವ್ಯದೀವಿಗೆ' ಕವನ ಸಂಕಲನ ಬಿಡುಗಡೆ: ವರುಣ್ ರಾಜ್. ಜಿ., ಧನುಷ್ ಎಚ್. ಶೇಖರ್, ಅಧ್ಯಕ್ಷತೆ: ವಡ್ಡಗೆರೆ ನಾಗರಾಜಯ್ಯ, ಆಯೋಜನೆ: ಕರುನಾಡು ಸಾಹಿತ್ಯ ಪರಿಷತ್ತು, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9ರಿಂದ

ಗೋಲ್ಡನ್ ಫಿಫ್ಟಿ ಸಮಾವೇಶ: ಅತಿಥಿಗಳು: ಸಿದ್ದರಾಮಯ್ಯ, ಯು.ಟಿ ಖಾದರ್, ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ್, ಜಮೀರ್ ಅಹಮದ್ ಖಾನ್, ಅಬೂಬಕರ್ ಅಹಮದ್, ಆಯೋಜನೆ: ಸುನ್ನಿ ಸ್ಟೂಡೆಂಟ್ಸ್ ಫೆಡರೇಷನ್ (ಎಸ್‌ಎಸ್‌ಎಫ್), ಸ್ಥಳ: ಶೃಂಗಾರ, ಗೇಟ್-8, ಅರಮನೆ ಮೈದಾನ, ಬೆಳಿಗ್ಗೆ 9

'ಸಹಕಾರ ರತ್ನ ಬಿ.ಎಲ್. ಲಕ್ಕೇಗೌಡ' ಪ್ರಶಸ್ತಿ ಪ್ರದಾನ: ಅತಿಥಿಗಳು: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಕಾಳೇಗೌಡ, ಸನ್ಮಾನಿತರು: ಜಯಮುದ್ದಪ್ಪ ಬಿ.ಟಿ. (ಸಹಕಾರ ಕ್ಷೇತ್ರ), ಕೆ.ಎಸ್. ರಂಗಪ್ಪ (ಶಿಕ್ಷಣ ಕ್ಷೇತ್ರ), ಕೆ.ಎಸ್. ನವೀನ್ (ಆಡಳಿತ ಕ್ಷೇತ್ರ), ಡಾ. ಜೆ.ಎನ್. ಶ್ರೀಧರಮೂರ್ತಿ (ವೈದ್ಯಕೀಯ ಕ್ಷೇತ್ರ), ಆಯೋಜನೆ: ದಿ ಭಾರತಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ, ಸ್ಥಳ: ಕೆ.ಆರ್. ಮರುದೇವಗೌಡ ರಂಗಮಂದಿರ, ಭಾರತ್ ವಿದ್ಯಾಸಂಸ್ಥೆಯ ಆವರಣ, ಜಯನಗರ, ಬೆಳಿಗ್ಗೆ 9.30


'ನಮ್ಮ ವಿದ್ಯಾರ್ಥಿಗಳನ್ನು ಉಳಿಸಿ' ಸಂವಾದ: ಭಾಸ್ಕರ್ ರಾವ್, ಅಮೃತ್ ಶೆಣೈ, ಉಶಿ ಮೋಹನದಾಸ್, ಬೃಂದಾ ಅಡಿಗೆ, ಯುಮುನಾ ಶ್ರೀನಿಧಿ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10

ಎ. ವೀರಭದ್ರಯ್ಯ ಅವರ ಜನ್ಮ ಶತಮಾನೋತ್ಸವ: ಗಾಯನ: ತಿರುಮಲೆ ಶ್ರೀನಿವಾಸ್, ಪಿಟೀಲು: ಆರ್. ರಘುರಾಮ್, ಮೃದಂಗ: ಎ.ವಿ. ಆನಂದ್, ಖಂಜರಿ: ಸುನಾದ್ ಆನೂರು, ಗಾಯನ: ಕಲಾವತಿ ಅವಧೂತ್, ಪಿಟೀಲು: ನಳಿನಾ ಮೋಹನ್, ಮೃದಂಗ: ಟಿ.ಎಸ್. ಚಂದ್ರಶೇಖರ್, ಘಟ: ಫಣೀಂದ್ರ, ಹಾರ್ಮೋನಿಯಂ: ಎ.ವಿ. ವಿಶ್ವನಾಥ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಆನೂರು ಅನಂತಕೃಷ್ಣಶರ್ಮಾ, ಖಂಜರಿ: ಗುರುಪ್ರಸನ್ನ, ಮೋರ್ಚಿಂಗ್: ಎನ್. ಕಾರ್ತಿಕ್ ಪ್ರಣವ್, ಸಮಾರೋಪ ಸಮಾರಂಭ: ಅತಿಥಿಗಳು: ಆರ್.ಕೆ. ಪದ್ಮನಾಭ, ಡಿ.ವಿ. ನಾಗರಾಜ್, ಅನನ್ಯ ರಾಘವೇಂದ್ರ, ಸನ್ಮಾನ: ಎಸ್. ಶೇಷಗಿರಿರಾವ್, ಸಿ. ನಟರಾಜನ್, ಸ್ಥಳ: ಜಯರಾಮಸೇವಾ ಮಂಡಳಿ, ಜಯನಗರ, ಬೆಳಿಗ್ಗೆ 10ರಿಂದ

ವಿಶ್ವ ಆತ್ಮಹತ್ಯೆ ತಡೆ ದಿನ: ಉದ್ಘಾಟನೆ: ಶ್ರೀನಿವಾಸ್ ಮೂರ್ತಿ, ಸ್ವಾಗತ ನುಡಿ: ನಳಿನಿ ನಂಜುಂಡಸ್ವಾಮಿ, ರೂಪಶ್ರೀ ವೆಂಕಟ್, ಅತಿಥಿಗಳು: ಕಲ್ಯಾಣಿ ತಾಲೂಕದರ್, ಡಾ. ಗೌರಿ ಆರ್.ಸಿ., ಡಾ. ಸುಶ್ಮಾ ಗೋಪಾಲನ್, ಶೋಭಾ, ಡಾ. ಸತೀಶ್ ರಾಮಯ್ಯ, ಆಯೋಜನೆ ರೋಟರಿ ಕ್ಲಬ್ ಆಫ್ ಬೆಂಗಳೂರು, ಸ್ಥಳ: ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, ಲ್ಯಾವೆಲ್ಲೆ ರಸ್ತೆ, ಬೆಳಿಗ್ಗೆ 10

ಬಾಬು ಕೃಷ್ಣಮೂರ್ತಿ ಅವರ 'ಮಿಲ್ಟ್ರೀ ತಾತ ಕಥೆ ಹೇಳ್ತಾರೆ' 'ಕಥಾಸರಿತ್ಸಾಗರ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಎಸ್.ಆರ್. ಲೀಲಾ, ಶ್ರೀಕಲಾ ಡಿ.ಎಸ್., ಆಯೋಜನೆ: ಅಯೋಧ್ಯಾ ಪಬ್ಲಿಕೇಷನ್ಸ್, ಸ್ಥಳ: ಅಕ್ಷರಮ್, ಗಿರಿನಗರ, ಬೆಳಿಗ್ಗೆ 10

ಅಭಿನಂದನಾ ಕಾರ್ಯಕ್ರಮ: ಅಭಿನಂದಿತರು: ಸಯ್ಯದ್ ನಾಸಿರ್ ಹುಸೇನ್, ಆಯೋಜನೆ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತ ವಿಭಾಗ, ಸ್ಥಳ: ಟೆನ್ನಿಸ್ ಪೆವಿಲಿಯನ್, ಮೌಂಟ್ ಕಾರ್ಮೆಲ್ ಕಾಲೇಜಿನ ಮುಂಭಾಗ, ವಸಂತನಗರ, ಬೆಳಿಗ್ಗೆ 10



ಭರತನಾಟ್ಯ ರಂಗ ಪ್ರವೇಶ: ಪ್ರಸ್ತುತಿ: ಮಾಧುರ್ಯ ಎಂ.ಎಸ್., ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮ, ಕೃಪಾ ಫಡ್ಕೆ, ಆಯೋಜನೆ: ನೃತ್ಯಲೀಲಾ ಸ್ಕೂಲ್ ಆಫ್ ಆರ್ಟ್ಸ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಬೆಳಿಗ್ಗೆ 10

ಮಾಧುರ್ಯ ಎಂ.ಎಸ್

'ಬದಲಾಗಲಿ ಭಾರತದ ಭಾಷಾನೀತಿ' ಚಿತ್ರ ಪ್ರದರ್ಶನ: ಆಯೋಜನೆ: ಬನವಾಸಿ ಬಳಗ, ಸ್ಥಳ: ಪಡಸಾಲೆ (ಆರ್ಟ್ ಗ್ಯಾಲರಿ), ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

'ಬೆಳ್ಳಿ ಹಬ್ಬದ ಸಂಭ್ರಮ': ಉದ್ಘಾಟನೆ: ಯು.ಟಿ. ಖಾದರ್, ಉಪಸ್ಥಿತಿ: ರವೀಂದ್ರ ಭಟ್ಟ, ಪೃಥ್ವಿರಾಜ ಕವತ್ತಾರು, ಉಪೇಂದ್ರ ಶೆಟ್ಟಿ, ಎ. ನಾರಾಯಣ, ಆನಂದರಾಮ ಉಪಾಧ್ಯ, ಅನಸೂಯಾ ದೇವಿ, ಕೆ. ಗೌರಿ, ನವೀನ್ ಅಮ್ಮೆಂಬಳ, 'ಪಂಚವಟಿ' ಯಕ್ಷಗಾನ ಪ್ರದರ್ಶನ, ಮರು ನಿರ್ದೇಶನ: ಸುಧೀರ್ ರಾವ್ ಕೊಡವೂರು, ಪ್ರಸ್ತುತಿ: ಕರ್ನಾಟಕ ಮಹಿಳಾ ಯಕ್ಷಗಾನ, 'ಕಂಸ ವಧೆ' ಆಂಗ್ಲ ಭಾಷೆಯಲ್ಲಿ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ಸುಬ್ರಹ್ಮಣ್ಯ ನಾವುಡ, ವಿಶ್ವನಾಥ ಶೆಟ್ಟಿ ಉಳ್ತೂರು, ಆಯೋಜನೆ: ಕರ್ನಾಟಕ ಮಹಿಳಾ ಯಕ್ಷಗಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

'ಮಲೆನಾಡು' ಉತ್ಸವ: ಸಾನ್ನಿಧ್ಯ: ಸ್ವಾಮಿ ತದ್ಯುಕ್ತಾನಂದ ಸ್ವಾಮೀಜಿ, ಉತ್ಸವದ ಅಧ್ಯಕ್ಷತೆ: ಚಂದ್ರಶೇಖರ ತುಂಬರಮನೆ, ಅಧ್ಯಕ್ಷತೆ: ಯಲ್ಲಪ್ಪ ರೆಡ್ಡಿ, 'ವನ್ಯಶಾಸ್ತ್ರ ಸಂಹಿತಾ (ಆಂಗ್ಲ ಭಾಷೆ)', 'ಜ್ಯೋತಿರ್ವಿಜ್ಞಾನ ದೀಪಿಕಾ' ಪುಸ್ತಕಗಳ ಬಿಡುಗಡೆ: ಬಿ.ಎಲ್. ಶಂಕರ್, ಉದ್ಘಾಟನೆ: ಕೆ.ಎ. ದಯಾನಂದ, ವಿವಿಧ ದತ್ತಿ ಪ್ರಶಸ್ತಿ ಪುರಸ್ಕೃತರು: ಶ್ರೀನಿವಾಸಮೂರ್ತಿ, ಅಚ್ಚುತಗೌಡ, ನಾಗೇಂದ್ರಭಟ್, ನಂಜುಂಡಸ್ವಾಮಿ, ದೇವಪ್ಪ, ರವಿ ರೈ, 'ಯಂಗ್ ಅಚೀವರ್ಸ್ ಆಫ್ ಮಲ್ನಾಡು ಪ್ರಶಸ್ತಿ ಪುರಸ್ಕೃತರು: ಶಂಕರಮೂರ್ತಿ, ಎಚ್.ಎಸ್. ಶಿವಪ್ರಸಾದ್ ಜಿಗಳೇಬೈಲು, ವಿನಾಯಕರಾಂ ಕಲಗಾರು, ನವನ್ ಶ್ರೀನಿವಾಸ್, ಪ್ರಣಿತಾಗೌಡ, ಎ.ಎಸ್. ಅರುಣಕುಮಾರ್, ಆಯೋಜನೆ: ಭಾರತೀತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರ ಟ್ರಸ್ಟ್, ಕೃಷಿ ಭಾರತ್ ಫೌಂಡೇಷನ್, ಇಂಡಸ್ ಹರ್ಬ್ಸ್, ಸ್ಥಳ: ಎಚ್.ಎನ್. ಕಲಾಕ್ಷೇತ್ರ, ಜಯನಗರ, ಬೆಳಿಗ್ಗೆ 10.30ರಿಂದ

'ಮಾಮ್ ಇನ್‌ಸ್ಪೈರ್' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಯು.ಟಿ. ಖಾದರ್, ಅತಿಥಿಗಳು: ರವಿ ಹೆಗಡೆ, ಆರ್. ಉಪೇಂದ್ರ ಶೆಟ್ಟಿ, ಪ್ರತಿಭಾ ಪಾರ್ಶ್ವನಾಥ್, ಶ್ರೀನಿವಾಸ ಸಾಸ್ತಾನ, ವೇಣು ಶರ್ಮ, ಅಧ್ಯಕ್ಷತೆ: ನವೀನ್ ಅಮ್ಮೆಂಬಳ, ಆಯೋಜನೆ: ಮೀಡಿಯಾ ಅಲುಮ್ನಿ ಅಸೋಸಿಯೇಷನ್ ಆಫ್ ಮಂಗಳಗಂಗೋತ್ರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಮಹಿಳಾ ಕಟ್ಟಡ ನಿರ್ಮಾಣ ಕಾರ್ಮಿಕರ ಪ್ರಥಮ ರಾಜ್ಯಮಟ್ಟದ ಸಮಾವೇಶ: ಉದ್ಘಾಟನೆ: ಭಾರತಿ ಡಿ., ಅತಿಥಿಗಳು: ಎಂ.ಎಸ್. ಆಶಾದೇವಿ, ಜಿ. ಮಂಜುನಾಥ್, ಅಧ್ಯಕ್ಷತೆ: ಬಾಲಕೃಷ್ಣ ಶೆಟ್ಟಿ, ಪ್ರಸ್ತಾವನೆ ನುಡಿ: ಮಹಾಂತೇಶ್ ಕೆ., ಉಪಸ್ಥಿತಿ: ಬಿ. ಉಮೇಶ್, ಕೆ.ಎಸ್. ಲಕ್ಷ್ಮಿ, ಆಶಾ, ಜ್ಯೋತಿ ನಾರ್ವೇಕರ್, ಸ್ಥಳ: ಗಾಂಧಿ ಭವನ, ಶಿವಾನಂದ್ ವೃತ್ತದ ಹತ್ತಿರ, ಬೆಳಿಗ್ಗೆ 10.30


ಆಶಾದೇವಿ


ರೂಪ ಹಾಸನ ಅವರ ಕೃತಿ 'ಮಹಾಸಂಗ್ರಾಮಿ'(ಎಸ್.ಆರ್. ಹಿರೇಮಠ ಅವರ ರಚನಾತ್ಮಕ ಪ್ರಯೋಗಗಳ ಬಾಳ್ಕಥನ) ಬಿಡುಗಡೆ: ಅತಿಥಿಗಳು: ಚಿರಂಜೀವಿ ಸಿಂಘ್, ನಟರಾಜ್ ಹುಳಿಯಾರ್, ಸುಗತ ಶ್ರೀನಿವಾಸ್ ರಾಜು, ಪಿ. ಭಾರತೀದೇವಿ, ಉಪಸ್ಥಿತಿ: ಎಸ್.ಆರ್. ಹಿರೇಮಠ, ರೂಪ ಹಾಸನ, ಅಭಿರುಚಿ ಗಣೇಶ್, ಆಯೋಜನೆ: ಅಭಿರುಚಿ ಪ್ರಕಾಶನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ, ಬೆಳಿಗ್ಗೆ 10.30


ಎಸ್.ಆರ್. ಹಿರೇಮಠ

ರಂಗ ಪ್ರವೇಶ: ಪ್ರಸ್ತುತಿ: ಸೋನಿಯಾ ಪೊದುವಾಳ್ ಮತ್ತು ಶಿಷ್ಯರಿಂದ, ಅತಿಥಿ: ಎಂ.ಎಸ್. ಸನತ್ ಕುಮಾರ್ ಸೋಮಯಾಜಿ, ಆಯೋಜನೆ: ಕಲಾಗ್ರಣಿ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಸಂಸ್ಥಾಪಕರ ದಿನಾಚರಣೆ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಪ್ರಾಸ್ತಾವಿಕ ನುಡಿ: ಅರವಿಂದ ಜತ್ತಿ, ಅತಿಥಿ: ವಾಟಾಳ್ ನಾಗರಾಜ್, ಜ್ಯೋತಿ ವೆಂಕಟೇಶ್ ಮತ್ತು ಶಕುಂತಲಾ ಕುಂದೂರ್ ಅವರ 'ವಚನ-ಫ್ರೆಂಚ್', ಎನ್. ಜಿ. ಮಹಾದೇವಪ್ಪ ಅವರ 'ವಚನ ಪರಿಭಾಷಾಕೋಶ' ಮಲ್ಲಿಕಾರ್ಜುನ್ ಪಾಟೀಲ ಅವರ 'ಅಲ್ಲಮ ಪ್ರಭು-ದಿ ಗ್ಲೋರಿ ಆಫ್ ಅವರ್ ರೇಸ್' ಪುಸ್ತಕಗಳ ಬಿಡುಗಡೆ, ಗೌರವ ಸನ್ಮಾನ: ಆರ್. ನರಸಿಂಹ ಸ್ವಾಮಿ, ವಿಜಯ ನಂದೀಶ್ವರ್, ಲೀನಾ ಕಲಬುರ್ಗಿ, ಸಿದ್ಧಗಂಗಮ್ಮ ಸಿದ್ಧರಾಮಣ್ಣ, ಆಯೋಜನೆ: ಬಸವ ಸಮಿತಿ, ಸ್ಥಳ: ಅನುಭವ ಮಂಟಪ, ಬಸವ ಸಮಿತಿ, ಬೆಳಿಗ್ಗೆ 10.30

'ಹಾರನಹಳ್ಳಿ ರಾಮಸ್ವಾಮಿ' ಸ್ಮಾರಕ ದತ್ತಿ ಉಪನ್ಯಾಸ: ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, ಪ್ರಾಸ್ತಾವಿಕ ನುಡಿ: ಅಶೋಕ ಹಾರನಹಳ್ಳಿ, ಅಧ್ಯಕ್ಷತೆ: ಯು.ಬಿ. ವೆಂಕಟೇಶ್, ಉಪನ್ಯಾಸ: ಗುರುರಾಜ ಕರಜಗಿ, ಅತಿಥಿಗಳು: ಎಚ್.ಕೆ. ಪಾಟೀಲ, ಪಿ.ಜಿ. ಆರ್. ಸಿಂಧ್ಯ, ವೂಡೇ ಪಿ. ಕೃಷ್ಣ, ಎಚ್.ಎನ್. ಸುರೇಶ್, ಆಯೋಜನೆ: ಭಾರತೀಯ ವಿದ್ಯಾಭವನ, ಲೋಕ ಶಿಕ್ಷಣ ಟ್ರಸ್ಟ್, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30


ಗುರುರಾಜ ಕರಜಗಿ

ಪ್ರಾಜೆಕ್ಟ್ 'ಮಧುನೇತ್ರಿ': ಉದ್ಘಾಟನೆ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಅತಿಥಿಗಳು: ಡಾ. ಎನ್.ಎಸ್. ಮುರಳೀಧರ್, ಡಾ. ಹೇಮಂತ್ ಮೂರ್ತಿ, ಸುರೇಶ್ ರಾಮು, ಕೆ. ಅಮರನಾರಾಯಣ್, ಟಿ.ಜೆ. ರಾಮಮೂರ್ತಿ, ಡಾ. ಸಹನ ಜಿ.ವಿ., ಆಯೋಜನೆ: ಪಾರ್ವತಿ ನೇತ್ರಾಲಯ, ಸ್ಥಳ: ಡಾ. ಬಸವರಾಜೇಂದ್ರ ಸಭಾಂಗಣ, ಬೆಂಗಳೂರು ವೈದ್ಯಕೀಯ ಕಾಲೇಜು, ಬೆಳಿಗ್ಗೆ 10.30

'ಆನಂದ ಕುಮಾರಸ್ವಾಮಿ ಅವರ ಜೀವನ ಮತ್ತು ಕೃತಿ' ಎರಡು ದಿನಗಳ ಸಮ್ಮೇಳನ: ಅತಿಥಿಗಳು: ದೀಪಕ್ ಕನ್ನಲ್, ಮಲ್ಲಿಕಾ ರಾಜರತ್ನ, ಆಯೋಜನೆ: ಐಜಿಎನ್‌ಸಿಎ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11


ವಚನ ಶ್ರಾವಣ: ವಚನ ಗಾಯನ: ಡಿ. ಕುಮಾರದಾಸ, ದೇವೇಂದ್ರಕುಮಾರ ಪತ್ತಾರ್, ವಚನ ಚಿಂತನ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಶೀಲಾ ಬಲವಂತರಾವ್ ಪಾಟೀಲರ ಮನೆ, ವಿನಾಯಕ ಬಡಾವಣೆ, ಶೆಟ್ಟಿಹಳ್ಳಿ ವಾರ್ಡ್, ಬೆಳಿಗ್ಗೆ 11

ಪದಾಧಿಕಾರಿಗಳ ಪದಗ್ರಹಣ, ರಕ್ತದಾನ, ನೇತ್ರದಾನ, ಆರೋಗ್ಯ ತಪಾಸಣೆ: ಅಧ್ಯಕ್ಷತೆ: ಕೆ.ಎಂ. ಪಾಲಾಕ್ಷ, ಉಪಸ್ಥಿತಿ: ಅಬ್ದುಲ್ ರೌಫ್, ವಾಣಿ ಎನ್. ಶೆಟ್ಟಿ, ನಾಗೇಶ್ ಎನ್., ಎಂ.ಆರ್. ಕೃಷ್ಣಪ್ಪ, ಎಚ್.ಎ. ಈಶ್ವರ್, ಭರತ್ ಜೆ., ಆಯೋಜನೆ: ಜನತಾ ಪಕ್ಷ, ಸ್ಥಳ: ಜನತಾ ಪಕ್ಷ ರಾಜ್ಯ ಕಚೇರಿ, ಶೇಷಾದ್ರಿಪುರ ರಸ್ತೆ, ಬೆಳಿಗ್ಗೆ 11.30

ಕನ್ನಡ ನಿತ್ಯೋತ್ಸವ-2023, ಪ್ರತಿಭಾ ಪ್ರದರ್ಶನ: ಉದ್ಘಾಟನೆ: ಅನಿಲ್ ಕುಮಾರ್ ಜೆ.ಎಚ್., ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಅತಿಥಿಗಳು: ಎಂ. ನರಸಿಂಹ, ಪಿ. ಶಿವಶಂಕರ್, ಪಿ.ಎನ್. ಜಯರಾಮ್, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬಿ.ಕೆ. ಚಂದ್ರಶೇಖರ್, ಉಪಸ್ಥಿತಿ: ಬೈರಮಂಗ ರಾಮೇಗೌಡ, ಪ್ರಶಸ್ತಿ ಪ್ರದಾನ: ಎಲ್.ಎ. ರವಿ ಸುಬ್ರಮಣ್ಯ, ಪುರಸ್ಕೃತರು: ಮಹಿಪಾಲ್ ರೆಡ್ಡಿ, ಶಶಿಕಲಾ ಸುನಿಲ್, ಬೆಳ್ಳಿಚುಕ್ಕಿ ವೀರೇಂದ್ರ, ಪಿ. ನಾಗರಾಜ್, ಜಾವಗಲ್ ಪ್ರಸನ್ನ, ಆಯೋಜನೆ: ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಉದಯಭಾನು ಕಲಾಸಂಘ, ಗವಿಪುರ, ಗುಟ್ಟಹಳ್ಳಿ, ಮಧ್ಯಾಹ್ನ 2ರಿಂದ

ಎನ್.ಜೆ. ತಪಸಿದೇವಿ ಅವರ 'ರಂಜನಿ', 'ತಪ್ಪು ಹೆಜ್ಜೆಗಳು', 'ಮೊರೆ ಮತ್ತು ಮುಗ್ಧ' ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಕೆ.ಆರ್. ಸಂಧ್ಯಾರೆಡ್ಡಿ, ಅತಿಥಿಗಳು: ಎಲ್.ಜಿ. ಮೀರಾ, ರಘುರಾಂ, ಉಪಸ್ಥಿತಿ: ಎನ್.ಜೆ. ತಪಸಿದೇವಿ, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಮಹಿಳಾ ಸಹಕಾರ ಪ್ರಕಾಶನ, ಸ್ಥಳ: ಅಖಿಲ ಭಾರತ ವೀರಶೈವ ಮಹಾಸಭಾ, ರಮಣ ಮಹರ್ಷಿ ರಸ್ತೆ, ಸಂಜೆ 4

ಮೇರಿ ಜೋಸೆಫ್ ಅನುವಾದಿಸಿರುವ 'ಗಿಳಿಯು ಬಾರದೇ ಇರದು' ಪುಸ್ತಕ ಬಿಡುಗಡೆ: ಚಂದ್ರಶೇಖರ ಕಂಬಾರ, ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಪಿ.ಎಸ್. ಶ್ರೀಧರನ್ ಪಿಳ್ಳ, ಸುದರ್ಶನ ಚನ್ನಂಗಿಹಳ್ಳಿ, ಪುಸ್ತಕದ ಕುರಿತು: ಶೋಭಾ ರಾವ್, ಪ್ರಾಸ್ತಾವಿಕ ನುಡಿ: ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ, ಸ್ಥಳ: ಡಾ. ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10


ಚಂದ್ರಶೇಖರ ಕಂಬಾರ

'ಗೂಂಜ್' ಕಥಕ್ ನೃತ್ಯ ಪ್ರದರ್ಶನ: ಅತಿಥಿಗಳು: ನಾಗಲಿಂಗಣ್ಣಗೌಡ ಪಾಟೀಲ, ಕೆ. ಅಯ್ಯನರ್, ವಿಶ್ವನಾಥ ಪಿ. ಹಿರೇಮಠ, ಮೈಸೂರು ಬಿ. ನಾಗರಾಜ್, ರೇವತಿ ಕಮತ್, ಮಾಳ್ವಿಕಾ ಅವಿನಾಶ್, ಜ್ಯೋತಿ ರಘುರಾಮ್, ಆಯೋಜನೆ ಮತ್ತು ಸ್ಥಳ: ಮಾನಸ ಜೋಶಿ ಆರ್ಟ್ಸ್ ಫೌಂಡೇಷನ್, ಶಾಲೆಯ ಸಭಾಂಗಣ, ಬನಶಂಕರಿ 2ನೇ ಹಂತ, ಸಂಜೆ 5

ಆನಂದ ಕೆ. ಕುಮಾರಸ್ವಾಮಿ ಅವರ ಸಂಸ್ಮರಣೆ: 'ಕಲೆ, ಸಮಾಜ, ಅಧ್ಯಾತ್ಮ' ಸಂವಾದ: ಶಶಾಂಕ ಪರಾಶರ, ಸಾಯಿ ಗಣೇಶ್, ಚೈತನ್ಯ ಮಜಲುಕೋಡಿ, ಎಸ್. ಸೂರ್ಯಪ್ರಕಾಶ ಪಂಡಿತ್, ಗುರುವಂದನೆ: ಹಿತ್ಲಳ್ಳಿ ಸೂರ್ಯನಾರಾಯಣ ಭಟ್ಟ, ಆಯೋಜನೆ: ಅಭಿಜ್ಞಾನ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್‌ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.45

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರೀಲಕ್ಷ್ಮಿ ಎನ್., ಉಪಸ್ಥಿತಿ: ಸುನಂದಾ ದೇವಿ, ಮಂಜುಳಾ ಪರಮೇಶ್, ಆಯೋಜನೆ: ಭರತಾಂಜಲಿ ನಾಟ್ಯಶಾಲೆ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬಸವನಗುಡಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ: nagaradalli_indu@prajavani.co.in

ಪ್ರಸ್ತುತ ವರ್ಷ ಯೋಜನೆಗೆ ₹300 ಕೋಟಿ ವೆಚ್ಚ; ಎಂಜಿನಿಯರ್‌ಗಳಿಂದ ಕೆಲವು ಯೋಜನೆಯಲ್ಲಿ ವಿಳಂಬ

ಬಿಡಿಎ: 3 ವರ್ಷದಲ್ಲಿ 6 ಸಾವಿರ ಫ್ಲ್ಯಾಟ್

• ಆರ್. ಮಂಜುನಾಥ್



ಕೋಣದಾಸನಪುರದಲ್ಲಿ ನಿರ್ಮಾಣ ಹಂತದಲ್ಲಿರುವ ಬಿಡಿಎ 2–3 ಬಿಎಚ್‌ಕೆ ಫ್ಲ್ಯಾಟ್

ಬೆಂಗಳೂರು: ವಸತಿ ಆಕಾಂಕ್ಷಿಗಳಿಗೆ ಹೆಚ್ಚಿನ ಅವಕಾಶ ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮುಂದಾಗಿದೆ. ಮೂರು ವರ್ಷಗಳಲ್ಲಿ ಸುಮಾರು ಆರು ಸಾವಿರ ಫ್ಲ್ಯಾಟ್‌ಗಳನ್ನು ನೀಡುವ ಯೋಜನೆ ಕಾರ್ಯಗತವಾಗುವ ಹಂತದಲ್ಲಿವೆ.

ಬಿಡಿಎ ವಸತಿ ಯೋಜನೆಗೆ ಹೆಚ್ಚಿನ ಪ್ರಾಮುಖ್ಯ ನೀಡಿದ್ದು, ಇವುಗಳ ಆರಂಭಕ್ಕೆ ಈ ವರ್ಷದ ಬಜೆಟ್‌ನಲ್ಲಿ ₹298 ಕೋಟಿಗಳನ್ನು ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಒಟ್ಟಾರೆ ₹1,500 ಕೋಟಿ ವೆಚ್ಚದ ಅಂದಾಜು ಮಾಡಲಾಗಿದೆ. ಇದರಲ್ಲಿ ಹಲವು ಯೋಜನೆಗಳು ಪ್ರಾರಂಭವಾಗಿದ್ದರೆ, ಕೆಲವು ಯೋಜನೆಗಳ ಪ್ರಕ್ರಿಯೆಗಳು ನಿರೀಕ್ಷಿತ ಮಟ್ಟದಲ್ಲಿ ನಡೆಯುತ್ತಿಲ್ಲ. ಸರ್ವ ಯೋಜನೆಗಳ ಉಸ್ತುವಾರಿ ಹೊಂದಿರುವ ಅಧಿಕಾರಿಗಳ ಮೇಜಿನ ಮೇಲೇ ಕಡತ ವಿಲೇವಾರಿಗೆ ಬಾಕಿ ಇದೆ.

ಕೋಣದಾಸನಪುರ, ಕೊಮ್ಮಘಟ್ಟ, ಕಣಿಮಿಣಿಕೆ, ದೊಡ್ಡತೋಗೂರು, ಕುದುರೆಗೆರೆ ಸೇರಿದಂತೆ ಒಟ್ಟು 11 ವಸತಿ ಯೋಜನೆಗಳಲ್ಲಿ ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗುತ್ತಿದೆ. ವಸತಿ ಯೋಜನೆಗಳನ್ನು ಯೋಜನೆ–1 ಮತ್ತು ಯೋಜನೆ–2 ಎಂದು ವಿಂಗಡಿಸಲಾಗಿದೆ. ಯೋಜನೆ–1ರಲ್ಲಿ ಕೆಲವು ಯೋಜನೆಗಳು ಪ್ರಗತಿ ಕ್ಷಿಪ್ರವಾಗಿದ್ದು, ಇನ್ನುಳಿದವು ಟೆಂಡರ್ ಸಿದ್ಧಪಡಿಸುವ ಹಂತದಲ್ಲೇ ಹೆಚ್ಚು ಸಮಯ ವ್ಯರ್ಥ ಮಾಡಲಾಗುತ್ತಿದೆ.

ಯೋಜನೆ–2ರಲ್ಲಿ ಬೃಹತ್ ಯೋಜನೆಯೊಂದು ಮಾತ್ರ ಇದೆ. ಕೋಣದಾಸನಪುರದಲ್ಲಿ ಸುಮಾರು 2 ಸಾವಿರ ಫ್ಲ್ಯಾಟ್‌ಗಳನ್ನು ನಿರ್ಮಿಸುವ ಯೋಜನೆ ಇದಾಗಿದ್ದು, ₹200 ಕೋಟಿ ಈ ಬಜೆಟ್‌ನಲ್ಲಿ ಮೀಸಲಿಡಲಾಗಿದೆ. ಆದರೆ, ಎಂಜಿನಿಯರ್‌ಗಳ ಸೋಮಾರಿತನದಿಂದ ಯೋಜನೆ ಆಮೆಗತಿಯಲ್ಲಿದೆ. ಟೆಂಡರ್ ಮುಗಿದ ಮೇಲೆ 30 ತಿಂಗಳಲ್ಲಿ ಯೋಜನೆ ಪೂರ್ಣಗೊಳ್ಳಬೇಕಿದೆ. ಹೀಗಾಗಿ, ಬಿಡಿಎ ಹಿರಿಯ ಅಧಿಕಾರಿಗಳು ಯೋಜನೆಯನ್ನು ಬೇಗ ಆರಂಭಿಸಲು ಸೂಚಿಸಿದ್ದಾರೆ. ಯೋಜನೆ ಉಸ್ತುವಾರಿಯಿಂದ ಅನುಷ್ಠಾನಗೊಳಿಸುವವರೆಗಿನ ಎಂಜಿನಿಯರ್‌ಗಳಿಂದ ಯೋಜನೆ ವಿಳಂಬವಾಗುತ್ತಿದೆ ಎಂಬ ದೂರು ಬಿಡಿಎ ಅಧಿಕಾರಿಗಳಿಂದಲೇ ವ್ಯಕ್ತವಾಗಿದೆ.

ಈ ಬಗ್ಗೆ ಪ್ರತಿಕ್ರಿಯೆಗೆ ಬಿಡಿಎ ಆಯುಕ್ತ ಕುಮಾರ್ ನಾಯಕ್, ಎಂಜಿನಿಯರ್ ಸದಸ್ಯ ಶಾಂತ ರಾಜಣ್ಣ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

₹820 ಕೋಟಿ: ಕಣಿಮಿಣಿಕೆ 1 ಮತ್ತು 2ನೇ ಯೋಜನೆಯಲ್ಲಿ ಸುಮಾರು ಒಂದು ಸಾವಿರ ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಈ ಯೋಜನೆಗೆ ಮರು ಟೆಂಡರ್ ಕರೆಯಲಾಗಿದೆ. ಕೋಣದಾಸನಪುರ–3, ವಲಗೇರಹಳ್ಳಿ, ದೊಡ್ಡತೋಗೂರು, ಕುದುರೆಗೆರೆ ಯೋಜನೆಗಳನ್ನು ₹820 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸೊನ್ನೇನಹಳ್ಳಿ ಯೋಜನೆ ಒಂದಷ್ಟು ಕೋಟಿ ವೆಚ್ಚವಾಗಿದ್ದು, ಭೂವ್ಯಾಜ್ಯದಿಂದ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ. ಹೆಚ್ಚಿನ ಫ್ಲ್ಯಾಟ್‌ಗಳನ್ನು ಒದಗಿಸಬೇಕಾದ ವಸತಿ ಯೋಜನೆ–2ರಲ್ಲಿ ಎಂಜಿನಿಯರ್‌ಗಳು ಆಲಸ್ಯದಿಂದಿದ್ದಾರೆ. ಉಸ್ತುವಾರಿ ಎಂಜಿನಿಯರ್‌ಗಳಿಂದ ಹಿಡಿದು ಅನುಷ್ಠಾನದವರೆಗಿನ ಎಂಜಿನಿಯರ್‌ಗಳನ್ನು ಏನೇ ಕೇಳಿದರೂ 'ಮಾಹಿತಿ ಇಲ್ಲ' ಎಂದೇ ಹೇಳುತ್ತಾರೆ.

₹298.97 ಕೋಟಿ ವಸತಿ ಯೋಜನೆಗಳಿಗೆ 2023–24ರಲ್ಲಿ ವೆಚ್ಚ

₹91.25 ಕೋಟಿ ವಸತಿ ಯೋಜನೆ–1

₹207.72 ಕೋಟಿ ವಸತಿ ಯೋಜನೆ–2

ಎಲ್ಲೆಲ್ಲಿ ವಸತಿ ಯೋಜನೆ?

ಯೋಜನೆ	ಫ್ಲ್ಯಾಟ್‌ಗಳು	ವೆಚ್ಚ (2023-24ರಲ್ಲಿ)
ಹುಣ್ಣಿಗೆರೆ ವಿಲ್ಲಾ	322	₹15.50 ಕೋಟಿ
ಕೋಣದಾಸನಪುರ ಹಂತ–3	500	₹8 ಕೋಟಿ
ವಲಗೇರಹಳ್ಳಿ ಹಂತ–7	200	₹6 ಕೋಟಿ
ದೊಡ್ಡತೋಗೂರು	500	₹10 ಕೋಟಿ
ಕುದುರೆಗೆರೆ	500	₹25 ಕೋಟಿ
ಕಣಿಮಿಣಿಕೆ–1 ಬಿಎಚ್‌ಕೆ	608	₹6 ಕೋಟಿ
ಕಣಿಮಿಣಿಕೆ–2 ಬಿಎಚ್‌ಕೆ	384	₹8 ಕೋಟಿ
ಸೊನ್ನೇನಹಳ್ಳಿ	210	₹5 ಕೋಟಿ
ಕೋಣದಾಸನಪುರ ವಸತಿ ಗೃಹಗಳ ಹಂತ–1	1,900	₹200 ಕೋಟಿ
ಕೊಮ್ಮಘಟ್ಟ ಎನ್‌ಪಿಕೆಎಲ್ ಹಂತ–1	600	₹3.48 ಕೋಟಿ
ಕೊಮ್ಮಘಟ್ಟ ಎನ್‌ಪಿಕೆಎಲ್ ಹಂತ–2	600	₹4.24 ಕೋಟಿ

ಹುಣ್ಣಿಗೆರೆ ವಿಲ್ಲಾ ಪೂರ್ಣ

ಬಿಡಿಎ ಹುಣ್ಣಿಗೆರೆಯಲ್ಲಿ 322 ವಿಲ್ಲಾಗಳನ್ನು ನಿರ್ಮಿಸಿದೆ. ಈ ಯೋಜನೆ ಬಹುತೇಕ ಪೂರ್ಣಗೊಂಡಿದ್ದು, ದರ ನಿಗದಿ ಮಾರಾಟಕ್ಕೆ ಆದೇಶ ಹೊರಬರಬೇಕಿದೆ. ಆನ್‌ಲೈನ್‌ನಲ್ಲಿ 'ಮೊದಲು ಬಂದವರಿಗೆ ಆದ್ಯತೆ' ಯೋಜನೆಯಡಿ ಈ ವಿಲ್ಲಾಗಳನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು. 'ಪುನೀತ್ ರಾಜ್‌ಕುಮಾರ್ ವಸತಿ ಸಂಕೀರ್ಣ' ಎಂದು ಈ ಯೋಜನೆಗೆ ಹೆಸರಿಡಲಾಗಿದೆ.

ವಸತಿ ಯೋಜನೆಗಳ ಜೊತೆಗೆ ಕೋಣದಾಸನಪುರ 3ನೇ ಹಂತದಲ್ಲಿ ವಾಣಿಜ್ಯ ಸಂಕೀರ್ಣ ₹50 ಕೋಟಿ ವೆಚ್ಚದಲ್ಲಿ ನಿರ್ಮಾಣ ಆರಂಭಿಸಲಾಗಿದೆ. ಈ ವರ್ಷ ₹5 ಕೋಟಿ ವೆಚ್ಚ ಮಾಡಲಾಗುತ್ತಿದೆ, ಇದಲ್ಲದೆ, ಕಣಿಮಿಣಿಕೆಯಲ್ಲಿ ಕ್ಲಬ್ ಹೌಸ್ ಅನ್ನು ಬಿಡಿಎ ನಿರ್ಮಾಣ ಮಾಡುತ್ತಿದೆ.

3ಂಗಳಲ್ಲಿ 3 ಸಾವಿರಕ್ಕೂ ಅಧಿಕ ಡೆಂಗಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, ಒಂದು ತಿಂಗಳಲ್ಲಿ 3,110 ಪ್ರಕರಣಗಳು ದೃಢಪಟ್ಟಿವೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ಈ ವರ್ಷ ಈ ಜ್ವರದಿಂದ ಬಳಲಿದವರ ಒಟ್ಟು ಸಂಖ್ಯೆ 8,563ಕ್ಕೆ ತಲುಪಿದೆ. ಮೊದಲ ಆರು ತಿಂಗಳಲ್ಲಿ 2 ಸಾವಿರ ಪ್ರಕರಣ ದೃಢಪಟ್ಟರೆ, ಮುಂದಿನ ಮೂರು ತಿಂಗಳಲ್ಲಿ 6 ಸಾವಿರಕ್ಕೂ ಅಧಿಕ ಪ್ರಕರಣಗಳು ಖಚಿತಪಟ್ಟಿವೆ. 90 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಈಗಾಗಲೇ ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 50 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣ ವರದಿಯಾಗಿವೆ.

ಕಳೆದ ವರ್ಷ ರಾಜ್ಯದಲ್ಲಿ 9,620 ಮಂದಿ ಡೆಂಗಿ ಜ್ವರದಿಂದ ಬಳಲಿದ್ದರು. ಅವರಲ್ಲಿ ಒಂಬತ್ತು ಮಂದಿ ಜ್ವರದ ತೀವ್ರತೆಗೆ ಮೃತಪಟ್ಟಿರುವುದು ದೃಢಪಟ್ಟಿತ್ತು. ಈ ವರ್ಷ ಮರಣ ವರದಿಯಾಗಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅಧಿಕ: ರಾಜ್ಯದಲ್ಲಿ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳಲ್ಲಿ ಅರ್ಧಕ್ಕೂ ಅಧಿಕ ಪ್ರಕರಣಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿಯೇ ದೃಢಪಟ್ಟಿವೆ. 9,788 ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದ್ದು, 4,979 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಕಳೆದ ಒಂದು ತಿಂಗಳ ಅವಧಿಯಲ್ಲಿ 2,010 ಪ್ರಕರಣಗಳು ಖಚಿತಪಟ್ಟಿವೆ.

ಮೈಸೂರಿನಲ್ಲಿ 430, ಉಡುಪಿಯಲ್ಲಿ 346, ಶಿವಮೊಗ್ಗದಲ್ಲಿ 198, ದಕ್ಷಿಣ ಕನ್ನಡದಲ್ಲಿ 178, ಕಲಬುರಗಿಯಲ್ಲಿ 176, ವಿಜಯಪುರದಲ್ಲಿ 170, ಚಿತ್ರದುರ್ಗದಲ್ಲಿ 158, ಬೆಳಗಾವಿಯಲ್ಲಿ 149, ಹಾಸನದಲ್ಲಿ 139, ದಾವಣಗೆರೆಯಲ್ಲಿ 134, ಚಿಕ್ಕಮಗಳೂರಿನಲ್ಲಿ 128, ತುಮಕೂರಿನಲ್ಲಿ 122, ಧಾರವಾಡದಲ್ಲಿ 115, ಹಾಗೂ ಕೊಡಗಿನಲ್ಲಿ 110 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆಯಿದೆ.

28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 32 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 20 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 922 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ಮೈಸೂರು (141) ಹಾಗೂ ವಿಜಯಪುರದಲ್ಲಿ (101) ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆಯಿದೆ.



ನೃತ್ಯ ಪ್ರದರ್ಶನ

ನಗರದಲ್ಲಿ ಶನಿವಾರ ಉದ್ಭವ ಕಲಾವಿದರು ಆಯೋಜಿಸಿದ್ದ 'ಸಿ.ವಿ. ಶಿವಶಂಕರ್' ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಕ್ಕಳು ನೃತ್ಯ ಪ್ರದರ್ಶಿಸಿದರು -ಪ್ರಜಾವಾಣಿ ಚಿತ್ರ

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದಿಂದ 'ಅಲುಮ್ನಿ ಅಸೋಸಿಯೇಷನ್ ಕೃಷಿ ಮಾಧ್ಯಮ ಮಿತ್ರ ಪ್ರಶಸ್ತಿ'ಗೆ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಕುರಿತ ಕಾರ್ಯಕ್ರಮಗಳು, ಲೇಖನಗಳು ಮಹತ್ವ ಪಡೆಯುತ್ತಿಲ್ಲ. ಇದನ್ನು ಪ್ರೋತ್ಸಾಹಿಸಲು ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಗೆ ಪತ್ರಕರ್ತರು, ಕೃಷಿಕರು, ವಿಸ್ತರಣಾ ಕಾರ್ಯಕರ್ತರು, ವಿಜ್ಞಾನಿಗಳು ಮತ್ತು ಅಧಿಕಾರಿಗಳು ಸೆ. 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಹಳೆಯ ವಿದ್ಯಾರ್ಥಿಗಳ ಸಂಘ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು-560024ಗೆ ಸಲ್ಲಿಸಬಹುದು. ಮಾಹಿತಿಗೆ: www.alumniuasb.in, alumniuasb83@gmail.com ಅಥವಾ 080-23410754ಗೆ ಸಂಪರ್ಕಿಸಬಹುದು.

'ತಾಳೆ ಎಣ್ಣೆ ಆಮದಿನಿಂದ ರೈತರಿಗೆ ನಷ್ಟ': ರೈತ ಮುಖಂಡರ ನೋವು

ಕುಲಾಂತರಿ ಬೆಳೆ ಪ್ರಯೋಗ ನಿಷೇಧಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಸಿವೆ ಸೇರಿದಂತೆ ಇತರೆ ಕುಲಾಂತರಿ ಬೆಳೆಗಳ ಪ್ರಯೋಗ ನಿಷೇಧ ಹಾಗೂ ರೈತ ಪರವಾದ ಕಾನೂನು ರೂಪಿಸಬೇಕು ಎಂದು ಭಾರತೀಯ ರೈತ ಚಳವಳಿಗಳ ಸಮನ್ವಯ ಸಮಿತಿ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೈತ ಮುಖಂಡರಾದ ರಾಕೇಶ್ ಟಿಕಾಯತ್, ಯುದ್ಧವೀರ್ ಸಿಂಗ್ ಅವರು, 'ಕೇಂದ್ರ ಸರ್ಕಾರ ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಅನೇಕ ದ್ವಿಪಕ್ಷೀಯ ಮುಕ್ತ ವಾಣಿಜ್ಯ ಒಪ್ಪಂದಗಳಿಗೆ ಏಕಪಕ್ಷೀಯ ಸಹಿ ಮಾಡುತ್ತಿದೆ. ಕೃಷಿ ಸಂವಿಧಾನದ ರಾಜ್ಯಪಟ್ಟಿಯಲ್ಲಿದೆ. ಎಲ್ಲ ಒಪ್ಪಂದಗಳ ಕರಡು ಪ್ರತಿಗಳು ಸಹಿ ಮಾಡುವ ರಾಜ್ಯ ಸರ್ಕಾರಗಳಿಗೆ ಮೊದಲೇ ಲಭ್ಯವಾಗಬೇಕು ಎಂದು ಆಗ್ರಹಿಸಿದರು.

ನಗರದಲ್ಲಿ ಎರಡು ದಿನಗಳ ಕಾಲ ಸಮನ್ವಯ ಸಭೆ ಆಯೋಜಿಸಲಾಗಿತ್ತು. ಕರ್ನಾಟಕ, ತಮಿಳುನಾಡು, ಕೇರಳ, ತೆಲಂಗಾಣ, ಉತ್ತರ ಪ್ರದೇಶ, ಉತ್ತರಾಖಂಡ, ಹರಿಯಾಣ, ಪಂಜಾಬ್, ರಾಜಸ್ಥಾನದ ರೈತ ಮುಖಂಡರು ಪಾಲ್ಗೊಂಡಿದ್ದರು. ಸಭೆಯಲ್ಲಿ ಹಲವು ನಿರ್ಣಯ ಕೈಗೊಳ್ಳಲಾಯಿತು ಎಂದು ಹೇಳಿದರು. ರೈತ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ಕೆ.ಟಿ.ಗಂಗಾಧರ್, ಕೇರಳದ ಪಿ.ಟಿ. ಜಾರ್ಜ್, ಸೆಲ್ವರಾಜ್ ಇದ್ದರು.

ನಿರ್ಣಯಗಳು

- ಮುಕ್ತ ವಾಣಿಜ್ಯ ಒಪ್ಪಂದಗಳ ಮೇಲೆ ನಿಗಾ ವಹಿಸಲು ಘಟಕ ಆರಂಭಿಸಬೇಕು. ಜಾಗತಿಕ ತಾಪಮಾನದ ಕುರಿತು ಅಧ್ಯಯನ ನಡೆಸಬೇಕು.
- ಅತಿವೃಷ್ಟಿ–ಅನಾವೃಷ್ಟಿಯಿಂದ ಹತಾಶೆಗೆ ಒಳಗಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆತ್ಮಹತ್ಯೆಗೆ ಕಾರಣ ಪತ್ತೆಹಚ್ಚಲು ಅಧ್ಯಯನ ಸಮಿತಿ ರಚಿಸಬೇಕು. ಶಾಶ್ವತ ಪರಿಹಾರ ಹುಡುಕುವ ಜವಾಬ್ದಾರಿಯನ್ನು ಈ ಸಮಿತಿಗೆ ವಹಿಸಬೇಕು.
- ಈಶಾನ್ಯ ದೇಶಗಳಿಂದ ಕಡಿಮೆ ಸುಂಕದಲ್ಲಿ ತಾಳೆ ಎಣ್ಣೆ ಆಮದಾಗುತ್ತಿದೆ. ಇದರಿಂದ ಕರ್ನಾಟಕ, ತಮಿಳುನಾಡು, ಕೇರಳ, ಗೋವಾದ ತೆಂಗು ಬೆಳೆಗಾರರಿಗೆ ನಷ್ಟವಾಗುತ್ತಿದೆ. ಕೊಬ್ಬರಿಯನ್ನು ಆಹಾರ ಸರಬರಾಜು ಇಲಾಖೆಯು ನೇರವಾಗಿ ಖರೀದಿಸಿ ವಿತರಿಸಬೇಕು.
- ಕೊಬ್ಬರಿ ಖರೀದಿ ಕೇಂದ್ರ ತಕ್ಷಣ ಪ್ರಾರಂಭಿಸಬೇಕು. ನಫೆಡ್‌ನಲ್ಲಿ ಖರೀದಿಯಾದ ಕೊಬ್ಬರಿಯನ್ನು ಎಣ್ಣೆಮಾಡಿ ಮಾತ್ರವೇ ಮಾರುಕಟ್ಟೆಗೆ ಪೂರೈಸಬೇಕು ಅಥವಾ ಪಿಡಿಎಸ್‌ನಲ್ಲಿ ವಿತರಿಸಬೇಕು.
- ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿನ 1,777 ಎಕರೆ ಭೂಮಿಯನ್ನು ಕೂಡಲೇ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಬೇಕು.
- ಯಲಹಂಕ ಬಳಿಯ ಶಿವರಾಮ ಕಾರಂತ ಬಡಾವಣೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ 2013ರ ಭೂಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ವಿತರಿಸಬೇಕು. 2013ರ ಭೂಸ್ವಾಧೀನ ಕಾಯ್ದೆಗೆ 2018-19ರಲ್ಲಿ ತಂದಿರುವ ತಿದ್ದುಪಡಿ ರದ್ದು ಮಾಡಬೇಕು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯಲ್ಲಿ ಭ್ರಷ್ಟಾಚಾರ

'ಲ್ಯಾಪ್‌ಟಾಪ್ ಖರೀದಿ: ₹28 ಕೋಟಿ ಅವ್ಯವಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಟ್ಟಡ ಮತ್ತು ಇತರೆ ಕಾರ್ಮಿಕರ ಮಕ್ಕಳಿಗೆ ವಿತರಿಸಲು ಖರೀದಿಸಿರುವ ಏಳು ಸಾವಿರ ಲ್ಯಾಪ್‌ಟಾಪ್‌ಗಳ ಟೆಂಡರ್‌ನಲ್ಲಿ ₹ 28 ಕೋಟಿ ಅವ್ಯವಹಾರ ನಡೆದಿದೆ' ಎಂದು ಕರ್ನಾಟಕ ರಕ್ಷಕ್ ಆ್ಯಂಡ್ ಜನರಲ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷ ಜಿ.ಆರ್. ಶಿವಶಂಕರ್ ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಸರ್ಕಾರದ ಅವಧಿಯಲ್ಲಿನ ಎಲ್ಲ ಟೆಂಡರ್‌ಗಳನ್ನು ತನಿಖೆಗೊಳಪಡಿಸಲಾಗುವುದು ಎಂದು ಕಾಂಗ್ರೆಸ್ ಸರ್ಕಾರ ಹೇಳಿತ್ತು. ಆದರೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಹಳೆಯ ಟೆಂಡರ್ ಅನ್ನು ಕಾರ್ಮಿಕ ಸಚಿವ ಸಂತೋಷ್ ಲಾಡ್ ಮುಂದುವರಿಸುತ್ತಿದ್ದಾರೆ' ಎಂದು ದೂರಿದರು.

> **ಬಿಜೆಪಿ ಸರ್ಕಾರದ ಅವಧಿಯಲ್ಲಿ ಟೆಂಡರ್ ಆಗಿದ್ದು, ಎಲ್- 1 ಆದವರಿಗೆ ಮಂಡಳಿಯು ಕಾರ್ಯಾದೇಶ ನೀಡಿರಬಹುದು. ಅವ್ಯವಹಾರ ನಡೆದಿದ್ದರೆ ಖಂಡಿತ ಕ್ರಮತೆಗೆದುಕೊಳ್ಳುತ್ತೇನೆ**
> **ಸಂತೋಷ್ ಲಾಡ್,** ಕಾರ್ಮಿಕ ಸಚಿವ

'ಈ ಹಿಂದಿನ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಅವರು ಮಂಡಳಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ 2023ರ ಮಾರ್ಚ್ 16ರಂದು ಲ್ಯಾಪ್‌ಟ್ಯಾಪ್ ಖರೀದಿಗೆ ನೈನ್‌ರಿಚ್ ಇನ್ಫೊಟೆಕ್ ಸಂಸ್ಥೆಗೆ ಟೆಂಡರ್ ನೀಡಲಾಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಹೀಗಾಗಿ, ಅದನ್ನು ತಡೆಹಿಡಿಯಲಾಗಿತ್ತು. ಈಗ ಅದೇ ಸಂಸ್ಥೆಯಿಂದ ಲ್ಯಾಪ್‌ಟಾಪ್ ಖರೀದಿಸುವಂತೆ 2023ರ ಆಗಸ್ಟ್ 23ರಂದು ಮಂಡಳಿಯ ಕಾರ್ಯದರ್ಶಿ ಆದೇಶ ನೀಡಿದ್ದಾರೆ' ಎಂದು ಹೇಳಿದರು.

'ಪ್ರತಿ ಲ್ಯಾಪ್‌ಟಾಪ್‌ಗೆ ₹ 71 ಸಾವಿರ ದರ ನಿಗದಿಪಡಿಸಿ ಖರೀದಿಸಲಾಗಿದೆ. ಆದರೆ, ಮಾರುಕಟ್ಟೆಯಲ್ಲಿ ಇವುಗಳ ಬೆಲೆ ₹ 31 ಸಾವಿರ ಇದೆ. ಪ್ರತಿ ಲ್ಯಾಪ್‌ಟಾಪ್‌ಗೆ ₹ 40 ಸಾವಿರ ಹೆಚ್ಚುವರಿ ಹಣ ನೀಡಿ ಖರೀದಿಸಲಾಗಿದೆ. ಏಳು ಸಾವಿರ ಲ್ಯಾಪ್‌ಟಾಪ್‌ಗಳಿಗೆ ಸುಮಾರು ₹ 28 ಕೋಟಿಯ ಹೆಚ್ಚುವರಿಯಾಗಿ ನೀಡಲಾಗಿದೆ. ಇದು ಯಾರ ಜೇಬಿಗೆ ಹೋಗಿದೆ ಎನ್ನುವುದರ ಕುರಿತು ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

'ಶಿವರಾಮ ಹೆಬ್ಬಾರ್ ಅವರ ಅವಧಿಯಲ್ಲಿ ₹ 5,300 ಕೋಟಿ ಹಣ ಮಂಡಳಿಯ ನಿಯಮಗಳನ್ನು ಉಲ್ಲಂಘಿಸಿ ಖರ್ಚು ಮಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿಐಡಿ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಜೆಡಿಎಸ್ ಮೈತ್ರಿ ಫಲ ಅನುಭವಿಸಿದ್ದೇವೆ'

ಪ್ರಜಾವಾಣಿ ವಾರ್ತೆ

ಪಾವಗಡ: 'ಜೆಡಿಎಸ್ ಮೈತ್ರಿಯ ಫಲವನ್ನು ನಾವು ಈಗಾಗಲೇ ಅನುಭವಿಸಿದ್ದೇವೆ. ಮೈತ್ರಿಯಿಂದ ಬಿಜೆಪಿಗೆ ಏನು ಲಾಭವಾಗುತ್ತದೆ ಎಂದು ಕಾದು ನೋಡೋಣ' ಎಂದು ಗೃಹ ಸಚಿವ ಡಾ ಜಿ.ಪರಮೇಶ್ವರ ವ್ಯಂಗ್ಯವಾಡಿದ್ದಾರೆ.



ಡಾ.ಜಿ. ಪರಮೇಶ್ವರ

'ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಗೆ ನಮ್ಮ ತಕರಾರಿಲ್ಲ. ಕಾಂಗ್ರೆಸ್‌ಗೆ ಇದರಿಂದ ಯಾವುದೇ ನಷ್ಟವೂ ಆಗುವುದಿಲ್ಲ' ಎಂದು ಅವರು ಶನಿವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆ ನಾವೂ ಮೈತ್ರಿ ಮಾಡಿಕೊಂಡಿದ್ದೆವು. ಮೈತ್ರಿ ಫಲಿತಾಂಶ ಏನೆಂದು ಇಡೀ ರಾಜ್ಯಕ್ಕೆ ಗೊತ್ತಿದೆ' ಎಂದರು.

ಸ್ಕೇಟಿಂಗ್: ಸಾಧಕರಿಗೆ ಅಭಿನಂದನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಸಾಧಕ ಮಕ್ಕಳಿಗೆ ಪ್ರೋತ್ಸಾಹ ನೀಡಿದರೆ ಮತ್ತಷ್ಟು ಸಾಧನೆ ಮಾಡುತ್ತಾರೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಮಲ್ಲಸಂದ್ರದ ಸ್ಕೇಟಿಂಗ್ ಅಕಾಡೆಮಿ ವತಿಯಿಂದ ರಾಜ್ಯ, ರಾಷ್ಟ್ರ-ಮಟ್ಟದಲ್ಲಿ ಸ್ಕೇಟಿಂಗ್ ಕ್ರೀಡೆಯಲ್ಲಿ ವಿಜೇತರಾದವರಿಗೆ ಅಭಿನಂದಿಸಿ ಅವರು ಮಾತನಾಡಿದರು.

'ದೇಶ, ರಾಜ್ಯ ಮತ್ತು ಕ್ಷೇತ್ರಕ್ಕೆ ಕೀರ್ತಿ ತರುವ ಮಕ್ಕಳು ಇಲ್ಲಿದ್ದಾರೆ. ಸುಮಾರು 25 ವರ್ಷ ಹಿಂದೆ ಪಿ.ಟಿ. ಉಷಾ ಒಲಿಂಪಿಕ್ಸ್‌ನಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದರು. ಸಾಮಾನ್ಯ ಕುಟುಂಬದ ಒಬ್ಬ ಪ್ರಜ್ಞಾನಂದ ಚೆಸ್‌ನಲ್ಲಿ ಸಾಧನೆ ಮಾಡಿದ್ದಾರೆ. ಪ್ರತಿಭೆ ಎಲ್ಲ ಮಕ್ಕಳಲ್ಲಿಯೂ ಇದೆ. ಅವರಿಗೆ ಪ್ರೋತ್ಸಾಹ ನೀಡಬೇಕು' ಎಂದು ಹೇಳಿದರು.

ತರಬೇತುದಾರ ರವಿ ಎಸ್., ಮಹೇಂದ್ರ, ಉಮಾ, ಭರತ್ ಸೌಂದರ್ಯ, ಪಾಂಡುರಂಗ ರಾವ್, ಚೇತನ್, ವಿಜಯಕುಮಾರ್, ಗಂಗರಾಜು ಇದ್ದರು.



ಮಲ್ಲಸಂದ್ರದ ಸ್ಕೇಟಿಂಗ್ ಅಕಾಡೆಮಿ ವತಿಯಿಂದ ಕೆಂಪೇಗೌಡ ಉದ್ಯಾನದಲ್ಲಿ ನಡೆದ ರಾಷ್ಟ್ರಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಶಾಸಕ ಎಸ್. ಮುನಿರಾಜು ಅಭಿನಂದಿಸಿದರು

ಚಿತ್ರಾವಳಿ



ಗೌರಿ–ಗಣೇಶ ಹಬ್ಬ ಸಮೀಪಿಸುತ್ತಿದ್ದು, ನಗರದ ಮೈಸೂರು ರಸ್ತೆಯ ಕುಂಬಳಗೂಡು ಬಳಿಯ ರಾಮೋಹಳ್ಳಿಯ ಮಳಿಗೆಯೊಂದರಲ್ಲಿ ಮಣ್ಣಿನ ಗಣೇಶನಿಗೆ ಅಂತಿಮ ಸ್ಪರ್ಶ ನೀಡುತ್ತಿರುವ ಕಲಾವಿದ –ಪ್ರಜಾವಾಣಿ ಚಿತ್ರ/ರಂಜು ಪಿ.



ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಸಂಸ್ಥಾಪಕ ದಿನಾಚರಣೆ ಕಾರ್ಯಕ್ರಮದಲ್ಲಿ ಕತೆಗಾರ್ತಿ ಸುನಂದಾ ಕಡಮೆ ಅವರಿಗೆ 'ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ'ವನ್ನು ಸಾಹಿತಿ ಪಿ.ವಿ.ನಾರಾಯಣ ಪ್ರದಾನ ಮಾಡಿದರು. ಪ್ರತಿಷ್ಠಾನದ ಕಾರ್ಯದರ್ಶಿ ಶಾಂತರಾಜು, ಎನ್‌ಜಿ.ಎಸ್ ವಾಗ್ದೇವಿ ಸಂಸ್ಥೆಯ ನಿರ್ದೇಶಕಿ ಶಾಂತಾ ರಾಧಾಕೃಷ್ಣ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಕೋಶಾಧಿಕಾರಿ ಪ್ರಭಾಕರ ಬೆಳವಾಡಿ ಇದ್ದಾರೆ



ನಗರದ ಸೇಂಟ್ ಜೋಸೆಫ್ಸ್ ಇಂಡಿಯನ್ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ನಡೆದ ವಾರ್ಷಿಕ ಕ್ರೀಡಾಕೂಟದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿ, ಅಂತರರಾಷ್ಟ್ರೀಯ ಕ್ರೀಡಾಪಟು ಜಯಪ್ರಕಾಶ್ ಸಿ. ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಶಾಲೆಯ ಮುಖ್ಯಸ್ಥ ಜೋಸೆಫ್ ಡಿ'ಸೋಜಾ, ಮುಖ್ಯ ಶಿಕ್ಷಕಿ ಜೈನ್ ಬೆನಿಟ, ಜಿಯಾಥ್ಲಾನ್‌ನ ಸಂಸ್ಥಾಪಕ ಡಾ. ಭರತ್ ಕುಮಾರ್ ಬಿ. ಇದ್ದರು

ಹಣ ದುರುಪಯೋಗ ಆರೋಪ: ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಉತ್ತರ ತಾಲ್ಲೂಕು ಸಹಕಾರಿ ಹಾಲು ಒಕ್ಕೂಟದ ನಿರ್ದೇಶಕ ಕೇಶವಮೂರ್ತಿ ಅವರು, ಕಮ್ಮಸಂದ್ರದಲ್ಲಿ 'ಕ್ಷೀರ ಸಮೃದ್ಧಿ ಉತ್ಸವ-2023' ಕಾರ್ಯಕ್ರಮದ ಹೆಸರಿನಲ್ಲಿ ತಮ್ಮ ಜನ್ಮದಿನವನ್ನು ಆಚರಿಸಿಕೊಂಡಿದ್ದಾರೆ ಎಂದು ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ದಿಬ್ಬೂರು ಜಯಣ್ಣ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಕಾರ್ಯಕ್ರಮಕ್ಕೆ ಒಕ್ಕೂಟದಿಂದ ಹಣ ಪಡೆದಿದ್ದಾರೆ. ಜತೆಗೆ, ಹಾಲು ಉತ್ಪಾದಕರ ಸಂಘಗಳಿಂದ ಹಣ ಪಡೆದಿದ್ದಾರೆ ಎಂದರು.

'ದಾಸನಪುರ ಹೋಬಳಿಯ ಕಮ್ಮಸಂದ್ರದಲ್ಲಿ ಆಚರಿಸಿಕೊಂಡಿರುವ ಈ ಕಾರ್ಯಕ್ರಮಕ್ಕೆ ಒಕ್ಕೂಟದಿಂದ ₹5 ಲಕ್ಷ ಅನುದಾನ ಬಿಡುಗಡೆ ಮಾಡಿಸಿಕೊಂಡಿದ್ದಾರೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸಬೇಕು ಹಾಗೂ ಹಾಲು ಸರಬರಾಜು ಮಾಡುವ ಡೇರಿಗಳಿಂದ ಪಡೆದಿರುವ ಹಣ ಹಿಂದಿರುಗಿಸಬೇಕು' ಎಂದರು.

'ಸರ್ಕಾರ ಕ್ರಮಕೈಗೊಳ್ಳದಿದ್ದರೆ ರಾಜಾನುಕುಂಟೆಯಲ್ಲಿರುವ ಒಕ್ಕೂಟದ ಬೆಂಗಳೂರು ಉತ್ತರ ತಾಲ್ಲೂಕು ಉಪ ವ್ಯವಸ್ಥಾಪಕರ ಶಿಬಿರದ ಕಚೇರಿ ಎದುರು ಸೆಪ್ಟೆಂಬರ್ 25ರಂದು ಬೃಹತ್ ಪ್ರತಿಭಟನೆ ನಡೆಸಲಾಗುವುದು' ಎಂದು ತಿಳಿಸಿದರು.

ಇಟಗಲ್ಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಮೋಹನ್ ಕುಮಾರ್ ಮಾತನಾಡಿ, 'ಅಧಿಕಾರಿಗಳು ಶಿಷ್ಟಾಚಾರ ಉಲ್ಲಂಘಿಸಿ, ಸ್ಥಳೀಯ ಶಾಸಕ ಎಸ್. ಆರ್. ವಿಶ್ವನಾಥ್ ಅವರನ್ನು ನಿರ್ಲಕ್ಷಿಸಿದ್ದಾರೆ. ಕಾಂಗ್ರೆಸ್ ಮುಖಂಡರು ಹಾಗೂ ಬೆಂಗಳೂರು ಹಾಲು ಒಕ್ಕೂಟದ ಅಧಿಕಾರಿಗಳನ್ನು ಆಹ್ವಾನಿಸಿ, ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ ಮಾಡಿದ್ದಾರೆ. ಈ ಬಗ್ಗೆ ಬೆಂಗಳೂರು ಹಾಲು ಒಕ್ಕೂಟದ ವ್ಯವಸ್ಥಾಪಕರಿಗೆ ದೂರು ನೀಡಲಾಗಿದೆ' ಎಂದು ತಿಳಿಸಿದರು.

ಆಮ್ ಆದ್ಮಿ ಪಕ್ಷದ ಜಿಲ್ಲಾ ಅಧ್ಯಕ್ಷ ಸತೀಶ್ ಕುಮಾರ್ ಸವಾಲು

'ಬ್ರ್ಯಾಂಡ್ ಅಲ್ಲ, ಬೆಸ್ಟ್ ಬೆಂಗಳೂರು ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರಿಗೂ ಮೊದಲು ಉತ್ತಮ ನಗರವನ್ನಾಗಿ ರೂಪಿಸಿ' ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾ ಅಧ್ಯಕ್ಷ ಸತೀಶ್ ಕುಮಾರ್ ಸವಾಲು ಹಾಕಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎರಡು ವರ್ಷಗಳಿಂದ ಬಿಬಿಎಂಪಿ ಚುನಾವಣೆ ನಡೆದಿಲ್ಲ. ಜನರು ಸಮಸ್ಯೆ ಹೇಳಿಕೊಳ್ಳುವುದಕ್ಕೂ ಸದಸ್ಯರೂ ಇಲ್ಲ. ಆದರೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬ್ರ್ಯಾಂಡ್ ಬೆಂಗಳೂರು ಮಾಡಲು ಹೊರಟಿದ್ದಾರೆ. ಮೂರು ವರ್ಷವಾದರೂ ಚುನಾವಣೆ ನಿರ್ಧಾರವಾಗಿಲ್ಲ. ವಾರ್ಡ್‌ಗಳ ಪಟ್ಟಿ ಸಹ ಅಂತಿಮಗೊಂಡಿಲ್ಲ. ಮೀಸಲಾತಿಯ ಒಬಿಸಿ ಪಟ್ಟಿ ಅಂತಿಮವಾಗಿಲ್ಲ. ಆಗಲೇ ಬ್ರ್ಯಾಂಡ್ ಬೆಂಗಳೂರು ಸಮಾವೇಶಕ್ಕೆ ತಯಾರಿ ಮಾಡಿಕೊಂಡಿದ್ದಾರೆ' ಎಂದು ವ್ಯಂಗ್ಯವಾಡಿದರು.

'ರಸ್ತೆ ಗುಂಡಿ, ಚರಂಡಿಗಳನ್ನು ಮೊದಲು ದುರಸ್ತಿ ಪಡಿಸಬೇಕಿದೆ. ಈಗಿರುವ ಬೆಂಗಳೂರನ್ನೇ ಉತ್ತಮ ಪಡಿಸಬೇಕಿದೆ. ಕ್ರಮೇಣ ಈ ಬೆಸ್ಟ್ ಬೆಂಗಳೂರು ತಾನಾಗಿಯೇ ಬ್ರ್ಯಾಂಡ್ ಬೆಂಗಳೂರು ಆಗುತ್ತದೆ' ಎಂದು ಹೇಳಿದರು.

'ಉಪ ಮುಖ್ಯಮಂತ್ರಿ ಅವರಿಗೆ ಬ್ರ್ಯಾಂಡ್ ಬೆಂಗಳೂರು ಬಗ್ಗೆ ಅಷ್ಟೊಂದು ಇಚ್ಛಾಶಕ್ತಿ ಹಾಗೂ ಬದ್ಧತೆಯಿದ್ದರೆ ಬಿಬಿಎಂಪಿ ಚುನಾವಣೆಗಿರುವ ಅಡೆತಡೆ ಬಗೆಹರಿಸಬೇಕಿದೆ' ಎಂದು ಒತ್ತಾಯಿಸಿದರು.

'2020ರಲ್ಲೇ ಬಿಬಿಎಂಪಿ ಅವಧಿ ಪೂರ್ಣಗೊಂಡಿದೆ. ಎರಡು ವರ್ಷ ಕಳೆದರೂ ಸರ್ಕಾರ ಬಿಬಿಎಂಪಿ ಚುನಾವಣೆ ನಡೆಸದೆ ನಿರ್ಲಕ್ಷ್ಯ ತೋರುತ್ತಿದೆ. ಹಿಂದಿನ ಬಿಜೆಪಿ ಸರ್ಕಾರ 'ಗ್ರೇಟರ್ ಬೆಂಗಳೂರು' ಮಾಡಬೇಕೆಂಬ ಕಾರಣಕ್ಕೆ ನಾಲ್ಕು ಪಾಲಿಕೆಗಳನ್ನಾಗಿ ವಿಂಗಡಿಸಲು ನಿರ್ಧರಿಸಿತ್ತು. ಇದೇ ವೇಳೆ ಕೊರೊನಾ ಸಮಸ್ಯೆ ಬಾಧಿಸಿತ್ತು. ಕೊರೊನಾ ಬಳಿಕ ಬಿಬಿಎಂಪಿ ಚುನಾವಣೆ ಆಗಲಿಲ್ಲ. ಬಳಿಕ, ಗ್ರೇಟರ್ ಬೆಂಗಳೂರು ನಿರ್ಧಾರವನ್ನು ಸರ್ಕಾರ ಹಿಂತೆಗೆದುಕೊಂಡಿತು' ಎಂದರು.

'ಬಿಬಿಎಂಪಿ ಮರು ವಿಂಗಡಣೆಗೆ ಮುಂದಾಗಿದ್ದ ಬಿಜೆಪಿ ಸರ್ಕಾರದ ಅವಧಿಯಲ್ಲೇ 3,200ಕ್ಕೂ ಹೆಚ್ಚು ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. ಆದರೆ, ನಗರಾಭಿವೃದ್ಧಿ ಇಲಾಖೆ ಆಕ್ಷೇಪಣೆಗಳನ್ನು ಯಾವುದೇ ರೀತಿ ಪರಿಶೀಲನೆ ನಡೆಸದೆ ಮೂರು ದಿನಗಳಲ್ಲೇ 243 ವಾರ್ಡ್ ಮಾಡಿ, ಆದೇಶ ಹೊರಡಿಸಿತ್ತು. ಇದೀಗ ಪ್ರಕರಣವು ನ್ಯಾಯಾಲಯದಲ್ಲಿದೆ. ನ್ಯಾಯಾಲಯವು 12 ವಾರಗಳ ಗಡುವು ನೀಡಿತ್ತು. ಸೆ.18ಕ್ಕೆ ಕೋರ್ಟ್ ನೀಡಿರುವ ಗಡುವು ಮುಕ್ತಾಯವಾಗಲಿದೆ. ಇದೀಗ ಕಾಂಗ್ರೆಸ್ ಸರ್ಕಾರ ತರಾತುರಿಯಲ್ಲಿ 243 ವಾರ್ಡ್ ಗಳ ಬದಲಿಗೆ 225ಕ್ಕೆ ಮಾಡಿ ಅಧಿಸೂಚನೆ ಹೊರಡಿಸಿದೆ. ಈಗಲೂ ವಾರ್ಡ್ ಮರು ವಿಂಗಡಣೆಗೆ 3,300 ಆಕ್ಷೇಪಣೆಗಳು ಬಂದಿವೆ. ಆಕ್ಷೇಪಕ್ಕೆ ಸರ್ಕಾರ ಏನು ಉತ್ತರ ನೀಡಿದೆ' ಎಂದು ಪ್ರಶ್ನಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರು ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಿಶ್ವನಾಥ್ ಟಿ.ಜಿ. ಮತ್ತು ಮಾಧ್ಯಮ ಉಸ್ತುವಾರಿ ಅನಿಲ್ ನಾಚಪ್ಪ ಇದ್ದರು.

ರಸ್ತೆ ಕಾಮಗಾರಿ ಪರಿಶೀಲನೆ

ದಾಬಸ್‌ಪೇಟೆ: ಸೋಂಪುರದ ಪಟ್ಟಣದಿಂದ ರಾಷ್ಟ್ರೀಯ ಹೆದ್ದಾರಿ 207ರವರೆಗೂ ನಿರ್ಮಿಸಿರುವ ದಾಬಸ್‌ಪೇಟೆ-ಹೊಸಕೋಟೆ ಹಾಗೂ ಚೆನ್ನೈ ಮಾರ್ಗದ ರಸ್ತೆ ಕಾಮಗಾರಿ ಪ್ರಗತಿಯನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಶಾಸಕ ಶರತ್ ಬಚ್ಚೆಗೌಡ ಶನಿವಾರ ಪರಿಶೀಲಿಸಿದರು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವ ಸತೀಶ್ ಜಾರಕಿಹೊಳಿ, ದಾಬಸ್‌ಪೇಟೆ-ಹೊಸಕೋಟೆ ಹಾಗೂ ಚೆನ್ನೈ ಮಾರ್ಗ ರಸ್ತೆಯ ಕಾಮಗಾರಿ ಪೂರ್ಣಗೊಂಡರೆ ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆ ಕಡಿಮೆಯಾಗಲಿದೆ. ಇದು ಅಂತರರಾಷ್ಟ್ರಿಯ ವಿಮಾನ ನಿಲ್ದಾಣಕ್ಕೆ ಸಮೀಪದ ರಸ್ತೆ. ಇದರಿಂದ, ವಿಮಾನ ನಿಲ್ದಾಣಕ್ಕೆ ತೆರಳುವವರಿಗೆ ಅನುಕೂಲವಾಗಲಿದೆ' ಎಂದರು.

ಬೆಂಗಳೂರಿಗೆ ಹೆಚ್ಚಿನ ವಾಹನಗಳು ಬರುವುದನ್ನು ತಡೆಗಟ್ಟಲು ಹೊರ ವರ್ತುಲ ರಸ್ತೆ ನಿರ್ಮಿಸುವುದು ನಮ್ಮ ಸರ್ಕಾರದ ಕನಸು. ರಸ್ತೆ ಕಾಮಗಾರಿ ಕಾರ್ಯವನ್ನು ಶೀಘ್ರವಾಗಿ ಕೈಗೆತ್ತಿ ಕೊಳ್ಳಲಾಗುವುದು. ಹಾಗೆಯೇ ಹೈದರಾಬಾದ್ ರಸ್ತೆ, ಕೋಲಾರ ರಸ್ತೆ ಹಾಗೂ ರಾಮನಗರ ರಸ್ತೆಯನ್ನು ವಿಸ್ತರಿಸಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.



ದಾಬಸಪೇಟೆ ಹೊಸಕೋಟೆ ಹಾಗೂ ಚೆನ್ನೈವರೆಗೂ ನಿರ್ಮಿಸಿರುವ ರಸ್ತೆಯನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಶಾಸಕ ಶರತ್ ಬಚ್ಚೆಗೌಡ ವೀಕ್ಷಿಸಿದರು

ರಾಷ್ಟ್ರೀಯ ಹೆದ್ದಾರಿ 207ರ ನಿರ್ಮಾಣದಿಂದ ಸೋಂಪುರ ಪಟ್ಟಣ ಎರಡು ಭಾಗವಾಗಿದೆ. ರಸ್ತೆ ಬಂದ್ ಮಾಡಿರುವುದರಿಂದ ಪ್ರತಿವರ್ಷ ದೇವರ ಉತ್ಸವಗಳು ಮಾಡಬೇಕಾದರೆ ಇಲ್ಲಿನ ಸ್ಥಳೀಯರು ಸುತ್ತಾಡಬೇಕಿದೆ. ಈ ರಸ್ತೆಯಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡುವಂತೆ ಸಚಿವರಿಗೆ ಸ್ಥಳೀಯರು ಮನವರಿಕೆ ಮಾಡಿದರು.

ಶಾಸಕ ಶರತ್ ಬಚ್ಚೇಗೌಡ, ಯೋಜನೆಯ ವ್ಯವಸ್ಥಾಪಕ ಜಯಕುಮಾರ್ ಇದ್ದರು.

ಚರ್ಚೆ ಆರಂಭಿಕ ಹಂತದಲ್ಲಿ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆ

‘ಕ್ಷೇತ್ರ ಹಂಚಿಕೆ ಇನ್ನೂ ಅಂತಿಮಗೊಂಡಿಲ್ಲ’

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: ಜೆಡಿಎಸ್ ಮತ್ತು ಬಿಜೆಪಿ ನಡುವಣ ಮೈತ್ರಿಯ ವಿಚಾರ ಆರಂಭಿಕ ಹಂತದ ಚರ್ಚೆಯಲ್ಲಿದೆ. ಕ್ಷೇತ್ರಗಳ ಹಂಚಿಕೆ ಕುರಿತು ಈವರೆಗೂ ಚರ್ಚೆ ನಡೆದಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಮೈತ್ರಿ ಮಾತುಕತೆ ಇನ್ನೂ ಪ್ರಾರಂಭಿಕ ಹಂತದಲ್ಲಿದೆ. ಇನ್ನೂ ಹಲವು ವಿಷಯಗಳ ಬಗ್ಗೆ ಚರ್ಚೆ ಆಗಬೇಕಿದೆ. ಇದರಲ್ಲಿ ಕೊಟ್ಟು, ತೆಗೆದುಕೊಳ್ಳುವುದಷ್ಟೇ ಇಲ್ಲ. ವಿಶ್ವಾಸ, ಗೌರವವೂ ಮುಖ್ಯ’ ಎಂದರು.

‘ರಾಜ್ಯದ ಹಿತದೃಷ್ಟಿಯಿಂದ ಈ ರೀತಿಯ ಕೆಲವು ತೀರ್ಮಾನಗಳು ಆಗುತ್ತವೆ. ಕೆಲವು ದಿನಗಳವರೆಗೆ ಕಾದು ನೋಡಿ. ಕೆಲವರು ಸಿದ್ಧಾಂತದ ಬಗ್ಗೆ ಮಾತನಾಡುತ್ತಾರೆ. ಆ ಬಗ್ಗೆ ಮುಂದೆ ಮಾತನಾಡೋಣ’ ಎಂದು ಹೇಳಿದರು.

‘ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಮೈತ್ರಿ ಬಗ್ಗೆ ಮಾತನಾಡಿದ್ದಾರೆ. ಅವರಿಗೆ ನಾನು ಆಭಾರಿ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಮೈತ್ರಿಕೂಟ ರಚಿಸುವ ಬಗ್ಗೆ ಅವರು ಹೇಳಿದ್ದಾರೆ. ರಾಜ್ಯದ ಜನರನ್ನು ಲೂಟಿ ಮಾಡುತ್ತಿರುವವರಿಗೆ ಕಡಿವಾಣ ಹಾಕಲೇಬೇಕಿದೆ’ ಎಂದರು.

‘2018ರಲ್ಲಿ ಏನಾಗಿತ್ತು?’: ‘ಅನ್ನ ಹಳಸಿತ್ತು, ನಾಯಿ ಹಸಿದಿತ್ತು’ ಎಂಬ ಗಾದೆ ಮಾತು ಉಲ್ಲೇಖಿಸಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬಿಜೆಪಿ–ಜೆಡಿಎಸ್ ಮೈತ್ರಿಯನ್ನು ಟೀಕಿಸಿದ್ದಕ್ಕೆ ಕುಮಾರಸ್ವಾಮಿ ಪ್ರತಿಕ್ರಿಯಿಸಿದರು. ‘2018ರಲ್ಲಿ ಯಾವ ಅನ್ನ ಹಳಸಿತ್ತು? ಯಾವ ನಾಯಿ ಹಸಿದಿತ್ತು? ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ಆಗ ನಮ್ಮ ಮನೆಗೆ ಬಂದವರು ಯಾರು’ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ದುರಾಡಳಿತಕ್ಕೆ ಜನರು ಮೂರೇ ತಿಂಗಳಲ್ಲಿ ರೋಸಿ ಹೋಗಿದ್ದಾರೆ. ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ನಾಲ್ಕು ವರ್ಷಗಳ ಬಳಿಕ ಆಡಳಿತ ವಿರೋಧಿ ಅಲೆ ಬರುತ್ತದೆ. ಆದರೆ, ಈಗಿನ ಕಾಂಗ್ರೆಸ್ ಸರ್ಕಾರ ಮೂರೇ ತಿಂಗಳಲ್ಲಿ ಆಡಳಿತ ವಿರೋಧಿ ಅಲೆ ಎದುರಿಸುತ್ತಿದೆ ಎಂದು ಕುಮಾರಸ್ವಾಮಿ ಹೇಳಿದರು.

‘ರಾಜ್ಯದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ನಾವು ಏನೋ ಮಾಡಿಬಿಟ್ಟಿದ್ದೇವೆ ಎಂಬ ಅಮಲಿನಲ್ಲಿ ಅವರು ಇದ್ದಾರೆ. ಜೆಡಿಎಸ್ ಪಕ್ಷವನ್ನು ಮುಗಿಸಿ ಬಿಟ್ಟಿದ್ದೇವೆ. ಅಲ್ಲಿಂದ, ಇಲ್ಲಿಂದ ಕರೆದುಕೊಂಡು ಬರುತ್ತಿದ್ದೇವೆ ಎಂದು ಬೀಗುತ್ತಿದ್ದಾರೆ. ಎಲ್ಲದಕ್ಕೂ ಉತ್ತರ ಕೊಡುತ್ತೇವೆ’ ಎಂದರು.

ಕಾಂಗ್ರೆಸ್ ಹತಾಶೆಯಲ್ಲಿದೆ: ‘ಹೊರ ನೋಟಕ್ಕೆ ಕಾಂಗ್ರೆಸ್‌ನವರು ಏನು ಬೇಕಾದರೂ ಹೇಳಬಹುದು. ವಾಸ್ತವವಾಗಿ ಅವರು ಹತಾಶರಾಗಿದ್ದಾರೆ. ಒಳಗಡೆ ಏನಿದೆ? ಅವರ ಶಕ್ತಿ ಏನು ಎಂಬುದು ನನಗೆ ಗೊತ್ತಿದೆ. ಅವರು ಯಾವ ಸಾಧನೆ ಮಾಡಿದ್ದಾರೆ ಎಂದು ಜನರು ಮತ ನೀಡುತ್ತಾರೆ? ಲೂಟಿ ಮಾಡಿದ ಹಣದಲ್ಲಿ ಜನರನ್ನು ಕೊಳ್ಳಬಹುದು ಎಂಬ ಭಾವನೆಯಲ್ಲಿದ್ದಾರೆ. ಅದು ಸಾಧ್ಯವಾಗುವುದಿಲ್ಲ’ ಎಂದು ಹೇಳಿದರು.

‘ಏನಾಗುತ್ತಿದೆ ಎಂಬುದೇ ಗೊತ್ತಾಗುತ್ತಿಲ್ಲ’

‘ಲೋಕಸಭಾ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿ ಆಗಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಮೈತ್ರಿ ಬಗ್ಗೆ ನಂತರ ಮಾತನಾಡುವೆ ಎಂದು ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳುತ್ತಿದ್ದಾರೆ. ಏನು ನಡೆಯುತ್ತಿದೆ ಎನ್ನುವುದೇ ಗೊತ್ತಾಗುತ್ತಿಲ್ಲ’ ಎಂದು ಬಿಜೆಪಿ ಮುಖಂಡ ವಿ. ಸೋಮಣ್ಣ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಮೈತ್ರಿ ಬಗ್ಗೆ ಈಗಲೇ ಪ್ರತಿಕ್ರಿಯಿಸುವುದು ಅಕಾಲಿಕ ಅನಿಸುತ್ತದೆ. ಬಿಜೆಪಿ ರಾಜ್ಯ ನಾಯಕರು ಕೇಂದ್ರದ ವರಿಷ್ಠರ ಜತೆ ಮಾತನಾಡಬೇಕು. ಆ ಬಳಿಕವೇ ಸ್ಪಷ್ಟತೆ ಸಿಗುತ್ತದೆ. ಈ ಬಗ್ಗೆ ನಾನೂ ವರಿಷ್ಠರ ಜತೆ ಚರ್ಚಿಸುತ್ತೇನೆ’ ಎಂದರು.

‘ಅಧಿಕೃತ ಘೋಷಣೆಯಾಗಿಲ್ಲ’



ಅಶ್ವತ್ಥ ನಾರಾಯಣ

‘ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಕುರಿತು ಚರ್ಚೆ ನಡೆಯುತ್ತಿದೆ. ಜೆಡಿಎಸ್ ನಾಯಕರು ಮೈತ್ರಿ ಇಚ್ಛೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಇನ್ನೂ ಅಧಿಕೃತ ಘೋಷಣೆಯಾಗಿಲ್ಲ’ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.

‘ಕಳೆದ ಚುನಾವಣೆಯಲ್ಲಿ ನಾವು ಕೆಲವು ಕ್ಷೇತ್ರಗಳನ್ನು ಕಳೆದುಕೊಂಡಿದ್ದೇವೆ. ಅಲ್ಲಿ ಏನು ಮಾಡಬೇಕು ಎಂಬುದರ ಬಗ್ಗೆ ಯೋಚಿಸಬೇಕಿದೆ. ಒಗ್ಗಟ್ಟಾಗಿ ಕೆಲಸ ಮಾಡಬಹುದು. ಅಧಿಕೃತವಾಗಿ ಮೈತ್ರಿಯ ಘೋಷಣೆಯಾದ ಬಳಿಕ ಎಲ್ಲವೂ ಗೊತ್ತಾಗಲಿದೆ’ ಎಂದರು.

ಪಕ್ಷ ಸಂಘಟನೆ: ಇಂದು ಜೆಡಿಎಸ್ ಸಮಾವೇಶ

ಬೆಂಗಳೂರು: ಪಕ್ಷ ಸಂಘಟನೆ, ಲೋಕಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಿಸಲು ಸಿದ್ಧತೆ ಕುರಿತು ಚರ್ಚಿಸುವುದಕ್ಕಾಗಿ ನಗರದ ಅರಮನೆ ಮೈದಾನದಲ್ಲಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಮಾವೇಶ ಭಾನುವಾರ ನಡೆಯಲಿದೆ.

ಅರಮನೆ ಮೈದಾನದ ನಲಪಾಡ್ ಪೆವಿಲಿಯನ್‌ನಲ್ಲಿ ಭಾನುವಾರ ಬೆಳಿಗ್ಗೆ 10.30ಕ್ಕೆ ಆರಂಭವಾಗುವ ಸಮಾವೇಶಕ್ಕೆ ಪಕ್ಷದ ಶಾಸಕರು, ಸಂಸದರು, ಮಾಜಿ ಸಚಿವರು, ಮಾಜಿ ಸಂಸದರು, ಮಾಜಿ ಶಾಸಕರು, ಲೋಕಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗಳ ಪರಾಜಿತ ಅಭ್ಯರ್ಥಿಗಳು, ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ಆಹ್ವಾನ ನೀಡಲಾಗಿದೆ. ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ, ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ರಾಜ್ಯ ಪ್ರಮುಖರ ಸಮಿತಿ (ಕೋರ್ ಕಮಿಟಿ) ಅಧ್ಯಕ್ಷ ಜಿ.ಟಿ. ದೇವೇಗೌಡ ಸೇರಿದಂತೆ ಪಕ್ಷದ ಹಲವು ಪ್ರಮುಖರು ಸಮಾವೇಶದಲ್ಲಿ ಪಾಲ್ಗೊಳ್ಳುವರು. ಲೋಕಸಭೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಬಿಬಿಎಂಪಿ ಚುನಾವಣಾ ಸಿದ್ಧತೆ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ.

ಬಿಜೆಪಿ ಜತೆಗಿನ ಮೈತ್ರಿ ಕುರಿತು ಜೆಡಿಎಸ್ ಪ್ರಮುಖರು ಭಾನುವಾರದ ಸಭೆಯಲ್ಲಿ ಸ್ಪಷ್ಟತೆ ನೀಡುವ ಸಾಧ್ಯತೆ ಇದೆ. ಮೈತ್ರಿಯ ಅನಿವಾರ್ಯ, ಭವಿಷ್ಯದಲ್ಲಿ ಬಿಜೆಪಿ ಜತೆಗಿನ ಸಂಬಂಧ ಕುರಿತು ತಮ್ಮ ಯೋಚನೆಯನ್ನು ಕಾರ್ಯಕರ್ತರೊಂದಿಗೆ ಹಂಚಿಕೊಳ್ಳಲು ದೇವೇಗೌಡ ಮತ್ತು ಕುಮಾರಸ್ವಾಮಿ ಸಭೆಯನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

‘ಜೆಡಿಎಸ್–ಬಿಜೆಪಿ ಮೈತ್ರಿ; ಎಲ್ಲವೂ ಅಧಿಕಾರಕ್ಕೆ’



ಸಿದ್ದರಾಮಯ್ಯ

ಹುಬ್ಬಳ್ಳಿ: ‘ಬಿಜೆಪಿಯ ‘ಬಿ ಟೀಂ’ ಎಂದು ಕರೆದಾಗ, ಜೆಡಿಎಸ್‌ನವರಿಗೆ ಕೋಪ ಬರುತಿತ್ತು. ಆದರೆ, ಈಗ ಅವರೇ ಆ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಯಾವ ಸಿದ್ಧಾಂತವೂ ಇಲ್ಲ. ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಜಾತ್ಯತೀತ ಎಂದು ಹೆಸರು ಇಟ್ಟುಕೊಂಡು, ಕೋಮುವಾದಿಗಳ ಜೊತೆ ಸೇರಿದ್ದಾರೆ. ಯಾವ ಕಾರಣಕ್ಕೂ ಹೊಂದಾಣಿಕೆ ಮಾಡಿಕೊಳ್ಳಲ್ಲ ಎಂದು ದೇವೇಗೌಡರು ಹೇಳಿದ್ದರು. ಆದರೆ, ಪಕ್ಷದ ಉಳಿವಿಗಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದಾಗಿ ಜಿ.ಟಿ. ದೇವೇಗೌಡರಿಂದ ಹೇಳಿಸಿದ್ದಾರೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಖರ್ಗೆ ಅವರನ್ನು ಆಹ್ವಾನಿಸಬೇಕಿತ್ತು: ‘ಜಿ–20 ಶೃಂಗಸಭೆಯ ಸಂದರ್ಭದಲ್ಲಿ ರಾಷ್ಟ್ರಪತಿಯವರು ಆಯೋಜಿಸಿರುವ ಔತಣ ಕೂಟಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಹ್ವಾನಿಸಬೇಕಿತ್ತು. ಅವರು ಬರೀ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಲ್ಲ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕರೂ ಹೌದು. ನನಗೆ ಆಹ್ವಾನವಿದೆ. ಆದರೆ, ನಾನು ಭಾಗವಹಿಸಲ್ಲ’ ಎಂದರು.

ನಾನು ಯಾವುದೇ ಕಾರಣಕ್ಕೂ ರಾಷ್ಟ್ರ ರಾಜಕಾರಣಕ್ಕೆ ಹೋಗಲ್ಲ. ಎಚ್‌.ವಿಶ್ವನಾಥ ಸೇರಿ ಹಲವು ನಾಯಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಮಹದಾಯಿ, ಕೃಷ್ಣ ಮೇಲ್ದಂಡೆ ಯೋಜನೆ, ಮೇಕೆದಾಟು, ಕಾವೇರಿ ಸೇರಿ ವಿವಿಧ ಯೋಜನೆಗಳ ಬಗ್ಗೆ ಚರ್ಚಿಸಲು ಸರ್ವ ಪಕ್ಷಗಳ ನಿಯೋಗ ಕರೆದೊಯ್ಯಲು ಪ್ರಧಾನಿ ಅವರ ಕಾಲಾವಕಾಶ ಕೋರಿದ್ದೇವೆ. ಇನ್ನೂ ಸಮಯ ನೀಡಿಲ್ಲ. ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅರಣ್ಯ ಹಾಗೂ ಪರಿಸರ ಇಲಾಖೆಯಿಂದ ನಿರಾಕ್ಷೇಪಣೆ ಪತ್ರ ಕೊಡಿಸಿಲ್ಲ. ಅದನ್ನು ನೀಡಿದರೆ, ನಾವು ಕಾಮಗಾರಿ ಆರಂಭಿಸಲು ಸಿದ್ಧ’ ಎಂದರು.

‘ಬರ ಎದುರಿಸಲು ಕೇಂದ್ರ ಸರ್ಕಾರದ ನೆರವೂ ಬೇಕು. ಬರ ಘೋಷಣೆಗೆ ನಿಯಮಗಳನ್ನು ಪ್ರತಿ 2 ವರ್ಷಕ್ಕೊಮ್ಮೆ ಬದಲಿಸಬೇಕು. 3 ವರ್ಷವಾದರೂ ಬದಲಿಸಿಲ್ಲ. ಬದಲಾವಣೆ ಕೋರಿ ಪತ್ರ ಬರೆದಿರುವೆ. ವಿದ್ಯಾವಿಕಾಸ ಯೋಜನೆಯಡಿ ಕರ್ನಾಟಕ ಕೈಮಗ್ಗ ಸಂಸ್ಥೆಯಿಂದ ಶಾಲಾ ಮಕ್ಕಳಿಗೆ ನೀಡಲಾಗಿದ್ದ ಸಮವಸ್ತ್ರ ಕಳಪೆಯಾಗಿರುವ ಬಗ್ಗೆ ತನಿಖೆ ನಡೆಸಲು ತೀರ್ಮಾನಿಸಲಾಗಿದೆ. ಸಮವಸ್ತ್ರಕ್ಕೆ ಪಾವತಿಸಲಾದ ಮೊತ್ತವನ್ನು ಮರುಪಡೆಯಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಬಿಜೆಪಿ–ಜೆಡಿಎಸ್ ಮೈತ್ರಿ ಗೊತ್ತಿಲ್ಲ: ಯತ್ನಾಳ



ಹೊಸಪೇಟೆ (ವಿಜಯನಗರ): ‘ಜೆಡಿಎಸ್ ಜತೆಗೆ ಬಿಜೆಪಿ ಸಖ್ಯ ನನಗೆ ಗೊತ್ತಿಲ್ಲ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೂ ಮಾಹಿತಿ ಇಲ್ಲ. ಆದರೆ, ಮೈತ್ರಿ ಬಗ್ಗೆ ಬಿ.ಎಸ್. ಯಡಿಯೂರಪ್ಪ ಅವರ ಮಾತನ್ನು ಅಲ್ಲಗಳೆಯಲು ಆಗುವುದಿಲ್ಲ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ಬಿಜೆಪಿಯವರು ಯಾರೂ ಕಾಂಗ್ರೆಸ್ ಸೇರುವುದಿಲ್ಲ. ಈ ಸರ್ಕಾರಕ್ಕೆ ಯಾವ ಆಪರೇಷನ್ ಸಹ ಬೇಕಿಲ್ಲ. ಇನ್ನು ಮೂರು–ನಾಲ್ಕು ತಿಂಗಳಲ್ಲಿ ಎಲ್ಲವೂ ಗೊತ್ತಾಗಲಿದೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘135 ಶಾಸಕರಿದ್ದಾರೆ. ಐದು ಗ್ಯಾರಂಟಿ ಕೊಟ್ಟಿದ್ದಾರೆ. ಅವರಿಗೆ ಆಪರೇಷನ್ ಮಾಡುವ ಅಗತ್ಯ ಏನಿದೆ? ಪಕ್ಷ ಒಡೆಯುತ್ತದೆ ಎಂಬ ಭಯ ಅವರಿಗೆ ತೀವ್ರವಾಗಿ ಕಾಡುತ್ತಿದೆ. ಬಸವರಾಜ ರಾಯರಡ್ಡಿ, ಬಿ.ಆರ್.ಪಾಟೀಲ, ಬಿ.ಕೆ.ಹರಿಪ್ರಸಾದ್ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ’ ಎಂದರು.

ಜೆಡಿಎಸ್ ಸಿದ್ಧಾಂತ ಈಗ ಎಲ್ಲಿ ಹೋಯಿತು?: ಡಿಕೆಶಿ

ಬೆಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಹೋರಾಡುತ್ತೇವೆಂದು ದೇವೇಗೌಡರು ಮತ್ತು ಕುಮಾರಸ್ವಾಮಿ ಹೇಳಿದ್ದರು. ಹಾಗೆಂದಿದ್ದ ಅವರ ಮಾತು, ಅವರ (ಜೆಡಿಎಸ್) ಸಿದ್ಧಾಂತ ಈಗ ಎಲ್ಲಿ ಹೋಯಿತು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಜೆಡಿಎಸ್ ಏಕಾಂಗಿಯಾಗಿಯಾದರೂ ಚುನಾವಣೆಯಲ್ಲಿ ಸ್ಪರ್ಧಿಸಲಿ, ಬಿಜೆಪಿ ಜೊತೆ ಮೈತ್ರಿಯಾದರೂ ಮಾಡಿಕೊಳ್ಳಲಿ. ನಾವು ಆ ಬಗ್ಗೆ ಹಿಂದೆಯೂ ತಲೆಕೆಡಿಸಿಕೊಂಡಿಲ್ಲ. ಮುಂದೆಯೂ ತಲೆಕೆಡಿಸಿಕೊಳ್ಳುವುದಿಲ್ಲ’ ಎಂದು ತಿಳಿಸಿದರು.

‘ದೇವೇಗೌಡರು ಹಾಗೂ ಕುಮಾರಸ್ವಾಮಿ ಈ ಹಿಂದೆ ನೀಡಿದ್ದ ಹೇಳಿಕೆಗಳನ್ನು, ನಿಲುವುಗಳನ್ನು ಮಾಧ್ಯಮದವರು ಕೇಳಬೇಕು ಎಂದರು. ಜೆಡಿಎಸ್– ಬಿಜೆಪಿ ಮೈತ್ರಿಗೆ ನಮ್ಮ ಯಾವುದೇ ಅಭ್ಯಂತರವಿಲ್ಲ. ಅವರ ರಾಜಕೀಯ ನಿಲುವುಗಳ ಬಗ್ಗೆ ಯಾವ ನಾಯಕರು ಪ್ರತಿಕ್ರಿಯೆ ನೀಡಬೇಕೋ ಅವರು ನೀಡುತ್ತಾರೆ. ಅವರ ರಾಜಕೀಯ ಅಸ್ತಿತ್ವಕ್ಕಾಗಿ ಅವರು ತೀರ್ಮಾನ ಮಾಡುತ್ತಾರೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ’ ಎಂದೂ ಹೇಳಿದರು.

ಸುದ್ದಿ 2 ನಿಮಿಷ

‘ಶಂಖನಾದ’ಕ್ಕೆ ಬಿಜೆಪಿ ಚಾಲನೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಪಕ್ಷದ ಸಾಮಾಜಿಕ ಮಾಧ್ಯಮ ತಂಡಗಳನ್ನು ಸಜ್ಜುಗೊಳಿಸುವುದಕ್ಕಾಗಿ ಬಿಜೆಪಿಯು ‘ಶಂಖನಾದ’ ಅಭಿಯಾನ ಹಮ್ಮಿಕೊಂಡಿದೆ. ಪಕ್ಷದ ರಾಜ್ಯ ಘಟಕದ ಸಾಮಾಜಿಕ ಮಾಧ್ಯಮ ತಂಡದ ಕಾರ್ಯಾಗಾರದೊಂದಿಗೆ ಶನಿವಾರ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಭಿಯಾನವನ್ನು ಉದ್ಘಾಟಿಸಿದರು. ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣ, ಸಾಮಾಜಿಕ ಮಾಧ್ಯಮ ಪ್ರಕೋಷ್ಠದ ರಾಜ್ಯ ಸಂಚಾಲಕ ವಿಕಾಸ್ ಪುತ್ತೂರು, ಗೋವಾ ರಾಜ್ಯ ಘಟಕದ ವಕ್ತಾರ ಗಿರಿರಾಜ್ ಪೈ, ಶಂಖನಾದ ಅಭಿಯಾನದ ಪ್ರಭಾರಿ ವಿಕಾಸ್ ಪಾಂಡೆ, ಅಭಿಯಾನದ ರಾಜ್ಯ ಸಂಚಾಲಕ ರಾಘವೇಂದ್ರ ನಾಗೂರ, ಸಾಮಾಜಿಕ ಮಾಧ್ಯಮ ಪ್ರಕೋಷ್ಠದ ರಾಜ್ಯ ಸಹ ಸಂಚಾಲಕ ನರೇಂದ್ರ ಮೂರ್ತಿ, ಮಾಹಿತಿ ತಂತ್ರಜ್ಞಾನ ವಿಭಾಗದ ರಾಜ್ಯ ಸಂಚಾಲಕ ನಿತಿನ್ ರಾಜ್ ನಾಯ್ಕ್, ಸಾಮಾಜಿಕ ಮಾಧ್ಯಮ ಪ್ರಕೋಷ್ಠದ ಸದಸ್ಯ ಪ್ರಶಾಂತ್ ಜಾಧವ್ ಸಭೆಯಲ್ಲಿದ್ದರು.

‘ಲೋಕಸಭಾ ಚುನಾವಣೆಗೆ ಪೂರಕವಾಗಿ ಸಾಮಾಜಿಕ ಮಾಧ್ಯಮ ಪ್ರಕೋಷ್ಠಗಳ ಸದಸ್ಯರನ್ನು ಸಜ್ಜುಗೊಳಿಸಲು ದೇಶದಾದ್ಯಂತ ಅಭಿಯಾನ ಆರಂಭಿಸಲಾಗಿದೆ. ಮುಂದಿನ ಹಂತದಲ್ಲಿ ವಿಭಾಗ ಮಟ್ಟದಲ್ಲಿ ತರಬೇತಿ ನಡೆಯಲಿದೆ. ನಂತರದಲ್ಲಿ ಜಿಲ್ಲೆ, ಮಂಡಲ ಹಂತದಲ್ಲಿ ಕಾರ್ಯಾಗಾರ ಆಯೋಜಿಸಲಾಗುತ್ತದೆ’ ಎಂದು ಬಿಜೆಪಿ ಮುಖಂಡರು ತಿಳಿಸಿದ್ದಾರೆ.

ಕರಾವಳಿಯಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಒಳನಾಡು ಜಿಲ್ಲೆಗಳಲ್ಲಿ ಭಾನುವಾರ ಹಾಗೂ ಸೋಮವಾರ ಉತ್ತಮ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಒಳನಾಡು ಜಿಲ್ಲೆಗಳಲ್ಲಿ ಗಾಳಿಯು ಗಂಟೆಗೆ 30–40 ಕಿ.ಮೀ ವೇಗದಲ್ಲಿ ಬೀಸಲಿದೆ. ಕರಾವಳಿ ವ್ಯಾಪ್ತಿಯಲ್ಲಿ ಗಾಳಿ ಗಂಟೆಗೆ 40 ಕಿ.ಮೀನಿಂದ 55 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಸೂಚಿಸಲಾಗಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯೂಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	98.06	3,760	3,747
ಹಾರಂಗಿ	2,859	2,856.44	2,403	100
ಕಬಿನಿ	2284.00	2,275.14	6,572	1,100
ಹೇಮಾವತಿ	2,922	2,901.69	759	6,090
ಲಿಂಗನಮಕ್ಕಿ	1,819	1,787.15	3,937	00
ಸೂಪಾ (ಮೀ)	564	545.52	1,909	1,220
ಮಾಣಿ	595	579.52	1,142	00
ತುಂಗಭದ್ರಾ	1,633	1,623.14	1,635	9,925
ಮಲಪ್ರಭಾ	2079.5	2,065.80	194	194
ಘಟಪ್ರಭಾ	2175	2,162.850	601	180
ಭದ್ರಾ	186	162.1	397	2,492
ಆಲಮಟ್ಟಿ (ಮೀ)	519.60	519.20	00	11,701
ನಾರಾಯಣಪುರ (ಮೀ)	492.25	490.44	10,124	9,105

* ನೆಲಮಟ್ಟದಿಂದ



ರಥೋತ್ಸವ ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ತೊಂಡೆತೇವರಪ್ಪ ರಥೋತ್ಸವ ಶನಿವಾರ ಸಂಜೆ ವಿಜೃಂಭಣೆಯಿಂದ ನೆರವೇರಿತು -ಚಿತ್ರ: ಮೆಹಬೂಬಹುಸೇನ

ಸನಾತನ ಧರ್ಮ: ಕಾಂಗ್ರೆಸ್ ಅಜೆಂಡಾ ಅಲ್ಲ– ಖರ್ಗೆ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: ‘ನಾವು ರಾಜಕೀಯ ಹೋರಾಟಕ್ಕಾಗಿ ಒಂದಾಗಿದ್ದೇವೆ. ಸನಾತನ ಧರ್ಮ ನಿರ್ಮೂಲನೆ ಕುರಿತು ಉದಯನಿಧಿ ಸ್ಟಾಲಿನ್ ಆಡಿರುವ ಮಾತು ವೈಯಕ್ತಿಕವಾದುದು. ಈ ವಿಚಾರ ನಮ್ಮ ಪಕ್ಷದ ಅಜೆಂಡಾದಲ್ಲಿ ಇಲ್ಲ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

‘ಸನಾತನ ಧರ್ಮ ನಿರ್ಮೂಲನೆ’ ವಿವಾದ ಕುರಿತ ಪ್ರಶ್ನೆಗೆ ನಗರದಲ್ಲಿ ಶನಿವಾರ ಸುದ್ದಿಗಾರರರಿಗೆ ಉತ್ತರಿಸಿದ ಅವರು, ‘ಸಂವಿಧಾನದ ಆಧಾರದ ಮೇಲೆ ಎಲ್ಲರನ್ನೂ ಒಗ್ಗೂಡಿಸುವುದು, ಸರ್ವ ಧರ್ಮಗಳ ಸಮಭಾವ ನಮ್ಮ ಪಕ್ಷದ ನೀತಿ. ರಾಜಕೀಯದಲ್ಲಿ ಧರ್ಮ ಹಾಗೂ ಧರ್ಮದಲ್ಲಿ ರಾಜಕೀಯವನ್ನು ನಾವು ತರುವುದಿಲ್ಲ. ಯಾವ ಹೇಳಿಕೆ, ತತ್ವಗಳಿಂದ ಅನ್ಯಾಯ ಆಗುತ್ತದೆಯೋ ಅದನ್ನು ಬೇರೆ ವೇದಿಕೆಗಳಲ್ಲಿ ಚರ್ಚಿಸುತ್ತೇವೆ’ ಎಂದರು.

‘ಭಾರತ–ಇಂಡಿಯಾ ದಂತಹ ವಿಷಯಗಳನ್ನು ತಂದು ಸಮಾಜ ಒಡೆದು, ಭ್ರಮೆ ಸೃಷ್ಟಿಸಬಾರದು. 4,500 ಕಿ.ಮೀ. ಭಾರತ ಜೋಡೊ ಯಾತ್ರೆ ಮಾಡಿ ಭಾರತದ ಹೆಸರನ್ನು ಪ್ರಚಾರ ಮಾಡಿದ್ದೇ ನಾವು. ‘ಇಂಡಿಯಾ’ ಒಕ್ಕೂಟ ಬಂದ ಮೇಲೆ ಏನು ಅನಿಸಿತ್ತೋ ಗೊತ್ತಿಲ್ಲ, ಈಗ ಹೆಸರು ಬದಲಾವಣೆಗೆ ಮುಂದಾಗಿದ್ದಾರೆ. ಖೇಲೊ ಇಂಡಿಯಾ, ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ ಹೆಸರು ಇರಿಸಿದ್ದು ನೀವೇ ಅಲ್ಲವೇ’ ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು.

‘ಸಾಮರಸ್ಯದ ಘೋಷಣೆಯಡಿ ಜಿ20 ಶೃಂಗಸಭೆ ನಡೆಯುತ್ತಿದೆ. ದೇಶ–ಪ್ರಪಂಚದಲ್ಲಿ ಗದ್ದಲ ಇಲ್ಲದೇ ಸಾಮರಸ್ಯ ಮೂಡಲಿ ಎಂಬುದು ಒಳ್ಳೆಯ ಆಶಯ. ಜಿ20 ಶೃಂಗಸಭೆಗೆ ಆಹ್ವಾನ ನೀಡದೇ ಇರುವುದರಿಂದ ನಾನು ಪಾಲ್ಗೊಳ್ಳುತ್ತಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಾಣಿಜ್ಯ ಮಳಿಗೆಗೆ ₹10 ಲಕ್ಷ ವಿದ್ಯುತ್ ಬಿಲ್!

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು): ಪಟ್ಟಣದ ಉಳುಕಿನಕಲ್ಲು ಸಮೀಪದ ಡಾಗಾ ಕಾಂಪ್ಲೆಕ್ಸ್‌ನ ಮೋಹಿತ್ ಏಜೆನ್ಸಿಗೆ ಆಗಸ್ಟ್ ತಿಂಗಳ ವಿದ್ಯುತ್ ಬಿಲ್ ₹10,26,054 ಬಂದಿದೆ.

ಪ್ರತಿ ತಿಂಗಳು ವಿದ್ಯುತ್‌ಬಿಲ್ ₹4 ಸಾವಿರದಿಂದ ₹4,500 ಬರುತ್ತಿತ್ತು. ಆಗಸ್ಟ್ ತಿಂಗಳ ಬಿಲ್ ಏಕಾಏಕಿ ₹10 ಲಕ್ಷ ಬಂದಿದೆ. ಬಿಲ್ ಅವಧಿಯನ್ನು ಆಗಸ್ಟ್ 1ರಿಂದ ಸೆಪ್ಟೆಂಬರ್ 1ರವರೆಗೆ ಎಂದು ನಮೂದಿಸಲಾಗಿದೆ. ₹8,35,737 ಬಿಲ್, ಎಫ್‌ಪಿಪಿಎಸಿ (1.16) ತೆರಿಗೆ ಶೇ 0.9 (₹75,216) ಸೇರಿ ಒಟ್ಟು ₹10,260,54 ಬಿಲ್ ಅನ್ನು ನೀಡಲಾಗಿದೆ.

‘ವಿದ್ಯುತ್ ಬಿಲ್ ಅನ್ನು ಸಮಯಕ್ಕೆ ಸರಿಯಾಗಿ ಪಾವತಿಸುತ್ತ ಬಂದಿದ್ದೇವೆ. ಕಡೂರು ಮೆಸ್ಕಾಂ ಅಧಿಕಾರಿಗಳನ್ನು ಸಂಪರ್ಕಿಸಿದ್ದು ಸರಿಪಡಿಸಿಕೊಡುತ್ತೇವೆ ಎಂದು ಹೇಳಿ ನಾಲ್ಕು ದಿನಗಳಾಗಿದ್ದರೂ ಯಾವುದೇ ಮಾಹಿತಿ ನೀಡಿಲ್ಲ’ ಎಂದು ಮೋಹಿತ್ ಏಜೆನ್ಸಿಯ ಕಮಲ್ ಚಂದ್ ಡಾಗಾ ಹಾಗೂ ಮೋಹಿತ್ ಡಾಗಾ ಅಸಮಾಧಾನ ವ್ಯಕ್ತಪಡಿಸಿದರು.

‘ಸಾಫ್ಟ್‌ವೇರ್ ದೋಷದಿಂದ ಈ ರೀತಿಯಾಗಿರಬಹುದು. ಕೆಲವೆಡೆ ₹500 ಬದಲಿಗೆ ₹15 ಸಾವಿರ ಬಿಲ್ ತೋರಿಸುತ್ತಿದೆ. ಪರಿಶೀಲಿಸಿ ಸಮಸ್ಯೆ ಬಗೆಹರಿಸುತ್ತೇವೆ’ ಎಂದು ಮೆಸ್ಕಾಂ ಎಇಇ ಲಿಂಗರಾಜು ತಿಳಿಸಿದ್ದಾರೆ.

‘ಕನ್ನಡ ಭಾಷೆಗೆ ಮಿತಿ ಇದೆ’

ಪ್ರಜಾವಾಣಿ ವಾರ್ತೆ



ರೋಹಿತ್ ಚಕ್ರತೀರ್ಥ

ಉಡುಪಿ: ಜಗತ್ತಿನಲ್ಲಿ ಕನ್ನಡ ಮಾತ್ರ ಹಳೆಯ ಭಾಷೆ, ಕನ್ನಡ ಹೊರತಾಗಿ ಪ್ರಾಚೀನ ಭಾಷೆಗಳಿಲ್ಲ. ಹೇಳಿದ್ದನ್ನು ಬರೆಯುವ ಅನುಕೂಲ ಕನ್ನಡಕ್ಕೆ ಹೊರತಾಗಿ ಯಾವ ಭಾಷೆಗೂ ಇಲ್ಲ, ಇಂತಹ ಹೊಸ ಸಿದ್ಧಾಂತಗಳು ಸಂಘರ್ಷ ಸೃಷ್ಟಿಸುತ್ತಿವೆ ಎಂದು ಲೇಖಕ ರೋಹಿತ್ ಚಕ್ರತೀರ್ಥ ಅಭಿಪ್ರಾಯಪಟ್ಟರು.

ಅದಮಾರು ಮಠದ ವತಿಯಿಂದ ಪೂರ್ಣಪ್ರಜ್ಞ ಕಾಲೇಜು ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ವಿಶ್ವಾರ್ಪಣಂ’ ಕಾರ್ಯಕ್ರಮದಲ್ಲಿ ‘ಸೃಜನಾತ್ಮಕ ಭಾರತೀಯ ಅಸ್ಮಿತೆ ಮತ್ತು ಮಣಿಪುರದ ವಿದ್ಯಮಾನಗಳು’ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಕನ್ನಡ ಭಾಷೆಗೆ ಪ್ರಾಚೀನ ಇತಿಹಾಸ ಹಾಗೂ ಲಿಪಿ ಇದೆ. ಶಾಸ್ತ್ರ, ಗ್ರಂಥ, ಮಹಾಕಾವ್ಯಗಳು ಕನ್ನಡದಲ್ಲಿ ರಚನೆಯಾಗಿವೆ ಎಂಬುದನ್ನೆಲ್ಲ ಒಪ್ಪಿಕೊಳ್ಳಬಹುದಾಗಿದ್ದರೂ ಕನ್ನಡ ಭಾಷೆಗೆ ಮಿತಿ ಇದೆ ಎಂಬುದನ್ನೂ ಒಪ್ಪಿಕೊಳ್ಳಬೇಕು’ ಎಂದರು.

‘ಹೇಳಿದ್ದನ್ನೆಲ್ಲವನ್ನೂ ಕನ್ನಡದಲ್ಲಿ ಬರೆಯಬಹುದು ಎಂದು ಕೆಲವರು ವಾದಿಸುತ್ತಾರೆ. ಆದರೆ, ಬಹಳಷ್ಟು ತುಳು, ಇಂಗ್ಲಿಷ್ ಪದಗಳನ್ನು ಕನ್ನಡ ಭಾಷೆಯಲ್ಲಿ ಅದೇ ಸ್ವರ ಬರುವಂತೆ ಬರೆಯಲು ಸಾಧ್ಯವಿದೆಯೇ’ ಎಂದು ರೋಹಿತ್ ಚಕ್ರತೀರ್ಥ ಪ್ರಶ್ನಿಸಿದರು.


‘50 ವರ್ಷಗಳ ಹಿಂದೆ ನಾನೊಬ್ಬ ಸನಾತನಿ, ಹಿಂದೂ ಎಂದು ಹೆಮ್ಮೆ ಹಾಗೂ ಪ್ರೀತಿಯಿಂದ ಹೇಳಿಕೊಳ್ಳುವ ವಾತಾವರಣ ಇತ್ತು. ಪ್ರಸ್ತುತ ಹಿಂದೂ, ಸನಾತನಿ, ಭಾರತೀಯ ಎಂದು ಹೇಳಿಕೊಂಡರೆ ಜಗಳಕ್ಕಿಳಿಯುತ್ತಿದ್ದಾರೆ. ಅಸ್ಮಿತೆಯ ವಿಚಾರಗಳು ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತಿವೆ’ ಎಂದರು.

ಬ್ರಾಹ್ಮಣ, ಅಬ್ರಾಹ್ಮಣ, ಕನ್ನಡ ಹಾಗೂ ಇತರೆ ಭಾಷೆಗಳ ಮಧ್ಯೆ ಸಂಘರ್ಷಗಳು ನಡೆಯುತ್ತಿದ್ದು ಇದರ ಹಿಂದೆ ಹುನ್ನಾರ ಇದೆಯೇ, ಸಂಘರ್ಷ ಹುಟ್ಟುಹಾಕಲೆಂದೇ ಅಸ್ಮಿತೆಯ ಪ್ರಶ್ನೆಯನ್ನು ಮುನ್ನೆಲೆಗೆ ತರಲಾಗುತ್ತಿದೆಯೇ, ಇಷ್ಟು ದಿನ ಸಮಸ್ಯೆಯಾಗದ ಅಸ್ಮಿತೆ ಪ್ರಸ್ತುತ ಸಮಸ್ಯೆಯಾಗಿರುವುದೇಕೆ ಎಂದು ಪ್ರಶ್ನಿಸಿದರು.

400ರಿಂದ 500 ವರ್ಷಗಳ ಹಿಂದೆ ರಾಜರ ಕಾಲದಲ್ಲಿ ಎರಡ್ಮೂರು ಭಾಷೆಗಳಲ್ಲಿ ಸಂವಹನ, ವ್ಯವಹಾರ ನಡೆಯುತ್ತಿತ್ತು. ವಿಜಯನಗರ ಕಾಲದಲ್ಲಿ ಕನ್ನಡ, ಸಂಸ್ಕೃತ, ತೆಲುಗು ಭಾಷೆಗಳ ಬಳಕೆ ಇತ್ತು. ಭಾಷಾ ಸಂಘರ್ಷಗಳು ಇರಲಿಲ್ಲ. ಪ್ರಸ್ತುತ ವಿಧಾನಸೌಧದಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ ಕನ್ನಡ ಹೊರತಾಗಿ ಮತ್ತೊಂದು ಭಾಷೆಯ ಬಳಕೆ ಸಾಧ್ಯವಿಲ್ಲದಂತಾಗಿದೆ ಎಂದರು.

ನಿಜಗುಣಾನಂದ ಶ್ರೀಗೆ ಕೊಲೆ ಬೆದರಿಕೆ: ದೂರು ದಾಖಲು

ಪ್ರಜಾವಾಣಿ ವಾರ್ತೆ



ನಿಜಗುಣಾನಂದ ಸ್ವಾಮೀಜಿ

ಬೈಲೂರು (ಬೆಳಗಾವಿ ಜಿಲ್ಲೆ): ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಬೈಲೂರು ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ ಅವರಿಗೆ ಆ.8ರಂದು ಅನಾಮಧೇಯ ಕೊಲೆ ಬೆದರಿಕೆ ಪತ್ರ ಬಂದಿದೆ. ಶ್ರೀಗಳು ಭಕ್ತರ ಮುಂದೆ ಶನಿವಾರ ವಿಷಯ ತಿಳಿಸಿದ್ದಾರೆ. ಈ ಕುರಿತು ಕಿತ್ತೂರು ಠಾಣೆಯಲ್ಲಿ ದೂರು ಕೂಡ ದಾಖಲಿಸಿದ್ದಾರೆ.

2020ರಲ್ಲಿ ಕೂಡ ಶ್ರೀಗಳಿಗೆ ಇದೇ ರೀತಿಯ ಕೊಲೆ ಬೆದರಿಕೆ ಪತ್ರ ಬಂದಿತ್ತು. ಈ ಸಂಗತಿಯನ್ನು ಈಗ ಬಂದಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ನಿಜಗುಣಾನಂದ ನಿನ್ನ ಸಾವು 2020ರಲ್ಲಿ ತಪ್ಪಿರಬಹುದು. 2023ರಲ್ಲಿ ತಪ್ಪುವುದಿಲ್ಲ. ನಿನ್ನ ಪಾಪದ ಮಾತಿನ ಕೊಡ ತುಂಬಿದೆ. ಆದಷ್ಟು ಬೇಗ ನಿನ್ನ ಭಕ್ತಾದಿಗಳಿಗೆ ನಿನ್ನ ತಿಥಿ ಬಗ್ಗೆ ಹೇಳು. ನಮ್ಮ ಧರ್ಮದ ದೇವತೆಗಳನ್ನು ನಿಂದಿಸುವ ನಿನಗೆ ಘೋರವಾದ ಹತ್ಯೆಯೇ ಬರುತ್ತದೆ. ನಿನ್ನ ಅಂತಿಮ ದಿನಗಳು ಪ್ರಾರಂಭವಾಗಿವೆ. ದಿನಗಳನ್ನು ಎಣಿಸು’ ಎಂದು ಬಿಳಿ ಹಾಳೆಯಲ್ಲಿ ಬರೆದು, ಅದನ್ನು ಪ್ಯಾಕೆಟ್‌ನಲ್ಲಿ ಇಟ್ಟು ಕಳಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸ್ವಾಮೀಜಿ, ‘ಇದು ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ ಬರೆದ ಪತ್ರ. ನಮ್ಮ ತತ್ವ–ಸಿದ್ಧಾಂತಗಳನ್ನು ಒಪ್ಪಿಕೊಳ್ಳದವರ ಕೆಲಸ. ಹಣದ ಆಸೆಗೆ ಯಾರೂ ಬೆದರಿಕೆ ಒಡ್ಡಿಲ್ಲ. ಇಂಥ ಸಂದರ್ಭಗಳಲ್ಲಿ ರಕ್ಷಣೆ ಒದಗಿಸಬೇಕಾದುದು ಸರ್ಕಾರದ ಕರ್ತವ್ಯ’ ಎಂದು ಹೇಳಿದರು.

ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಶಂಸುಲ್ ಇಸ್ಲಾಂ ಪ್ರಶ್ನೆ

ಜೈನ, ಬೌದ್ಧ, ಸಿಖ್ ಸನಾತನ ಧರ್ಮ ಅಲ್ಲವೇ?

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಹಿಂದೂ ಧರ್ಮವೊಂದೇ ಸನಾತನ ಧರ್ಮ ಎಂಬುದನ್ನು ಒಪ್ಪಲಾಗದು. ಮುಸ್ಲಿಂ, ಕ್ರೈಸ್ತ ಧರ್ಮಗಳು ಹೊರಗಿನಿಂದ ಬಂದ ಧರ್ಮಗಳು ಎಂದು ವಾದಿಸಬಹುದು. ಆದರೆ ಜೈನ, ಬೌದ್ಧ, ಸಿಖ್ ಧರ್ಮಗಳು ಸನಾತನ ಧರ್ಮಗಳು ಅಲ್ಲವೇ’ ಎಂದು ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಶಂಸುಲ್ ಇಸ್ಲಾಂ ಪ್ರಶ್ನಿಸಿದರು.

ನಗರದ ವಿಶ್ವವಿದ್ಯಾಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ಶನಿವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರ ಬಿ.ವಿ. ಕಕ್ಕಿಲ್ಲಾಯ ಪ್ರೇರಿತ ‘ಮೊದಲ ಸ್ವಾತಂತ್ರ್ಯ ಸಂಗ್ರಾಮ, 1857– ಜಂಟಿ ಬಲಿದಾನಗಳು, ಜಂಟಿ ವಾರಸುದಾರಿಕೆ’ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

‘ನಾವು ಸನಾತನ ಧರ್ಮದ ಬಗ್ಗೆ ಮಾತನಾಡುತ್ತಿದ್ದೇವೆ. ಮಹಾತ್ಮ ಗಾಂಧಿ ಬಹುದೊಡ್ಡ ಸನಾತನ ಧರ್ಮಿ. ಅವರನ್ನು ಕೊಂದವರು ಪಾಕಿಸ್ತಾನಿಗಳೇ? ಐಎಸ್‌ಎಸ್ ಉಗ್ರರೇ? ನಾಥೂರಾಮ್ ಗೋಡ್ಸೆ ಶ್ರೀಕೃಷ್ಣನ ಅವತಾರದಲ್ಲಿ ಬಂದು ಗಾಂಧೀಜಿಯನ್ನು ಹತ್ಯೆ ಮಾಡಿದ್ದಾರೆ ಎಂದು ಹಿಂದುತ್ವವಾದಿಗಳೇ ಬರೆದುಕೊಂಡಿದ್ದಾರೆ’ ಎಂದರು.

ಶಂಸುಲ್ ಅವರು ಕಾಲೇಜಿನ ಆವರಣಕ್ಕೆ ಬರುವುದನ್ನು ವಿರೋಧಿಸಿದ ಎಬಿವಿಪಿ ಕಾರ್ಯಕರ್ತರು, ‘ಶಂಸುಲ್ ಗೋ ಬ್ಯಾಕ್’ ಎಂದು ಘೋಷಣೆ ಕೂಗಿದರು. ಪ್ರತಿಭಟನೆಗೆ ಹೊರಗಿನಿಂದ ಬಂದಿದ್ದ 10ಕ್ಕೂ ಹೆಚ್ಚು ಎಬಿವಿಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರೆ, ಸಭಾಭವನದಲ್ಲಿ ಉಪನ್ಯಾಸ ಕಾರ್ಯಕ್ರಮ ತಡೆಯಿಲ್ಲದೆ ನಡೆಯಿತು. ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಪ್ರೊ. ಕೇಶವನ್ ಅವರಿಗೆ ಮುತ್ತಿಗೆ: ‘ಶಂಸುಲ್ ಇಸ್ಲಾಂ ಅವರನ್ನು ಸಭಾಭವನಕ್ಕೆ ಬರದಂತೆ ತಡೆಯಬೇಕೆಂದು ನಿಂತಿದ್ದ ಎಬಿವಿಪಿಯವರು, ಮಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಕೇಶವನ್ ವೇಲುತಾಟ್ ಅವರು ಬಂದಾಗ, ಅವರೇ ಶಂಸುಲ್ ಎಂದು ತಿಳಿದು ಮುತ್ತಿಗೆ ಹಾಕಿದರು.



ಕರ್ನಾಟಕದಲ್ಲಿ 1857ರ ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ಸಂಬಂಧಿಸಿ ನಾಲ್ಕು ಘಟನೆಗಳು ಹಾಗೂ ಆ ಘಟನೆಗಳಲ್ಲಿ ಪ್ರಾಣತ್ಯಾಗ ಮಾಡಿದ 132 ಹುತಾತ್ಮರ ಹೆಸರುಗಳ ಫಲಕವನ್ನು ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಆವರಣದಲ್ಲಿ ಪ್ರೊ. ಶಂಸುಲ್ ಇಸ್ಲಾಂ ಅನಾವರಣಗೊಳಿಸಿದರು. ಮುನೀರ್ ಕಾಟಿಪಳ್ಳ, ಡಾ. ಶ್ರೀನಿವಾಸ ಕಕ್ಕಿಲ್ಲಾಯ, ಪ್ರೊ. ಕೇಶವನ್ ವೇಲುತಾಟ್, ಸಿದ್ದನಗೌಡ ಪಾಟೀಲ ಮತ್ತಿತರರು ಇದ್ದರು – ಪ್ರಜಾವಾಣಿ ಚಿತ್ರ

ಕೃಷಿ ಭಾಗ್ಯ ಮತ್ತೆ ಆರಂಭ: ಸಿ.ಎಂ

ಪ್ರಜಾವಾಣಿ ವಾರ್ತೆ

ಧಾರವಾಡ: ‘ಹಿಂದಿನ ಬಿಜೆಪಿ ಸರ್ಕಾರ ಕೃಷಿ ಭಾಗ್ಯ ಯೋಜನೆ ಸ್ಥಗಿತಗೊಳಿಸಿತ್ತು. ಇದನ್ನು ಮತ್ತೆ ಪ್ರಾರಂಭಿಸುತ್ತೇವೆ. ಒಣ ಬೇಸಾಯ ಮಾಡುವವರಿಗೆ ಈ ಯೋಜನೆ ಅವಶ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಶನಿವಾರ ಕೃಷಿ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಬರಗಾಲ ಇದೆ. ಇಂಥ ಸನ್ನಿವೇಶದಲ್ಲಿ ಬೆಳೆ ನಾಶವಾದಾಗ ಪರ್ಯಾಯ ಬೆಳೆ ಬಗ್ಗೆ ರೈತರಿಗೆ ಕೃಷಿ ವಿಶ್ವವಿದ್ಯಾಲಯಗಳು ಮಾಹಿತಿ ನೀಡಬೇಕು’ ಎಂದರು.

‘ಸಿರಿಧಾನ್ಯಗಳಲ್ಲಿ ನಾರಿನ ಅಂಶ, ಪೌಷ್ಟಿಕಾಂಶ ಹೆಚ್ಚು ಇದೆ. ಈ ಧಾನ್ಯಗಳ ಬಳಕೆ ಜಾಸ್ತಿಯಾಗಿದೆ. ರೈತರಿಗೆ ಈ ಬಗ್ಗೆ ತಿಳಿವಳಿಕೆ ನೀಡಬೇಕು. ಸಿರಿಧಾನ್ಯಗಳ ಬಗ್ಗೆ ಜನರು ಪ್ರಭಾವಿತರಾಗಬೇಕು, ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕು’ ಎಂದರು.

ಕೃಷಿ ಮೇಳವು 12ರವರೆಗೆ ನಡೆಯಲಿದ್ದು, ವಿವಿಧ ಜಿಲ್ಲೆಗಳಿಂದ ಭಾರಿ ಸಂಖ್ಯೆಯಲ್ಲಿ ರೈತರು ಮತ್ತು ವಿವಿಧ ಸಂಘಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಪರಿಸರ ಸಂರಕ್ಷಣೆ ಉಪಕ್ರಮದ ಭಾಗವಾಗಲು ಇತರ ರಾಷ್ಟ್ರಗಳಿಗೆ ಪ್ರಧಾನಿ ನರೇಂದ್ರ ಮೋದಿ ಆಹ್ವಾನ

‘ಜೈವಿಕ ಇಂಧನ ಕೂಟ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಸರ ಸಂರಕ್ಷಣೆಯ ಆಶಯದ ‘ಅಂತರರಾಷ್ಟ್ರೀಯ ಜೈವಿಕ ಇಂಧನ ಕೂಟ’ಕ್ಕೆ ಚಾಲನೆ, ಪರಿಸರ ಮತ್ತು ಹವಾಮಾನಕ್ಕೆ ಸಂಬಂಧಿಸಿದ ವಿದ್ಯಮಾನಗಳ ವೈಜ್ಞಾನಿಕ ವೀಕ್ಷಣೆ ಉದ್ದೇಶದ ‘ಜಿ20 ಉಪಗ್ರಹ ಕಾರ್ಯಕ್ರಮ’ ಆರಂಭಿಸುವ ಪ್ರಸ್ತಾವ ವನ್ನು ಪ್ರಧಾನಿ ನರೇಂದ್ರ ಮೋದಿ ಶನಿವಾರ ಪ್ರಕಟಿಸಿದ್ದಾರೆ.

ನಗರದ ಪ್ರಗತಿ ಮೈದಾನದಲ್ಲಿ ನಿರ್ಮಿಸಿರುವ ‘ಭಾರತ ಮಂಟಪ’ದಲ್ಲಿ ಆರಂಭಗೊಂಡ ಜಿ20 ಶೃಂಗಸಭೆಯ ಎರಡನೇ ಗೋಷ್ಠಿಯಲ್ಲಿ ಮೋದಿ ಈ ಉಪಕ್ರಮಗಳ ಕುರಿತು ವಿವರಿಸಿದರು.

‘ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವ ಕಾರ್ಯಕ್ಕೆ ಎಲ್ಲ ದೇಶಗಳು ಕೈಜೋಡಿಸುವುದು ಇಂದಿನ ತುರ್ತು. ಈ ಉಪಕ್ರಮದ ಭಾಗವಾಗುವಂತೆ ಎಲ್ಲ ರಾಷ್ಟ್ರಗಳನ್ನು ಆಹ್ವಾನಿಸುವೆ’ ಎಂದು ಹೇಳಿದರು.

‘ಪೆಟ್ರೋಲ್‌ನಲ್ಲಿ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡುವ ಈ ಉಪಕ್ರಮವನ್ನು ಜಾಗತಿಕ ಮಟ್ಟದಲ್ಲಿ ಆರಂಭಿಸಬೇಕು. ಇಲ್ಲವೇ, ಇದಕ್ಕಿಂತಲೂ ಹೆಚ್ಚು ಉಪಯುಕ್ತತೆ ಇರುವ ಮಿಶ್ರಣವನ್ನು ಅಭಿವೃದ್ಧಿಪಡಿಸಬೇಕು ಎಂಬುದು ನಮ್ಮ ಉದ್ದೇಶ’ ಎಂದು ಹೇಳಿದರು.

‘ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣಕ್ಕೆ ಸಂಬಂಧಿಸಿ ಬಹು ಸಂಯೋಜನೆಗಳಿಗೆ ‘ಕೂಟ’ವು ಮುಕ್ತವಾಗಿದೆ. ಈ ಮಿಶ್ರಣವು ಇಂಧನ ಪೂರೈಕೆ ವಿಷಯದಲ್ಲಿ ಸ್ಥಿರತೆಯನ್ನು ಖಾತ್ರಿಪಡಿಸುವ ಜೊತೆಗೆ ಹವಾಮಾನ ಬದಲಾವಣೆಯಿಂದಾಗುವ ಪರಿಣಾಮಗಳನ್ನು ತಗ್ಗಿಸುವಂತಿರಬೇಕು’ ಎಂದು ಮೋದಿ ವಿವರಿಸಿದರು.

‘ಅಂತರರಾಷ್ಟ್ರೀಯ ಜೈವಿಕ ಇಂಧನ ಕೂಟ’ ರಚನೆಯು ಭಾರತ, ಅಮೆರಿಕ ಹಾಗೂ ಬ್ರೆಜಿಲ್‌ನ ಆಲೋಚನೆಯಾಗಿದ್ದು, ಅಧಿಕ ಪ್ರಮಾಣದ ಜೈವಿಕ ಇಂಧನ ಉತ್ಪಾದನೆ ಹಾಗೂ ಬಳಕೆಯಲ್ಲಿ ಈ ಮೂರು ದೇಶಗಳು ಮುಂಚೂಣಿಯಲ್ಲಿವೆ.

‘ದತ್ತಾಂಶ ಹಂಚಿಕೆ’: ‘ಚಂದ್ರಯಾನ–3’ರ ಯಶಸ್ಸನ್ನು ಪ್ರಸ್ತಾಪಿಸಿದ ಮೋದಿ, ಈ ಬಾಹ್ಯಾಕಾಶ ಕಾರ್ಯಕ್ರಮದಡಿ ಸಂಗ್ರಹಿಸುವ ದತ್ತಾಂಶಗಳನ್ನು ವಿಶ್ವದ ಎಲ್ಲ ವಿಜ್ಞಾನಿಗಳೊಂದಿಗೆ ಭಾರತ ಹಂಚಿಕೊಳ್ಳಲಿದೆ ಎಂದರು.

‘ಪರಿಸರ ಮತ್ತು ಹವಾಮಾನ ಕುರಿತ ಅಧ್ಯಯನ, ವೀಕ್ಷಣೆಗೆ ಅನುಕೂಲ ಕಲ್ಪಿಸುವ ‘ಜಿ20 ಉಪಗ್ರಹ ಕಾರ್ಯಕ್ರಮ’ ಆರಂಭಿಸುವ ಕುರಿತ ಪ್ರಸ್ತಾವವನ್ನೂ ಮೋದಿ ಮಂಡಿಸಿದರು.

‘ಈ ಪ್ರಸ್ತಾವಿತ ಕಾರ್ಯಕ್ರಮದಡಿ ಸಂಗ್ರಹಿಸಲಾಗುವ ದತ್ತಾಂಶಗಳನ್ನು ಎಲ್ಲ ದೇಶಗಳೊಂದಿಗೆ ಹಂಚಿಕೊಳ್ಳಲಾಗುವುದು’ ಎಂದೂ ಹೇಳಿದರು.

‘ಜೈವಿಕ ಇಂಧನ ಕೂಟ’ದ ಉದ್ದೇಶ:

- ಸುಸ್ಥಿರ ಜೈವಿಕ ಇಂಧನಗಳ ಬಳಕೆ ಹೆಚ್ಚಳ, ಸಹಕಾರ ವೃದ್ಧಿಗೆ ನೆರವು
- ಜೈವಿಕ ಇಂಧನಗಳ ಜಾಗತಿಕ ಮಾರಾಟಕ್ಕೆ ಒತ್ತು, ಮಾರುಕಟ್ಟೆ ಬಲಪಡಿಸುವುದು
- ಜೈವಿಕ ಇಂಧನಗಳಿಗೆ ಸಂಬಂಧಿಸಿ ಸಮರ್ಪಕ ನೀತಿ ರೂಪಿಸುವುದು. ರಾಷ್ಟ್ರಗಳು ತಮ್ಮದೇ ಆದ ಕಾರ್ಯಕ್ರಮ ಹೊಂದುವುದಕ್ಕೆ ಉತ್ತೇಜನ

‘ಭಯೋತ್ಪಾದನೆ ನಿಗ್ರಹಕ್ಕೆ ಜಾಗತಿಕ ಸಹಕಾರ ಅಗತ್ಯ’

ನವದೆಹಲಿ: ‘ಭಯೋತ್ಪಾದನೆಯು ಜಗತ್ತು ಎದುರಿಸುತ್ತಿರುವ ಬಹು ಗಂಭೀರ ಬೆದರಿಕೆ. ಇದನ್ನು ಮಟ್ಟ ಹಾಕಲು ಉಗ್ರ ಸಂಘಟನೆಗಳಿಗೆ ಹಣಕಾಸು ಅಥವಾ ರಾಜಕೀಯ ನೆರವು ನೀಡುವುದನ್ನು ನಿಲ್ಲಿಸುವುದು ಮುಖ್ಯ. ಇದಕ್ಕಾಗಿ ಅಂತರರಾಷ್ಟ್ರೀಯ ಸಹಕಾರವನ್ನು ಮತ್ತಷ್ಟು ಬಲಪಡಿಸಬೇಕು’ ಎಂದು ‘ಜಿ20 ಶೃಂಗಸಭೆಯ ಘೋಷಣೆ’ ಶನಿವಾರ ಪ್ರತಿಪಾದಿಸಿದೆ.

‘ಭಯೋತ್ಪಾದಕ ಸಂಘಟನೆಗಳಿಗೆ ಸುರಕ್ಷಿತ ಜಾಗಗಳು ಸಿಗದಂತೆ ನೋಡಿಕೊಳ್ಳಬೇಕು. ಉಗ್ರರ ಕಾರ್ಯಾಚರಣೆ, ನೇಮಕಾತಿ ಹಾಗೂ ಚಲನವಲನಕ್ಕೆ ಕಡಿವಾಣ ಹಾಕುವುದು ಮುಖ್ಯ’ ಎಂದು ಈ ಘೋಷಣೆಯಲ್ಲಿ ಹೇಳಲಾಗಿದೆ.

ಉಗ್ರರಿಗೆ ಹಣ ವರ್ಗಾವಣೆಯಾಗುವುದರ ಮೇಲೆ ಕಣ್ಗಾವಲಿರಿಸುವ ಅಂತರರಾಷ್ಟ್ರೀಯ ಸಂಸ್ಥೆ ‘ಹಣಕಾಸು ಕಾರ್ಯಪಡೆ’ಗೆ (ಎಫ್‌ಎಟಿಎಫ್) ಅಗತ್ಯವಿರುವ ಸಂಪನ್ಮೂಲವನ್ನು ಹೆಚ್ಚಿಸುವುದಕ್ಕೆ ಜಿ20 ಸದಸ್ಯ ರಾಷ್ಟ್ರಗಳ ಮುಖಂಡರು ಇದೇ ಸಂದರ್ಭದಲ್ಲಿ ಶಪಥ ಕೈಗೊಂಡರು.

ಪ್ರಾದೇಶಿಕ ಮಟ್ಟದಲ್ಲಿ ಎಫ್‌ಎಟಿಎಫ್ ರೀತಿಯಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಸಂಸ್ಥೆಗಳಿಗೂ ಸಂಪನ್ಮೂಲ ಹೆಚ್ಚಿಸಬೇಕು ಎಂಬ ಬಗ್ಗೆಯೂ ಜಿ20 ರಾಷ್ಟ್ರಗಳಿಂದ ಒಕ್ಕೊರಲ ಬೆಂಬಲ ವ್ಯಕ್ತವಾಗಿದೆ.

‘ಜಗತ್ತಿನ ಯಾವುದೇ ಭಾಗದಲ್ಲಿ, ಯಾವುದೇ ಸ್ವರೂಪದ ಮತ್ತು ಯಾರೇ ಎಸಗುವ ಭಯೋತ್ಪಾದನೆ ಕೃತ್ಯವನ್ನು ಸಮರ್ಥಿಸಲಾಗದು. ಭಯೋತ್ಪಾದನೆ ನಿಗ್ರಹ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು, ಭಯೋತ್ಪಾದನೆಯಿಂದ ಸಂತ್ರಸ್ತರಾದವರಿಗೆ ನೆರವು ನೀಡುವುದು ಹಾಗೂ ಮಾನವ ಹಕ್ಕುಗಳನ್ನು ರಕ್ಷಿಸುವುದು ನಮ್ಮ ಗುರಿಗಳು. ಈ ಗುರಿಗಳು ನಮ್ಮಲ್ಲಿ ಸಂಘರ್ಷಕ್ಕೆ ಕಾರಣವಾಗುವ ಬದಲು ಭಯೋತ್ಪಾದನೆ ವಿರುದ್ಧದ ನಮ್ಮ ಹೋರಾಟವನ್ನು ಮತ್ತಷ್ಟು ಗಟ್ಟಿಗೊಳಿಸಲಿವೆ’ ಎಂಬ ಸಂಕಲ್ಪದ ನುಡಿಗಳನ್ನೂ ‘ಜಿ20 ಘೋಷಣೆ’ ಒಳಗೊಂಡಿದೆ.

‘ಉಗ್ರರಿಗೆ ಹಣದ ಹರಿವು, ಹಣ ಅಕ್ರಮ ವರ್ಗಾವಣೆ ಮಟ್ಟಹಾಕಲು ಸಂದರ್ಭದಲ್ಲಿ ಎದುರಾಗುವ ಅಪಾಯಗಳ ನಿವಾರಣೆಗಾಗಿ ಎಫ್‌ಎಟಿಎಫ್ ಮಾದರಿಯಂತೆ ಪರಿಣಾಮಕಾರಿ ಕ್ರಮಗಳ ಅನುಷ್ಠಾನ ಮುಖ್ಯ’ ಎಂಬುದನ್ನು ಘೋಷಣೆಯಲ್ಲಿ ಹೇಳಲಾಗಿದೆ.



ನವದೆಹಲಿಯಲ್ಲಿರುವ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ಗೆ ಭೇಟಿ ನೀಡಿದ ಜಿ20 ರಾಷ್ಟ್ರಗಳ ನಾಯಕರ ಪತ್ನಿಯರು –ಪಿಟಿಐ ಚಿತ್ರ

ಸಿರಿಧಾನ್ಯ ಖಾದ್ಯ ಸವಿದ ವಿದೇಶಿ ನಾಯಕರ ಪತ್ನಿಯರು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ಕ್ಷೇತ್ರದಲ್ಲಿ ಭಾರತ ಸಾಧಿಸಿರುವ ಪ್ರಗತಿಗೆ ಶನಿವಾರ ಜಿ20 ರಾಷ್ಟ್ರಗಳ ನಾಯಕರ ಪತ್ನಿಯರು ಸಾಕ್ಷಿಯಾದರು.

ಶೃಂಗಸಭೆ ಅಂಗವಾಗಿ ಇಲ್ಲಿನ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ (ಐಎಆರ್‌ಐ) ಆವರಣದಲ್ಲಿ ಕೃಷಿ ವಸ್ತುಪ್ರದರ್ಶನ ಏರ್ಪಡಿಸಲಾಗಿದೆ. ಇಲ್ಲಿ ಹಸಿರು ಕ್ರಾಂತಿಯಿಂದ ಹಿಡಿದು ಸಿರಿಧಾನ್ಯ ಕೃಷಿವರೆಗೂ ಭಾರತದ ಸಾಧನೆಯು ಅನಾವರಣಗೊಂಡಿದೆ.

ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ಪತ್ನಿ ಅಕ್ಷತಾ ಮೂರ್ತಿ, ಜಪಾನ್ ಪ್ರಧಾನಿ ಫ್ಯೂಮಿಯೊ ಕಿಶಿಡಾ ಅವರ ಪತ್ನಿ ಯೊಕೊ ಕಿಶಿಡಾ, ವಿಶ್ವಬ್ಯಾಂಕ್ ಅಧ್ಯಕ್ಷ ಅಜಯ್ ಬಂಗಾ ಅವರ ಪತ್ನಿ ರಿತು ಬಂಗಾ ಸೇರಿದಂತೆ 15 ದೇಶಗಳ ನಾಯಕರ ಪತ್ನಿಯರು ಐಎಆರ್‌ಐ ಕ್ಯಾಂಪಸ್‌ಗೆ ಭೇಟಿ ನೀಡಿದರು. ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಅವರ ಪತ್ನಿ ಕ್ಯೋಕೊ ಜೈಶಂಕರ್ ಅವರು, ಎಲ್ಲರನ್ನೂ ಸ್ವಾಗತಿಸಿದರು.

ವಸ್ತುಪ್ರದರ್ಶನಕ್ಕೆ ಭೇಟಿ ನೀಡಿದ ಅವರಿಗೆ ವಿವಿಧ ದೇಶಗಳ ಸಿರಿಧಾನ್ಯ ಬಳಸಿ ಬಿಡಿಸಿದ್ದ ‘ಸಿರಿಧಾನ್ಯ ರಂಗೋಲಿ’ ಮೂಲಕ ಸ್ವಾಗತ ಕೋರಲಾಯಿತು. ಬಳಿಕ ಅವರು ಸಿರಿಧಾನ್ಯ ಖಾದ್ಯ ತಯಾರಿಕೆಯ ಮಳಿಗೆಗೆ ಭೇಟಿ ನೀಡಿದರು. ಅಲ್ಲಿ ಖ್ಯಾತ ಬಾಣಸಿಗ ಕುನಾಲ್ ಕಪೂರ್ ಅವರು, ಭಾರತದ ವಿವಿಧ ಬಗೆಬಗೆಯ ಖಾದ್ಯಗಳನ್ನು ಸಿದ್ಧಪಡಿಸಿ ನೀಡಿದರು.

ಕೃಷಿಗೆ ಸಂಬಂಧಿಸಿದಂತೆ ಸ್ಟಾರ್ಟ್‌ಅಪ್‌ಗಳು, ಸುಸ್ಥಿರ ಆರೋಗ್ಯ, ಕಡಿಮೆ ಸ್ಥಳದಲ್ಲಿ ಹೆಚ್ಚು ಬೆಳೆ ಬೆಳೆಯುವ ವರ್ಟಿಕಲ್ ಕೃಷಿ, ಜಲ ಕೃಷಿ ಸೇರಿದಂತೆ ಸುಸ್ಥಿರ ಕೃಷಿ ವಿಧಾನಗಳ ಪ್ರದರ್ಶನವನ್ನು ವೀಕ್ಷಿಸಿದರು. ಬಳಿಕ ‘ಮಿಲೆಟ್ ಕ್ವೀನ್’ ಖ್ಯಾತಿಯ ಮಧ್ಯಪ್ರದೇಶದ ದಿಂಡೋರಿ ಜಿಲ್ಲೆಯ ಬುಡಕಟ್ಟು ರೈತ ಮಹಿಳೆ ಲಹರಿ ಬಾಯಿ ಅವರನ್ನು ಭೇಟಿ ಮಾಡಿದರು. 150ಕ್ಕೂ ಹೆಚ್ಚು ಸ್ಥಳೀಯ ಬೀಜಗಳನ್ನು ಸಂಗ್ರಹಿಸಿರುವುದು ಲಹರಿ ಅವರ ಹೆಗ್ಗಳಿಕೆ. ಈ ಪೈಕಿ 50ಕ್ಕೂ ಹೆಚ್ಚು ಸಿರಿಧಾನ್ಯಗಳು ಅವರ ಸಂಗ್ರಹದಲ್ಲಿವೆ.

ಕರ್ನಾಟಕ ಸೇರಿದಂತೆ ಸಿರಿಧಾನ್ಯ ಬೆಳೆಯುವ 11 ರಾಜ್ಯಗಳ ವಿವಿಧ ಗ್ರಾಮಗಳಿಂದ ಬಂದಿದ್ದ 20 ಕೃಷಿಕ ಮಹಿಳೆಯರು, ಸಿರಿಧಾನ್ಯ ವ್ಯವಸಾಯ ಕುರಿತು ಜಿ20 ನಾಯಕರ ಪತ್ನಿಯರಿಗೆ ವಿವರಿಸಿದರು.

ವಿಶ್ವಾಸದ ಕೊರತೆ ಹೆಚ್ಚಿಸಿದ ಸಂಘರ್ಷ: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಸಾಂಕ್ರಾಮಿಕದಿಂದ ಜಗತ್ತು ಹೊರಬಂದ ಬಳಿಕ ನಡೆಯುತ್ತಿರುವ ಸಂಘರ್ಷವು ವಿಶ್ವಾಸದ ಕೊರತೆಯನ್ನು ಹೆಚ್ಚಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತೀವ್ರ ಕಳವಳ ವ್ಯಕ್ತಪಡಿಸಿದರು. ರಷ್ಯಾ ಹಾಗೂ ಉಕ್ರೇನ್ ನಡುವೆ ವರ್ಷದಿಂದ ನಡೆಯುತ್ತಿರುವ ಯುದ್ಧವನ್ನು ನೇರವಾಗಿ ಉಲ್ಲೇಖಿಸದೆ ಮೋದಿ ಅವರು ಈ ಮಾತುಗಳನ್ನು ಹೇಳಿದರು.

ರಾಷ್ಟ್ರ ರಾಜಧಾನಿಯಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ಶನಿವಾರ ಆರಂಭವಾಗಿರುವ ‘ಜಿ–20 ಶೃಂಗ ಸಭೆ’ಯಲ್ಲಿ ಜಗತ್ತಿನ ನಾಯಕರ ಸಮ್ಮುಖದಲ್ಲಿ ಅವರು ಮಾತನಾಡಿದರು. ಜಾಗತಿಕ ನಂಬಿಕೆ ಹೆಚ್ಚಿಸುವಂತಹ ಕ್ರಮಗಳ ಅಗತ್ಯವನ್ನು ಅವರು ಬಲವಾಗಿ ಪ್ರತಿಪಾದಿಸಿದರು.

‘ಕೋವಿಡ್– 19 ಸಾಂಕ್ರಾಮಿಕದ ಬಳಿಕ ನಂಬಿಕೆಯ ಕೊರತೆಯ ದೊಡ್ಡ ಬಿಕ್ಕಟ್ಟು ವಿಶ್ವವನ್ನು ಅಪ್ಪಳಿಸಿದೆ. ಯುದ್ಧಗಳು ಇದನ್ನು ಇನ್ನಷ್ಟು ಗಾಢವಾಗಿಸಿವೆ. ನಾವು ಪರಸ್ಪರ ಕೋವಿಡ್–19 ಎದುರಿಸಿದಂತೆ ವಿಶ್ವಾಸದ ಕೊರತೆಯನ್ನೂ ಎದುರಿಸಬಹುದು’ ಎಂದು ಅಭಿಪ್ರಾಯಪಟ್ಟರು. ಇಂದು ‘ಜಿ–20’ಯ ಅಧ್ಯಕ್ಷತೆ ವಹಿಸಿರುವ ಭಾರತವು ಇಡೀ ವಿಶ್ವವನ್ನು ಒಂದಾಗುವಂತೆ ಮತ್ತು ಮೊತ್ತಮೊದಲನೆಯದಾಗಿ ಜಾಗತಿಕ ವಿಶ್ವಾಸದ ಕೊರತೆಯನ್ನು ನೀಗಿಸುವಂತೆ ಆಹ್ವಾನಿಸುತ್ತಿದೆ ಎಂದು ಅವರು ಹೇಳಿದರು.

ಇದು ನಾವೆಲ್ಲರೂ ಒಟ್ಟಾಗಿ ಹೆಜ್ಜೆ ಹಾಕುವ ಸಮಯ ಮತ್ತು ‘ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಮತ್ತು ಸಬ್ ಕಾ ಪ್ರಯಾಸ್’ ಮಂತ್ರವು ನಮ್ಮೆಲ್ಲರಿಗೂ ದಾರಿದೀಪ ಆಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

‘ಜಾಗತಿಕ ಆರ್ಥಿಕತೆಯಲ್ಲಿ ಅಲ್ಲೋಲ ಕಲ್ಲೋಲ ಆಗಿರಲಿ, ಉತ್ತರ-ದಕ್ಷಿಣ ವಿಭಜನೆ ಅಥವಾ ಪೂರ್ವ-ಪಶ್ಚಿಮದ ಅಂತರ ಸೃಷ್ಟಿಯಾದುದಿರಲಿ, ಆಹಾರ, ಇಂಧನ ಮತ್ತು ರಸಗೊಬ್ಬರದ ನಿರ್ವಹಣೆಯಿರಲಿ, ಭಯೋತ್ಪಾದನೆ ಹೋರಾಟವಿರಲಿ, ಸೈಬರ್ ಭದ್ರತೆಯ ನಿರ್ವಹಣೆ ಅಥವಾ ಆರೋಗ್ಯ, ಇಂಧನ ಮತ್ತು ನೀರಿನ ಭದ್ರತೆಯ ಖಾತರಿಯಂತಹ ಯಾವುದೇ ವಿಷಯವಿರಲಿ, ಈ ಸವಾಲುಗಳಿಗೆ ಸದೃಢ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಾವೆಲ್ಲ ಶ್ರಮಿಸಬೇಕು. ಇದು ವಾಸ್ತವಕ್ಕಾಗಿ ಮಾತ್ರ ಅಲ್ಲ, ಭವಿಷ್ಯಕ್ಕಾಗಿ ಕೂಡಾ ಹೌದು’ ಎಂದು ಅವರು ತಿಳಿಸಿದರು.

ಜಿ–20 ಶೃಂಗಸಭೆಯ ಸನಿಹದಲ್ಲಿರುವ ಪುರಾತನ ಸ್ತಂಭವೊಂದನ್ನು ಉಲ್ಲೇಖಿಸಿದ ನರೇಂದ್ರ ಮೋದಿ, ‘ನಾವೆಲ್ಲರೂ ಸೇರಿರುವ ಜಾಗದ ಕೆಲವು ಕಿ.ಮೀ. ದೂರದಲ್ಲಿ ಎರಡೂವರೆ ಸಾವಿರ ವರ್ಷದ ಪ್ರಾಕೃತ ಭಾಷೆಯ ಶಬ್ದಗಳನ್ನು ಹೊಂದಿರುವ ಸ್ತಂಭವೊಂದಿದೆ. ಅದರಲ್ಲಿ ಮಾನವತೆಯ ಕಲ್ಯಾಣ ಮತ್ತು ಸಂತೋಷವನ್ನು ಯಾವಾಗಲೂ ಖಾತರಿಪಡಿಸಬೇಕು ಎಂದು ಉಲ್ಲೇಖಿಸಿದೆ’ ಎಂದರು. ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಭಾರತವು ಇಡೀ ಜಗತ್ತಿಗೆ ಮಾನವತೆಯ ಸಂದೇಶವನ್ನು ಸಾರಿದೆ ಎಂದು ಅವರು ನೆನಪಿಸಿದರು.

ಮೋದಿ–ರಿಷಿ ಸುನಕ್ ಮಾತುಕತೆ

ಜಿ– 20 ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಂಗ್ಲೆಂಡ್ ಪ್ರಧಾನಿ ರಿಷಿ ಸುನಕ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಉಭಯ ನಾಯಕರು ವ್ಯಾಪಾರ ಸಂಬಂಧಗಳನ್ನು ಗಾಢವಾಗಿಸುವ ಮತ್ತು ಹೂಡಿಕೆ ಹೆಚ್ಚಿಸುವ ಮಾರ್ಗಗಳ ಕುರಿತು ಸಮಾಲೋಚಿಸಿದರು.

ಶುಕ್ರವಾರವೇ ನಗರಕ್ಕೆ ಬಂದಿರುವ ಸುನಕ್ ಅವರು, ಶೃಂಗಸಭೆಯ ಮೊದಲ ಗೋಷ್ಠಿಯ ನಂತರ ಮೋದಿ ಅವರೊಂದಿಗೆ ಮಾತುಕತೆ ನಡೆಸಿದರು.

ಸಭೆಯ ನಂತರ ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಮೋದಿ ಅವರು, ‘ದೆಹಲಿಯಲ್ಲಿ ಜಿ–20 ಶೃಂಗಸಭೆಯ ಸಂದರ್ಭದಲ್ಲಿ ರಿಷಿ ಸುನಕ್ ಅವರನ್ನು ಭೇಟಿಯಾಗಿರುವುದು ಅದ್ಭುತವಾಗಿದೆ. ನಾವು ವ್ಯಾಪಾರ ಸಂಬಂಧಗಳನ್ನು ಗಾಢವಾಗಿಸಲು ಮತ್ತು ಹೂಡಿಕೆಯನ್ನು ಹೆಚ್ಚಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದ್ದೇವೆ’ ಎಂದು ಹೇಳಿಕೊಂಡಿದ್ದಾರೆ.

ಉಭಯ ರಾಷ್ಟ್ರಗಳು ಸಮೃದ್ಧ ಮತ್ತು ಸುಸ್ಥಿರ ಗ್ರಹಕ್ಕಾಗಿ ಕೆಲಸ ಮಾಡುತ್ತಲೇ ಇರುತ್ತವೆ ಎಂದು ಅವರು ಹೇಳಿದರು.

ಮೋದಿ ಅವರು ಜಪಾನ್ ಪ್ರಧಾನಿ ಫ್ಯೂಮಿಯೊ ಕಿಶಿಡಾ ಅವರೊಂದಿಗೆ ಸಹ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಆಫ್ರಿಕಾ ಒಕ್ಕೂಟಕ್ಕೆ ಸದಸ್ಯತ್ವ

ನವದೆಹಲಿ: ಜಿ–20 ಶೃಂಗಸಭೆಯಲ್ಲಿ ಆಫ್ರಿಕಾ ಒಕ್ಕೂಟಕ್ಕೆ ಕಾಯಂ ಸದಸ್ಯತ್ವ ನೀಡುವ ಪ್ರಸ್ತಾಪವನ್ನು ಅಂಗೀಕರಿಸಲಾಯಿತು. ಒಕ್ಕೂಟವು ಜಿ–20ಯ 21ನೇ ಸದಸ್ಯ ಆಗಲಿದೆ. ಈ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದರು.

ಭಾರತದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಶೃಂಗಸಭೆಯಲ್ಲಿ ಈ ಮಹತ್ವದ ಹೆಜ್ಜೆ ಇರಲಿಸಲಾಗಿದೆ. ಐರೋಪ್ಯ ಒಕ್ಕೂಟಕ್ಕೆ ಸಮಾನವಾಗಿ ಆಫ್ರಿಕಾ ಒಕ್ಕೂಟ ಕಾಯಂ ಸದಸ್ಯತ್ವ ಪಡೆದಿದೆ. ಆಫ್ರಿಕಾ ಒಕ್ಕೂಟವನ್ನು ಸ್ವಾಗತಿಸಿದ ಮೋದಿ ಅವರು, ‘ಈ ಮೂಲಕ ಜಿ 20 ಹಾಗೂ ಜಾಗತಿಕ ಮಟ್ಟದಲ್ಲಿ ದಕ್ಷಿಣದ ಧ್ವನಿಯನ್ನು ಮತ್ತಷ್ಟು ಬಲಗೊಳಿಸಲಿದೆ’ ಎಂದರು.

ಸಬ್ ಕೆ ಸಾಥ್ ಪರಿಕಲ್ಪನೆಗೆ ಅನುಗುಣವಾಗಿ ಆಫ್ರಿಕಾ ಒಕ್ಕೂಟಕ್ಕೆ ಕಾಯಂ ಸದಸ್ಯತ್ವ ನೀಡಬೇಕು ಎಂದು ಭಾರತ ಪ್ರಸ್ತಾಪಿಸಿತ್ತು. ಇದಕ್ಕೆ ಎಲ್ಲ ಸದಸ್ಯ ರಾಷ್ಟ್ರಗಳು ಅನುಮೋದನೆ ನೀಡಿವೆ ಎಂದೂ ಅವರು ತಿಳಿಸಿದರು.

ವಿಚಾರಣೆಗೆ ಗೈರು, ಔತಣಕ್ಕೆ ಹಾಜರು

ರಾಂಚಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಏರ್ಪಡಿಸಿದ್ದ ಔತಣಕೂಟದಲ್ಲಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಶನಿವಾರ ಪಾಲ್ಗೊಂಡಿದ್ದರು.



ಹೇಮಂತ್ ಸೊರೇನ್

ಹೀಗಾಗಿ, ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಮುಂದೆ ಹಾಜರಾಗಿರಲಿಲ್ಲ.

ಈ ಹಿಂದೆ ಆಗಸ್ಟ್ 14 ಹಾಗೂ 24ರಂದು ಅವರು ವಿಚಾರಣೆಗೆ ಗೈರಾಗಿದ್ದರು. ಸೆ. 9ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ ಮತ್ತೊಮ್ಮೆ ಸಮನ್ಸ್ ನೀಡಿತ್ತು.



ಸಂವಾದ

ನವದೆಹಲಿಯ ಬ್ರಿಟಿಷ್ ಕೌನ್ಸಿಲ್‌ನಲ್ಲಿ ಶುಕ್ರವಾರ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ಅವರ ಪತ್ನಿ ಅಕ್ಷತಾ ಸುನಕ್ ಅವರು ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದರು – ಪಿಟಿಐ ಚಿತ್ರ

ಸುಸ್ಥಿರ ಅಭಿವೃದ್ಧಿಗೆ ಮಾರ್ಗದರ್ಶಕ ಸೂತ್ರ: ಮುರ್ಮು

ನವದೆಹಲಿ(ಪಿಟಿಐ): ‘ವಸುಧೈವ ಕುಟುಂಬಕಂ ಎಂಬುದು ಭಾರತ ಅಧ್ಯಕ್ಷತೆ ವಹಿಸಿರುವ ಜಿ20ರ ಧ್ಯೇಯವಾಕ್ಯವಾಗಿದೆ. ಒಂದು ಭೂಮಿ, ಒಂದು ಕುಟುಂಬ ಹಾಗೂ ಒಂದು ಭವಿಷ್ಯ ಎಂಬ ಈ ಧ್ಯೇಯವು ಸುಸ್ಥಿರ ಅಭಿವೃದ್ಧಿ, ಒಳಗೊಳ್ಳುವಿಕೆ ಹಾಗೂ ಮಾನವ ಕೇಂದ್ರಿತ ಪ್ರಗತಿಯ ಮಾರ್ಗದರ್ಶಕ ಸೂತ್ರವಾಗಿದೆ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

‘ಭಾರತ ಮಂಟಪ’ದಲ್ಲಿ ಜಿ20 ಶೃಂಗಸಭೆ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಈ ಪೋಸ್ಟ್ ಮಾಡಿರುವ ಅವರು, ಸದಸ್ಯ ರಾಷ್ಟ್ರಗಳ ನಿಯೋಗಗಳ ಮುಖ್ಯಸ್ಥರು, ಅತಿಥಿ ದೇಶಗಳು ಹಾಗೂ ಅಂತರರಾಷ್ಟ್ರೀಯ ಸಂಘಟನೆಗಳ ಪ್ರತಿನಿಧಿಗಳಿಗೆ ಸ್ವಾಗತ ಕೋರಿದ್ದಾರೆ.

‘ದೇಶದ ನಿಜಸ್ಥಿತಿಯನ್ನು ಮುಚ್ಚಿಡುವ ಅಗತ್ಯವಿಲ್ಲ’

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆಯುತ್ತಿರುವ ಜಿ20 ಶೃಂಗಸಭೆಗೆ ಆಗಮಿಸಿರುವ ವಿದೇಶಿ ಗಣ್ಯರಿಗೆ ಕೊಳೆಗೇರಿಗಳು, ಬೀದಿನಾಯಿಗಳು, ಬೀಡಾಡಿ ಪ್ರಾಣಿಗಳು ಕಾಣದಂತೆ ಕೇಂದ್ರ ಸರ್ಕಾರವು ಮುಚ್ಚಿಟ್ಟಿದೆ ಎಂದು ಶನಿವಾರ ಕಾಂಗ್ರೆಸ್ ದೂರಿದೆ.



ರಾಹುಲ್ ಗಾಂಧಿ

ಶೃಂಗಸಭೆ ಅಂಗವಾಗಿ ಕೊಳೆಗೇರಿಗಳ ಬಳಿಯ ರಸ್ತೆಯಲ್ಲಿ ಸಂಚರಿಸುವ ಜನರಿಗೆ ಆ ಪ್ರದೇಶವು ಕಾಣದಂತೆ ಹಸಿರು ಹೊದಿಕೆಗಳಿಂದ ಮುಚ್ಚಿರುವ ವಿಡಿಯೊವೊಂದನ್ನು ಆ ಪಕ್ಷವು ‘ಎಕ್ಸ್’ನಲ್ಲಿ ಹಂಚಿಕೊಂಡಿದೆ.

‘ಕೇಂದ್ರವು ಬಡಜನರು ಮತ್ತು ಪ್ರಾಣಿಗಳನ್ನು ವಿದೇಶಿ ನಾಯಕರ ಕಣ್ಣಿಗೆ ಕಾಣದಂತೆ ಮುಚ್ಚಿಡುವ ಪ್ರಯತ್ನ ಮಾಡಿದೆ. ಆದರೆ, ಭಾರತದ ನಿಜಸ್ಥಿತಿಯನ್ನು ನಮ್ಮ ಅತಿಥಿಗಳ ಮುಂದೆ ರಹಸ್ಯವಾಗಿಡುವ ಅಗತ್ಯ ಇಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಕೂಡ, ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಬೀಡಾಡಿ ಪ್ರಾಣಿಗಳಿಗೆ ಸಂಬಂಧಿಸಿದಂತೆಯೂ ಕ್ರೂರವಾಗಿ ನಡೆದುಕೊಳ್ಳಲಾಗಿದೆ. ಪ್ರಧಾನಿ ಮೋದಿ ಅವರ ಗೌರವಕ್ಕೆ ಯಾವುದೇ ಚ್ಯುತಿಯಾಗದಂತೆ ಕಾಪಾಡಲು ಈ ಕ್ರಮವಹಿಸಲಾಗಿದೆ ಎಂದು ದೂರಿದ್ದಾರೆ.

‘ಸರ್ಕಾರದ ಕಣ್ಣಿಗೆ ನಾವು ಮನುಷ್ಯರಂತೆ ಕಾಣುತ್ತಿಲ್ಲ. ನಮ್ಮನ್ನು ಕ್ರಿಮಿಕೀಟಗಳಂತೆ ಪರಿಗಣಿಸಲಾಗಿದೆ’ ಎಂದು ಕೊಳೆಗೇರಿ ನಿವಾಸಿಯೊಬ್ಬರು ದೂರಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

ನಾಯಿಗಳನ್ನು ಅಮಾನುಷವಾಗಿ ಸೆರೆ ಹಿಡಿದು ಪಂಜರಗಳಲ್ಲಿ ಕೂಡಿಹಾಕಲಾಗಿದೆ. ಅವುಗಳಿಗೆ ಸಕಾಲದಲ್ಲಿ ಆಹಾರ ಮತ್ತು ಕುಡಿಯಲು ನೀರು ನೀಡಿಲ್ಲ. ಇದರಿಂದ ಒತ್ತಡಕ್ಕೆ ಸಿಲುಕಿರುವ ಅವು ಭಯಗೊಂಡಿವೆ ಎಂದು ಕಾಂಗ್ರೆಸ್ ಆಪಾದಿಸಿದೆ.



ನಗೆ ಚಟಾಕಿ

ದ್ವಿಪಕ್ಷೀಯ ಮಾತುಕತೆ ವೇಳೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಮತ್ತು ಪ್ರಧಾನಿ ನರೇಂದ್ರ ಮೋದಿ ಕ್ಯಾಮೆರಾ ಕಣ್ಣಿಗೆ ಸೆರೆಸಿಕ್ಕಿದ್ದು ಹೀಗೆ -ಎಎಫ್‌ಪಿ ಚಿತ್ರ

‘ನವದೆಹಲಿ ಘೋಷಣೆ’ಗೆ ‘ಜಿ–20’ ಒಮ್ಮತದ ಮುದ್ರೆ

ಒಂದನೇ ಪುಟದಿಂದ...

‘ನಮ್ಮ ತಂಡಗಳ ಕಠಿಣ ಪರಿಶ್ರಮದಿಂದ ಮತ್ತು ನಿಮ್ಮೆಲ್ಲರ ಸಹಕಾರದೊಂದಿಗೆ ನವದೆಹಲಿ ಜಿ–20 ಶೃಂಗಸಭೆಯ ನಾಯಕರ ಘೋಷಣೆಗೆ ಒಮ್ಮತವಿದೆ’ ಎಂದು ಹೇಳಿದರು.

ನವದೆಹಲಿ ಘೋಷಣೆ ಪ್ರಕಾರ, ವಿಶ್ವದ ಹಲವೆಡೆ ನಡೆಯುತ್ತಿರುವ ಯುದ್ಧ ಮತ್ತು ಬಿಕ್ಕಟ್ಟುಗಳಿಂದ ಮಾನವರು ಎದುರಿಸುತ್ತಿರುವ ತೀವ್ರ ಸಂಕಷ್ಟದ ಬಗ್ಗೆ ಜಿ–20 ನಾಯಕರು ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ. ಈ ಘೋಷಣೆಯಲ್ಲಿ, 2022ರ ನವೆಂಬರ್‌ನಲ್ಲಿ ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ 17ನೇ ಶೃಂಗಸಭೆಯ ನಿರ್ಣಯಗಳನ್ನು ಉಲ್ಲೇಖಿಸಲಾಗಿದೆ. ಜತೆಗೆ, ವಿಶ್ವಸಂಸ್ಥೆಯ ಭದ್ರತಾ ಪರಿಷತ್ ಹಾಗೂ ಸಾಮಾನ್ಯ ಸಭೆಯಲ್ಲಿ ಕಲಹದ ಕುರಿತು ಕೈಗೊಂಡ ನಿರ್ಣಯವನ್ನೂ ಪ್ರಸ್ತಾಪಿಸಲಾಗಿದೆ.

ಎಲ್ಲ ರಾಷ್ಟ್ರಗಳು, ಇತರ ರಾಷ್ಟ್ರಗಳ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ತರುವುದು ಅಥವಾ ರಾಜಕೀಯ ಸ್ವಾತಂತ್ರ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಬೆದರಿಕೆ ಒಡ್ಡುವುದು ಅಥವಾ ಸೇನೆಯನ್ನು ಬಳಸುವುದರಿಂದ ದೂರ ಉಳಿಯಬೇಕು ಎಂದು ಜಿ–20 ನಾಯಕರು ನಿರ್ಣಯದಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಾಲಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ, ಉಕ್ರೇನ್ ವಿರುದ್ಧ ಆಕ್ರಮಣಶೀಲ ಮನೋಭಾವ ತೋರುತ್ತಿರುವ ರಷ್ಯಾದ ವಿರುದ್ಧ ಈ ಶೃಂಗಸಭೆ ಯಾವುದೇ ನಿರ್ಣಯ ಕೈಗೊಂಡಿಲ್ಲ. ಉಕ್ರೇನ್ ಪ್ರಾಂತ್ಯದಿಂದ ರಷ್ಯಾ ತನ್ನೆಲ್ಲ ಸೇನಾ ಪಡೆಗಳನ್ನು ಸಂಪೂರ್ಣವಾಗಿ ಹಾಗೂ ಬೇಷರತ್ ಆಗಿ ಹಿಂಪಡೆಯಬೇಕು ಎಂದು ‘ಬಾಲಿ ನಿರ್ಣಯ’ದಲ್ಲಿ ಆಗ್ರಹಿಸಲಾಗಿತ್ತು. ಆದರೆ, ನವದೆಹಲಿ ನಿರ್ಣಯದಲ್ಲಿ ಅಂತಹ ಯಾವುದೇ ಪ್ರಸ್ತಾಪ ಇಲ್ಲ.

ಕಳೆದ ವಾರ ಭಾರತದ ವಿದೇಶಾಂಗ ಸಚಿವ ಜೈಶಂಕರ್– ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೋವ್ ಭೇಟಿ ಮಾಡಿದ್ದರು. ಶೃಂಗಸಭೆಗೆ ಮುನ್ನ ಮೋದಿ ಹಾಗೂ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಶುಕ್ರವಾರ ಸಮಾಲೋಚನೆ ನಡೆಸಿದ್ದರು. ಆ ಬಳಿಕ ಹೊಸ ಕರಡನ್ನು ಸದಸ್ಯ ರಾಷ್ಟ್ರಗಳಿಗೆ ಭಾರತವು ನೀಡಿತು. ಆ ನಂತರ ನಿರ್ಣಯಕ್ಕೆ ಅಂಗೀಕಾರ ಸಿಕ್ಕಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಜೈಶಂಕರ್, ‘ಬಾಲಿ ಘೋಷಣೆಯ ನಂತರ ಹಲವು ಮಹತ್ವದ ಬೆಳವಣಿಗೆಗಳು ನಡೆದಿವೆ’ ಎಂದರು.

‘ನವದೆಹಲಿ ಘೋಷಣೆ’ ಇಂದಿನ ಪರಿಸ್ಥಿತಿಗೆ ಸ್ಪಂದಿಸುತ್ತದೆ. ಅಂದಿನ ಕಾಳಜಿಗಳಿಗೆ ‘ಬಾಲಿ ಘೋಷಣೆ’ ಪ್ರತಿಕ್ರಿಯಿಸಿದಂತೆ ‘ನವದೆಹಲಿ ಘೋಷಣೆ’ ಇಂದಿನ ಕಳವಳಗಳಿಗೆ ಪ್ರತಿಕ್ರಿಯಿಸುತ್ತದೆ’ ಎಂದು ಸ್ಪಷ್ಟಪಡಿಸಿದರು.

ಭಯೋತ್ಪಾದನೆಯನ್ನು ಗಂಭೀರ ಬೆದರಿಕೆ ಎಂದು ಕರೆದಿರುವ ಜಿ–20 ಘೋಷಣೆಯು, ಭಯೋತ್ಪಾದಕರ ಗುಂಪಿನ ಸುರಕ್ಷಿತ ತಾಣಗಳು, ಕಾರ್ಯಾಚರಣೆಗಳು, ಚಲನವಲನ ಮತ್ತು ನೇಮಕಾತಿಯ ಸ್ವಾತಂತ್ರ್ಯ, ಹಣಕಾಸಿನ ನೆರವು ಅಥವಾ ರಾಜಕೀಯ ಬೆಂಬಲವನ್ನು ತಿರಸ್ಕರಿಸಲು ಅಂತರ ರಾಷ್ಟ್ರೀಯ ಸಹಕಾರ ಹೆಚ್ಚುವಂತೆ ನೋಡಿಕೊಳ್ಳಬೇಕು ಎಂದು ಕರೆ ನೀಡಿದೆ.

2019ರ ಮಟ್ಟಕ್ಕೆ ಹೋಲಿಸಿದರೆ 2030ರ ವೇಳೆಗೆ ಇಂಗಾಲದ ಹೆಜ್ಜೆಗುರುತನ್ನು ಶೇ 43ರಷ್ಟು ಕಡಿತ ಮಾಡಲು ಜಾಗತಿಕ ಹಸಿರುಮನೆ ಅನಿಲ ಹೊರಸೂಸುವಿಕೆಯ ಮೇಲೆ ‘ಕ್ಷಿಪ್ರ, ಆಳವಾದ ಮತ್ತು ನಿರಂತರ’ ನಿಯಂತ್ರಣ ಸಾಧಿಸುವ ಅಗತ್ಯವಿದೆ ಎಂದು ಜಿ–20 ದೇಶಗಳು ಹೇಳಿವೆ. ಆದರೆ, ಇಂತಹ ಕ್ರಮಕ್ಕೆ ಅಗತ್ಯ ಸಂಪನ್ಮೂಲ ಒದಗಿಸುವ ಕುರಿತು ಯಾವುದೇ ಹೇಳಿಕೆ ನೀಡಿಲ್ಲ.

ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಣ

- ಬಲವಾದ, ಸಮರ್ಥನೀಯ, ಸಮತೋಲಿತ ಮತ್ತು ಅಂತರ್ಗತ ಬೆಳವಣಿಗೆ
- ಎಸ್‌ಡಿಜಿಗಳಲ್ಲಿ ಪ್ರಗತಿಯನ್ನು ವೇಗಗೊಳಿಸುವುದು
- ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ಅಭಿವೃದ್ಧಿ ಒಪ್ಪಂದ

ಗಣ್ಯರ ಸ್ವಾಗತಕ್ಕೆ ಕೊನಾರ್ಕ್ ‘ಚಕ್ರ’ ಸಾಕ್ಷಿ


ನವದೆಹಲಿ(ಪಿಟಿಐ): ‘ಭಾರತ ಮಂಟಪ’ದಲ್ಲಿ ಸ್ಥಾಪಿಸಲಾಗಿರುವ, ಕೊನಾರ್ಕ್ ಸೂರ್ಯ ದೇವಾಲಯದಲ್ಲಿನ ‘ಚಕ್ರ’ದ ಪ್ರತಿಕೃತಿ ಶನಿವಾರ ಆರಂಭಗೊಂಡ ಜಿ20 ಶೃಂಗಸಭೆಯ ಪ್ರಮುಖ ಆಕರ್ಷಣೆಯಾಗಿತ್ತು.

ಈ ಚಕ್ರದ ಪ್ರತಿಕೃತಿ ಮುಂದೆ ನಿಂತಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಸಭೆಗೆ ಆಗಮಿಸುತ್ತಿದ್ದ ವಿದೇಶಿ ಗಣ್ಯರನ್ನು ಅಲ್ಲಿಯೇ ಸ್ವಾಗತಿಸುತ್ತಿದ್ದದು ಗಮನಾರ್ಹವಾಗಿತ್ತು.

ಈ ‘ಚಕ್ರ’ದ ಒಂದು ಬದಿಗೆ ಜಿ20ರ ಲಾಂಛನ, ಮತ್ತೊಂದು ಬದಿಗೆ ಧ್ಯೇಯವಾಕ್ಯ ‘ವಸುಧೈವ ಕುಟುಂಬಕಂ’– ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ’ ಅಳವಡಿಸಲಾಗಿದೆ.

13ನೇ ಶತಮಾನದಲ್ಲಿ ಆಳಿದ್ದ ರಾಜ ನರಸಿಂಹದೇವ–1, ಕೊನಾರ್ಕ್ ಸೂರ್ಯ ದೇವಾಲಯದಲ್ಲಿ ಈ ಚಕ್ರವನ್ನು ನಿರ್ಮಿಸಿದ್ದ. ಭಾರತದ ಪ್ರಾಚೀನ ಜ್ಞಾನ, ನಾಗರಿಕತೆಯ ವೈಭವ ಹಾಗೂ ವಾಸ್ತುಶಿಲ್ಪದ ಉತ್ಕೃಷ್ಟತೆಯನ್ನು ಈ ಚಕ್ರ ಸಾರುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಚಲನಶೀಲತೆಯನ್ನು ಕೂಡ ಈ ಚಕ್ರ ಪ್ರತಿನಿಧಿಸುತ್ತದೆ.

ಸಮಯ ಓಡುವುದನ್ನೂ ಸಾಂಕೇತಿಕವಾಗಿ ಹೇಳುವ ಈ ‘ಕಾಲಚಕ್ರ’, ಪ್ರಗತಿ ಹಾಗೂ ನಿರಂತರ ಬದಲಾವಣೆಯ ಸಂಕೇತವಾಗಿಯೂ ಇದೆ. ವಿದೇಶಿ ಗಣ್ಯರು ಈ ವೇದಿಕೆಗೆ ಬಂದು, ಪ್ರಧಾನಿಯನ್ನು ಭೇಟಿ ಮಾಡಿ ತೆರಳುತ್ತಿರುವ ಸಂದರ್ಭದಲ್ಲಿ, ಹಿನ್ನೆಲೆಯಲ್ಲಿ ‘ವೈಷ್ಣವ ಜನ ತೋ’, ‘ರಘುಪತಿ ರಾಘವ ರಾಜಾ ರಾಮ್’, ‘ಪಧಾರೊ ಮ್ಹಾರೆ ದೇಶ್’ ಎಂಬ ಗೀತೆಗಳನ್ನು ಕಲಾವಿದರು ಶಹನಾಯ್‌ನಲ್ಲಿ ನುಡಿಸುತ್ತಿದ್ದುದು ಸ್ವಾಗತ ಕಾರ್ಯಕ್ರಮದ ಮೆರುಗು ಹೆಚ್ಚಿಸಿತ್ತು.



ಶನಿವಾರ ಆರಂಭಗೊಂಡ ಜಿ20 ಶೃಂಗಸಭೆಗೆ ಆಗಮಿಸಿದ ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ ಆಂಟನಿಯೊ ಗುಟೆರಸ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಬರಮಾಡಿಕೊಂಡರು ಪಿಟಿಐ ಚಿತ್ರಗಳು

ಔತಣಕೂಟಕ್ಕೆ ಪಟ್ನಾಯಕ್ ಗೈರು (ಭುವನೇಶ್ವರ): ಜಿ20 ಶೃಂಗಸಭೆ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಆಯೋಜಿಸಿದ್ದ ಔತಣಕೂಟಕ್ಕೆ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಹಾಜರಾಗಿರಲಿಲ್ಲ.

ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಹಾಗೂ ಒಡಿಶಾ ವಿಧಾನಸಭೆ ಚುನಾವಣೆಗಳಿಗೆ ಸಿದ್ಧತೆ ಕುರಿತು ಪಟ್ನಾಯಕ್ ಅವರು ಪಕ್ಷದ ನಾಯಕರೊಂದಿಗೆ ಸಮಾಲೋಚನೆ ನಡೆಸಲು ಹೆಚ್ಚು ಗಮನ ನೀಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

‘ಪ್ರಜಾಪ್ರಭುತ್ವ ಅಥವಾ ವಿಪಕ್ಷ ಇಲ್ಲದ ದೇಶಗಳಲ್ಲಿ ಇದು ಸಾಧ್ಯ’ (ನವದೆಹಲಿ): ಜಿ20ರ ಅಂಗವಾಗಿ ಆಯೋಜಿಸಿದ್ದ ಔತಣಕೂಟಕ್ಕೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಹ್ವಾನಿಸದ ಕೇಂದ್ರ ಸರ್ಕಾರದ ಕ್ರಮವನ್ನು ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ಚಿದಂಬರಂ ಶನಿವಾರ ಖಂಡಿಸಿದ್ದಾರೆ.

‘ಪ್ರಜಾಪ್ರಭುತ್ವ ಅಥವಾ ವಿರೋಧ ಪಕ್ಷಗಳು ಇಲ್ಲದೇ ಇರುವಂತಹ ದೇಶಗಳಲ್ಲಿ ಇಂತಹ ವಿದ್ಯಮಾನಗಳನ್ನು ಕಾಣಬಹುದು’ ಎಂದು ಟೀಕಿಸಿದ್ದಾರೆ.

‘ಪ್ರಜಾಪ್ರಭುತ್ವ ಮತ್ತು ವಿರೋಧ ಪಕ್ಷಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವಂತಹ ಹಂತವನ್ನು ಇಂಡಿಯಾ, ಅಂದರೆ ಭಾರತ ತಲುಪುವುದಿಲ್ಲ ಎಂದು ಆಶಿಸುತ್ತೇನೆ’ ಎಂದೂ ಹೇಳಿದ್ದಾರೆ.

ಗ್ರೀಸ್: ಪ್ರವಾಹಕ್ಕೆ ಹತ್ತು ಮಂದಿ ಸಾವು, ರಕ್ಷಣೆಗೆ ಸೇನೆ ನೆರವು

ಪಲಮಾಸ್ ಕಾರ್ಡಿಟ್ಸಾ, (ಗ್ರೀಸ್), (ಎಎಫ್‌ಪಿ): ಗ್ರೀಸ್‌ನಲ್ಲಿ ಪ್ರವಾಹದಿಂದಾಗಿ ಹತ್ತು ಜನರು ಮೃತಪಟ್ಟಿದ್ದಾರೆ. ನೆರೆ ಸಂಕಷ್ಟದಲ್ಲಿ ಸಿಲುಕಿರುವ ನೂರಾರು ಜನರ ರಕ್ಷಣೆಗೆ ಸೇನೆ ನೆರವಿನೊಂದಿಗೆ ಅಗ್ನಿಶಾಮಕ ದಳದ ಸಿಬ್ಬಂದಿ ಶನಿವಾರ ಕಾರ್ಯಾಚರಣೆ ನಡೆಸಿದ್ದಾರೆ.

ಪ್ರತಿಕೂಲ ಹವಾಮಾನದಲ್ಲೂ 2,850ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ ಎಂದು ಅಗ್ನಿಶಾಮಕ ದಳದ ವಕ್ತಾರರೊಬ್ಬರು ತಿಳಿಸಿದ್ದಾರೆ.

ಕಾರ್ಡಿಟ್ಸಾ, ಪಲಮಾಸ್, ತ್ರಿಕಾಲ ಪಟ್ಟಣಗಳಲ್ಲಿ ಸಾಕಷ್ಟು ಜನರು ಪ್ರವಾಹದಲ್ಲಿ ಸಿಲುಕಿದ್ದು, ಆರು ಜನರು ನಾಪತ್ತೆಯಾಗಿದ್ದಾರೆ.

ಪಲಮಾಸ್‌ನಲ್ಲಿ ಹಲವು ಮನೆಗಳು ಜಲಾವೃತಗೊಂಡಿವೆ. ಸಿಲುಕಿಕೊಂಡಿರುವ ಜನರನ್ನು ರಕ್ಷಿಸಲು ರಕ್ಷಣಾ ಕಾರ್ಯಕರ್ತರು ಹರಸಾಹಸ ಪಡುತ್ತಿದ್ದಾರೆ ಎಂದು ಸುದ್ದಿಸಂಸ್ಥೆಯೊಂದರ ಪತ್ರಕರ್ತರು ಹೇಳಿದ್ದಾರೆ.

‘ಲಾರಿಸಾ ನಗರದಲ್ಲೂ ಪರಿಸ್ಥಿತಿ ಗಂಭೀರವಾಗಿದೆ. ಪಿನಿಯೋಸ್ ನದಿ ತುಂಬಿ ಹರಿಯುತ್ತಿದ್ದು, ಇದರಿಂದ ಸಾಕಷ್ಟು ತೊಂದರೆ ಆಗಿದೆ’ ಎಂದು ಅಗ್ನಿಶಾಮಕದಳದ ವಕ್ತಾರ ಯಾನ್ನಿಸ್ ಮಾಹಿತಿ ನೀಡಿದ್ದಾರೆ.

ಬಂದರು ನಗರಿ ವೋಲೋಸ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಿಗಡಾಯಿಸಿದೆ. ಪಂಪಿಂಗ್ ಸ್ಟೇಷನ್ ಹಾಗೂ ಪೂರೈಕೆ ವ್ಯವಸ್ಥೆಗೆ ಸಾಕಷ್ಟು ಹಾನಿಯಾಗಿದೆ. ನೀರು ಕುಡಿಯಲು ಯೋಗ್ಯವಾಗಿಲ್ಲ ಎಂದು ಆರೋಗ್ಯ ಸಚಿವಾಲಯ ಎಚ್ಚರಿಸಿದೆ.

ದೇಶದ ಎರಡನೇ ಅತಿ ದೊಡ್ಡ ನಗರವಾದ ಥೆಸಲೋನಿಕಿ ಹಾಗೂ ರಾಜಧಾನಿ ಅಥೆನ್ಸ್ ಸಂಪರ್ಕಿಸುವ ಹೆದ್ದಾರಿಯ ಹಲವೆಡೆ ಸಂಪರ್ಕ ಕಡಿತಗೊಂಡಿರುವ ಕಾರಣ ವಾಹನ ಸಂಚಾರ ಶನಿವಾರವೂ ಸವಾಲಾಗಿತ್ತು.

‘ಡೇನಿಯಲ್’ ಚಂಡಮಾರುತವು ಮಧ್ಯ ಕರಾವಳಿ ಪ್ರದೇಶವಾದ ಮೆಗ್ನಿಷಿಯಾಗೆ ಸೋಮವಾರ ಅಪ್ಪಳಿಸಿದರೆ, ಬುಧವಾರ ಕಾರ್ಡಿಟ್ಸಾ, ತ್ರಿಕಾಲ ಸೇರಿದಂತೆ ಇನ್ನಿತರೆ ಪಟ್ಟಣಗಳಿಗೆ ಬುಧವಾರ ಅಪ್ಪಳಿಸಿದೆ.

ಇಂಡೊನೇಷ್ಯಾದಲ್ಲಿ ಭೂಕಂಪ

ಜಕಾರ್ತ (ಎಎಫ್‌ಪಿ):ಇಂಡೊನೇಷ್ಯಾದ ಸುಲವೇಸಿ ದ್ವೀಪದ ಬಳಿ ಶನಿವಾರ ರಿಕ್ಟರ್ ಮಾಪಕದಲ್ಲಿ 6 ತೀವ್ರತೆಯ ಭೂಕಂಪ ಸಂಭವಿಸಿದೆ ಎಂದು ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆ ತಿಳಿಸಿದೆ.

ಸ್ಥಳೀಯ ಕಾಲಮಾನ ರಾತ್ರಿ 9:43ಕ್ಕೆ ಭೂಕಂಪ ಸಂಭವಿಸಿದೆ. ಕಂಪನದ ಕೇಂದ್ರಬಿಂದು 9.9 ಕಿಲೋ ಮೀಟರ್ ಆಳದಲ್ಲಿ ಇತ್ತು. ತಕ್ಷಣಕ್ಕೆ ಸುನಾಮಿಯ ಎಚ್ಚರಿಕೆ ನೀಡಿಲ್ಲ. ಆದರೆ, ಸಂಭವನೀಯ ಭೂಕಂಪನದ ಬಗ್ಗೆ ಇಂಡೊನೇಷ್ಯಾದ ಭೂ ಭೌತವಿಜ್ಞಾನ ಸಂಸ್ಥೆ (ಬಿಎಂಕೆಜಿ) ಎಚ್ಚರಿಕೆ ನೀಡಿದೆ.

‘ಭೂಕಂಪ ಸಂಭವಿಸಿದಾಗ ನಾನು ನಿದ್ರೆಯಲ್ಲಿದ್ದೆ. ತಕ್ಷಣ ಹಾಸಿಗೆಯಿಂದ ಜಿಗಿದುಬಿಟ್ಟೆ. ಕಂಪನವಾದಾಗ ಅಕ್ಕಿ ಜರಡಿಯನ್ನು ಅಲುಗಾಡಿಸಿದ ರೀತಿಯಲ್ಲಿ ಮೇಲೆ ಕಳಗೆ ಆದಂತೆ ಅನುಭವ ಉಂಟಾಯಿತು. ನಿಜಕ್ಕೂ ಪ್ರಬಲ ಕಂಪನ. ನಾವು ಕಂಪನ ಕೇಂದ್ರದ ಸಮೀಪವೇ ಇದ್ದೆವು. ಸದ್ಯ ನಾನು ನನ್ನ ಕುಟುಂಬ ಮತ್ತು ನೆರೆಹೊರೆಯವರು ಬಯಲು ಪ್ರದೇಶದಲ್ಲಿ ಆಶ್ರಯ ಪಡೆದಿದ್ದೇವೆ’ ಎಂದು ಕೇಂದ್ರ ಸುಲವೇಸಿಯ ಮಾಲಿ ಗ್ರಾಮದ 41 ವರ್ಷದ ಗೃಹಿಣಿ ಖಮರಿಯಾ ಹೇಳಿದರು.

ರಸ್ತೆಯಲ್ಲೇ ಕಾಲ ಕಳೆಯುತ್ತಿರುವ ಜನತೆ, ಅವಶೇಷಗಳಡಿ ಸಿಲುಕಿರುವವರ ರಕ್ಷಣೆಗೆ ಅವಿರತ ಶ್ರಮ

ನಡುಗಿದ ಭೂಮಿ, ನಲುಗಿದ ಮೊರೊಕ್ಕೊ

ಮಾರುಕೇಶ್ (ಎಪಿ): ಪ್ರಬಲ ಭೂಕಂಪನದಿಂದಾಗಿ ಮೊರೊಕ್ಕೊ ಅಕ್ಷರಶಃ ನಲುಗಿದೆ. ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ನೂರಾರು ಜನರು ಗಾಯಗೊಂಡಿದ್ದಾರೆ. ತಮ್ಮವರನ್ನು ಕಳೆದುಕೊಂಡ ಜನರ ನೋವು, ಆಕ್ರಂದನ ಮುಗಿಲು ಮುಟ್ಟಿದೆ. ಕಟ್ಟಡಗಳ ಅವಶೇಷಗಳಡಿ ಸಿಲುಕಿರುವ ಜನರ ರಕ್ಷಣೆಗೆ ಮೊರೊಕ್ಕೊ ಸೇನೆ ಮತ್ತು ತುರ್ತು ಸೇವಾ ಪಡೆ ಅವಿರತ ಶ್ರಮಪಡುತ್ತಿವೆ.

ಶುಕ್ರವಾರ ರಾತ್ರಿ 11.11ಕ್ಕೆ ಭೂಕಂಪ ಸಂಭವಿಸಿದೆ. ಭೂಕಂಪನ ಕೇಂದ್ರ ಬಿಂದು ಭೂಮಿಯ ಮೇಲ್ಮೈನಿಂದ 18 ಕಿ.ಮೀ ಆಳದಲ್ಲಿ ಪತ್ತೆಯಾಗಿದೆ ಎಂದು ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆ ಸಂಸ್ಥೆ ಹೇಳಿದರೆ, 11 ಕಿ.ಮೀ ಆಳದಲ್ಲಿ ಪತ್ತೆಯಾಗಿದೆ ಎಂದು ಮೊರೊಕ್ಕೊ ಭೂಕಂಪನ ಅಧ್ಯಯನ ಸಂಸ್ಥೆ ತಿಳಿಸಿದೆ.

‘ಭೂಕಂಪಪೀಡಿತ ಪ್ರದೇಶದಲ್ಲಿ ಹಲವು ಮನೆಗಳು ಧರೆಗುರುಳಿವೆ, ಕಟ್ಟಡಗಳು ನೆಲಸಮವಾಗಿವೆ. ಕೆಲವು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ವಿದ್ಯುತ್ ಮತ್ತು ರಸ್ತೆ ಸಂಪರ್ಕ ಸಂಪೂರ್ಣ ಕಡಿತಗೊಂಡಿದೆ’ ಎಂದು ಭೂಕಂಪನ ಕೇಂದ್ರ ಬಿಂದು ಇರುವ ಸ್ಥಳಕ್ಕೆ ಸಮೀಪವಿರುವ ನಗರದ ಮುಖ್ಯಸ್ಥರು ಮಾಧ್ಯಮವೊಂದಕ್ಕೆ ತಿಳಿಸಿದ್ದಾರೆ.

ರಸ್ತೆಗಳ ಮೇಲೆ ದೊಡ್ಡ ಬಂಡೆಗಳು ಬಿದ್ದಿರುವುದು ರಕ್ಷಣಾ ಕಾರ್ಯಾಚರಣೆಗೆ ತೊಡಕಾಗಿದೆ. ಭೂಕಂಪಪೀಡಿತ ಪ್ರದೇಶಗಳಿಗೆ ಹೊದಿಕೆ ಮತ್ತಿತರ ವಸ್ತುಗಳನ್ನು ರವಾನಿಸಲಾಗುತ್ತಿದೆ ಎಂದು ವರದಿಯಾಗಿದೆ.

12ನೇ ಶತಮಾನದಲ್ಲಿ ನಿರ್ಮಿಸಲಾದ ಜನಪ್ರಿಯ ಕೌತೌಬಿಯಾ ಮಸೀದಿ ಹಾನಿಗೊಳಗಾಗಿದೆ.

‘ಉಟ್ಟ ಬಟ್ಟೆಯಲ್ಲೇ ಹೊರಗೆ ಓಡಿದೆ’: ಭೂಮಿ ಕಂಪಿಸುತ್ತಿದ್ದಂತೆಯೇ ನಿದ್ರೆಯಲ್ಲಿದ್ದ ಜನರು ಎಚ್ಚರಗೊಂಡು ಭಯಭೀತರಾಗಿ ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಗೋಡೆಗಳು ಕುಸಿಯುವ ಭೀತಿಯಲ್ಲಿ ಮತ್ತೆ ಮನೆಯೊಳಗೆ ಹೋಗದೆ ರಸ್ತೆಯಲ್ಲೇ ರಾತ್ರಿಯಿಡೀ ಕಾಲ ಕಳೆದರು ಎಂದು ಮಾಧ್ಯಮವೊಂದು ವರದಿ ಮಾಡಿದೆ.

‘ಮೂರು ಭಾರಿ ಭೂಮಿ ಕಂಪಿಸಿದ ಅನುಭವವಾಯಿತು. ಮತ್ತೆ ಭೂಮಿ ಕಂಪಿಸುವ ಭಯದಲ್ಲಿ ಅನೇಕ ಕುಟುಂಬಗಳು ಮನೆಗೆ ತೆರಳದೆ ಹೊರಗೆ ಇವೆ. ಜನರ ಆಕ್ರಂದನ, ಚೀರಾಟ ತಾಳಲಸಾಧ್ಯವಾಗಿದೆ’ ಎಂದು ಎಂಜಿನಿಯರ್ ಫೈಸಲ್ ಬದೌರ್ ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿದರು.

‘ನನ್ನ ಹಾಸಿಗೆ ಹಾರಿ ಹೋಗುತ್ತಿದೆ ಅನಿಸಿತು. ಭಯಭೀತನಾಗಿ ಅರ್ಧಂಬರ್ಧ ಬಟ್ಟೆಯಲ್ಲೇ ಮನೆಯಿಂದ ಹೊರಗೆ ಓಡಿದೆ’ ಎಂದು ಮಾರುಕೇಶ್ ನಗರದ ನಿವಾಸಿ ಮೈಕೆಲ್ ಬಿಜೆಟ್ ಭೂಕಂಪದ ತೀವ್ರತೆಯನ್ನು ತೆರೆದಿಟ್ಟರು.

‘ಕುಟುಂಬದ ಕನಿಷ್ಠ 10 ಮಂದಿಯನ್ನು ಕಳೆದುಕೊಂಡು ಆಘಾತಗೊಂಡಿದ್ದೇನೆ’ ಎಂದು ಸ್ಥಳೀಯ ನಿವಾಸಿ ಹೌದಾ ಔಟಾಸ್ಸಫ್ ಅಳಲು ತೋಡಿಕೊಂಡರು.

ಮೂರು ದಿನ ಶೋಕ: ಭೂಕಂಪದಲ್ಲಿ ಮಡಿದವರಿಗೆ ಸಂತಾಪ ಸಲ್ಲಿಸಲು ಮೊರೊಕ್ಕೊದ ರಾಯಲ್ ಕೋರ್ಟ್ ಮೂರು ದಿನಗಳ ಕಾಲ ರಾಷ್ಟ್ರೀಯ ಶೋಕಾಚರಣೆ ಘೋಷಿಸಿದ್ದು, ರಾಷ್ಟ್ರಧ್ವಜವನ್ನು ಅರ್ಧಕ್ಕೆ ಇಳಿಸಿದೆ.

ಹಿಂದಿನ ಭೂಕಂಪಗಳು

- 1960ರಲ್ಲಿ ಮೊರೊಕ್ಕೊದ ಅಗದೀರ್ ನಗರದಲ್ಲಿ ರಿಕ್ಟರ್ ಮಾಪಕದಲ್ಲಿ 5.8 ತೀವ್ರತೆಯ ಭೂಕಂಪ ಸಂಭವಿಸಿತ್ತು. ಆಗ ಸಾವಿರಾರು ಜನರು ಮೃತಪಟ್ಟಿದ್ದರು. ಘಟನೆ ಬಳಿಕ ಕಟ್ಟಡ ನಿರ್ಮಾಣದ ನಿಯಮಗಳಲ್ಲಿ ಬದಲಾವಣೆ ತರಲಾಗಿತ್ತು.
- 2004ರಲ್ಲಿ ಮೆಡಿಟರೇನಿಯನ್ ಸಮುದ್ರ ತೀರದಲ್ಲಿರುವ ಅಲ್ ಹೊಸೈಮಾ ನಗರದಲ್ಲಿ ಭೂಕಂಪ ಸಂಭವಿಸಿ, 600ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದರು.



ಭೂಕಂಪ ಸಂಭವಿಸಿದ ಬಳಿಕ ಮನೆಯಿಂದ ಹೊರಬಂದು ರಸ್ತೆಯಲ್ಲೇ ಮಲಗಿರುವ ಜನರು –ಎಎಫ್‌ಪಿ ಚಿತ್ರ



ಭೂಕಂಪದಿಂದಾಗಿ ಹಾನಿಯಾಗಿರುವ ಹೊಟೇಲ್ –ಎಪಿ ಚಿತ್ರ

ಹಲವು ದೇಶಗಳ ನೆರವು

ಜಿ–20, ಯುರೋಪ್, ಮಧ್ಯಪ್ರಾಚ್ಯ ಸೇರಿದಂತೆ ಹಲವು ದೇಶಗಳು ಮೊರೊಕ್ಕೊಗೆ ನೆರವಿನ ಭರವಸೆ ನೀಡಿವೆ. ಟರ್ಕಿ, ಫ್ರಾನ್ಸ್, ಜರ್ಮನಿ ದೇಶಗಳೂ ಸಹಾಯಹಸ್ತ ಚಾಚುವ ಆಶ್ವಾಸನೆ ನೀಡಿವೆ.

ಮೊರೊಕ್ಕೊಗೆ ಮಾನವೀಯ ಮತ್ತು ವೈದ್ಯಕೀಯ ನೆರವು ನೀಡುವ ಉದ್ದೇಶದಿಂದ ತೆರಳುವ ವಿಮಾನಗಳಿಗೆ ಅನುಮತಿ ನೀಡುವುದಾಗಿ ಅಲ್ಜೇರಿಯಾ ಘೋಷಿಸಿದೆ.

ಅವಘಡದಲ್ಲಿ ಬದುಕುಳಿದವರ ರಕ್ಷಣೆಯೇ ಮೊದಲ ಆದ್ಯತೆ. ಅಗತ್ಯವಿದ್ದಲ್ಲಿ ಮೊರೊಕ್ಕೊಗೆ ರಕ್ಷಣಾ ಪಡೆಗಳನ್ನು ಕಳುಹಿಸುವುದಾಗಿ ಸ್ಪೇನ್ ತಿಳಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹346-550
ದ್ವಿತಳಿ (ಬಿ.ವಿ)	₹350-665

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹60,860
ಒಡವೆ ಚಿನ್ನ 1ಗ್ರಾಂ	₹5,630
ಬೆಳ್ಳಿ ಕೆ.ಜಿಗೆ	₹73,000

ಸಂಕ್ಷಿಪ್ತ ಸುದ್ದಿ

ನವಾಜ್ ಅಕ್ಟೋಬರ್‌ನಲ್ಲಿ ಪಾಕ್‌ಗೆ ವಾಪಸ್ ಸಾಧ್ಯತೆ

ಇಸ್ಲಾಮಾಬಾದ್ (ಪಿಟಿಐ): ಲಂಡನ್‌ನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು ಅಕ್ಟೋಬರ್‌ನಲ್ಲಿ ಸ್ವದೇಶಕ್ಕೆ ಮರಳುವ ಸಾಧ್ಯತೆ ಇದೆ ಎಂದು ಮಾಧ್ಯಮಗಳು ಶನಿವಾರ ವರದಿ ಮಾಡಿವೆ.

ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷದ ನಾಯಕರಾಗಿರುವ ಷರೀಫ್ ಲಂಡನ್‌ನಲ್ಲಿ ತಮ್ಮ ಪಕ್ಷದ ಕಾರ್ಯಕರ್ತರೊಂದಿಗೆ ನಡೆಸಿದ ಸಭೆಯಲ್ಲಿ ಪಾಕಿಸ್ತಾನಕ್ಕೆ ಮರಳುವ ಕುರಿತು ಮಾತನಾಡಿದ್ದಾರೆ. ಆದರೆ, ಪ್ರಯಾಣದ ದಿನಾಂಕದ ಕುರಿತು ಮಾಹಿತಿ ಬಹಿರಂಗಪಡಿಸಿಲ್ಲ ಎಂದು ‘ಡಾನ್’ ಪತ್ರಿಕೆ ವರದಿ ಮಾಡಿದೆ. ನವೆಂಬರ್ 2019ರಿಂದಲೂ ಲಂಡನ್‌ನಲ್ಲೇ ನೆಲೆಸಿದ್ದಾರೆ.

ಜೈಲಿನಿಂದ ಪರಾರಿಯಾಗಿದ್ದ ಶಂಕಿತ ಉಗ್ರ ಸೆರೆ

ಲಂಡನ್(ಎಎಫ್‌ಪಿ): ವಾಂಡ್ಸ್‌ವರ್ತ್ ಜೈಲಿನಿಂದ ಪರಾರಿಯಾಗಿದ್ದ ಮಾಜಿ ಯೋಧ, ಶಂಕಿತ ಉಗ್ರ ಡೇನಿಯಲ್ ಅಬೇದ್ ಖಲೀಫ್‌ನನ್ನು ಬ್ರಿಟನ್ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಡೇನಿಯಲ್‌ನನ್ನು ಚಿಸ್ವಿಕ್ ಪ್ರದೇಶದಲ್ಲಿ ಬಂಧಿಸಿದ್ದು, ಸದ್ಯ ಪೊಲೀಸ್ ವಶದಲ್ಲಿದ್ದಾನೆ ಎಂದು ಅಧಿಕಾರಿಗಳು ‘ಎಕ್ಸ್’ (ಟ್ವಿಟರ್) ವೇದಿಕೆಯಲ್ಲಿ ಹೇಳಿದ್ದಾರೆ.

ಟ್ರಕ್ ಹರಿದು ಐವರು ದುರ್ಮರಣ

ಇಸ್ತಾಂಬುಲ್ (ಎಎಫ್‌ಪಿ): ಅಂತಿಮ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದವರ ಮೇಲೆ ಟ್ರಕ್ ಹರಿದು ಐವರು ಮೃತಪಟ್ಟು, 25 ಜನರು ಗಾಯಗೊಂಡಿರುವ ಘಟನೆ ಟರ್ಕಿಯ ಕಹ್ರಮನ್‌ಮಾರಾಸ್ ಪ್ರಾಂತ್ಯದಲ್ಲಿ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟ್ರಕ್‌ನ ಬ್ರೇಕ್ ವಿಫಲವಾಗಿ ರಸ್ತೆಯ ಇಳಿಜಾರಿನಲ್ಲಿ ಚಾಲಕನ ನಿಯಂತ್ರಣಕ್ಕೆ ಸಿಗದ ಕಾರಣ ಈ ದುರಂತ ಸಂಭವಿಸಿದೆ. ಗಾಯಗೊಂಡವರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪ್ರಾಂತ್ಯದ ಗವರ್ನರ್ ಅವರು ಅಲ್ಲಿಯ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹12400
ಎಸಿ	₹6860
ಆರ್‌ಪಿ	₹10100
ಆರ್‌ಸಿ	₹5830

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹144.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹126

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹485

ಹೂಡಿಕೆದಾರರ ಮಾಹಿತಿ ಕೊಡಿ: ನವೋದ್ಯಮಗಳಿಗೆ ಐ.ಟಿ ನೋಟಿಸ್

ಮುಖ್ಯಾಂಶಗಳು

- ಇಲಾಖೆ ಕ್ರಮಕ್ಕೆ ಭಾರತ್‌ಪೆ ಸಹಸ್ಥಾಪಕ ಅಸಮಾಧಾನ
- ತೆರಿಗೆ ಭಯೋತ್ಪಾದನೆ ಹೆಚ್ಚುತ್ತಿದೆ ಎಂದ ಪೈ

ನವದೆಹಲಿ (ಪಿಟಿಐ): ನವೋದ್ಯಮಗಳಲ್ಲಿ ಬಂಡವಾಳ ತೊಡಗಿಸುವ ಹೂಡಿಕೆದಾರರ ಸಾಲ ಮಾರುಪಾವತಿಸುವ ಸಾಮರ್ಥ್ಯದ ಕುರಿತು ಮಾಹಿತಿ ನೀಡುವಂತೆ ಆದಾಯ ತೆರಿಗೆ ಇಲಾಖೆಯು ಕೆಲವು ನವೋದ್ಯಮಗಳಿಗೆ ನೋಟಿಸ್ ನೀಡಿದೆ. ಹೂಡಿಕೆದಾರನೊಬ್ಬ ನವೋದ್ಯಮದಲ್ಲಿ ತೊಡಗಿಸಿರುವ ಬಂಡವಾಳವು ಆತನು ಘೋಷಣೆ ಮಾಡಿಕೊಂಡಿರುವ ಆದಾಯಕ್ಕೆ ಅನುಗುಣವಾಗಿ ಇದೆಯೇ ಎನ್ನುವುದನ್ನು ಪರಿಶೀಲಿಸುವ ಉದ್ದೇಶದಿಂದ ಇಲಾಖೆಯು ಈ ಕ್ರಮ ಕೈಗೊಂಡಿದೆ.

ಹೂಡಿಕೆದಾರರ ಗುರುತು ಮತ್ತು ಸಾಲ ಯೋಗ್ಯತೆ ಹಾಗೂ ವಹಿವಾಟಿನ ಸಾಚಾತನವನ್ನು ಸಾಬೀತುಪಡಿಸುವ ಜವಾಬ್ದಾರಿಯು ತೆರಿಗೆ ಪಾವತಿಸುವ ಕಂಪನಿಯಯದ್ದಾಗಿದೆ ಎಂದು ತೆರಿಗೆ ಇಲಾಖೆಯು ಭಾರತ್‌ಪೆ ಸಹಸ್ಥಾಪಕ ಮತ್ತು ಮಾಜಿ ಎಂ.ಡಿ. ಅಶ್ನೀರ್ ಗ್ರೋವರ್ ಅವರು ‘ಎಕ್ಸ್’ನಲ್ಲಿ ಮಾಡಿರುವ ಪೋಸ್ಟ್‌ಗೆ ಪ್ರತಿಕ್ರಿಯೆ ನೀಡಿದೆ.

‘ಷೇರುದಾರರ ಮಾಹಿತಿ ಒದಗಿಸುವಂತೆ ಕಳೆದ ಒಂದು ತಿಂಗಳಿನಲ್ಲಿ ಹಲವು ನವೋದ್ಯಮಗಳಿಗೆ (ನಾನು ಹೂಡಿಕೆ ಮಾಡಿರುವ ಕೆಲವನ್ನೂ ಒಳಗೊಂಡು) ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬಂದಿದೆ’ ಎಂದು ಗ್ರೋವರ್ ಅವರು ಶುಕ್ರವಾರ ‘ಎಕ್ಸ್’ನಲ್ಲಿ ಬರೆದುಕೊಂಡಿದ್ದರು. ‘ಸ್ವಾರಸ್ಯಕರ ವಿಷಯ ಎಂದರೆ, ಎಲ್ಲ ಷೇರುದಾರರ ಮೂರು ವರ್ಷಗಳ ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆಯ (ಐಟಿಆರ್) ಮಾಹಿತಿ ನೀಡುವಂತೆ ನವೋದ್ಯಮ ಕಂಪನಿಗಳನ್ನು ಕೇಳಲಾಗಿದೆ’ ಎಂದು ಬರೆದಿದ್ದಾರೆ.

ಷೇರುದಾರರ ಐಟಿಆರ್ ಅನ್ನು ನವೋದ್ಯಮಗಳು ಹೇಗೆ ಮತ್ತು ಏಕೆ ಹೊಂದಿರಬೇಕು ಎಂದು ಗ್ರೋವರ್ ಪ್ರಶ್ನೆ ಮಾಡಿದ್ದಾರೆ. ‘ಷೇರುದಾರ/ವ್ಯಕ್ತಿಯೊಬ್ಬ ತನ್ನ ಐಟಿಆರ್ ದಾಖಲೆಯನ್ನು ಖಾಸಗಿ ಕಂಪನಿಯೊಂದಿಗೆ ಏಕೆ ಹಂಚಿಕೊಳ್ಳುತ್ತಾನೆ’ ಎಂದು ಪ್ರಶ್ನಿಸಿದ್ದಾರೆ.

ಹೂಡಿಕೆದಾರರ ಸಾಲ ಯೋಗ್ಯತೆ ಪ್ರಮಾಣೀಕರಿಸಲು ವಿವರಗಳನ್ನು ಕೇಳಿರುವುದಾಗಿ ತಿಳಿಸಲಾಗಿದೆ. ಅದು ಏಕೆ ಬೇಕು? ಏಕೆಂದರೆ, ಕಂಪನಿಯು ಷೇರುದಾರರಿಗೆ ಸಾಲವನ್ನು ನೀಡುವುದಿಲ್ಲ. ಬದಲಿಗೆ ಕಂಪನಿಯಲ್ಲಿ ಇಕ್ವಿಟಿ ನೀಡಲಾಗುತ್ತದೆ ಎಂದಿದ್ದಾರೆ. ಹಣಕಾಸು ಸಚಿವಾಲಯವು ಈ ವಿಷಯದತ್ತ ಗಮನ ಹರಿಸಬೇಕಿದೆ ಎಂದಿದ್ದಾರೆ.

ಗ್ರೋವರ್ ಅವರಿಗೆ ತೆರಿಗೆ ಇಲಾಖೆಯು ಪ್ರತಿಕ್ರಿಯ ನೀಡಿದೆ. ಆದಾಯ ತೆರಿಗೆ ಕಾಯ್ದೆ–1961ರ ಸೆಕ್ಷನ್ 68ರಂತೆ, ಮೌಲ್ಯಮಾಪನ ಅಧಿಕಾರಿಯು ಷೇರುದಾರರು/ಹೂಡಿಕೆದಾರರ ಸಾಲ ಯೋಗ್ಯತೆಯ ಕುರಿತು ಕೆಲವೊಂದು ವಿವರಣೆಗಳನ್ನು ಕೇಳಿದ್ದಾರೆ. ಅದರಂತೆ, ತೆರಿಗೆ ಪಾವತಿಸುವ ಕಂಪನಿಯು 1) ಹೂಡಿಕೆದಾರರ ಗುರುತು, 2) ಹೂಡಿಕೆದಾರರ ಸಾಲ ಯೋಗ್ಯತೆ ಹಾಗೂ 3) ವಹಿವಾಟಿನ ಸಾಚಾತನದ ಕುರಿತು ಮಾಹಿತಿಗಳನ್ನು ನೀಡಬೇಕಿದೆ ಎಂದು ಇಲಾಖೆಯು ತಿಳಿಸಿದೆ.

2012ರ ಹಣಕಾಸು ಕಾಯ್ದೆಯ ಪ್ರಕಾರ, ಷೇರು ಬಂಡವಾಳ, ಷೇರು ಪ್ರೀಮಿಯಂ ಇತ್ಯಾದಿ ರೂಪದಲ್ಲಿ ಹೂಡಿಕೆ ಆದ ಮೊತ್ತವು ಯಾವ ಮೂಲದಿಂದ, ಯಾವ ರೀತಿಯಲ್ಲಿ ಬಂದಿದೆ ಎನ್ನುವ ಕುರಿತು ಸೆಕ್ಷನ್ 68ರ ಅಡಿಯಲ್ಲಿ ಮಾಹಿತಿ ನೀಡಿವುದು ಕಡ್ಡಾಯ. ಸೆಬಿಯಲ್ಲಿ ನೋಂದಣಿ ಆದ ವೆಂಚರ್ ಕ್ಯಾಪಿಟಲ್ ಫಂಡ್ ಅಥವಾ ವೆಂಚರ್ ಕ್ಯಾಪಿಟಲ್ ಕಂಪನಿಗಳನ್ನು ಇದರಿಂದ ಹೊರಗಿಡಲಾಗಿದೆ ಇಲಾಖೆಯು ತಿಳಿಸಿದೆ.


ಹೂಡಿಕೆದಾರರ ಪ್ಯಾನ್ ಮಾಹಿತಿಯನ್ನೂ ಇಲಾಖೆಗೆ ನೀಡುವಂತೆ ಕೇಳಲಾಗಿದೆ. ಹೀಗೆ ಮಾಡುವುದರಿಂದ ಹೂಡಿಕೆದಾರರ ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆಯನ್ನು ಪರಿಶೀಲನೆ ನಡೆಸಲು ಸಾಧ್ಯವಾಗಲಿದೆ ಎಂದು ಹೇಳಿದೆ.

ಮಧ್ಯಪ್ರವೇಶಿಸಿ: ಇನ್ಫೊಸಿಸ್ ಸಹಸ್ಥಾಪಕ ಮತ್ತು ಹೂಡಿಕೆದಾರ ಮೋಹನದಾಸ್ ಪೈ ಅವರು ಈ ವಿಷಯದ ಕುರಿತು ಪ್ರತಿಕ್ರಿಯೆ ನೀಡಿದ್ದು, ಇಲಾಖೆಯ ಕ್ರಮವು ‘ದಾರಿ ತಪ್ಪುಸುವಂತಿದೆ’ ಎಂದಿದ್ದಾರೆ.

‘ತೆರಿಗೆ ಭಯೋತ್ಪಾದನೆ ಹೆಚ್ಚಾಗುತ್ತಿದೆ. ದಯವಿಟ್ಟು ಮಧ್ಯಪ್ರವೇಶಿಸಿ’ ಎಂದು ಗ್ರೋವರ್ ಅವರು ಮೊದಲಿಗೆ ಮಾಡಿದ್ದ ‘ಎಕ್ಸ್’ ಪೋಸ್ಟ್‌ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಪ್ರಧಾನಿ ಕಚೇರಿಯನ್ನು ಪೈ ಟ್ಯಾಗ್ ಮಾಡಿದ್ದಾರೆ.

ಮೂರು ವರ್ಷಗಳ ಐಟಿಆರ್ ನೀಡಬೇಕು ಎನ್ನುವುದು ಮತ್ತೆ ದಾರಿ ತಪ್ಪಿಸುವಂತಿದೆ ಎಂದು ಪೈ ಮತ್ತೊಂದು ಪೋಸ್ಟ್ ಮಾಡಿದ್ದಾರೆ. ಪ್ಯಾನ್ ಕೇಳುವುದು ನಿಯಮ. ಆದರೆ, ಹೂಡಿಕೆದಾರರ ಮೂರು ವರ್ಷಗಳ ಐ.ಟಿ. ರಿಟರ್ನ್ಸ್ ದಾಖಲೆಯನ್ನು ನವೋದ್ಯಮಗಳು ನೀಡಬೇಕು ಎಂದು ಹೇಗೆ ಕೇಳುತ್ತೀರಿ? ಕಾನೂನು ಇದಕ್ಕೆ ಅವಕಾಶ ನೀಡುತ್ತದೆಯೇ? ಪ್ಯಾನ್ ಇದ್ದರೆ ಸಾಕು ಎಂದು ಆದಾಯ ತೆರಿಗೆ ಇಲಾಖೆಯೂ ಹೇಳುತ್ತದೆ. ಎಂದು ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಕೇಂದ್ರ ಹಣಕಾಸು ಸಚಿವಾಲಯ, ಪ್ರಧಾನಿ ನರೇಂದ್ರ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಹಲವರನ್ನು ಮೋಹನದಾಸ್ ಪೈ ಅವರು ಈ ಪೋಸ್ಟ್‌ಗೆ ಟ್ಯಾಗ್ ಮಾಡಿದ್ದಾರೆ. ಪೈ ಅವರ ಪೋಸ್ಟ್ ಅನ್ನು ಗ್ರೋವರ್ ರಿ–ಪೋಸ್ಟ್ ಮಾಡಿದ್ದಾರೆ.



ಹಣದುಬ್ಬರ, ಮಾರುಕಟ್ಟೆ ಮೌಲ್ಯ ಏರಿಕೆ

ಲಾಭ ಗಳಿಕೆಗೆ ‘ಎಫ್‌ಪಿಐ’ ಚಿತ್ತ

ಪ್ರಜಾವಾಣಿ ವಾರ್ತೆ


ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ಷೇರುಪೇಟೆಗಳಲ್ಲಿ ಆಗಸ್ಟ್‌ನಿಂದ ಈಚೆಗೆ ಷೇರುಗಳನ್ನು ಮಾರಾಟ ಮಾಡುವ ಮೂಲಕ ಲಾಭ ಮಾಡಿಕೊಳ್ಳಲು ಹೆಚ್ಚು ಗಮನ ಹರಿಸಿದ್ದಾರೆ. ಮಾರುಕಟ್ಟೆ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದು, ಕಚ್ಚಾ ತೈಲ ದರ ಏರಿಕೆ, ಹಣದುಬ್ಬರ... ಹೀಗೆ ಹಲವು ಅಂಶಗಳು ಹೂಡಿಕೆ ಚಟುವಟಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿವೆ.

ಮೇ–ಜುಲೈವರೆಗೆ ಸತತ ಮೂರು ತಿಂಗಳು ಷೇರುಪೇಟೆಯಲ್ಲಿ ಬಂಡವಾಳ ಹೂಡಿಕೆಗೆ ಗಮನ ಹರಿಸಿದ್ದ ವಿದೇಶಿ ಹೂಡಿಕೆದಾರರು ಆ ಬಳಿಕ ತಮ್ಮ ಬಳಿ ಇರುವ ಷೇರುಗಳನ್ನು ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದರ ಪರಿಣಾಮವಾಗಿ ಆಗಸ್ಟ್‌ನಲ್ಲಿ ಹೂಡಿಕೆ ಪ್ರಮಾಣವು ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ.

ಆಗಸ್ಟ್‌ನಲ್ಲಿ ಷೇರುಗಳನ್ನು ಖರೀದಿಸುವುದಕ್ಕಿಂತಲೂ ಮಾರಾಟ ಮಾಡಲು ಹೆಚ್ಚು ಆಸಕ್ತಿ ತೋರಿಸಿದ್ದ ವಿದೇಶಿ ಹೂಡಿಕೆದಾರರು ಸೆಪ್ಟೆಂಬರ್‌ನಲ್ಲಿಯೂ ಅದೇ ಪ್ರವೃತ್ತಿ ಮುಂದುವರಿಸುವಂತೆ ಕಾಣುತ್ತಿದೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಸೆಪ್ಟೆಂಬರ್ 8ರವರೆಗೆ ನಡೆದಿರುವ ವಹಿವಾಟಿನಲ್ಲಿ ₹4,402 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೊಡ್ಡ ಮಟ್ಟದ ಹೂಡಿಕೆ ಒಪ್ಪಂದಗಳು ಮತ್ತು ಪ್ರಾಥಮಿಕ ಮಾರುಕಟ್ಟೆಯ ಮೂಲಕ (ಐಪಿಒ, ಇತ್ಯಾದಿ) ಆಗಿರುವ ಹೂಡಿಕೆಗಳನ್ನು ಹೊರತುಪಡಿಸಿದರೆ ಬಂಡವಾಳ ಮಾರುಕಟ್ಟೆಯಲ್ಲಿ ಒಟ್ಟು ಹೊರಹರಿವು ₹8,832 ಕೋಟಿಯಷ್ಟು ಆಗಲಿದೆ ಎಂದು ಜಿಯೋಜಿತ್ ಫೈನಾನ್ಷಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

ಅಮೆರಿಕದ ಡಾಲರ್ ಮೌಲ್ಯ ವೃದ್ಧಿಸುತ್ತಿರುವುದು ಹಾಗೂ ಬಾಂಡ್ ಗಳಿಕೆ ಹೆಚ್ಚಾಗುತ್ತಿರುವುದು ಬಂಡವಾಳ ಹೊರಹರಿವಿಗೆ ಕಾರಣವಾಗಿದೆ. ‘ಡಾಲರ್ ಮೌಲ್ಯ ಮತ್ತು ಬಾಂಡ್ ಗಳಿಕೆ ಕಡಿಮೆ ಆದರೆ ವಿದೇಶಿ ಬಂಡವಾಳ ಒಳಹರಿವು ಆಗುವ ಸಾಧ್ಯತೆ ಇದೆ. ಆದರೆ, ಇದು ಮುಂಬರುವ ಅಮೆರಿಕದ ಹಣದುಬ್ಬರದ ಸ್ಥಿತಿ ಮತ್ತು ಆರ್ಥಿಕ ಬೆಳವಣಿಗೆಯನ್ನು ಅವಲಂಬಿಸಿರಲಿದೆ’ ಎಂದು ವಿಜಯಕುಮಾರ್ ಹೇಳಿದ್ದಾರೆ.

ಬಂಡವಾಳ ಸರಕುಗಳು ಮತ್ತು ವಿದ್ಯುತ್ ವಲಯಗಳಲ್ಲಿ ‘ಎಫ್‌ಪಿಐ’ ನಿರಂತರವಾಗಿ ಹೂಡಿಕೆ ಮಾಡುತ್ತಿದ್ದಾರೆ. ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ಬ್ಯಾಂಕಿಂಗ್ ವಲಯದ ಷೇರುಗಳು ಮೌಲ್ಯ ಕಡಿಮೆ ಮಟ್ಟದಲ್ಲಿ ಇದ್ದು, ರಿಟೇಲ್ ಹೂಡಿಕೆದಾರರಿಗೆ ಖರೀದಿಸಲು ಉತ್ತಮ ಅವಕಾಶ ಇದಾಗಿದೆ ಎಂದು ಅವರು ಸಲಹೆ ನೀಡಿದ್ದಾರೆ.



ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720(1720)
ಸೋಯಾ (ರಿಫೈನ್ಡ್)	₹900(900)
ಸೂರ್ಯಕಾಂತಿ (ರಿಫೈನ್ಡ್)	₹905(905)
ಪಾಮೋಲಿನ್	₹832(832)

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ	₹7100
ಗರಿಷ್ಠ	₹8217
ಮಾದರಿ	₹7500

ಮುಂಬೈ ಧಾರಣೆ

ಶೇಂಗಾ

9–9–2023

ಜಾವಾ 70/80(ಹೊಸ)	12700-12800
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730(1730)
ಒಂದು ವಾರದ ಡೆಲಿವರಿ	1725(1725)
ಸೋಯಾ ಕಚ್ಚಾ	848(850)
ಪಾಮ್ ವಾರದ ಡೆಲಿವರಿ	830(830)
ಸೂರ್ಯಕಾಂತಿ ಎಣ್ಣೆ ಕಚ್ಚಾ	835(835)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,800(58,850)
ಬೆಳ್ಳಿ ಕೆ.ಜಿ 70,700(71,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಸಾಹತುಶಾಹಿ ಯುಗದ ದೇಶದ್ರೋಹ ಕಾನೂನಿನ ಸಿಂಧುತ್ವ ಪ್ರಶ್ನಿಸಿ ಅರ್ಜಿ

ಸೆ.12ಕ್ಕೆ ಸುಪ್ರೀಂ ಕೋರ್ಟ್ ವಿಚಾರಣೆ



ನವದೆಹಲಿ (ಪಿಟಿಐ): ವಸಾಹತುಶಾಹಿ ಯುಗದ ದೇಶದ್ರೋಹ ಕಾನೂನಿನ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯು ಸುಪ್ರೀಂ ಕೋರ್ಟ್‌ನಲ್ಲಿ ಸೆಪ್ಟೆಂಬರ್ 12ರಂದು ನಡೆಯಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿರುವ ತ್ರಿಸದಸ್ಯ ಪೀಠವು, ಈ ವಿಚಾರಣೆ ನಡೆಸಲಿದೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124ಎ (ದೇಶದ್ರೋಹ) ಸಿಂಧುತ್ವ ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆಯನ್ನು 2022ರ ಮೇ 1ರಂದು ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡಿತ್ತು. ಅತ್ಯಂತ ಹಳೆಯದಾದ ಈ ಕಾನೂನಿನ ಸಾಂವಿಧಾನಿಕ ಊರ್ಜಿತ್ವಕ್ಕೆ ಸಂಬಂಧಿಸಿದಂತೆ ಉನ್ನತಮಟ್ಟದ ಮರುಪರಿಶೀಲನೆಯು ಪ್ರಗತಿಯಲ್ಲಿದೆ ಎಂದು ಮೇ 11ರಂದು ಕೇಂದ್ರದ ಪರವಾಗಿ ಅಟಾರ್ನಿ ಜನರಲ್ ಕೆ. ವೆಂಕಟರಮಣಿ ಅವರು ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿದ್ದರು. ಹಾಗಾಗಿ, ವಿಚಾರಣೆಯನ್ನು ಮುಂದೂಡಲಾಗಿತ್ತು.

ಕೇಂದ್ರದ ಮನವಿ ಆಲಿಸಿದ್ದ ನ್ಯಾಯಪೀಠವು, ಮರುಪರಿಶೀಲನಾ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೂ ಐಪಿಸಿ ಸೆಕ್ಷನ್ 124ಎ ಅಡಿ ಹೊಸದಾಗಿ ಎಫ್‌ಐಆರ್ ದಾಖಲಿಸಬಾರದು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿತ್ತು. ಅಲ್ಲದೇ, ಈ ಸೆಕ್ಷನ್‌ನಡಿ ಪ್ರಗತಿಯಲ್ಲಿರುವ ತನಿಖೆಗಳು, ಬಾಕಿ ವಿಚಾರಣೆ ಸೇರಿದಂತೆ ಎಲ್ಲಾ ಪ್ರಕ್ರಿಯೆಗಳಿಗೂ ತಡೆ ನೀಡಿತ್ತು.

ಜೋಡಿ ಹತ್ಯೆ ಪ್ರಕರಣ: ಮಾಜಿ ಸಂಸದನಿಗೆ ಜೀವಾವಧಿ ಶಿಕ್ಷೆ

ನವದೆಹಲಿ (ಪಿಟಿಐ): ಜೋಡಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಬಿಹಾರದ ಮಾಜಿ ಸಂಸದ, ಆರ್‌ಜೆಡಿ ಮುಖಂಡ ಪ್ರಭುನಾಥ್ ಸಿಂಗ್ ಅವರಿಗೆ ಸುಪ್ರೀಂ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.



ಪ್ರಭುನಾಥ್ ಸಿಂಗ್

ಈ ಮೊಕದ್ದಮೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸಮರ್ಪಕವಾಗಿ ಕಾನೂನು ಕ್ರಮ ಜರುಗಿಸಿಲ್ಲ. ಬದಲಾಗಿ, ಅಪರಾಧಿಗೆ ಸಹಕಾರ ನೀಡಿದೆ ಎಂದು ಕೂಡ ಕೋರ್ಟ್ ಹೇಳಿದೆ.

1995ರ ಬಿಹಾರ ವಿಧಾನಸಭೆ ಚುನಾವಣೆ ವೇಳೆ ಸಾರಣ್ ಜಿಲ್ಲೆಯಲ್ಲಿ ನಡೆದಿದ್ದ ಇಬ್ಬರ ಹತ್ಯೆಯ ಪ್ರಕರಣ ಇದಾಗಿದ್ದು, ಆರೋಪಿ ಪ್ರಭುನಾಥ್ ಅವರನ್ನು ಪಟ್ನಾ ಹೈಕೋರ್ಟ್ ಖುಲಾಸೆಗೊಳಿಸಿತ್ತು.

ಹೈಕೋರ್ಟ್ ಆದೇಶವನ್ನು ವಜಾಗೊಳಿಸಿದ ಸುಪ್ರೀಂ ಕೋರ್ಟ್ ಆಗಸ್ಟ್ 18ರಂದು ಪ್ರಭುನಾಥ್ ಅವರನ್ನು ತಪ್ಪಿತಸ್ಥ ಎಂದು ಘೋಷಿಸಿತ್ತು. ಸೆಪ್ಟೆಂಬರ್ 1 ರಂದು ಶಿಕ್ಷೆ ವಿಧಿಸಿದ ಕೋರ್ಟ್, ಅವರಿಗೆ ₹ 25 ಲಕ್ಷ ದಂಡವನ್ನು ವಿಧಿಸಿದೆ

ಇದೇ ವೇಳೆ ಇಬ್ಬರು ಮೃತರು ಮತ್ತು ಗಾಯಾಳುವಿನ ಕುಟುಂಬಕ್ಕೆ ಪರಿಹಾರ ಧನವನ್ನು ನೀಡಲು ಬಿಹಾರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಬ್ರಿಟಿಷರ ಆಳ್ವಿಕೆಯಲ್ಲಿ ಜಾರಿಗೊಂಡಿರುವ ಅಪರಾಧ ಕಾನೂನುಗಳಾದ ಭಾರತೀಯ ದಂಡ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಹೊಸ ಕಾನೂನುಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾಗಿದೆ.

ಲೋಕಸಭೆಯ ಮುಂಗಾರು ಅಧಿವೇಶನದಲ್ಲಿ ಮೂರು ಹೊಸ ಮಸೂದೆಗಳನ್ನೂ ಮಂಡಿಸಿದೆ. ಭಾರತೀಯ ದಂಡ ಸಂಹಿತೆಯ ಬದಲಿಗೆ ಮಂಡಿಸಿರುವ ಭಾರತೀಯ ನ್ಯಾಯ ಸಂಹಿತೆ ಮಸೂದೆಯಲ್ಲಿ ದೇಶದ್ರೋಹ ಕಾನೂನಿನ ಬಗ್ಗೆ ವಿಶಾಲವಾಗಿ ವ್ಯಾಖ್ಯಾನಿಸಲಾಗಿದೆ.

ಭಾರತೀಯರನ್ನು ದಮನಿಸುವ ಅಸ್ತ್ರವಾಗಿ ಬ್ರಿಟಿಷರು 1890ರಲ್ಲಿಯೇ ಈ ಸಂಹಿತೆಯನ್ನು ಜಾರಿಗೆ ತಂದಿದ್ದರು. ಇದರಡಿ ಅಪರಾಧಿಗಳಿಗೆ ಜೀವಿತಾವಧಿವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ.

ಚಂದ್ರಬಾಬು ನಾಯ್ಡು ಬಂಧನ

ಒಂದನೇ ಪುಟದಿಂದ...

ಈ ಪ್ರಕರಣಕ್ಕೆ ಸಂಬಂಧಿಸಿ ಡಿಸೈನ್ ಟೆಕ್ ಸಿಸ್ಟಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ವಿಕಾಸ್ ಖಾನ್ವೇಲ್ಕರ್ ಮೊದಲಾದವರನ್ನು ಹೆಚ್ಚಿನ ತನಿಖೆಗೆ ಒಳಪಡಿಸುವ ಅಗತ್ಯವಿದೆ. ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ದಾಖಲೆಗಳು ನಾಪತ್ತೆಯಾಗಿದ್ದು, ಇದರ ಹಿಂದೆ ಚಂದ್ರಬಾಬು ನಾಯ್ಡು ಮತ್ತು ಇತರರ ಕೈವಾಡ ಇರುವುದಾಗಿ ಶಂಕಿಸಲಾಗಿದೆ ಎಂದು ವಿವರಿಸಿದ್ದಾರೆ.

ಜಾರಿ ನಿರ್ದೇಶನಾಲಯ ಮತ್ತು ಜಿಎಸ್‌ಟಿ ಅಧಿಕಾರಿಗಳು ಈ ಹಿಂದೆಯೇ ಪ್ರಕರಣದ ಕುರಿತು ತನಿಖೆ ನಡೆಸಿದ್ದರು. ಪ್ರಕರಣದ ಆರೋಪಿ ಮನೋಜ್ ವಾಸುದೇವ್ ಅವರು ದುಬೈಗೆ ಹಾಗೂ ಮತ್ತೊಬ್ಬ ಆರೋಪಿ ಪೆಂಡ್ಯಾಲ ಶ್ರೀನಿವಾಸ ಅವರು ಅಮೆರಿಕಕ್ಕೆ ಪರಾರಿಯಾಗಿದ್ದು, ಅವರ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಿ ಆ ದೇಶಗಳಿಗೆ ಕಳುಹಿಸಲಾಗುವುದು ಎಂದು ಹೇಳಿದ್ದಾರೆ.

ಚಂದ್ರಬಾಬು ಅವರನ್ನು ನಂದ್ಯಾಲದಿಂದ ವಿಜಯವಾಡದ ಸಿಐಡಿ ಕಚೇರಿಗೆ ರಸ್ತೆ ಮಾರ್ಗವಾಗಿ ಕರೆತಂದಿದ್ದು, ಒಂಬತ್ತು ಗಂಟೆಗಳ ಪ್ರಯಾಣದ ವೇಳೆ ಟಿಡಿಪಿ ಕಾರ್ಯಕರ್ತರು ರಸ್ತೆ ತಡೆದು ಪ್ರತಿಭಟನೆ ನಡೆಸಲು ಪ್ರಯತ್ನಿಸಿದ್ದರು ಎಂದು ಮೂಲಗಳು ತಿಳಿಸಿವೆ.

> **ಅಂತಿಮವಾಗಿ ಸತ್ಯ ಮತ್ತು ಧರ್ಮಕ್ಕೆ ಜಯ ಲಭಿಸಲಿದೆ. ಅವರು ನನಗೆ ಏನು ಮಾಡಿದರೂ, ನಾನು ಜನರಿಗಾಗಿ ಮುನ್ನಡೆಯುತ್ತೇನೆ**
> **ಚಂದ್ರಬಾಬು ನಾಯ್ಡು**
> ಟಿಡಿಪಿ ಮುಖ್ಯಸ್ಥ

ರಾಷ್ಟ್ರಪತಿ, ಪ್ರಧಾನಿಗೆ ಪತ್ರ: ಚಂದ್ರಬಾಬು ನಾಯ್ಡು ಅವರನ್ನು ಆಂಧ್ರಪ್ರದೇಶದ ಪೊಲೀಸರು ಕಾನೂನು ಬಾಹಿರವಾಗಿ ಬಂಧಿಸಿದ್ದು, ಈ ವಿಚಾರದಲ್ಲಿ ಮಧ್ಯಪ್ರವೇಶಿಸಬೇಕು ಎಂದು ಕೋರಿ ಟಿಡಿಪಿ ಮುಖಂಡರು ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.

‘ಚಂದ್ರಬಾಬು ಅವರದ್ದು ಶುದ್ಧ ಮತ್ತು ನಿಷ್ಕಳಂಕ ರಾಜಕೀಯ ಜೀವನ. ಅವರನ್ನು ಪ್ರಜಾಸತ್ತಾತ್ಮಕವಲ್ಲದ ರೀತಿಯಲ್ಲಿ ಬಂಧಿಸಲಾಗಿದೆ’ ಎಂದು ಸಂಸದ ರಾಮ್ ಮೋಹನ್ ನಾಯ್ಡು ಕಿಂಜರಾಪು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಜನರ ಸೇವೆ ಮಾಡುವುದನ್ನು ತಡೆಯಲಾಗದು’

‘ಕಳೆದ 45 ವರ್ಷಗಳಿಂದ ನಾನು ತೆಲುಗು ಜನರಿಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದೇನೆ. ತೆಲುಗು ಜನರ ಹಿತಾಸಕ್ತಿಯನ್ನು ಕಾಪಾಡಲು ಪ್ರಾಣ ತ್ಯಾಗಕ್ಕೂ ಸಿದ್ಧನಿದ್ದೇನೆ. ಇಲ್ಲಿನ ಜನರ ಸೇವೆ ಮಾಡುವುದನ್ನು ತಡೆಯಲು ಭೂಮಿಯ ಮೇಲಿನ ಯಾವುದೇ ಶಕ್ತಿಗೂ ಸಾಧ್ಯವಿಲ್ಲ. ನನ್ನ ಆಂಧ್ರಪ್ರದೇಶ, ನನ್ನ ತಾಯ್ನಾಡು’ ಎಂದು ಬಂಧನದ ಬಳಿಕ ಚಂದ್ರಬಾಬು ನಾಯ್ಡು ಅವರು ‘ಎಕ್ಸ್’(ಟ್ವಿಟರ್) ವೇದಿಕೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಯಮ ಪಾಲಿಸುವಂತೆ ಪಕ್ಷದ ಕಾರ್ಯಕರ್ತರಿಗೆ, ಬೆಂಬಲಿಗರಿಗೆ ಮತ್ತು ರಾಜ್ಯದ ಜನರಿಗೆ ಅವರು ಮನವಿ ಮಾಡಿದ್ದಾರೆ.

ರಾಜಸ್ಥಾನ: ಶಿವಸೇನಾ ಸೇರಿದ ರಾಜೇಂದ್ರ ಸಿಂಗ್ ಗುಢಾ

ಜೈಪುರ: ‘ರಾಜಸ್ಥಾನದ ಸಚಿವ ಸಂಪುಟದಿಂದ ವಜಾಗೊಂಡಿದ್ದ ಕಾಂಗ್ರೆಸ್ ಶಾಸಕ ರಾಜೇಂದ್ರ ಸಿಂಗ್ ಗುಢಾ ಅವರು ಶಿವಸೇನಾ ಪಕ್ಷಕ್ಕೆ (ಶಿಂದೆ ಬಣ) ಸೇರ್ಪಡೆಯಾಗಿದ್ದಾರೆ’ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಶನಿವಾರ ಹೇಳಿದ್ದಾರೆ.

ಗುಢಾ ವಿಧಾನಸಭಾ ಕ್ಷೇತ್ರದ ಉದಯಪುರವಟಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಶಿಂದೆ, ಗುಢಾ ಅವರನ್ನು ಶಿವಸೇನಾಕ್ಕೆ ಬರಮಾಡಿಕೊಂಡರು. ಗುಢಾ ಕ್ಷೇತ್ರ ಜನರ ಕಾರಣಕ್ಕಾಗಿ ರಾಜೇಂದ್ರ ಸಿಂಗ್ ಅವರು ಸಚಿವ ಸ್ಥಾನವನ್ನು ತೊರೆದಿದ್ದಾರೆ ಎಂದೂ ತಿಳಿಸಿದರು.

‘ಮಹಿಳಾ ಸುರಕ್ಷತೆ ಮತ್ತು ಕಾನೂನು ಸುವ್ಯವಸ್ಥೆ ಪಾಲನೆ ಕುರಿತು ಧ್ವನಿ ಎತ್ತಿದ್ದಕ್ಕಾಗಿ ಗುಢಾ ಅವರನ್ನು ಸಂಪುಟದಿಂದ ವಜಾಗೊಳಿಸಲಾಗಿದೆ. ಅವರು ಹೇಳಿದ್ದರಲ್ಲಿ ತಪ್ಪೇನಿದೆ’ ಎಂದು ಶಿಂದೆ ಪ್ರಶ್ನಿಸಿದರು.

‘ರಾಜಸ್ಥಾನದಲ್ಲಿ ಕಾನೂನು ಸುವ್ಯವಸ್ಥೆ ಸುಧಾರಣೆಯಾಗಬೇಕಿದೆ. ಅಲ್ಲದೆ ಮಹಿಳಾ ಸುರಕ್ಷತಾ ಕ್ರಮಗಳು ಹಾಗೂ ಯುವಜನರಿಗೆ ಉದ್ಯೋಗಾವಕಾಶ, ರೈತರ ಅಭಿವೃದ್ಧಿ ಕಾರ್ಯವೂ ನಡೆಯಬೇಕಿದೆ. ರಾಜ್ಯದಲ್ಲಿ ಕೈಗಾರಿಕೆಗಳ ಅಗತ್ಯವಿದೆ. ಇಲ್ಲಿನ ಸ್ಥಳೀಯರು ಉದ್ಯೋಗ ಅರಸಿ ಇತರ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಡೆಯಲು ಗಣಿಗಾರಿಕೆ ಸೇರಿದಂತೆ ಇತರ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಸುವ ಅಗತ್ಯವಿದೆ’ ಎಂದೂ ಅವರು ಅಭಿಪ್ರಾಯಪಟ್ಟರು.



ಗಣೇಶನ ಆಗಮನ ಗಣೇಶ ಚತುರ್ಥಿಗೆ ಒಂದು ವಾರ ಮುಂಚಿತವಾಗಿ ಮುಂಬೈನ ಪ್ರಸಿದ್ಧ ‘ಚಿಂಚ್‌ಪೋಕ್ಲಿ ಚಾ ಚಿಂತಾಮಣಿ’ ಗಣೇಶ ಮೂರ್ತಿಯನ್ನು ಮೆರವಣಿಗೆ ಮೂಲಕ ಪೆಂಡಾಲ್‌ಗೆ ಒಯ್ಯಲಾಯಿತು –ಪಿಟಿಐ ಚಿತ್ರ

‘ಆಫ್‌ಸ್ಪಾ ಹಿಂಪಡೆಯಲು ಕೇಂದ್ರಕ್ಕೆ ಶಿಫಾರಸು’



ಹಿಮಂತ್ ಶರ್ಮಾ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಸಶಸ್ತ್ರ ಪಡೆಗಳ(ವಿಶೇಷ ಅಧಿಕಾರ) ಕಾಯ್ದೆ 1958 ಅಥವಾ ಎಎಫ್‌ಎಸ್‌ಪಿಎ (ಆಫ್‌ಸ್ಪಾ)ವನ್ನು ಅಕ್ಟೋಬರ್ 1ರಿಂದ ಸಂಪೂರ್ಣವಾಗಿ ಹಿಂಪಡೆಯುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ಮಣಿಪುರದಲ್ಲಿ ಭದ್ರತಾ ಪರಿಸ್ಥಿತಿ ಸಾಕಷ್ಟು ಸುಧಾರಿಸಿರುವ ಕಾರಣ ಉಳಿದ ಎಂಟು ಜಿಲ್ಲೆಗಳಲ್ಲೂ ಆಫ್‌ಸ್ಪಾ ಹಿಂಡೆಯುವ ಶಿಫಾರಸನ್ನು ಸಂಪುಟ ಅಂಗೀಕರಿಸಿದೆ ಎಂದು ತಿಳಿಸಿದ್ದಾರೆ.

ವಾರಂಟ್ ಇಲ್ಲದೆ ಯಾವುದೇ ವ್ಯಕ್ತಿಯನ್ನು ಬಂಧಿಸಲು ಮತ್ತು ಕಾರ್ಯಾಚರಣೆ ಕೈಗೊಳ್ಳಲು ಆಫ್‌ಸ್ಪಾ ಭದ್ರತಾ ಪಡೆಗೆ ಅಧಿಕಾರ ನೀಡುತ್ತದೆ.

ಬಿಎಸ್‌ಎಫ್ ಯೋಧ ನಾಪತ್ತೆ

ಮೆಂಧರ್/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ ಬಳಿ ಬಿಎಸ್‌ಎಫ್ ಯೋಧರೊಬ್ಬರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಬಾಲಾಕೋಟ್ ಸೆಕ್ಟರ್‌ನ ಭರಣಿ ಮುಂಚೂಣಿ ಠಾಣೆಯಲ್ಲಿ ಶುಕ್ರವಾರ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಬಿಹಾರ ಮೂಲದ ಕಾನ್‌ಸ್ಟೆಬಲ್ ನಾಪತ್ತೆಯಾಗಿದ್ದಾರೆ. ಗಡಿ ಭದ್ರತಾ ಪಡೆಯ ಯೋಧರ ಗುಂಪು ಹುಡುಕಾಟ ನಡೆಸಿದರೂ ಪತ್ತೆಯಾಗದ ಕಾರಣ, ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದಿದ್ದಾರೆ.

ವಿಮಾನ ಹಾರಾಟ: ಗೃಹ ಸಚಿವಾಲಯದಿಂದ ಸ್ಪಷ್ಟನೆ

ಮುಖ್ಯಮಂತ್ರಿಗಳಿಗೆ ನಿರ್ಬಂಧ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ರಾಜ್ಯಗಳ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳ ವಿಶೇಷ ವಿಮಾನಗಳು ದೆಹಲಿ ಅಥವಾ ಸಮೀಪದ ಪ್ರದೇಶವನ್ನು ಪ್ರವೇಶಿಸಲು ಯಾವುದೇ ನಿರ್ಬಂಧ ಹೇರಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯ ಶನಿವಾರ ಸ್ಪಷ್ಟಪಡಿಸಿದೆ.

ಹೆಲಿಕಾಪ್ಟರ್ ಹಾರಾಟಕ್ಕೆ ಕೇಂದ್ರ ಸರ್ಕಾರ ಅಡ್ಡಿಪಡಿಸುತ್ತಿದೆ ಎಂದು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಇಬ್ಬರು ಮುಖ್ಯಮಂತ್ರಿಗಳು ಆರೋಪಿಸಿದ ಬೆನ್ನಲ್ಲೇ ಈ ಸ್ಪಷ್ಟನೆಯನ್ನು ನೀಡಿದೆ.

ಇದೇ ವೇಳೆ ಖಾಸಗಿ ವಿಮಾನಗಳ ಹಾರಾಟಕ್ಕೆ ಗೃಹ ಸಚಿವಾಲಯದ ಅನುಮತಿ ಅಗತ್ಯವಿದೆ ಎಂದೂ ತಿಳಿಸಿದೆ.

ಜಿ-20 ಶೃಂಗಸಭೆ ಇರುವ ಕಾರಣ ರಾಜಸ್ಥಾನದ ಸಿಕಾರ್‌ನಲ್ಲಿ ಹೆಲಿಕಾಪ್ಟರ್ ಲ್ಯಾಂಡ್ ಮಾಡಲು ಸರ್ಕಾರ ಅನುಮತಿ ನಿರಾಕರಿಸಿತು ಎಂದು ಅಲ್ಲಿನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆರೋಪಿಸಿದ್ದರು.

‘ದೆಹಲಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿಮಾನ ಹಾರಾಟಕ್ಕೆ ನಿರ್ಬಂಧ ಇರುವ ಕಾರಣ ಜಿ-20 ಅಂಗವಾಗಿ ಏರ್ಪಡಿಸಿರುವ ಭೋಜನಕೂಟದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ’ ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹೇಳಿದ್ದರು.

ಗೆಹಲೋತ್ ಆರೋಪವನ್ನು ಅಲ್ಲಗಳೆದ ಗೃಹ ಸಚಿವಾಲಯದ ವಕ್ತಾರರು, ‘ರಾಜಸ್ಥಾನ ಮುಖ್ಯಮಂತ್ರಿ ಸಿಕಾರ್ ಸೇರಿದಂತೆ ನಾಲ್ಕು ಕಡೆಗಳಲ್ಲಿ ಹೆಲಿಕಾಪ್ಟರ್ ಲ್ಯಾಂಡಿಂಗ್‌ಗಾಗಿ ಮನವಿ ಸಲ್ಲಿಸಿದ್ದರು. ಎಲ್ಲಾ ಕಡೆಗಳಲ್ಲಿ ಅನುಮತಿ ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

ಕೇಂದ್ರ ದಾರಿ ತಪ್ಪಿಸುತ್ತಿದೆ: ಕೇಂದ್ರ ಗೃಹ ಸಚಿವಾಲಯ ಜನರನ್ನು ಹಾದಿ ತಪ್ಪಿಸುವ ಉದ್ದೇಶದಿಂದ ತಪ್ಪು ಮಾಹಿತಿ ನೀಡುತ್ತಿದೆ ಎಂದು ಅಶೋಕ್ ಗೆಹಲೋತ್ ಅವರು ದೂರಿದ್ದಾರೆ.

ಗೃಹ ಸಚಿವಾಲಯದ ಸ್ಪಷ್ಟನೆ ಕುರಿತು ಎಕ್ಸ್ (ಟ್ವಿಟರ್) ವೇದಿಕೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ‘ಸರ್ಕಾರ, ತಪ್ಪು ಮಾಹಿತಿ ನೀಡುವ ಮೂಲಕ ಜನರಲ್ಲಿ ಗೊಂದಲ ಉಂಟುಮಾಡುವ ವಿಫಲ ಯತ್ನ ಮಾಡಿದೆ’ ಎಂದು ಹೇಳಿದ್ದಾರೆ.

‘ಉದಯಪುರದಿಂದ ಜೈಪುರಕ್ಕೆ ತೆರಳಿ ಸಿಕಾರ್‌ನಲ್ಲಿರುವ ಸಾಂಗ್ಲಿಯಾ ಪೀಠಕ್ಕೆ ತೆರಳಬೇಕಿತ್ತು. ಹೀಗಾಗಿ ಶುಕ್ರವಾರ ಬೆಳಿಗ್ಗೆ 10.48ಕ್ಕೆ ಇ-ಮೇಲ್ ಮೂಲಕ ಅನುಮತಿ ಕೇಳಲಾಗಿತ್ತು. ಮಧ್ಯಾಹ್ನ 2.50ರ ವರೆಗೂ ಅನುಮತಿ ನೀಡಿರಲಿಲ್ಲ. ‘ಹೆಲಿಕಾಪ್ಟರ್‌ಗೆ ಗೃಹ ಇಲಾಖೆ ಅನುಮತಿ ನಿರಾಕರಿಸಿದ ಕಾರಣ ಸಾಂಗ್ಲಿಯಾ ಪೀಠಕ್ಕೆ ಭೇಟಿ ನೀಡಲು ಸಾಧ್ಯವಾಗುತ್ತಿಲ್ಲ’ ಎಂದು ಮಧ್ಯಾಹ್ನ 2.52ಕ್ಕೆ ‘ಎಕ್ಸ್’ ಪೋಸ್ಟ್ ಮೂಲಕ ತಿಳಿಸಲಾಗಿತ್ತು. ಬಳಿಕ 3:58ಕ್ಕೆ ಸರ್ಕಾರ ಅನುಮತಿ ನೀಡಿತು. ನಂತರ ಉದಯಪುರದಿಂದ ಜೈಪುರಕ್ಕೆ ತೆರಳಿದೆ’ ಎಂದು ಸ್ಪಷ್ಟನೆ ನೀಡಿದ್ದಾರೆ.

ದೆಹಲಿಯಲ್ಲಿ ಡ್ರೋನ್ ಹಾರಾಟ; ಪ್ರಕರಣ ದಾಖಲು

ನವದೆಹಲಿ (ಪಿಟಿಐ): ಜಿ20 ಶೃಂಗಸಭೆಯಲ್ಲಿ ಭಾಗಿಯಾಗಲು ವಿಶ್ವದ ಪ್ರಮುಖ ನಾಯಕರು ದೆಹಲಿಗೆ ಬಂದಿಳಿದ ಶುಕ್ರವಾರ ಸಂಜೆಯೇ, ಕೇಂದ್ರ ದೆಹಲಿಯಲ್ಲಿ ಡ್ರೋನ್ ಹಾರಾಟ ನಡೆಸಿದ್ದು ಆತಂಕಕ್ಕೆ ಕಾರಣವಾಗಿತ್ತು.

ಈ ವಿದ್ಯಮಾನ ಗೊತ್ತಾಗುತ್ತಿದ್ದಂತೆ ಸ್ಥಳಕ್ಕೆ ತೆರಳಿದ ಪೊಲೀಸರು, ಡ್ರೋನ್ ಹಾರಾಟ ನಡೆಸಿದ್ದ ಶಾದಿ ಖಾಂಪುರ್‌ನ ನಿವಾಸಿ ಹರ್ಮನ್‌ಜೀತ್ ಸಿಂಗ್ (29) ವಿರುದ್ಧ ಪ್ರಕರಣ ದಾಖಲಿಸಿ, ಉಪಕರಣವನ್ನು ವಶಕ್ಕೆ ಪಡೆದಿದ್ದಾರೆ.

ಕೇಂದ್ರ ದೆಹಲಿಯ ಪಟೇಲ್ ನಗರದ ಪಶ್ಚಿಮ ಭಾಗದಲ್ಲಿ ಶುಕ್ರವಾರ ಸಂಜೆ ಡ್ರೋನ್ ಹಾರಾಟ ನಡೆಸಿರುವುದನ್ನು ಪತ್ತೆ ಹಚ್ಚಿದ ನಿಯಂತ್ರಣ ಕೊಠಡಿ, ಪೊಲೀಸರಿಗೆ ಎಚ್ಚರಿಕೆಯ ಸಂದೇಶ ರವಾನಿಸಿತು. ತಕ್ಷಣವೇ ಪೊಲೀಸರ ತಂಡ ಸ್ಥಳಕ್ಕೆ ತೆರಳಿತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

‘ವಿನೀತ್ ಎಂಬಾತ ತನ್ನ ಸೋದರಳಿಯನ ಜನ್ಮದಿನವನ್ನು ಮನೆಯ ಮಹಡಿಯಲ್ಲಿ ಆಯೋಜಿಸಿದ್ದ. ಇದನ್ನು ಸೆರೆ ಹಿಡಿಯಲಿಕ್ಕಾಗಿ ಡ್ರೋನ್ ಬಳಸಿದ್ದರು. ಇದು ಹರ್ಮನ್‌ಜೀತ್ ಸಿಂಗ್ ಎಂಬಾತನಿಗೆ ಸೇರಿದ್ದು, ಎಂದು ವಿಚಾರಣೆ ವೇಳೆ ಗೊತ್ತಾಗಿದೆ’ ಎಂದರು.

ಟೆನಿಸ್: ಆರಾಧ್ಯ, ಲಕ್ಷ್ಮಿಶ್ರೀ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಾಧ್ಯ ಕ್ಷಿತಿಜ್ ಮತ್ತು ಲಕ್ಷ್ಮಿಶ್ರೀ ದಂಡು ಅವರು ಶನಿವಾರ ಇಲ್ಲಿ ಕೊನೆಗೊಂಡ ಐಟಿಎಫ್ ಜೆ30 ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಆರಾಧ್ಯ 1-6, 6-3, 6-4 ರಿಂದ ಚಂದನ್ ಶಿವರಾಜ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಆಟಗಾರ ಸೆಹಜ್ ಸಿಂಗ್ ಪವಾರ್ ಅವರಿಗೆ ಆಘಾತ ನೀಡಿದ್ದ ಚಂದನ್, ಫೈನಲ್‌ನಲ್ಲಿ ಮೊದಲ ಸೆಟ್ ಗೆದ್ದು ಉತ್ತಮ ಆರಂಭ ಪಡೆದರು. ಆದರೆ 14 ವರ್ಷದ ಆರಾಧ್ಯ ಅಮೋಘ ರೀತಿಯಲ್ಲಿ ಮರುಹೋರಾಟ ನಡೆಸಿ ಮುಂದಿನ ಎರಡು ಸೆಟ್‌ಗಳನ್ನು ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಹೈದರಾಬಾದ್‌ನ ಲಕ್ಷ್ಮಿಶ್ರೀ 7-5, 6-3 ರಿಂದ ಕರ್ನಾಟಕದ ಅಮೋದಿನಿ ನಾಯಕ್ ಅವರನ್ನು ಪರಾಭವಗೊಳಿಸಿದರು.

ಬಾಲಕರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಗಂಧರ್ವ್ ಗೌರವ್- ಶ್ರೀನಿಕೇತ್ ಕಣ್ಣನ್ ಜೋಡಿ 4-6, 7-5, 11-9 ರಿಂದ ದಕ್ಷ್- ಕಶಿತ್ ವಿರುದ್ಧ ಗೆದ್ದರೆ, ಬಾಲಕಿಯರ ಡಬಲ್ಸ್‌ನಲ್ಲಿ ಲಕ್ಷ್ಮಿಶ್ರೀ- ದುರ್ಗಾಂಶಿ ಕುಮಾರ್ ಜೋಡಿ 6-3, 3-6, 10-4 ರಿಂದ ಆನ್ಯಾ ಚೌಬೆ- ಸೌಮ್ಯಾ ರೊಂದೆ ಅವರನ್ನು ಮಣಿಸಿ ಚಾಂಪಿಯನ್ ಆಯಿತು.



ಸಿಂಗಲ್ಸ್ ವಿಭಾಗದ ಪ್ರಶಸ್ತಿಯೊಂದಿಗೆ ಲಕ್ಷ್ಮಿಶ್ರೀ ಹಾಗೂ ಆರಾಧ್ಯ –ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಪೆಲೆ ದಾಖಲೆ ಮುರಿದ ನೇಮರ್

ಮೊಂತೆವಿದೆಯೊ, ಉರುಗ್ವೆ (ಎಎಫ್‌ಪಿ): ಸ್ಟಾರ್ ಸ್ಟ್ರೈಕರ್ ನೇಮರ್ ಅವರು ದಿಗ್ಗಜ ಆಟಗಾರ ಪೆಲೆ ಅವರನ್ನು ಹಿಂದಿಕ್ಕಿ, ಬ್ರೆಜಿಲ್ ಪರ ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಲ್ಲಿ ಅತಿಹೆಚ್ಚು ಗೋಲು ಗಳಿಸಿದ ದಾಖಲೆ ತಮ್ಮದಾಗಿಸಿಕೊಂಡರು.

ಬೊಲಿವಿಯಾ ವಿರುದ್ಧ ಶುಕ್ರವಾರ ನಡೆದ ಪಂದ್ಯದಲ್ಲಿ ಎರಡು ಸಲ ಚೆಂಡನ್ನು ಗುರಿ ಸೇರಿಸಿದ ಅವರು ತಮ್ಮ ಒಟ್ಟು ಗೋಲುಗಳ ಸಂಖ್ಯೆಯನ್ನು 79ಕ್ಕೆ ಹೆಚ್ಚಿಸಿಕೊಂಡರು. 2026ರ ವಿಶ್ವಕಪ್ ಟೂರ್ನಿಯ ದಕ್ಷಿಣ ಅಮೆರಿಕ ವಲಯದ ಅರ್ಹತಾ ಹಂತದ ಈ ಪಂದ್ಯವನ್ನು ಬ್ರೆಜಿಲ್ 5-1 ಗೋಲುಗಳಿಂದ ಗೆದ್ದಿತು.

ಪೆಲೆ ಅವರು ಬ್ರೆಜಿಲ್ ಪರ 77 ಗೋಲುಗಳನ್ನು ಗಳಿಸಿದ್ದರು. 31 ವರ್ಷದ ನೇಮರ್ ಈ ದಾಖಲೆಯನ್ನು ಫಿಫಾ ವಿಶ್ವಕಪ್ ಟೂರ್ನಿಯ ವೇಳೆ ಸರಿಗಟ್ಟಿದ್ದರು.

ಬೊಲಿವಿಯಾ ವಿರುದ್ಧದ ಪಂದ್ಯದಲ್ಲಿ ನೇಮರ್ 78ನೇ ನಿಮಿಷ ಮತ್ತು ಇಂಜುರಿ ಅವಧಿಯಲ್ಲಿ ಗೋಲುಗಳನ್ನು ಗಳಿಸಿದರು. ಅವರ 125ನೇ ಅಂತರರಾಷ್ಟ್ರೀಯ ಪಂದ್ಯ ಇದಾಗಿತ್ತು.

17ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗೋಲು ಗಳಿಸಲು ನೇಮರ್ ವಿಫಲರಾಗಿದ್ದರು.

ಪೆಲೆ 1957- 1971ರ ಅವಧಿಯಲ್ಲಿ 92 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದರು. ಅವರು ಕಳೆದ ವರ್ಷ ಡಿಸೆಂಬರ್‌ನಲ್ಲಿ ತಮ್ಮ 82ನೇ ವಯಸ್ಸಿನಲ್ಲಿ ನಿಧನರಾಗಿದ್ದರು.





ಬೆಂಗಳೂರಿನ ಡೆಕ್ಕನ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಶನಿವಾರ ನಡೆದ ಡೆಕ್ಕನ್ ಕಪ್ ಅಂತರ ಶಾಲಾ ಬ್ಯಾಸ್ಕೆಟ್‌ಬಾಲ್ ಟೂರ್ನಿಯ (14 ವರ್ಷದೊಳಗಿನವರು) ಬಾಲಕರ ವಿಭಾಗದಲ್ಲಿ ಚಾಂಪಿಯನ್ ಆದ ಡೆಕ್ಕನ್ ಇಂಟರ್‌ನ್ಯಾಷನಲ್ ಸ್ಕೂಲ್ ತಂಡ. (ಮುಂದಿನ ಸಾಲು; ಎಡದಿಂದ) ಪಿ.ಜಯಂತ್, ಎಸ್.ಮಹರ್ಷಿ, ಎಸ್.ಆರ್.ಕಾರ್ತಿಕ್, ಮಹೇಶ್ ಯು., ಜಯಂತ್ ಟೋಪಣ್ಣವರ, ಅನಿರುದ್ಧ ರಾವ್; (ಹಿಂದಿನ ಸಾಲು) ಎಸ್.ರಾಘವ್, ಹಿತಿನ್ ಗೌಡ, ಎಸ್.ಕೆ.ಶ್ರೇಯಸ್, ಅಮೃತ್ ಶೆಟ್ಟಿ, ಎನ್.ಎ.ಆರ್ಯನ್, ಜಿ.ಮಯೂರ್ (ಎಡಚಿತ್ರ) ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಲಿಟ್ಲ್ ಫ್ಲವರ್ ಪಬ್ಲಿಕ್ ಸ್ಕೂಲ್ ತಂಡ. (ಮುಂದಿನ ಸಾಲು; ಎಡದಿಂದ) ಜೆ.ಯಶಿಕಾ, ತಾನ್ಯಾ ವಿನೋದ್, ಎಂ.ಭಾನವಿ, ಹೇಮಾ ಚರಿಷ್ಮಾ ಅನಿಕಾ (ಹಿಂದಿನ ಸಾಲು) ಕೀರ್ತನಾ ಜಯರಾಮ್, ಅವನಿ, ಎಸ್.ಲಕ್ಷ್ಯಾ, ಬಿ.ಕೆ.ಸುದೀಪ್ತಾ, ಎಂ.ಸಂಹಿತಾ, ಸಾನ್ವಿ ಪ್ರಜ್ವಲ್, ಎನ್.ಇಂಪನಾ –ಪ್ರಜಾವಾಣಿ ಚಿತ್ರ

ಅನ್ನುರಾಣಿಗೆ ಏಳನೇ ಸ್ಥಾನ

ಬ್ರಸೆಲ್ಸ್ (ಪಿಟಿಐ): ಭಾರತದ ಜಾವೆಲಿನ್ ಥ್ರೊ ಮಹಿಳಾ ಸ್ಪರ್ಧಿ ಅನ್ನುರಾಣಿ ಅವರ ನಿರಾಶಾದಾಯಕ ಫಾರ್ಮ್ ಮುಂದುವರಿಯಿತು. ಇಲ್ಲಿ ಶುಕ್ರವಾರ ನಡೆದ ಡೈಮಂಡ್ ಲೀಗ್ ಕೂಟದಲ್ಲಿ ಅವರು 57.74 ಮೀ. ಎಸೆತದೊಡನೆ ಏಳನೇ ಸ್ಥಾನ ಪಡೆದರು.

ಮೂರನೇ ಯತ್ನದಲ್ಲಿ ಅನ್ನು ಈ ಥ್ರೊ ದಾಖಲಿಸಿ, ಕಣದಲ್ಲಿದ್ದ ಎಂಟು ಮಂದಿಯ ಪೈಕಿ ಏಳನೇ ಸ್ಥಾನ ಪಡೆದರು. ಅವರು ಈ ಋತುವಿನಲ್ಲಿ 60 ಮೀ. ದೂರವನ್ನು ಸಾಧಿಸಿಲ್ಲ. ರಾಷ್ಟ್ರೀಯ ದಾಖಲೆ ಹೊಂದಿರುವ ಅವರು ಮೇಯಲ್ಲಿ ನಡೆದ ಫೆಡರೇಷನ್ ಕಪ್ ಕೂಟದಲ್ಲಿ 59.24 ಮೀ. ದೂರಕ್ಕೆ ಎಸೆದಿದ್ದೇ ಈ ಋತುವಿನ ಉತ್ತಮ ಸಾಧನೆ. 2022ರಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸುವಾಗ ಅವರು ಜಾವೆಲಿನ್‌ಅನ್ನು 63.82 ಮೀ. ದೂರ ಎಸೆದಿದ್ದರು.

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 10 ಸೆಪ್ಟೆಂಬರ್ 2023







ನಾಡಗೀತೆಯ ವಿವಾದ ನ್ಯಾಯಾಲಯದಲ್ಲಿದೆ. ಈ ಸಂದರ್ಭದಲ್ಲಿ ಸಂಗೀತ ಹಾಗೂ ಸಮಾಜದ ನಡುವಿನ ಸಂಬಂಧದ ಚರ್ಚೆ ಅರ್ಥಪೂರ್ಣ. ನಾಡಗೀತೆಯಾದ ರಚನೆಗಳೂ ಸಂಗೀತದ ಪ್ರಯೋಗಗಳಿಗೆ ಒಳಪಟ್ಟಿವೆಯಷ್ಟೆ.

ಇದೇ ರಾಗದಲ್ಲಿ ಇದೇ ತಾಳದಲ್ಲಿ...

ಶೈಲಜ

ಕರ್ನಾಟಕದ ನಾಡಗೀತೆಯ ವಿವಾದ ನ್ಯಾಯಾಲಯದ ಮೆಟ್ಟಿಲೇರಿದೆ. ಕಾವ್ಯ-ಸಂಗೀತ, ಕವಿ-ಸಂಗೀತ ಸಂಯೋಜಕ, ಸಂಗೀತ-ಧರ್ಮ, ಕಾವ್ಯ-ಪ್ರಭುತ್ವ, ಸಂಗೀತ-ಬದಲಾವಣೆ ಇವುಗಳ ಕುರಿತು ಮರುಚಿಂತನೆಯನ್ನು ಈ ಬೆಳವಣಿಗೆ ಮತ್ತೆ ಮುನ್ನೆಲೆಗೆ ತಂದಿದೆ. ಸಂಗೀತದಲ್ಲಿ ಇಂತಹ ಬದಲಾವಣೆಗಳು ನಿರಂತರ ಎನ್ನುವುದಕ್ಕೆ ಹಲವು ಉದಾಹರಣೆಗಳು ಸಿಗುತ್ತವೆ.

ಹಿಂದೆ ನಾಡಗೀತೆ ಅಥವಾ ರಾಷ್ಟ್ರಗೀತೆಯ ಕಲ್ಪನೆ ಈಗ ಇರುವಂತೆ ಇರಲಿಲ್ಲ, ಅನಿಶ್ಚಿತವಾಗಿತ್ತು. ರಾಷ್ಟ್ರಗೀತೆ ಮತ್ತು ನಾಡಗೀತೆ ಎನ್ನುವ ಪದಗಳು ಪರ್ಯಾಯವಾಗಿ ಬಳಕೆಯಾಗುತ್ತಿದ್ದವು. ನಾಡಗೀತೆ ಎನ್ನುವುದು ಒಂದು ನಿರ್ದಿಷ್ಟ ಹಾಡಾಗಿರಲಿಲ್ಲ. 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಮೊದಲನೆಯ ದಿನ ಶಾಂತಕವಿಯ ರಚನೆ 'ನಮ್ಮದೈ ನಮ್ಮದೀ ಭರತ ಭೂಮಿ' ಎಂಬ ಗೀತೆಯನ್ನು ಭಾರತದ ರಾಷ್ಟ್ರಗೀತೆ ಎಂದು ಹಾಡಲಾಯಿತು. ಎರಡನೆಯ ದಿನ, ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಗೀತೆಯನ್ನು 'ಕನ್ನಡ ರಾಷ್ಟ್ರಗೀತೆ' ಎಂದು ಹಾಡಲಾಯಿತು. ಬೇರೊಂದೆಡೆ ಗೋವಿಂದ ಪೈ ಅವರ 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ' ಹಾಡುತ್ತಿದ್ದರು. ಇನ್ನೂ ವಿಶೇಷವೆಂದರೆ ಸ್ಥಳ, ಭಾಷೆ, ಉಪಭಾಷೆಗೆ ಅನುಗುಣವಾಗಿ ನಾಡಗೀತೆ, ರಾಷ್ಟ್ರಗೀತೆಗಳು ಬದಲಾಗುತ್ತಿದ್ದವು. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಮರಾಠಿ, ಆಂಧ್ರದಲ್ಲಿ ತೆಲುಗು ಹೀಗೆ, ಒಂದೇ ಹಾಡನ್ನು ಬೇರೆ ಬೇರೆ ಮಟ್ಟುಗಳಲ್ಲಿ ಹಾಡಲಾಗುತ್ತಿತ್ತು. 'ವಂದೇ ಮಾತರಂ' ಅನ್ನು 70 ವಿಭಿನ್ನ ಮಟ್ಟುಗಳಲ್ಲಿ ಹಾಡಲಾಗುತ್ತಿತ್ತಂತೆ. ಅದರಲ್ಲಿ ಸುಮಾರು 45 ಮಟ್ಟುಗಳನ್ನು ತಾವು ಕೇಳಿರುವುದಾಗಿ ಗಾಯಕ ಟಿ.ಎಂ. ಕೃಷ್ಣ ಹೇಳುತ್ತಾರೆ. ನಮ್ಮ ಇಂದಿನ ನಾಡಗೀತೆಯೂ ನಾಲ್ಕು ವಿಭಿನ್ನ ರಾಗಗಳಲ್ಲಿ ಲಭ್ಯವಿದೆ ಎನ್ನುತ್ತಾರೆ ಖ್ಯಾತ ಸುಗಮ ಸಂಗೀತ ಕಲಾವಿದೆ ಮತ್ತು ನಾಡಗೀತೆ ಸಮಿತಿಯ ಅಧ್ಯಕ್ಷೆ ಎಚ್.ಆರ್.ಲೀಲಾವತಿಯವರು. ಹಾಗಾಗಿ ನಾಡಗೀತೆ ಎಂಬ ಕಲ್ಪನೆಯೇ ಹೆಚ್ಚು ಮುಕ್ತವಾಗಿದ್ದು, ಪ್ರಾದೇಶಿಕ ಜನರ ಭಾಷಾವೈವಿಧ್ಯ, ಉಪಭಾಷೆಗಳ ಸೊಗಡಿಗೆ ಹೆಚ್ಚಿನ ಅವಕಾಶವಿತ್ತು. ಬಹುಶಃ ರಾಷ್ಟ್ರೀಯತೆಯ ಕಲ್ಪನೆ ಬಲವಾದಂತೆಲ್ಲಾ ಒಂದು ರಾಷ್ಟ್ರ, ಒಂದು ರಾಷ್ಟ್ರಗೀತೆ, ಒಂದು ರಾಷ್ಟ್ರಭಾಷೆ, ಮುಂತಾದ ಕಲ್ಪನೆಗಳು ಬಲವಾದವು. ಎಲ್ಲವೂ 'ಸ್ಟಾಂಡರ್ಡೈಸ್' ಆಗಬೇಕೆಂಬ ಚಿಂತನೆ ಮೊದಲಾಯಿತು.

ಬದಲಾವಣೆ ಎನ್ನುವುದು ಸಂಗೀತ ಪರಂಪರೆಯ ಭಾಗವೇ ಆಗಿತ್ತು. ಭಾವಗೀತೆಗಳು, ದೇವರನಾಮ, ವಚನಗಳು, ಸಂತವಾಣಿ, ಮುಂತಾದವನ್ನು ಕಲಾವಿದರು ತಮ್ಮ ಕಲ್ಪನೆಗನುಗುಣವಾಗಿ ಹಾಡುತ್ತಿದ್ದರು. ಸ್ವರ, ಸಾಹಿತ್ಯ ಮತ್ತು ರಾಗ-ತಾಳಗಳ ನಿರ್ದೇಶನ ಇರುವ ವಾಗ್ಗೇಯ ರಚನೆಗಳನ್ನು ಆದಷ್ಟೂ ಬದಲಿಸದೆ ಹಾಡುತ್ತಿದ್ದರು. ಆದರೆ ಅಲ್ಲಿಯೂ ಬದಲಾವಣೆಗಳಾಗುತ್ತಲೇ ಇವೆ. ತ್ಯಾಗರಾಜರ ಕೃತಿಗಳನ್ನು ಅವರ ಶಿಷ್ಯರು ಹಾಡುವ ಕ್ರಮದಲ್ಲಿ ವ್ಯತ್ಯಾಸಗಳಿವೆ. ಕಾಲಕ್ರಮೇಣ ಹೊಸ ಸಂಗತಿಗಳು ಸೇರ್ಪಡೆಯಾಗಿವೆ. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಹಲವು ಶಾಸ್ತ್ರೀಯ ಸಂಗೀತಗಾರರೇ ಭಿನ್ನವಾಗಿ ಹಾಡಿದ್ದಾರೆ. ಕೃತಿಯ ರಾಗವೇ ಬದಲಾಗಿದೆ. ಕಾಲದಿಂದ ಕಾಲಕ್ಕೆ ರಾಗಗಳ ಸ್ವರೂಪ ಬದಲಾವಣೆಯಾಗಿದೆ. ಅಣ್ಣಮಾಚಾರ್ಯರ ಕೃತಿಗಳಿಗೆ ರಾಗ ನಿರ್ದೇಶನವಿದ್ದರೂ ಎಂ.ಎಸ್. ಸುಬ್ಬುಲಕ್ಷ್ಮೀ, ನೇದನೂರಿ ಕೃಷ್ಣಮೂರ್ತಿಯಂಥ ಖ್ಯಾತ ಗಾಯಕರು ಬೇರೆಯೇ ರಾಗದಲ್ಲಿ ಹಾಡಿದ್ದಾರೆ. ಬದಲಾವಣೆ ಕ್ರಾಂತಿಕಾರಕವಾದಾಗ ಮಾತ್ರ ವಿರೋಧ ವ್ಯಕ್ತವಾಗಿದೆ. ಇಳೆಯರಾಜ ಅವರು 'ಸಿಂಧುಭೈರವಿ' ಎಂಬ ಚಲನಚಿತ್ರದಲ್ಲಿ ತ್ಯಾಗರಾಜರ ಕಾಂಬೋಧಿ ರಾಗದ 'ಮರಿ ಮರಿ ನಿನ್ನೇ' ಎನ್ನುವ ಕೃತಿಯ ರಾಗವನ್ನೇ ಬದಲಿಸಿ ಸಾರಮತಿ ರಾಗದಲ್ಲಿ ಹಾಡಿಸಿದ್ದು ದೊಡ್ಡ ವಿವಾದವನ್ನೇ ಸೃಷ್ಟಿಸಿತು.

ಸಂಗೀತ ಮತ್ತು ಧರ್ಮದ ಸಂಬಂಧವೂ ನಿರಂತರ ಬದಲಾಗುತ್ತಲೇ ಇದೆ. ಆಯಾ ಕಾಲಘಟ್ಟದ ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿ, ಪ್ರಭುತ್ವದ ಧೋರಣೆಗಳು ಇದನ್ನು ಗಾಢವಾಗಿ ಪ್ರಭಾವಿಸಿವೆ. ಕರ್ನಾಟಕದ ಸೂಫಿ ಗಾಯನ ಪರಂಪರೆ, ಮೊಹರಂ ಹಾಡುಗಳ ಗಾಯನ, 19ನೇ ಶತಮಾನದಲ್ಲಿ ಕ್ರೈಸ್ತರು ಮತ್ತು ಕರ್ನಾಟಕ ಸಂಗೀತಗಾರರಿಗೂ ಇದ್ದ ಆತ್ಮೀಯ ಸಂಬಂಧಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಎ.ಎಂ. ಚಿನ್ನಸ್ವಾಮಿ ಮುದಲಿಯಾರರು ಕ್ರೈಸ್ತರಾಗಿದ್ದರೂ ರೂತ್ ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರ ನೇರ ಶಿಷ್ಯರು ಅವರಿಗೆ ಸಂಗೀತ ಕಲಿಸಿದರು. ಖ್ಯಾತ ಸಂಗೀತ ಶಾಸ್ತ್ರಜ್ಞ ಪಿ. ಸಾಂಬಮೂರ್ತಿ ಸಮ್ಮರ್ ಸ್ಕೂಲ್‌ನಲ್ಲಿ ಕ್ರೈಸ್ತರಿಗೆ ಸಂಗೀತ ಕಲಿಸುತ್ತಿದ್ದರು. ಮುಸಲ್ಮಾನರಾದ ಶೇಕ್ ಚಿನ್ನಾ ಮೌಲಾನ ಸಾಹೇಬರು ತಿರುಪತಿಯ ದೇವಾಲಯದಲ್ಲಿ ನಾಗಸ್ವರ ನುಡಿಸುತ್ತಿದ್ದರು. ಇತ್ತೀಚಿನ ತನಕ ಯಾರಿಗೂ ಅದು ಅಸಹಜ, ಧರ್ಮ ವಿರೋಧಿ ಅನ್ನಿಸಿರಲಿಲ್ಲ. ಆದರೆ ಕಳೆದ ದಶಕದಲ್ಲಿ ಶಾಸ್ತ್ರೀಯ ಸಂಗೀತ ಕಲಾವಿದ ಕ್ರಿಸ್ತಗೀತೆಗಳ ಕಛೇರಿ ಮಾಡುತ್ತಾನೆ ಎನ್ನುವುದು, ಖ್ಯಾತ ಗಾಯಕಿಯರಾದ ಅರುಣಾ ಸಾಯಿರಾಂ, ನಿತ್ಯಶ್ರೀ ಮಹಾದೇವನ್, ಒ.ಎಸ್. ಅರುಣ್ ಚರ್ಚಿನಲ್ಲಿ ಹಾಡಿದರು ಎನ್ನುವುದು ವಿವಾದಕ್ಕೀಡಾಯಿತು.


ಒಂದು ಕವನ ಅಥವಾ ಕೃತಿ ರಚನೆಯಾದ ಕಾಲಘಟ್ಟದಲ್ಲಿ ವಿವಾದಾತ್ಮಕ ಆಗದಿರಬಹುದು. ಆದರೆ ಬದಲಾದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಪರಿಸರದಲ್ಲಿ ವಿವಾದಕ್ಕೊಳಗಾಗಬಹುದು. 18ನೇ ಶತಮಾನದಲ್ಲಿ ದೇವದಾಸಿ ಮುದ್ದುಪಳನಿ ರಚಿಸಿದ ಶೃಂಗಾರ ಕಾವ್ಯ 'ರಾಧಿಕಾ ಸಾಂತ್ವನಮು' ಅಶ್ಲೀಲ ಎನಿಸಿಕೊಳ್ಳಲಿಲ್ಲ. ಆದರೆ 20ನೇ ಶತಮಾನದಲ್ಲಿ ಬೆಂಗಳೂರು ನಾಗರತ್ನಮ್ಮ ಅದನ್ನು ಮತ್ತೆ ಪ್ರಕಟಿಸಿದಾಗ ಅಶ್ಲೀಲ ಕೃತಿಯೆಂದು ಅದನ್ನು ನಿಷೇಧಿಸಲಾಯಿತು. 1924ರಲ್ಲಿ ರಚನೆಯಾದ ಜಯಭಾರತ ಜನನಿಯ ತನುಜಾತೆಯಲ್ಲಿ ಮಧ್ವ, ಬಸವಣ್ಣ, ಕುಮಾರವ್ಯಾಸರ ಹೆಸರುಗಳಿಲ್ಲದ ವಿವಾದ ಮತ್ತು ನಂತರದ ಸೇರ್ಪಡೆಯನ್ನೂ ಇಂತಹ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ.

ನಾಡಗೀತೆ, ರಾಷ್ಟ್ರಗೀತೆಗಳು ನಿರ್ದಿಷ್ಟವೂ ಏಕರೂಪವೂ ಆಗಿರಬೇಕೆಂಬ ಗ್ರಹಿಕೆ ಇರುವ ಈ ಕಾಲಘಟ್ಟದಲ್ಲಿ ಸಂಗೀತ ಮತ್ತು ಕಲಾವಿದರ ಕಲ್ಪನಾ ಸ್ವಾತಂತ್ರ್ಯವನ್ನು ಸಾಂವಿಧಾನಿಕ ಚೌಕಟ್ಟಿನಲ್ಲಿ ಇಟ್ಟು ನೋಡಬೇಕಾಗುತ್ತದೆ. ಗೀತೆಗಳು ಸರಳವಾಗಿಯೂ ಇರಬೇಕಾಗುತ್ತದೆ ಎನ್ನುವುದನ್ನು ಖ್ಯಾತ ಸಂಗೀತಗಾರರೆಲ್ಲ ಗುರುತಿಸಿದ್ದಾರೆ.



ಎಚ್.ಆರ್. ಲೀಲಾವತಿ

ಎಚ್.ಆರ್. ಲೀಲಾವತಿಯವರು ಹೇಳುವಂತೆ, 'ಈ ಗೀತೆಗೆ ನನ್ನದೂ ಸೇರಿದಂತೆ ನಾಲ್ಕು ಜನರ ಸಂಗೀತ ಸಂಯೋಜನೆಯಿದೆ. ಆದರೆ ಎಲ್ಲ ಸಮಿತಿಗಳೂ ಅನಂತಸ್ವಾಮಿಯವರ ಸಂಯೋಜನೆಯನ್ನೇ ಶಿಫಾರಸು ಮಾಡಿದವು. ನೂರಾರು ಮಂದಿ ಒಟ್ಟಿಗೆ ಹಾಡಲು ಅನುವಾಗುವಂತೆ ಅವರ ಸಂಯೋಜನೆ ಸರಳವಾಗಿ, ಸುಲಲಿತವಾಗಿತ್ತು. ನಾಡಗೀತೆಯನ್ನು ಇದೇ ಧಾಟಿಯಲ್ಲಿ ಹಾಡಬೇಕೆನ್ನುವುದು ಕಲಾವಿದನ ಸ್ವಾತಂತ್ರ್ಯ ಹರಣವಾದರೆ, ಕವಿಯ ಸಾವಿನ ನಂತರ ಕಾವ್ಯದ ಸಾಲುಗಳನ್ನೇ ಬದಲಿಸುವುದು ಕವಿಯ ಸ್ವಾತಂತ್ರ್ಯದ ಹರಣವಲ್ಲವೇ? ನಾಡಿನ ದೃಷ್ಟಿಯಿಂದ ನೋಡುವಾಗ ನನ್ನ ಇಷ್ಟ ಮುಖ್ಯವಾಗುವುದಿಲ್ಲ, ರಾಜ್ಯದ ಮರ್ಯಾದೆಯ ಪ್ರಶ್ನೆ ಮುಖ್ಯವಾಗುತ್ತದೆ.'



'ನಾಡಗೀತೆ ಬೇಕೇ ಬೇಕು ಎಂದರೆ ಒಂದು ನಿರ್ದಿಷ್ಟ ಮಾದರಿಗೆ ಅಂಟಿಕೊಳ್ಳಲೇಬೇಕಾಗುತ್ತದೆ. ಇದೊಂದು ವಾಸ್ತವಿಕ ಸಮಸ್ಯೆ. ಜನಗಣಮನವನ್ನು 'ಸ್ಟಾಂಡರ್ಡೈಸ್' ಮಾಡಲು 1960ರ ತನಕ ಭಾರತ ಸರ್ಕಾರವೂ ಸಾಕಷ್ಟು ಹೆಣಗಾಡಿದೆ' ಎಂದು ಹೇಳುತ್ತಲೇ ಗಾಯಕ ಟಿ.ಎಂ. ಕೃಷ್ಣ ಕೆಲವು ಗಂಭೀರ ಪ್ರಶ್ನೆಗಳನ್ನು ಎತ್ತುತ್ತಾರೆ. 'ಭಾರತದಂತಹ ವೈವಿಧ್ಯಮಯ ಸಂಸ್ಕೃತಿಗಳಿರುವ ದೇಶದ ಸಂಗೀತದಲ್ಲಿ, ಸಂಯೋಜನೆಯಲ್ಲಿ ವೈವಿಧ್ಯವಿರುವುದು ತುಂಬಾ ಮುಖ್ಯ. ಗೀತೆಯೊಂದನ್ನು ಬೇರೆ ಬೇರೆ ರಾಗಗಳಲ್ಲಿ ಹಾಡಿದರೆ ಬಾಧಕವೇನು? ಅರ್ಥ ಮತ್ತು ಅದರ ಉದ್ದೇಶ ಬದಲಾಗಬಾರದು. ಸಂಸ್ಕೃತಿಗೆ ಸಂಬಂಧಿಸಿದಂತೆ ಏನನ್ನಾದರೂ ಸ್ಟಾಂಡರ್ಡೈಜ್ ಮಾಡಬೇಕೆಂಬುದು ಒಂದು ರೀತಿಯಲ್ಲಿ ಮಿಲಿಟರಿ ಮನೋಭಾವ. ಒಂದು ಹಾಡನ್ನು ಎಲ್ಲರೂ ಒಕ್ಕೊರಲಿನಲ್ಲಿ ಹಾಡಿದ ಮಾತ್ರಕ್ಕೆ ಅದು ಅವರ ಮನಸ್ಸಿನಲ್ಲಿ ಏಕತೆಯನ್ನು ಹುಟ್ಟುಹಾಕುತ್ತದೆಯೇ? ಅದು ಕೇವಲ ಏಕರೂಪಗೊಳಿಸುತ್ತದೆ. ಏಕರೂಪತೆಯನ್ನೇ ಏಕತೆ ಎಂದು ತಪ್ಪಾಗಿ ಗ್ರಹಿಸಬಾರದು.'



ಟಿ.ಎಂ. ಕೃಷ್ಣ

'ನಾಡಗೀತೆಗೆ ಸಂಬಂಧಿಸಿದಂತೆ ನಾನು ಒಬ್ಬ ಕಲಾವಿದೆಗಿಂತ ಹೆಚ್ಚಾಗಿ ನಾಡಪ್ರಜೆಯಾಗಿ ಯೋಚಿಸುತ್ತೇನೆ,' ಎನ್ನುತ್ತಾರೆ ಖ್ಯಾತ ಕರ್ನಾಟಕ ಸಂಗೀತ ಕಲಾವಿದೆ, ಸಂಗೀತಶಾಸ್ತ್ರಜ್ಞೆ ಡಾ. ಟಿ.ಎಸ್. ಸತ್ಯವತಿ. 'ನಾಡಿನ ಏಕತೆಯನ್ನು ಬಿಂಬಿಸುವ ಗೀತೆಗೆ ವ್ಯಾಪಕತೆ ಮತ್ತು ಸ್ವೀಕೃತಿ ಬೇಕಾಗುತ್ತದೆ. ಅದರ ಸ್ವರಮಟ್ಟು ಸ್ಥಿರವಾಗಿ, ಏಕರೂಪವಾಗಿರಬೇಕು. ಇಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕಿಂತ ಪ್ರಭುಸಂಹಿತೆ ಮುಖ್ಯವಾಗುತ್ತದೆ. ವೈಯಕ್ತಿಕ ಸ್ವಾತಂತ್ರ್ಯವನ್ನು ಮಿತಿಗೊಳಿಸಿಕೊಳ್ಳಬೇಕಾಗುತ್ತದೆ. ವಿವಾದ ವಿಕೋಪಕ್ಕೆ ಹೋಗುತ್ತದೆ ಎಂದಾದಲ್ಲಿ, ನಾಡಗೀತೆಗೆಂದೇ ಹೊಸ ರಚನೆ ಮಾಡಿಸಿ, ಸ್ವರ ಸಂಯೋಜಿಸಿ, ಅದನ್ನು ಜಾರಿಗೆ ತರಬೇಕಾಗುತ್ತದೆ. ಆಗಲೂ ಯಾರೂ ವಿವಾದವನ್ನು ಹುಟ್ಟುಹಾಕುವುದಿಲ್ಲ ಅಂತೇನಿಲ್ಲವಲ್ಲ?' ಎಂದು ಪ್ರಶ್ನೆ ಮುಂದಿಡುತ್ತಾರೆ.

ಟಿ.ಎಸ್. ಸತ್ಯವತಿ

ಸಂಗೀತ ಮತ್ತು ಸಮಾಜದ ಸಂಬಂಧದಲ್ಲಿ ವೈಯಕ್ತಿಕ ಸ್ವಾತಂತ್ರ್ಯ, ಲಿಂಗ, ಧರ್ಮ, ಜಾತಿ, ಭಾಷೆ ಮುಂತಾದ ಪ್ರಮುಖ ಚರ್ಚೆಗಳೆಲ್ಲವೂ ಅಂತರ್ಗತವಾಗಿವೆ. ಬಹುಶಃ ಅದರಿಂದ ಹೊರತುಪಡಿಸಿ ಈ ವಿಚಾರವನ್ನು ನೋಡುವುದೇ ಸಾಧ್ಯವಿಲ್ಲವೆನಿಸುತ್ತದೆ.



ಸಂಡೂರು ಭೂ ಹೋರಾಟ —ಸಂಗ್ರಹ ಚಿತ್ರ

ಸಂಡೂರು ಭೂ ಹೋರಾಟಕ್ಕೀಗ 50 ವರ್ಷ. ಆದರೆ ಈಗಲೂ ಹೋರಾಟದಿಂದ ಪಡೆದ ಭೂಮಿಯನ್ನು ಉಳಿಸಿಕೊಳ್ಳಲು ರೈತರ ಸೆಣಸಾಟ ಮುಂದುವರಿದಿದೆ. ಎಸ್‌ಆರ್‌.ಹಿರೇಮಠ ಅವರ ನಾಯಕತ್ವದ 'ಜನ ಸಂಗ್ರಾಮ ಪರಿಷತ್ತು' ಈಗಲೂ ಭೂ ಸಂಬಂಧಿ ಹೋರಾಟಗಳನ್ನು ನಡೆಸುತ್ತಿದೆ.

ರಾಜಶಾಹಿಯ ಕೊನೆಗೊಳಿಸಿದ ಹೋರಾಟಕ್ಕೆ 50

ಅರುಣ್ ಜೋಳದಕೂಡ್ಲಿಗಿ


ಬಳ್ಳಾರಿ ಜಿಲ್ಲೆಯ ಪುಟ್ಟ ಮಲೆನಾಡಿನಂತಿರುವ ಸಂಡೂರು ಕಣ್ಮನ ಸೆಳೆಯುತ್ತದೆ. ಗಣಿಗಾರಿಕೆಯ ದೂಳಿನ ಮೇಲುಹೊದಿಕೆ ಹೊದ್ದರೂ ಮಳೆಗಾಲ ಶುರುವಾಗುತ್ತಲೂ ಕೆಂಪಂಗಿ ಕೊಡವಿ ಕಣ್ಣಿಗೆ ತಂಪನೀಯುವ ಹಸಿರುಟ್ಟು ಮೈದುಂಬಿಕೊಳ್ಳುತ್ತದೆ. ಇತ್ತ ಸಂಡೂರಿನ ಚರಿತ್ರೆಯ ಪುಟ ತಿರುವಿದರೆ ರಾಜಶಾಹಿಯ ದರ್ಪ, ಘೋರ್ಪಡೆ ವಂಶಸ್ಥರ ದೌಲತ್ತು, ಜನಸಾಮಾನ್ಯರ ಪ್ರತಿರೋಧ ಒಟ್ಟೊಟ್ಟಿಗೆ ಕಾಣಸಿಗುತ್ತವೆ. 1936ರಲ್ಲಿ ಸಂಡೂರಿಗೆ ಭೇಟಿ ನೀಡಿದ್ದ ಗಾಂಧೀಜಿಯವರು ಸೆಪ್ಟೆಂಬರ್‌ನಲ್ಲಿ ಸಂಡೂರಿನ ನಿಸರ್ಗವನ್ನು ಕಣ್ತುಂಬಿಕೊಳ್ಳಲು ಕರೆ ಕೊಟ್ಟಿದ್ದರು. ಅಂತೆಯೇ ಇದೇ ಸೆಪ್ಟೆಂಬರ್ ಸಂಡೂರಿನ ಇತಿಹಾಸದಲ್ಲಿ ಮರೆಯಲಾರದ ಭೂ ಹೋರಾಟಕ್ಕೂ ನಾಂದಿ ಹಾಡಿತ್ತು. ರೈತರಿಗೆ ಎಂಟು ಸಾವಿರ ಎಕರೆಗಿಂತ ಹೆಚ್ಚಿನ ಭೂಮಿ ಹಂಚಿಕೆ ಮಾಡಿದ ಕರ್ನಾಟಕದ ಸಮಾಜವಾದಿಗಳ ಪಾಲಿಗೆ ಬಹುದೊಡ್ಡ ಸೊಂಡೂರು ಭೂ ಹೋರಾಟ ಶುರುವಾದದ್ದು 1973ರ ಸೆಪ್ಟೆಂಬರ್ 10ರಂದು. ಈ ಚರಿತ್ರೆಗೆ ಈಗ 50 ವರ್ಷ ತುಂಬುತ್ತದೆ.

ಸಂಡೂರು ಭಾಗದ ರೈತರಿಗೆ ಕುಮಾರಸ್ವಾಮಿಯ ಗೇಣಿ ಭೂಮಿ, ಸ್ವಂತ ಹೊಲವಾದದ್ದು ಚರಿತ್ರೆ ಮಾತ್ರವಲ್ಲ, ವರ್ತಮಾನವೂ ಹೌದು. ಹೋರಾಟದಿಂದ ಭೂಮಿ ಪಡೆದ ಫಲಾನುಭವಿಗಳಲ್ಲಿ ಕೆಲವರು ಈಗಲೂ ಈ ಭೂಮಿಯನ್ನು ಆಧರಿಸಿಯೇ ಬದುಕುತ್ತಿದ್ದಾರೆ. ಮತ್ತೆ ಕೆಲವರು ಮಾರಾಟ ಮಾಡಿದ್ದಾರೆ. ಕೆಲವರು ಗಣಿಗಾರಿಕೆ ನಡೆಸುವ ಬೃಹತ್ ಕಂಪನಿಗಳ ಒತ್ತಡಕ್ಕೆ ಮಣಿದು ಹೊಲಗಳನ್ನು ಮಾರಿ ಕೈಚೆಲ್ಲಿದ್ದಾರೆ. ಈ ಮಧ್ಯೆ ಹೋರಾಟದಿಂದ ಪಡೆದ ಭೂಮಿಯನ್ನು ಉಳಿಸಿಕೊಳ್ಳಲು ರೈತರ ಸೆಣಸಾಟ ಇಂದಿಗೂ ನಡೆದಿದೆ. ಎಸ್.ಆರ್.ಹಿರೇಮಠ ಅವರ ನಾಯಕತ್ವದ 'ಜನ ಸಂಗ್ರಾಮ ಪರಿಷತ್ತು' ಈಗಲೂ ಭೂ ಸಂಬಂಧಿ ಹೋರಾಟಗಳನ್ನು ನಡೆಸುತ್ತಿದೆ. ಶ್ರೀಶೈಲ ಆಲ್ದಳ್ಳಿ, ಟಿ.ಎಂ.ಶಿವಕುಮಾರ್ ರೈತರ ಒಡನಾಟದಲ್ಲಿದ್ದಾರೆ. ಲಕ್ಷ್ಮೀಪುರದ ಈರಣ್ಣ ಮೊದಲಾದ ರೈತ ನಾಯಕರು ಗಣಿಗಾರಿಕೆ ಕಂಪನಿಗಳ ಭೂ ಒತ್ತುವರಿಯ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಸತತ ನಾಲ್ಕನೆ ಬಾರಿಗೆ ಸಂಡೂರು ಶಾಸಕರಾಗಿ ಆಯ್ಕೆಯಾದ ಈ. ತುಕಾರಾಮ ಅವರು "ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಈ ಹೋರಾಟಕ್ಕೆ ಸ್ಪಂದಿಸಿದ್ದರು. ಅದೇ ಹೊತ್ತಿಗೆ 'ಉಳುವವನೇ ಭೂ ಒಡೆಯ' ಕಾಯ್ದೆ ಜಾರಿಯಾದ ಕಾರಣ ರೈತರಿಗೆ ಇನಾಮು ಭೂಮಿ ಸಿಗುವಂತಾಯಿತು" ಎನ್ನುತ್ತಾರೆ.



ಯಜಮಾನ ಶಾಂತರುದ್ರಪ್ಪ

ಬ್ರಿಟಿಷ್ ಕಂಪನಿಯು ಧಾರವಾಡದ ಬಳಿ ಇರುವ ಗಜೇಂದ್ರಗಡ ಸಂಸ್ಥಾನದ ವಂಶಸ್ಥರಾದ ಯಶವಂತರಾವ್ ಹಿಂದೂರಾವ್ ಘೋರ್ಪಡೆ ಅವರನ್ನು 1928ರಲ್ಲಿ ಸನದು ಕೊಟ್ಟು ರಾಜನನ್ನಾಗಿಸಿದರು. ಇವರ ಪುತ್ರ ಎಂ.ವೈ. ಘೋರ್ಪಡೆ. ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರು ಅಪಾರ ಧನದಾಹಿಗಳಾಗಿದ್ದರು. ಹಾಗಾಗಿ ರೈತರ 15,000 ಎಕರೆ ಭೂಮಿಯನ್ನು 1948ರ ಸಂಡೂರು ಪ್ರೊಕ್ಲಮೇಷನ್‌ನಲ್ಲಿ 'ಕುಮಾರ ಸ್ವಾಮಿ' ಭೂಮಿಯನ್ನಾಗಿ ಪರಿವರ್ತಿಸಿದರು. ಭೂಮಿ ಕಳೆದುಕೊಂಡ ಅದೇ ರೈತರಿಗೆ ವರ್ಷದ ಗೇಣಿಯಂತೆ ಕೊಟ್ಟು ಉಳುಮೆ ಮಾಡಿಸತೊಡಗಿದರು. ಹೀಗೆ ಭೂಮಿ ಕಳೆದುಕೊಂಡವರು ತಮ್ಮ ಭೂಮಿಗಾಗಿ ಪ್ರತಿಭಟಿಸಿದ್ದರೂ ರಾಜರು ಈ ಪ್ರತಿಭಟನೆಗಳನ್ನು ತಣ್ಣಗಾಗಿಸಿದ್ದರು. 1973ರ ವರೆಗೆ ಈ ಭೂಮಿಗಾಗಿ ತೀವ್ರವಾದ ಹೋರಾಟವನ್ನು ಹುಟ್ಟುಹಾಕಲು ಸಾಧ್ಯವಾಗಿರಲಿಲ್ಲ.



ಎಲಿಗಾರ ತಿಮ್ಮಪ್ಪ

ಬಳ್ಳಾರಿಯ ಯಜಮಾನ ಶಾಂತರುದ್ರಪ್ಪ, ಸಂಡೂರಿನ ರೈತ ನಾಯಕ ಎಲಿಗಾರ ತಿಮ್ಮಪ್ಪ ಜನರನ್ನು ಸಂಘಟಿಸಿದರು.

11ನೇ ಪುಟಕ್ಕೆ...

ಕೆರೆಯೊಂದರ ಕಥೆ-ವ್ಯಥೆ

2003ರಲ್ಲಿ ನಿರ್ಮಿತವಾದ ಕುಂದವಾಡ ಕೆಲವೇ ವರ್ಷಗಳಲ್ಲಿ ಜೀವ ವೈವಿಧ್ಯದಿಂದ ನಳನಳಿಸಿದ್ದ ಕೃತಕ ಕೆರೆಯಾಗಿ ಬದಲಾಗಿತ್ತು. ಅದರ ಅಭಿವೃದ್ಧಿ ಕಾಮಗಾರಿ ಅಲ್ಲಿನ ಜೀವ ವೈವಿಧ್ಯವನ್ನು ಹೊಡೆದು ಓಡಿಸಿದೆ. ಈಗ ಮತ್ತೆ ಅದು ಹಳೆಯ ಸೊಬಗು ಮೂಡಿಸಿಕೊಳ್ಳಲು ಇನ್ನೆಷ್ಟು ಕಾಲ ಕಾಯಬೇಕೋ?

ಎಸ್. ಶಿಶುಪಾಲ

ಕೆರೆ ಒಂದು ಜೀವಸೆಲೆ. ಕೆರೆಯೆಂದರೆ ಮನಸೂರೆಗೊಳ್ಳುವ ಆಹ್ಲಾದಕರ ವಾತಾವರಣ, ಹಕ್ಕಿಗಳ ಚಿಲಿಪಿಲಿ ನಾದ. ಕೆರೆಯ ಮೇಲಿನಿಂದ ಬರುವ ತಣ್ಣನೆಯ ಶುದ್ಧ ಗಾಳಿ ಹಿತಾನುಭವ. ಸುತ್ತಲೂ ಮರಗಿಡಗಳ ಹಸಿರಿನ ಮಾತು. ನೀರಿನಲ್ಲಿ ಈಜುತ್ತಿರುವ ಬಾತುಗಳು, ಗಿಡಗಂಟೆಗಳ ಹೂಗಳಿಗೆ ಮುತ್ತಿಕ್ಕುವ ಚಿಟ್ಟೆಗಳು ಹೀಗೆ ಸೌಂದರ್ಯಲಹರಿ. ನಗರದ ಜನರು ಮಾನಸಿಕ ನೆಮ್ಮದಿ ಕಂಡುಕೊಳ್ಳುವ ತಾಣ ಕೆರೆ ಎನ್ನುವುದೂ ನಿಜ. ಸಾವಿರಾರು ಜಲಜನ್ಯ ಸಸ್ಯ ಮತ್ತು ಪ್ರಾಣಿಗಳ ಆವಾಸ ತಾಣವೂ ಹೌದು.

ಕೆರೆ ಮತ್ತು ಸರೋವರಗಳು ಭೂಮಿಯ ಶೇ. 3ರಷ್ಟು ಮಾತ್ರವಿದ್ದು, ಸಿಹಿನೀರಿನ ಆಕರಗಳಾಗಿವೆ. ತಮ್ಮದೇ ಆದ ವಿಶಿಷ್ಟ ಪರಿಸರವನ್ನು ಹೊಂದಿದ್ದು, ಅಮೋಘ ಜೀವ ವೈವಿಧ್ಯಕ್ಕೆ ಸಾಕ್ಷಿಯಾಗಿವೆ. ಆದರೆ ಇಂತಹ ನೀರಿನ ಆಕರಗಳು ಅಭಿವೃದ್ಧಿ ಹೆಸರಿನಲ್ಲಿ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿವೆ. ನಗರೀಕರಣ, ಕೈಗಾರಿಕೀಕರಣ ಮತ್ತು ಹೆಚ್ಚುತ್ತಿರುವ ಮನುಷ್ಯನ ನೀರಿನ ಬೇಡಿಕೆಗಳಿಂದ ಶ್ರೀಮಂತ ನೀರಿನ ಸೆಲೆಗಳು ಅಳಿವಿನಂಚಿಗೆ ಹೆಜ್ಜೆ ಹಾಕುತ್ತಿವೆ. ಕೆರೆ-ಸರೋವರಗಳ ಅಧ್ಯಯನವನ್ನು ಲಿಮ್ನಾಲೋಜಿ (Limnology) ಎಂದು ಕರೆಯುತ್ತಾರೆ. ಹೆಚ್ಚುತ್ತಿರುವ ಮನುಷ್ಯನ ಅಗತ್ಯಗಳಿಗಾಗಿ ಇಂತಹ ನೀರಿನ ಮೂಲವನ್ನು ಅತಿ ಜಾಗೂರಕತೆಯಿಂದ ನಿರ್ವಹಿಸುವುದು ಇಂದಿನ ಅಗತ್ಯ. ಕೆರೆಯ ಭೌತಿಕ, ರಾಸಾಯಿನಿಕ ಮತ್ತು ಜೈವಿಕ ಅಂಶಗಳು ಪರಸ್ಪರ ಅವಲಂಬನೆಯಿಂದ ಕೂಡಿದ್ದು, ಯಾವುದೇ ಒಂದು ಅಂಶದಲ್ಲಿ ಏರುಪೇರಾದರೂ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ದಾವಣಗೆರೆಯ ಕುಂದವಾಡ ಕೆರೆಯ ಕಥೆ ಹೇಳುತ್ತೇನೆ. ದಾವಣಗೆರೆ ನಗರದ ಮಧ್ಯಭಾಗದಲ್ಲಿರುವ ಕುಂದವಾಡ ಗ್ರಾಮಕ್ಕೆ ಹೊಂದಿಕೊಂಡಿದ್ದ ಸಾಧಾರಣ ಕೆರೆಯಿದು. ಸುತ್ತಲೂ ಹಚ್ಚ ಹಸಿರಿನ ಭತ್ತದ ಗದ್ದೆಗಳು ಮತ್ತು ಅಲ್ಲಲ್ಲಿ ತೆಂಗು-ಕಂಗುಗಳ ತೋಟದ ವಿಹಂಗಮ ದೃಶ್ಯ. ಸುತ್ತಲಿನ ಗದ್ದೆಗಳ ನೀರು ಮತ್ತು ಮಳೆ ನೀರು ಸೇರಿದಂತೆ ವರ್ಷದ ಒಂದಾರು ತಿಂಗಳು ನೀರಿದ್ದಂತಹ ಕೆರೆ. ಸುಮಾರು 265 ಎಕರೆಯಷ್ಟು ವಿಸ್ತೀರ್ಣದ ನೈಸರ್ಗಿಕ ಕೆರೆಯಾಗಿದ್ದದ್ದು ದೂರಗಾಮಿ ದೃಷ್ಟಿಯಿರುವ ಆಡಳಿತಗಾರರ ಕೃಪೆಯಿಂದ 2003ರಲ್ಲಿ ಒಂದು ಉತ್ತಮ ಕೆರೆಯಾಗಿ ರೂಪುಗೊಂಡಿತು. ಭದ್ರಾ ಜಲಾಶಯದಿಂದ ನೀರು ತರುವ ಭಗೀರಥ ಪ್ರಯತ್ನ ಸಫಲಗೊಂಡು, ವರ್ಷವಿಡೀ ನೀರನ್ನು ಹೊಂದುವ ಕ್ಷಮತೆ ಪಡೆಯಿತು. ದಾವಣಗೆರೆ ನಗರದ ಶೇ. 60ಕ್ಕೂ ಹೆಚ್ಚು ಪ್ರದೇಶಕ್ಕೆ ಕುಡಿಯುವ ನೀರಿಗೆ ಆಸರೆಯಾಯಿತು. ಸುತ್ತಲಿನ ಅಂತರ್ಜಲದ ಮಟ್ಟ ಹೆಚ್ಚಾಗಿ ಕೊಳವೆಬಾವಿಗಳು ಜನರ ದಾಹ ತಣಿಸತೊಡಗಿದವು. ದಶಕಗಳಿಂದ ದಾವಣಗೆರೆಯ ಜನರನ್ನು ಕಾಡುತ್ತಿದ್ದ ಕುಡಿಯುವ ನೀರಿನ ಸಮಸ್ಯೆ ಮರೆಯಾಯಿತು. ದಾನಿಗಳು ನೀಡಿದ್ದ ನೂರಾರು ಬೆಂಚುಗಳು ಜನರಿಗೆ ಕೆರೆಯನ್ನು ಆಸ್ವಾದಿಸುವ ಸ್ಥಳವನ್ನಾಗಿಸಿತು. ಆದರೆ ಪಕ್ಕದಲ್ಲಿರುವ ತೆರೆದ ರಾಜಕಾಲುವೆಯಲ್ಲಿನ ಮೋರಿಯ ನೀರಿನ ದುರ್ನಾತ ಸಹಿಸಲಾಗುತ್ತಿರಲ್ಲಿಲ್ಲ.





ಅಭಿವೃದ್ಧಿ ಹೆಸರಿನಲ್ಲಿ ನಶಿಸುತ್ತಿರುವ ಜಲಚರಗಳು ಹಾಗೂ ಹಾಳಾದ ಕೆರೆ

ಇಲ್ಲಿ 150ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳನ್ನು ತಜ್ಞರು ಗುರುತಿಸಿದ್ದರು. ದೇಶ-ವಿದೇಶಗಳಿಂದ ಬರುವ ವಲಸೆ ಹಕ್ಕಿಗಳಿಗೆ ಆಪ್ಯಾಯಮಾನ ಸ್ಥಳವಾಯಿತು. ಸುತ್ತಲಿದ್ದ ಪೊದೆಗಿಡಗಳಲ್ಲಿ 36 ಪ್ರಭೇದದ ಚಿಟ್ಟೆಗಳನ್ನು ದಾಖಲಿಸಲಾಗಿದೆ. ಕಪ್ಪೆ, ಅಳಿಲು, ಆಮೆ, ನೀರುಹಾವು, ಮೀನು, ಮುಂಗುಸಿ ಮುಂತಾದ ಜೀವಿಗಳ ತಂಗುದಾಣ ಇದಾಗಿದೆ. ಆಹ್ಲಾದಕರ ವಾತಾವರಣದಲ್ಲಿ ಆರೋಗ್ಯ ಮತ್ತು ಪರಿಸರಸ್ನೇಹಿ ಸ್ಥಳವಾಗಿ ನಾಗರಿಕರ ಮೆಚ್ಚಿನ ನಡಿಗೆ ತಾಣವಾಗಿ ಈ ಸ್ಥಳ ಮಾರ್ಪಾಡಾಯಿತು.

ಪರಿಸರ-ಮಾರಕ ಅಭಿವೃದ್ಧಿ: ಅಭಿವೃದ್ಧಿ ಹೆಸರಿನಲ್ಲಿ ₹15 ಕೋಟಿ ವೆಚ್ಚದಲ್ಲಿ ಕ್ರಿಯಾ ಯೋಜನೆ ರೂಪುಗೊಂಡು, 2019ರಲ್ಲಿ ಕೆರೆಯನ್ನು ಪುನರ್‌ನಿರ್ಮಿಸುವ ಕಾರ್ಯ ಪ್ರಾರಂಭವಾಯಿತು. ಮೊದಲಿಗೆ ಭದ್ರಾ ಜಲಾಶಯದಿಂದ ಬರುತ್ತಿದ್ದ ನೀರನ್ನು ನಿಲ್ಲಿಸಲಾಯಿತು. ಕೆರೆ ಏರಿಯನ್ನು ವಿಸ್ತರಿಸುವುದು, ಪಾದಚಾರಿ ರಸ್ತೆಯನ್ನು ಇನ್ನೂ ಅಗಲ ಮಾಡುವುದು, ಹೂವಿನ ಹಾಸು ರೂಪಿಸುವುದು, ಕುಳಿತುಕೊಳ್ಳುವ ಬೆಂಚುಗಳನ್ನು ನಿರ್ಮಿಸುವುದು, ವಿದ್ಯುತ್ ಬೆಳಕನ್ನೂ ಒಳಗೊಂಡಂತೆ ಆಲಂಕಾರಿಕ ಅಭಿವೃದ್ಧಿ ಮಾಡುವುದು... ಹೀಗೆ ಎಲ್ಲಾ ಕಾಮಗಾರಿಗಳು ಮಾನವ-ಕೇಂದ್ರಿತ ಅಭಿವೃದ್ಧಿಯಾಗಿ ಮಾರ್ಪಟ್ಟವು. ಒಂದು ಕಡೆಯ ಕೆರೆ ಏರಿ ಜಾಗಕ್ಕೆ ಪ್ಲಾಸ್ಟಿಕ್ ಹಾಸು ಹಾಕಿ ನೀರು ಇಂಗದಂತೆ ಮಾಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ನೀರಿಲ್ಲದೆ ಕೆರೆಯನ್ನು ಆಶ್ರಯಿಸಿದ್ದ ಸಾವಿರಾರು ಜಲಚರಗಳು ಸಾವಿಗೀಡಾದವು. ಹಕ್ಕಿಗಳು ಅನ್ಯ ಕೆರೆಗಳತ್ತ ಪಲಾಯನ ಮಾಡಿದವು. ಅಭಿವೃದ್ಧಿ ಹೆಸರಿನಲ್ಲಿ ಕೆರೆಯ ಪರಿಸರ ಹದಗೆಟ್ಟಿತು. ಸುತ್ತಮುತ್ತಲಿನ ಪೊದೆ ಗಿಡಗಳು ಹಲವಾರು ಹಕ್ಕಿಗಳಿಗೆ ಗೂಡು ಮಾಡಲು ಪ್ರಶಸ್ತ ಸ್ಥಳಗಳಾಗಿದ್ದವು. ಕೆರೆಯಂಗಳದಲ್ಲಿ ಸತತ ಜೋರು ಶಬ್ದ ಹೊಮ್ಮಿಸಿದ ಜೆಸಿಬಿಗಳು ಜೀವವೈವಿಧ್ಯವನ್ನು ನಾಶಮಾಡಿದವು. ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ರಾಜ್ಯ ಜೀವವೈವಿಧ್ಯ ಮಂಡಳಿಗೆ ಸಲ್ಲಿಸಿದ ವರದಿಯಲ್ಲಿ ಇಲ್ಲಿನ ಜೀವವೈವಿಧ್ಯಕ್ಕೆ ಧಕ್ಕೆಯಾಗಿರುವುದನ್ನು ತಿಳಿಸಲಾಗಿದೆ. ಈಗ ಅಲ್ಲಿ ನೂರಾರು ಆಲಂಕಾರಿಕ ಗಿಡಗಳನ್ನು ನೆಡಲಾಗಿದೆ. ಹುಲ್ಲುಹಾಸು (Lawn) ಬಂದಿದೆ. ಕೆರೆ ಏರಿಯಲ್ಲಿ ಹುಲ್ಲುಹಾಸು ಅಗತ್ಯವೇ? ನಿರ್ವಹಣೆ ಸಾಧ್ಯವೇ? ಗಿಡಗಳಿಗೆ ಡ್ರಿಪ್-ಇರಿಗೇಶನ್ ಕೊಳವೆಗಳನ್ನು ಅಳವಡಿಸಲಾಗಿದೆ. ಕೆರೆಯ ಬದಿ ಇರುವ ಗಿಡಗಳಿಗೆ ಹಣ ಖರ್ಚು ಮಾಡಿ ನೀರುಣಿಸುವ ಅಗತ್ಯವಿದೆಯೇ?

11ನೇ ಪುಟಕ್ಕೆ...



2003ರಲ್ಲಿ ನಿರ್ಮಾಣಗೊಂಡ ಕೆರೆಯ ನೋಟ... (ಚಿತ್ರ: ಹೇಮಚಂದ್ರ ಜೈನ್)

ಪುರಾಣ-ಜನಪದದ ಮುಖಾಮುಖಿ

ಇತ್ತೀಚೆಗಷ್ಟೇ ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ನೀನಾಸಂ ಸಂಸ್ಥೆಯು 'ದ್ರೋಪತಿ ಹೇಳ್ತವ್ನೆ' ನಾಟಕದ ಪ್ರದರ್ಶನವನ್ನು ಆಯೋಜಿಸಿತ್ತು...

ಎಂ.ರಾಘವೇಂದ್ರ

ರಾಮಾಯಣ, ಮಹಾಭಾರತದ ಕಥನಗಳನ್ನು 'ಹೆಣ್ಣು' ನೋಟದ ಮೂಲಕ ಚಿತ್ರಿಸುತ್ತಲೆ ಕಥನಕ್ಕೊಂದು ಹೊಸ ಆಯಾಮ ಹುಡುಕುವ, ಅರ್ಥೈಸುವ ಪ್ರಯೋಗಗಳು ಈಚಿನ ವರ್ಷಗಳಲ್ಲಿ ರಂಗಭೂಮಿಯಲ್ಲಿ ಜೋರಾಗಿಯೇ ನಡೆಯುತ್ತಿವೆ. ಏಕವ್ಯಕ್ತಿ ರಂಗ ಪ್ರಯೋಗಗಳು ಪುರಾಣದಲ್ಲಿ ಬರುವ ಅಂಚಿನಲ್ಲಿರುವ ಪಾತ್ರಗಳಿಗೆ ಪ್ರಾತಿನಿಧ್ಯ ನೀಡಿದರೆ ಇತರ ಪ್ರಕಾರದ ಪ್ರಯೋಗಗಳು ಮುಖ್ಯ ಪಾತ್ರಗಳತ್ತಲೆ ಗಮನಹರಿಸುತ್ತಿವೆ.

ಕೆಲವು ಪ್ರಯೋಗಗಳು ಸ್ತ್ರೀವಾದಿ ನೆಲೆಗಟ್ಟಿನ 'ಹೆಣ್ಣು' ನೋಟವನ್ನು ಮೀರಿದ ಕಥನಗಳಾಗಿ ಹೊಸದೊಂದು ಕಾಣ್ಕೆ ಕಟ್ಟುವುದರಲ್ಲಿ ಯಶಸ್ವಿಯಾಗುತ್ತಿವೆ. ಬೆಂಗಳೂರಿನ ರಂಗಾಸ್ಥೆ ಸಂಸ್ಥೆಯ 'ದ್ರೋಪತಿ ಹೇಳ್ತವ್ನೆ' ನಾಟಕ (ರಚನೆ, ವಿನ್ಯಾಸ, ಸಂಗೀತ, ನಿರ್ದೇಶನ: ಗಣೇಶ ಮಂದಾರ್ತಿ) ಅಂತಹ ಪ್ರಯೋಗದ ಸಾಲಿಗೆ ಸೇರುತ್ತದೆ.

ಇತ್ತೀಚೆಗಷ್ಟೇ ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ನೀನಾಸಂ ಸಂಸ್ಥೆಯು ಈ ನಾಟಕದ ಪ್ರದರ್ಶನವನ್ನು ಆಯೋಜಿಸಿತ್ತು. ನಾಟಕದ ಮೊದಲರ್ಧ ಕುಮಾರವ್ಯಾಸ ಭಾರತದ ಅಭಿಜಾತ ಶೈಲಿಯಲ್ಲಿ ಪ್ರಸ್ತುತಗೊಂಡರೆ, ಎರಡನೇ ಭಾಗ ಜನಪದರು ಕಟ್ಟಿಕೊಂಡ ಮಹಾಭಾರತಕ್ಕೆ ಹೊರಳುತ್ತದೆ.

ನಾಟಕದ ಆರಂಭದಲ್ಲಿ ಭಾಗವತರು ಮತ್ತು ಮೇಳದವರು ಯಾವ ವಸ್ತುವನ್ನು ಆಧರಿಸಿ ನಾಟಕ ಆಡಬೇಕು ಎಂಬ ಪ್ರಶ್ನೆಯನ್ನು ಮುಂದಿಟ್ಟಾಗ ಗಂಡು ಪಾತ್ರಗಳ ಹೆಸರೇ ಪ್ರಸ್ತಾಪವಾಗುತ್ತದೆ. ಆಗ ತೆರೆಯ ಮರೆಯಲಿದ್ದ ಹೆಣ್ಣು ಪಾತ್ರಗಳು ಭಾಗವತರು ಮತ್ತು ಮೇಳದವರನ್ನು 'ಯಾಕೆ ನಿಮಗೆ ಹೆಣ್ಣು ಪಾತ್ರಗಳು ಕಾಣುವುದೆ ಇಲ್ಲವೆ' ಎಂದು ಪೊರಕೆ ಸೇವೆಯ ಮೂಲಕ ಜಾಡಿಸುವಲ್ಲಿ ನಾಟಕ ಸಾಗುವ ದೃಷ್ಟಿಕೋನದ ಸುಳಿವು ಸಿಗುತ್ತದೆ.

ದ್ರುಪದ ತಪಸ್ಸು ಮಾಡಿ ದ್ರೋಣಾಚಾರ್ಯರ ವಿರುದ್ಧ ಸೇಡು ತೀರಿಸಿಕೊಳ್ಳಲು ಪಡೆದ ಮಗಳಾದ ದ್ರೋಪತಿ ಅರ್ಜುನನ್ನು ಮೆಚ್ಚಿ ವರಿಸಿದಾಗ, ಉಳಿದ ನಾಲ್ವರು ಪಾಂಡವರನ್ನು ಮದುವೆಯಾಗಬೇಕಾದ ಸಂದಿಗ್ಧತೆಯ ಪ್ರಸಂಗದೊಂದಿಗೆ ದ್ರೋಪತಿಯ ಕಥನ ಬಿಚ್ಚಿಕೊಳ್ಳುತ್ತದೆ.

ತನ್ನ ಪೂರ್ವಜನ್ಮದಲ್ಲಿ ದ್ರೋಪತಿ ಸನ್ಯಾಸಿಯೊಂದಿಗೆ ಪತಿವ್ರತೆಯಾಗಿ ನಡೆಸಿದ ಬಾಳ್ವೆ, ಮುಂದಿನ ಜನ್ಮದಲ್ಲಿ ಆಕೆ ಐವರು ಗಂಡಂದಿರ ಪತ್ನಿಯಾಗಬೇಕೆಂಬ ವಿಧಿಲಿಖಿತವಾದ ಕತೆಯೂ ರಂಗದಲ್ಲಿ ಅನಾವರಣಗೊಳ್ಳುತ್ತದೆ.



ಹೆಗ್ಗೋಡು ಶಿವರಾಮ ಕಾರಂತ ರಂಗಮಂದಿರದಲ್ಲಿ ಬೆಂಗಳೂರಿನ ರಂಗಾಸ್ಥೆ ಟ್ರಸ್ಟ್‌ನ ಕಲಾವಿದರು 'ದ್ರೋಪತಿ ಹೇಳ್ತವ್ನೆ' ನಾಟಕವನ್ನು ಪ್ರದರ್ಶಿಸಿದರು



'ದ್ರೋಪತಿ ಹೇಳ್ತವ್ನೆ' ನಾಟಕದ ಒಂದು ದೃಶ್ಯ.

'ಯಾವುದೆ ಹುಟ್ಟು ಸಂಭವಿಸಿದಾಗ ಸಂಭ್ರಮವಿರುತ್ತದೆ. ಆದರೆ ನನ್ನ ಹುಟ್ಟಿನ ಹಿಂದೆ ಸೇಡಿನ ಕತೆ ಇದೆಯಲ್ಲ' ಎಂಬ ಪ್ರಶ್ನೆಯೊಂದಿಗೆ ದ್ರೋಪತಿ ಹಲವು ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳುತ್ತಲೆ ಹೆಣ್ಣಿನ ಅಸಹಾಯಕತೆಗೆ ಕನ್ನಡಿ ಹಿಡಿಯುತ್ತಾಳೆ.

ದ್ರೋಪತಿಯ ಇಂತಹ ಸ್ವಗತದಲ್ಲಿ ಮಡುಗಟ್ಟಿದ ನೋವಿನ ಜೊತೆಗೆ ಆಗಾಗ ರೋಷವೂ ಸ್ಫೋಟಿಸುತ್ತದೆ. ಸ್ವತಃ ಭಗವಂತನೆಂಬ ನಂಬುಗೆಗೆ ಪಾತ್ರನಾಗಿರುವ ಕೃಷ್ಣನನ್ನೂ ಪ್ರಶ್ನಿಸಲು ಆಕೆ ಹಿಂಜರಿಯುವುದಿಲ್ಲ.

ವಸ್ತ್ರಾಪಹರಣದ ದೃಶ್ಯದಲ್ಲಿ 'ಹೆಣ್ಣಿನ ಮಾನಕ್ಕೆ ಸುರಕ್ಷೆ ಇಲ್ಲದ ನಾಡು ಹೇಗೆ ತಾನೆ ಸುಭಿಕ್ಷವಾಗಿಬಲ್ಲದು' ಎಂಬ ಅವಳ ಆರ್ತನಾದ ಮಣಿಪುರದ ಈಚಿನ ವಿದ್ಯಮಾನಗಳನ್ನು ಕಣ್ಣೆದುರು ನಿಲ್ಲಿಸುತ್ತದೆ. ಈ ದೃಶ್ಯವನ್ನು ಕಟ್ಟುವಲ್ಲಿ ನಿರ್ದೇಶಕರ ರಂಗಕುಶಲತೆ ಎದ್ದು ಕಾಣುತ್ತದೆ.

ನಾಟಕದ ಎರಡನೇ ಭಾಗ ಪಾಂಡವರು 14 ವರ್ಷ ವನವಾಸ ಮುಗಿಸಿ ಒಂದು ವರ್ಷದ ಅಜ್ಞಾತವಾಸ ಅನುಭವಿಸುವ ಪ್ರಸಂಗಕ್ಕೆ ಜಿಗಿಯುತ್ತದೆ. ಆಗ ಜನಪದ ಶೈಲಿಗೆ ನಾಟಕ ಹೊರಳುತ್ತದೆ.

ದ್ರೋಪತಿ ಸೈರೇಂದ್ರಿಯ ವೇಷ ಧರಿಸಿ ವೈಷ್ಣೋದೇವಿಯ ಆಸ್ಥಾನದಲ್ಲಿ ಸೇವಕಿಯಾಗಿ ಸೇರಿಕೊಂಡಾಗ ಕೀಚಕನ ಕಾಮದ ಕಣ್ಣಿಗೆ ಬಿದ್ದು, ನಂತರ ಆತ ಭೀಮನಿಂದ ಸಂಹಾರಕ್ಕೆ ಒಳಗಾಗುವ ದೃಶ್ಯದೊಂದಿಗೆ ನಾಟಕ ಓಘ ಪಡೆಯುತ್ತದೆ.

ಮುಂದಕ್ಕೆ ದ್ರೋಪತಿ ತನ್ನ ಮಕ್ಕಳನ್ನು ಯುದ್ಧದಲ್ಲಿ ಕಳೆದುಕೊಂಡು ಪರಿತಪಿಸಿ ಅವರನ್ನು ಕೊಂದ ಅಶ್ವತ್ಥಾಮನಿಗೆ ಶಾಪ ನೀಡುವ ದೃಶ್ಯ ಎದುರಾಗುತ್ತದೆ.

ಮುಂದೆ ಪಾಂಡವರು ಪ್ರಸ್ಥಾನಕ್ಕೆ ಹೊರಡುವ ಸನ್ನಿವೇಶದಲ್ಲಿ ದ್ರೋಪತಿ ಹಾಗೂ ಪಾಂಡವರ ನಡುವೆ ನಡೆಯುವ ವಾಗ್ವಾದ ಮಾರ್ಮಿಕವಾಗಿದೆ. ಪ್ರಸ್ಥಾನಕ್ಕೆ ತೆರಳದಂತೆ ದ್ರೋಪತಿ ಭೀಮನನ್ನು ತಡೆದಾಗ, 'ಅವಳು ಇಷ್ಟಪಟ್ಟಿದ್ದು ಅರ್ಜುನನ್ನು ಮಾತ್ರ. ಅನಿವಾರ್ಯವಾಗಿ ಐವರನ್ನು ವರಿಸಿದ್ದಾಳೆ. ಹೀಗಾಗಿ ನೀನು ಯಾವ ಮೋಹಕ್ಕೂ ಸಿಲುಕಬೇಡ' ಎಂದು ಧರ್ಮರಾಯ ಭೀಮನಿಗೆ ಹೇಳುತ್ತಾನೆ.

'ನಾನು ನಿಜಕ್ಕೂ ಇಷ್ಟಪಟ್ಟಿದ್ದು ನಿನ್ನೊಬ್ಬನನ್ನೆ' ಎಂದು ದ್ರೋಪತಿ ಭೀಮನನ್ನು ಉದ್ದೇಶಿಸಿ ಹೇಳುವ ಮಾತು, ಒಂದು ಹಂತದಲ್ಲಿ ಕೃಷ್ಣ ಕೂಡ ದ್ರೋಪತಿಯನ್ನು ಮದುವೆಯಾಗಲು ಬಯಸಿ ನಂತರ ಸಹೋದರಿಯಂತೆ ಕಂಡ ಎಂಬ ಜನಪದರ ನೋಟ ಹೀಗೆ ಹಲವು ಕೌತುಕಗಳನ್ನು ನಾಟಕ ಉಣಬಡಿಸುತ್ತದೆ.

ಕರ್ಣ ಮತ್ತು ದ್ರೋಪತಿಯರ ನಡುವೆ ಇರುವ ಐತಿಹ್ಯಗಳ ಪ್ರಸ್ತಾಪ ನಾಟಕದಲ್ಲಿ ಕಾಣದೆ ಇರುವುದು ಕೊರತೆ ಅನಿಸುತ್ತದೆ.

ಅಂತಿಮ ದೃಶ್ಯದಲ್ಲಿ ಬದುಕೆಂದರೇನು, ಬದುಕುವುದು ಹೇಗೆ, ಬದುಕಿನ ಘಟನೆಗಳಿಗೆ ಪ್ರತಿಕ್ರಿಯಿಸುವುದು ಹೇಗೆ.... ಇಂತಹ ಹಲವು ಪ್ರಶ್ನೆಗಳ ಕುರಿತು ದ್ರೋಪತಿ ಹಾಗೂ ಕೃಷ್ಣನ ನಡುವೆ ಅರ್ಥಪೂರ್ಣ ಸಂವಾದ ನಡೆಯುತ್ತದೆ. ಬದುಕಿನ ಅರ್ಥಗಳನ್ನು ಶೋಧಿಸುವ ಬಗೆಯನ್ನು ದ್ರೋಪತಿಗೆ ಮನವರಿಕೆ ಮಾಡಲು ಕೃಷ್ಣ ಪ್ರಯತ್ನಿಸುತ್ತಾನೆ.

'ನೀನೇ ಸೃಷ್ಟಿಸಿದ ಲೋಕದಲ್ಲಿ ಇಷ್ಟೊಂದು ನೋವು, ಹಿಂಸೆ ಯಾಕೆ' ಎಂದು ದ್ರೋಪತಿ ಕೇಳಿದಾಗ, 'ಇದು ನಾವಾಗಿಯೆ ತಂದುಕೊಳ್ಳುವ ನೋವು' ಎಂದು ತಣ್ಣನೆಯ ದನಿಯಲ್ಲಿ ಕೃಷ್ಣ ಉತ್ತರಿಸುತ್ತಾನೆ. ಕೊನೆಗೆ ಎಲ್ಲವೂ ಪೂರ್ವ ನಿರ್ಧರಿತ ಎಂಬ ತಾತ್ವಿಕತೆಗೆ ಜಾರುವುದು ಪ್ರಯೋಗದ ಮಿತಿ ಅನಿಸುತ್ತದೆ.

ನಾಟಕದ ಆರಂಭದಲ್ಲಿ ಯಕ್ಷಗಾನದ ಹಿನ್ನಲೆಯ ಸಂಗೀತ, ಕುಣಿತದ ಹೆಜ್ಜೆಗಳು ಕಾಣುತ್ತವೆ. ಆದರೆ ಬಹುಬೇಗ ಅವುಗಳು ರಂಗ ಸಂಗೀತ, ರಂಗ ಚಲನೆಯ ರೂಪು ಪಡೆಯುವ ಮೂಲಕ ದೃಶ್ಯಗಳು ಕಳೆಕಟ್ಟುತ್ತವೆ. ಸಂಗೀತ, ವಿನ್ಯಾಸ ನಾಟಕದ ಪ್ರಮುಖ ಭಾಗವೇ ಆಗಿದೆ.

ರಂಗಾಸ್ಥೆಯ ಕಲಾವಿದರ ಅಭಿನಯದಲ್ಲಿ ಹದವಿದೆ. ಬೆಳಕು, ವಸ್ತ್ರ ವಿನ್ಯಾಸದಲ್ಲಿ ಹೊಸತನ, ಅಚ್ಚುಕಟ್ಟುತನ ಎದ್ದು ಕಾಣುತ್ತದೆ. ಕನ್ನಡ ರಂಗಭೂಮಿಯಲ್ಲಿ ಗಣೇಶ ಮಂದಾರ್ತಿ ಯುವ ತಲೆಮಾರಿನ ಪ್ರತಿಭಾವಂತ ನಿರ್ದೇಶಕ ಎಂಬುದನ್ನು 'ದ್ರೋಪತಿ ಹೇಳ್ತವ್ನೆ' ಸಾಬೀತುಪಡಿಸುತ್ತದೆ.

ಕೆರೆಯೊಂದರ ಕಥೆ-ವ್ಯಥೆ

10ನೇ ಪುಟದಿಂದ...

ಮೊದಲು ನೈಸರ್ಗಿಕವಾಗಿ ಬೆಳೆಯುತ್ತಿದ್ದ ಲಂಟಾನ ಗಿಡಗಳನ್ನು ತೆಗೆದು, ದುಡ್ಡು ಕೊಟ್ಟು ತಂದ ಲಂಟಾನ ಮತ್ತು ಇತರೆ ಹೂಗಿಡಗಳನ್ನು ನೆಡಲಾಗಿದೆ. ಇಲ್ಲಿ ಬೆಳೆಯಲು ಪ್ರಾರಂಭಿಸಿರುವ ಗಿಡಗಳು ಹೂಕಳ್ಳರ ಪಾಲಾಗುತ್ತಿವೆ. ಕೆರೆಯಲ್ಲಿ ಸೈಕಲ್ ಟ್ರ್ಯಾಕ್ ನಿರ್ಮಾಣಕ್ಕೆ ಕೆರೆಯ ಒಳಾಂಗಣದ ಹತ್ತು ಮೀಟರ್ ಜಾಗವನ್ನು ಉಪಯೋಗಿಸಿ ಕೆರೆಯನ್ನು ಕಿರಿದು ಮಾಡಲಾಗಿದೆ. ಇಲ್ಲಿ ಕುಡಿಯುವ ನೀರು ಸಂಗ್ರಹವಾಗುವುದರಿಂದ ಪ್ಲಾಸ್ಟಿಕ್-ರಹಿತ ಪ್ರದೇಶವಾಗಬೇಕಿದ್ದ ಕೆರೆ ಪ್ಲಾಸ್ಟಿಕ್ ಹೊದಿಕೆ ಹೊದ್ದಿದೆ. ಮಳೆ-ಗಾಳಿ, ಬಿಸಿಲಿಗೆ ಕೆರೆಯ ಏರಿಯ ಕಲ್ಲಿನ ಕೆಳಗಿರುವ ಪ್ಲಾಸ್ಟಿಕ್ ದಿನಕಳೆದಂತೆ ಕರಗಿ ಕುಡಿಯುವ ನೀರಿಗೆ ಮೈಕ್ರೊಪ್ಲಾಸ್ಟಿಕ್ ಅಂಶಗಳನ್ನು ಬಿಟ್ಟು ಜನರಿಗೆ ಆರೋಗ್ಯ ಸಮಸ್ಯೆಯನ್ನು ಉಂಟುಮಾಡೀತು. ಕುಡಿಯುವ ನೀರಿನಿಂದ ಮೈಕ್ರೊಪ್ಲಾಸ್ಟಿಕ್ ಬೇರ್ಪಡಿಸಿ ಶುದ್ಧೀಕರಿಸುವ ತಂತ್ರಜ್ಞಾನವಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯೂ ಮೈಕ್ರೋಪ್ಲಾಸ್ಟಿಕ್ ಕಲ್ಮಶದ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಒಂದು ಪ್ರಕೃತಿ ನಿರ್ಮಿತ ಜಾಗದಲ್ಲಿ ಆದಷ್ಟು ಗಿಡ-ಮರಗಳಿರಬೇಕೇ ವಿನಾ ಕಾಂಕ್ರೀಟ್, ಕಬ್ಬಿಣ, ಪ್ಲಾಸ್ಟಿಕ್ ಮುಂತಾದ ವಸ್ತುಗಳಿರಬಾರದು. ಇನ್ನು ವಿದ್ಯುತ್ ಬೆಳಕು ಬರುವುದರಿಂದ ಅಲ್ಲಿನ ಪ್ರಾಕೃತಿಕ ಸೊಬಗು ನಾಶವಾಗಿ ಬಹಳಷ್ಟು ಜೀವಿಗಳಿಗೆ ತೊಂದರೆಯಾಗುವುದು.

ಬೆಂಗಳೂರಿನ ಎಷ್ಟೋ ಕೆರೆಗಳನ್ನು ಈ ರೀತಿಯಲ್ಲಿ ಮಾನವ ಕೇಂದ್ರಿತ ಅಭಿವೃದ್ಧಿ ಮಾಡಿ, ಹಾಳು ಮಾಡಿರುವ ಉದಾಹರಣೆಗಳಿವೆ. ಅದರ ಪರಿಣಾಮ ಈಗಾಗಲೇ ಕಣ್ಣೆದುರಲ್ಲಿ ಇರುವಾಗ ಮತ್ತೆ ಅಂತಹುದ್ದೇ ಅನಾಹುತದ ಅಗತ್ಯ ಇಲ್ಲಿ ಇತ್ತೇ? ಕರ್ನಾಟಕ ಹೈಕೋರ್ಟ್ 2019ರ ಜೂನ್ 18ರಂದು ಕೊಟ್ಟ ತೀರ್ಪಿನಲ್ಲಿ ಮೂಲ ನೀರಿನ ಆಕರಗಳಾದ ಕೆರೆಗಳನ್ನು ಅಭಿವೃದ್ಧಿ ಹೆಸರಿನಲ್ಲಿ ಸ್ವರೂಪವನ್ನು ಬದಲಾಯಿಸುವಂತಿಲ್ಲವೆಂದು ಉಲ್ಲೇಖಿಸಿತ್ತು. ಅಲ್ಲಿರುವ ಜೀವ ವೈವಿಧ್ಯವನ್ನು ಯಾವುದೇ ಕಾರಣಕ್ಕೂ ಹಾಳು ಮಾಡಬಾರದು. ಸಂವಿಧಾನದ ಪರಿಚ್ಛೇದ 21ರ ಪ್ರಕಾರ ಶುದ್ಧ ಪರಿಸರ ಪ್ರತಿಯೊಬ್ಬರ ಹಕ್ಕು ಎಂಬುದನ್ನು ಪ್ರತಿಪಾದಿಸಿತ್ತು.

ಇಡೀ ಕೆರೆಯ ಐದು ಕಿ.ಮೀ. ಜಾಗದಲ್ಲಿ ಶೌಚಾಲಯಗಳಿಲ್ಲ. ಈಗ ₹15 ಕೋಟಿ ಖರ್ಚಾದರೂ ಅಗತ್ಯ ಶೌಚಾಲಯ ನಿರ್ಮಾಣವಾಗಿಲ್ಲ. ಮಹಿಳೆಯರಿಗಂತೂ ಇದೊಂದು ಕ್ಲಿಷ್ಟಕರ ಸಮಸ್ಯೆ. ಕೆರೆಯ ಸುತ್ತ ಕನಿಷ್ಠ 100 ಮೀಟರ್ ಖಾಲಿ ಜಾಗವನ್ನು ಬಫರ್ ವಲಯವಾಗಿ ಬಿಡಬೇಕೆಂಬ ನಿಯಮವಿದೆ. ಇದನ್ನು ಗಾಳಿಗೆ ತೂರಿ ರಿಯಲ್ ಎಸ್ಟೇಟ್ ಮಾಫಿಯಾ ಚೆನ್ನಾಗಿ ಕೆಲಸ ಮಾಡಿದೆ. ಕೆರೆಯ ಪಕ್ಕದಲ್ಲೇ ಬಹುಮಹಡಿ ಕಟ್ಟಡಗಳು ತಲೆಎತ್ತಿವೆ. ಕಾಮಗಾರಿಯಿಂದ ಮುರಿದ, ತೆಗೆದ, ಸತ್ತ ಮರಗಳ ಪುನಶ್ಚೇತವಾಗಿಲ್ಲ.

ಅಭಿವೃದ್ಧಿಯೆಂಬ ನಾಗಾಲೋಟಕ್ಕೆ ಸಿಕ್ಕು ನಲುಗಿದ ಕುಂದವಾಡ ಕೆರೆ ತನ್ನ ಜೀವಸೌಂದರ್ಯವನ್ನು ಮತ್ತೆ ಪಡೆಯಲು ದಶಕಗಳೇ ಬೇಕಾಗಬಹುದು. ಶಾಲಾ ಮಕ್ಕಳಿಗೆ ಪರಿಸರ ಪಾಠಶಾಲೆಯಂತಿದ್ದ ಕೆರೆ ತನ್ನ ಕಷ್ಟಕಾಲವ ಕಳೆದು ಜೀವಸೆಲೆ ಚಿಮ್ಮಿಸುತ್ತಿದೆ. ವಿದ್ಯಾರ್ಥಿಗಳಿಗೆ ಒಂದು ಪರಿಸರ ಅಧ್ಯಯನ ಕೇಂದ್ರವಾಗಬೇಕಾದ ಜಾಗವಿದು. ಅಸಂಖ್ಯಾತ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಅಧ್ಯಯನಕ್ಕೆ ಪ್ರಶಸ್ತ ಸ್ಥಳ. ಸುಸ್ಥಿರ ಯೋಜನೆಗಳಿಂದ ಮಾತ್ರ ಇಂತಹ ಜೀವಜಲದ ಆಕರ ಉಳಿಯಲು ಸಾಧ್ಯ. ಕೆರೆಯನ್ನು ಜಲಸಂಗ್ರಹದ ತೊಟ್ಟಿಯನ್ನಾಗಿ ಮಾರ್ಪಡಿಸಿ ಸಿಂಗಾರ ಮಾಡಿದರೆ ಜೀವಸೆಲೆಗೆಲ್ಲಿಯ ನೆಲೆ?

ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರು



ಕೆರೆಯ ಒಡಲಲ್ಲಿ ಪ್ಲಾಸ್ಟಿಕ್ ಹಾಸು

ಪುಟಿದೆದ್ದ ಪ್ರಕೃತಿ

ಕಳೆದ ಎಂಟು ತಿಂಗಳಿನಿಂದ ಹೊಸ ನೀರು ಹರಿಸಲಾಗುತ್ತಿದೆ. ಆದರೆ ಕೆರೆಯಿನ್ನೂ ತುಂಬಿಲ್ಲ. ಪ್ರಕೃತಿ ತನ್ನಲ್ಲಿನ ಜೀವಿಗಳ ಉಳಿವಿಗಾಗಿ ತನ್ನದೇ ದಾರಿ ಕಂಡುಕೊಳ್ಳುತ್ತದೆ. ಸಹಸ್ರಾರು ವರ್ಷಗಳ ಜೀವ ವಿಕಾಸ ಪ್ರಕೃತಿಯ ಸಹಿಷ್ಣುತೆಗೆ ಸಾಕ್ಷಿ. ಬಟಾಬಯಲಾಗಿದ್ದ ಕೆರೆಯ ಅಂಗಳದಲ್ಲಿ ನೀರಿನ ಪಸೆ ಬಂದ ಕೂಡಲೇ ಮಾಯಾನಗರಿಯಂತೆ ಪುಟಿದೆದ್ದ ಜಲಸಸ್ಯಗಳು ಆವರಿಸಿವೆ. ನೀರು ಮತ್ತು ಜಲಸಸ್ಯಗಳನ್ನು ಗಮನಿಸಿದ ಹಕ್ಕಿಗಳ ದಂಡು ಮತ್ತೆ ಕುಂದವಾಡ ಕೆರೆಗೆ ದಾಂಗುಡಿಯಿಟ್ಟಿವೆ. ನೀರಿನ ದಾಹವೇ ಜೀವನದ ಮೂಲ. ದೂರದೂರದಲ್ಲಿದ್ದ ಹಕ್ಕಿಗಳಿಗೆ ಅದ್ಯಾರು ಸೂಚನೆ ಕೊಟ್ಟರೋ ಕಾಣೆ. ಜಲಸಸ್ಯಗಳ ಜೊಂಡಿನಲ್ಲಿ ಮರಿಮಾಡಲು ಸಾವಿರಾರು ಹಕ್ಕಿಗಳು ಆಗಮಿಸಿವೆ. ಮೊದಲಿದ್ದ ಸಣ್ಣ ಮರಗಳಲ್ಲಿ ಹಕ್ಕಿಗಳ ಗೂಡು ನಿರ್ಮಾಣ ಪ್ರಾರಂಭವಾಗಿದೆ. ಇತ್ತೀಚಿನ ಪಕ್ಷಿಗಣತಿ ಪ್ರಕಾರ ಕೇವಲ 52 ಪ್ರಭೇದಗಳು ಕಾಣಿಸಿವೆ. ಅಂದರೆ ಮೊದಲಿದ್ದ ಮೂರನೇ ಒಂದರಷ್ಟು ಪ್ರಭೇದಗಳು ಮಾತ್ರ ಬಂದಿವೆ. ಹಾಗೆಯೇ ಮೊದಲಿದ್ದ ಚಿಟ್ಟೆ ಪ್ರಭೇದಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ರಾಜಶಾಹಿಯ ಕೊನೆಗೊಳಿಸಿದ ಹೋರಾಟಕ್ಕೆ 50

10ನೇ ಪುಟದಿಂದ...

ಎಲಿಗಾರ ತಿಮ್ಮಪ್ಪ ಅವರು ರಾಜ್ಯ ಸೋಷಿಯಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿದ್ದ ಕೆ. ಜಿ. ಮಹೇಶ್ವರಪ್ಪನವರಲ್ಲಿ ಸಂಡೂರು ಸಮಾಜವಾದಿ ಪಕ್ಷದ ಬೆಂಬಲ ಕೇಳಿದರು. ಭೂಮಿ ಸಂಬಂಧಿ ಚಳವಳಿಗಳನ್ನು ರೂಪಿಸುತ್ತಲೇ ಬಂದಿದ್ದ ಸೋಷಿಯಲಿಸ್ಟ್ ಪಾರ್ಟಿ ಇದಕ್ಕೆ ಸ್ಪಂದಿಸಿತು. ಕೆ. ಜಿ. ಮಹೇಶ್ವರಪ್ಪನವರು ರಾಷ್ಟ್ರೀಯ ಅಧ್ಯಕ್ಷರಾದ ಜಾರ್ಜ್ ಫರ್ನಾಂಡಿಸರ ಬಳಿ ಚರ್ಚಿಸಿ, ಸಂಡೂರಿನಲ್ಲಿ ರೈತರ ಚಳವಳಿಯನ್ನು ರೂಪಿಸುವುದಾಗಿ ತೀರ್ಮಾನಿಸಲಾಯಿತು. 1973ರ ಜನವರಿ 28ರಲ್ಲಿ ಸೋಷಿಯಲಿಸ್ಟ್ ಪಾರ್ಟಿಯ ರಾಷ್ಟ್ರೀಯ ಅಧ್ಯಕ್ಷರಾದ ಜಾರ್ಜ್ ಫರ್ನಾಂಡಿಸ್ ಪೂರ್ವಭಾವಿಯಾಗಿ ಸಂಡೂರಿನಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕೆ.ಜಿ. ಮಹೇಶ್ವರಪ್ಪನವರು ಈ ದಿನವನ್ನು ನೆನಪಿಸಿಕೊಳ್ಳುತ್ತ, 'ಜಾರ್ಜ್ ಅಂದು ಗುಡುಗಿದ್ದರು. ಸಂಡೂರು ರಾಜರು ಜನರನ್ನು ಹೇಗೆ ಮೋಸಗೊಳಿಸುತ್ತಾ ಇದ್ದಾರೆ ಎಂಬುದನ್ನು ಭಾಷಣದಲ್ಲಿ ಹೇಳಿ ರೈತರೆಲ್ಲಾ ಒಂದಾಗಿ ಅಂತ ಕರೆಕೊಟ್ರು. ಆ ದಿನ ಸಂಡೂರಿನ ಇತಿಹಾಸದಲ್ಲಿಯೇ ಮಹತ್ವದ್ದು' ಎನ್ನುತ್ತಾರೆ.

1973ರ ಮಾರ್ಚ್ 3ರಂದು ಬೆಂಗಳೂರಿನಲ್ಲಿ ಸೋಷಿಯಲಿಸ್ಟ್ ಪಕ್ಷದ ಕಾರ್ಯಕರ್ತರು ಮತ್ತು ಸಂಡೂರಿನ ರೈತರು 'ಅಂದು ಕಾಗೋಡು ಇಂದು ಸಂಡೂರು' ಎಂಬ ಘೋಷಣೆ ಕೂಗಿ ಧರಣಿ ಮಾಡಿದರು. ಈ ಮೆರವಣಿಗೆಯಲ್ಲಿ ಕೆ. ಜಿ. ಮಹೇಶ್ವರಪ್ಪ, ಜೆ.ಎಚ್. ಪಟೇಲ್, ಬಳ್ಳಾರಿ ಜಿಲ್ಲೆಯ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದ ಎಂ.ಪಿ. ಪ್ರಕಾಶ್, ಯಜಮಾನ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪ, ಎಸ್. ಎಸ್. ಕುಮುಟ, ಕಾಗೋಡು ತಿಮ್ಮಪ್ಪ ಮುಂತಾದ ಪ್ರಮುಖರನ್ನೊಳಗೊಂಡ ನೂರಕ್ಕೂ ಹೆಚ್ಚು ಸಮಾಜವಾದಿ ಪಕ್ಷದ ಕಾರ್ಯಕರ್ತರೂ, ಸಂಡೂರಿನ ರೈತರೂ ಅತ್ಯಂತ ಉತ್ಸುಕತೆಯಿಂದ ಭಾಗವಹಿಸಿದ್ದರು. ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ವಿಧಾನಸೌಧದಿಂದ ಚಳವಳಿಗಾರರ ಬಳಿಗೆ ಬಂದು ಸಂಡೂರು ಚಳವಳಿ ಕುರಿತ ಮನವಿ ಸ್ವೀಕರಿಸಿದ್ದರು.

ಈ ಮೊದಲು ನಿರ್ಧರಿಸಿದಂತೆ ಹೋರಾಟವನ್ನು 1973ರ ಸೆಪ್ಟೆಂಬರ್ 10ರಂದು ಸಂಡೂರಿನಲ್ಲಿ ಆರಂಭಿಸಲಾಯಿತು. ರಾಜ್ಯ ಸಮಾಜವಾದಿ ಪಕ್ಷ ಹಾಗೂ ಸಂಡೂರು ರೈತ ಸಂಘಟನೆಗಳ ಜಂಟಿ ನೇತೃತ್ವದಲ್ಲಿ ಅಂದಿನ ಬೆಳಿಗ್ಗೆ ಮೆರವಣಿಗೆ ನಡೆಯಿತು. ಕೆ.ಜಿ. ಮಹೇಶ್ವರಪ್ಪ ಈ ಸಂದರ್ಭವನ್ನು ನೆನಪಿಸಿಕೊಳ್ಳುತ್ತ 'ಸಂಡೂರಿನ ಬಸ್‌ಸ್ಟ್ಯಾಂಡ್‌ನಲ್ಲಿ ಒಂದು ಬಹಳ ದೊಡ್ಡ ಬಹಿರಂಗ ಸಭೆ ಮಾಡಿದ್ವಿ. ಇಲ್ಲಿ ಸಾರ್ವಜನಿಕ ಸಭೆಗಳು ಆಗ್ತಾ ಇರ್ಲಿಲ್ಲ. ಆ ರಾಜರದು ಎಷ್ಟರ ಮಟ್ಟಿಗೆ ದಬ್ಬಾಳಿಕೆ ಅಂದ್ರೆ ಒಂದು ಸಾರ್ವಜನಿಕ ಸಭೆ ಆಗ್ಲಿ, ಅವರ ವಿರುದ್ಧ ಮಾತಾಡೋದಾಗ್ಲಿ ಇಲ್ಲಿ ಸಾಧ್ಯ ಇರ್ಲಿಲ್ಲ. ನಮ್ಮ ಬಹಿರಂಗ ಸಭೆ ಪ್ರಾರಂಭವಾಗುತ್ತಲೂ ರಾಜವಂಶದ ಕಡೆಯವರು ಈ ಸಭೆಗೆ ಯಾರು ಪರ್ಮಿಷನ್ ಕೊಟ್ರು ಅಂತ್ಹೇಳಿ... ಅದ್ಹೆಂಗೆ ಮಾಡ್ತೀರಿ ಮಾಡ್ರಿ... ಎಂದು ಧಮಕಿ ಹಾಕಿದ್ರು. ಇದ್ಯಾವುದನ್ನೂ ಲೆಕ್ಕಿಸದೆ ನಾವು ಸಭೆಯನ್ನು ಮಾಡಿದ್ವಿ' ಎನ್ನುತ್ತಾರೆ.

ಹೀಗೆ ಸೆಪ್ಟೆಂಬರ್ 10ರಿಂದ ಅಕ್ಟೋಬರ್ 26ರ ತನಕ 46 ದಿನ ನಡೆದ ಹೋರಾಟವನ್ನು ತಾತ್ಕಾಲಿಕವಾಗಿ ಮುಂದೂಡಲಾಯಿತು. ಒಟ್ಟು 1036 ಸತ್ಯಾಗ್ರಹಿಗಳು ಪಿಕೆಟಿಂಗ್ ಭೂ ಆಕ್ರಮಣಗಳಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ರಾಜಮನೆತನದ ಯಾವುದೇ ವೈಯಕ್ತಿಕ ಆಸ್ತಿಗೆ ಧಕ್ಕೆಯುಂಟು ಮಾಡದೆ, ರಾಜಮನೆತನ ವಶಪಡಿಸಿಕೊಂಡಿದ್ದ ನಂದಿಹಳ್ಳಿ ರಾಘಾಪುರ ಮತ್ತು ಸಿದ್ದಾಪುರ ಹಳ್ಳಿಗಳ ಹೊಗೆಸೊಪ್ಪಿನ ಜಮೀನುಗಳಲ್ಲಿ ಇನಾಮು ಭೂಮಿಯಲ್ಲಿ ಮಾತ್ರ ಸತ್ಯಾಗ್ರಹಿಗಳು ಒಟ್ಟು ಎಂಟು ಬಾರಿ ಭೂ ಆಕ್ರಮಣ ಚಳವಳಿ ನಡೆಸಿದರು.

ಹೋರಾಟದಲ್ಲಿ ದಾಸೋಹ ಕಲ್ಪನೆಯಿತ್ತು. ಹಳ್ಳಿಗಳಿಂದ ಹೋರಾಟಗಾರರಿಗೆ ಜೋಳ, ರಾಗಿ, ನವಣಕ್ಕಿ, ನೆಲ್ಲಕ್ಕಿ ಮುಂತಾದ ದವಸ-ಧಾನ್ಯಗಳನ್ನು ರೈತರು ತರುತ್ತಿದ್ದರು. ವಾರದ ಸಂತೆ, ದಿನ ಸಂತೆಗೆ ಹೋಗಿ ತರಕಾರಿಯನ್ನು ಎತ್ತುತ್ತಿದ್ದರು. ಎಲ್ಲರೂ ಕೂಡಿಯೇ ಊಟ ಮಾಡುತ್ತಿದ್ದರು. ಈ ಆಂದೋಲನದಲ್ಲಿ ಅನೇಕ ಮಹಿಳೆಯರು ತಮ್ಮ ಕೂಸುಗಳ ಸಮೇತ ಪಿಕೆಟಿಂಗ್ ಭೂ ಹೋರಾಟದ ಆಕ್ರಮಣಗಳಲ್ಲಿ ಭಾಗವಹಿಸಿ ಬಂಧಿತರಾದದ್ದು ಗಮನಾರ್ಹ. ಹರಿಜನ ನಾಯಕಿ ಬುಡ್ಡಮ್ಮ, ಮಾರಮ್ಮ, ಮೇದಾರ ಹುಲ್ಗೆಮ್ಮ, ಮೇದಾರ ಭೀಮಕ್ಕ, ಬೆಂಗಳೂರಿನ ಸೋಹನ್ ಕುಮಾರಿ, ಭುಜಂಗನರದ ವಡ್ಡನಕಟ್ಟೆ ಶಾಂತಮ್ಮ, ಎನ್. ಎಂ. ಶಿವದೇವಮ್ಮ, ಬಿಹಾರದ ನಾಯಕಿ ಸಂತೋಷಿತಿಗಾ, ಮಹಾರಾಷ್ಟ್ರದ ಸಮಾಜವಾದಿ ನಾಯಕಿ ಮುಷಲ್ ಘೋರೆ ಇವರೆಲ್ಲ ಸ್ತ್ರೀ ಶಕ್ತಿಯಾಗಿ ಹೋರಾಟದಲ್ಲಿ ಪ್ರತಿನಿಧಿಸಿದರು. 46 ದಿನಗಳ ಭೂ ಹೋರಾಟ ಶಾಂತಿಯುತವಾಗಿಯೇ ನಡೆದರೂ ಪೊಲೀಸರ ದೌರ್ಜನ್ಯದಿಂದಾಗಿ ಕೊನೆಗೆ



ಜಾರ್ಜ್ ಫರ್ನಾಂಡಿಸ್



ಕೆ. ಜಿ. ಮಹೇಶ್ವರಪ್ಪ

ಅಹಿಂಸಾತ್ಮಕ ರೂಪ ತಾಳಿತು.

ಹೋರಾಟದ ಫಲವಾಗಿ ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ತಂದಿದ್ದರಿಂದ ಕುಮಾರಸ್ವಾಮಿ ದೇವಸ್ಥಾನಕ್ಕೆ ಸೇರಿದ 8,029 ಎಕರೆ ಭೂಮಿ ರೈತರಿಗೆ ಹಂಚಲು ಅರ್ಜಿ ಆಹ್ವಾನಿಸಲಾಯಿತು. ಯಶವಂತ ರಾವ್ ಘೋರ್ಪಡೆಯವರ ಕುಮಾರಸ್ವಾಮಿ ದೇವಸ್ಥಾನದ ವಂಶಪಾರಂಪರ್ಯ ಧರ್ಮದರ್ಶಿತ್ವ ರದ್ದಾಯಿತು. ರಾಜಮನೆತನವು 2,000 ಎಕರೆ ಅರಣ್ಯ ಭೂಮಿಯಲ್ಲಿ ತಮಗಿದ್ದ ಬೇಟೆ ಹಕ್ಕನ್ನು ಬಿಟ್ಟುಕೊಟ್ಟಿತು. ಈ ತನಕ ಹಂತ ಹಂತವಾಗಿ ಭೂನ್ಯಾಯ ಮಂಡಳಿಯಲ್ಲಿ ಇನಾಂ ರದ್ದತಿ ಕಾಯ್ದೆ ಅಡಿ 7,176 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈ ಅರ್ಜಿಗಳ ಭೂಮಿಯ ಒಟ್ಟು ವಿಸ್ತೀರ್ಣ 39,868 ಎಕರೆ. ಆದರೆ ಅರ್ಜಿದಾರರ ಪರವಾಗಿ ತೀರ್ಮಾನವಾದದ್ದು 3,448 ಅರ್ಜಿಗಳು. ಇದರಿಂದಾಗಿ ಈ ತನಕ 20,180 ಎಕರೆ ಇನಾಮು ಭೂಮಿ ಸಂಡೂರು ರೈತರಿಗೆ ದೊರೆತಿದೆ.

ಹೋರಾಟದ ರೂವಾರಿಗಳಲ್ಲಿ ಪ್ರಮುಖರಾದ ಕಾಗೋಡು ತಿಮ್ಮಪ್ಪ 'ಕಾಗೋಡು ಚಳವಳಿಯ ಸಂದರ್ಭಕ್ಕೆ ಕಾಂಗ್ರೆಸ್ ಹೋರಾಟದ ಬಗ್ಗೆ ತಳೆದ ನಿಲುವು ತುಂಬ ಕಠೋರವಾಗಿತ್ತು. ಕೊನೆಗೂ ಸ್ಪಂದಿಸಲಿಲ್ಲ. ಆದರೆ ಸಂಡೂರು ಹೋರಾಟಕ್ಕೆ ಕಾಂಗ್ರೆಸ್ ಸರ್ಕಾರ ತಡವಾಗಿಯಾದರೂ ಸ್ಪಂದಿಸಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವರಾಜ ಅರಸರು ಇರುವ ಕಾರಣಕ್ಕೆ ಸಂಡೂರಿನ ಜನರಿಗೆ ಭೂಮಿ ಸಿಗುವಂತಾಯಿತು' ಎನ್ನುತ್ತಾರೆ. ಸ್ವಾತಂತ್ರ್ಯಾನಂತರ ಈ ಹೋರಾಟ ರಾಜಶಾಹಿಯನ್ನು ಕೊನೆಗೊಳಿಸಿದ್ದು ಚಾರಿತ್ರಿಕ ಸಂಗತಿಯಾಗಿ ನೆನೆಯಬೇಕಿದೆ.

ಮುನ್ನೋಟ 10-09-2023 ರಿಂದ -16-09-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅಪೇಕ್ಷಿತ ವಯಸ್ಕರಿಗೆ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆಗಳಿವೆ. ಕೃಷಿಗಾಗಿ ಮಕ್ಕಳು ಹೆಚ್ಚಿನ ಬಂಡವಾಳ ತೊಡಗಿಸಬಹುದು. ಕುಟುಂಬದ ಸದಸ್ಯರೊಡನೆ ಇರುವಾಗ ನಿಮ್ಮ ಬಾಲ್ಯದ ನೆನಪುಗಳನ್ನು ಜ್ಞಾಪಿಸಿಕೊಳ್ಳುವಿರಿ. ಹೊಸ ವ್ಯಕ್ತಿಯ ಬಗ್ಗೆ ಒಮ್ಮೆಲೇ ನಿಮಗನ್ನಿಸಿದ ತೀರ್ಮಾನವನ್ನು ತೆಗೆದುಕೊಳ್ಳಬೇಡಿ. ಸಕಾರಾತ್ಮಕ ನಡವಳಿಕೆಗಳನ್ನು ಬೆಳೆಸಿಕೊಳ್ಳುವುದು ಉತ್ತಮ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಚಲನಚಿತ್ರ ಕಾರ್ಮಿಕರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ವಿದ್ಯಾರ್ಥಿಗಳ ಪರಿಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ಅವಿವಾಹಿತರಿಗೆ ಆಕಸ್ಮಿಕವಾಗಿ ಪ್ರೇಮ ಸಂಬಂಧಗಳು ಬರಬಹುದು. ಎಲ್ಲಾ ರೀತಿಯ ಕೆಲಸಗಳಿಗೆ ಇತರರ ಮೇಲೆ ಅವಲಂಬಿಸುವ ಬದಲು ನೀವೇ ಆಲೋಚನೆ ಮಾಡಿ ಮಾಡುವುದು ಒಳ್ಳೆಯದು. ಉದ್ಯೋಗದಲ್ಲಿ ಗೊಂದಲಗಳಿದ್ದರೂ ಕೂಡ ಆರ್ಥಿಕ ಸಂಪಾದನೆಗೆ ತೊಂದರೆ ಇರುವುದಿಲ್ಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಿನಿಮಾ ನಟರಿಗೆ ಶುಭ ಸುದ್ದಿ ಇರುತ್ತದೆ. ಅವರಿಗೆ ಬರುವ ಆದಾಯ ಹೆಚ್ಚುವ ಸಾಧ್ಯತೆ ಇದೆ. ಸಂಗೀತಗಾರರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಕೆಲವು ಸರ್ಕಾರಿ ಕೆಲಸಗಾರರಿಗೆ ಮೇಲಾದಾಯ ಅವಕಾಶ ದೊರೆಯುತ್ತದೆ. ಮಕ್ಕಳ ಆರೋಗ್ಯ ವ್ಯತ್ಯಾಸಗಳು ನಿಮ್ಮನ್ನು ಕಾಡುತ್ತವೆ. ಮಕ್ಕಳ ಒಳಿತಿಗಾಗಿ ತೆಗೆದುಕೊಂಡ ಕಠಿಣ ನಿರ್ಧಾರಗಳು ಈಗ ಉತ್ತಮ ಫಲ ಕೊಡುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಒಂದು ರೀತಿಯ ಸಂತೋಷ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆಯನ್ನು ಕಾಣಬಹುದು. ನಿಮ್ಮ ಬಂಧುಗಳ ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ವ್ಯಾಪಾರ ವ್ಯವಹಾರಗಳಿಂದ ಲಾಭ ಬರುವ ಸಾಧ್ಯತೆ ಇದೆ. ವಿವಾದಾತ್ಮಕ ವಿಷಯಗಳ ಬಗ್ಗೆ ಹೆಚ್ಚು ಮಾತನಾಡದಿರುವುದು ಬಹಳ ಒಳ್ಳೆಯದು. ಹಣಕಾಸಿನ ಹೂಡಿಕೆಯ ಬಗ್ಗೆ ಮನೆಯವರೊಡನೆ ಚರ್ಚಿಸಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ತೋಟದ ಬೆಳೆಗಳಿಂದ ಉತ್ತಮ ಆದಾಯವನ್ನು ಕಾಣಬಹುದು. ಆತ್ಮಾಭಿಮಾನವು ಹೆಚ್ಚಾಗಿರುತ್ತದೆ. ಭಾವನಾತ್ಮಕ ಆಲೋಚನೆಗಳನ್ನು ಬದಿಗಿರಿಸಿ ವಾಸ್ತವ ಸ್ಥಿತಿಯ ಕಡೆ ಗಮನಹರಿಸಿ. ಸಹೋದ್ಯೋಗಿಗಳಲ್ಲಿ ನಿಮ್ಮ ಅಭಿವೃದ್ಧಿಯನ್ನು ಸಹಿಸಿದವರು ಇರುತ್ತಾರೆ ಎಚ್ಚರ. ಗಣ್ಯ ವ್ಯಕ್ತಿಗಳನ್ನು ಹತ್ತಿರದಿಂದ ನೋಡುವ ಭಾಗ್ಯ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅಡೆತಡೆಗಳನ್ನು ಕಾಣಬಹುದು. ಸಿಹಿ ತಿಂಡಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ಮನೋವಿಜ್ಞಾನದ ವಿದ್ಯಾರ್ಥಿಗಳಿಗೆ ಹೆಚ್ಚು ಮುನ್ನಡೆ ಇರುತ್ತದೆ. ಗುರು ಹಿರಿಯರ ಸೂಚನೆಗಳಿಗೆ ಬೆಲೆ ಕೊಟ್ಟು ಮುನ್ನಡೆಯುವುದು ನಿಮಗೆ ಒಳ್ಳೆಯದು. ಇದರಿಂದ ನಿಮ್ಮ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒಳಿತಾಗುತ್ತದೆ. ಕೆಲಸದ ಮೇಲೆ ಪರಸ್ಥಳಕ್ಕೆ ಹೋಗಿ ಬರಬೇಕಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಪಕ್ಕದಲ್ಲಿರುವವರೇ ನಿಮ್ಮನ್ನು ವಂಚಿಸಬಹುದು. ಮನೆಯಲ್ಲಿ ಮಂಗಳ ಕಾರ್ಯಗಳು ಆಗಬಹುದು. ಉದ್ಯೋಗ ಸ್ಥಳದಲ್ಲಿನ ಏರಿಳಿತಗಳಿಂದ ಆರ್ಥಿಕ ಸ್ಥಿತಿಯಲ್ಲಿ ವ್ಯತ್ಯಾಸಗಳಾಗುತ್ತವೆ. ನೀವಾಡಿದ ಮಾತುಗಳಿಂದಲೇ ನೀವು ಸಿಕ್ಕಿಬೀಳುವ ಸಾಧ್ಯತೆ ಇವೆ. ವಾಹನ ರಿಪೇರಿ ಮಾಡುವವರಿಗೆ ಕೈತುಂಬಾ ಕೆಲಸಗಳಿರುತ್ತವೆ. ಕೃಷಿಗೆ ಸಹಾಯವಾಗುವ ಯಂತ್ರಗಳನ್ನು ತಯಾರಿಸುವವರಿಗೆ ಹೆಚ್ಚಿನ ಲಾಭವಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಸಂಗೀತ ಕಲೆಯ ಬಗ್ಗೆ ಹೆಚ್ಚಿನ ಅಭಿರುಚಿ ಮೂಡುತ್ತದೆ ಹಾಗೂ ಈ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡುವ ಯೋಗವಿದೆ. ನಿಮ್ಮ ಸಾಮರ್ಥ್ಯದ ಬಗ್ಗೆ ನಿಮಗೆ ವಿಶ್ವಾಸವಿರಲಿ. ಕೆಲವು ನ್ಯಾಯವಾದಿಗಳಿಗೆ ವಿದೇಶಿ ಕಂಪನಿಗಳ ಸಹಯೋಗ ದೊರೆಯುತ್ತವೆ. ಮಕ್ಕಳ ನಡವಳಿಕೆಯ ಬಗ್ಗೆ ಹೆಚ್ಚು ಚಿಂತೆ ಉಂಟಾಗುತ್ತದೆ. ನಿಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾವಹಿಸುವುದು ಉತ್ತಮ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಹೆಚ್ಚು ಜನಸಂಪರ್ಕದಿಂದ ಹೆಚ್ಚಿನ ಪ್ರಚಾರ ಸಿಗುವುದು. ಕೆಲವೊಂದು ಜವಾಬ್ದಾರಿಯುತ ಕಾರ್ಯಗಳು ನಿಮ್ಮ ಮುಂದಾಳತ್ವದಲ್ಲಿ ನಡೆಯುತ್ತವೆ. ಸೃಜನಶೀಲರಿಗೆ ಅವರ ಭಾವನೆಯನ್ನು ತಿಳಿಸಲು ಉತ್ತಮ ವೇದಿಕೆ ಪ್ರಾಪ್ತಿಯಾಗುತ್ತದೆ. ಉದ್ಯೋಗದಲ್ಲಿ ಬದಲಾವಣೆಯ ಗಾಳಿ ಬೀಸುತ್ತದೆ. ಉದ್ಯೋಗಿಗಳಿಗೆ ಹೆಚ್ಚಿನ ಪರಿಶ್ರಮದಿಂದ ಹೆಚ್ಚು ಆದಾಯ ಸಿಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಉದ್ದಿಮೆಯ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಹೆಚ್ಚಾಗಿ ಅದಕ್ಕೆ ತಕ್ಕ ಗೌರವ ಸಿಗುತ್ತದೆ. ಲೇಖಕರಿಗೆ ಹೊಸ ಕಾದಂಬರಿ ಬರೆಯುವ ಬಗ್ಗೆ ಆಸಕ್ತಿ ಹೆಚ್ಚುತ್ತದೆ. ಯೋಜಿತ ಕೆಲಸಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಪ್ರಯತ್ನಪಡಿ. ಬೆಳ್ಳಿಯ ವಸ್ತುಗಳ ಮಾರಾಟದಿಂದ ಆದಾಯ ಹೆಚ್ಚುತ್ತದೆ. ಆಕಸ್ಮಿಕ ಧನ ಲಾಭವಾಗುವ ಸಾಧ್ಯತೆ ಇದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಹೆಚ್ಚಿನ ಎಚ್ಚರ ಇರಲಿ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆಡಳಿತ ವ್ಯವಹಾರಕ್ಕಾಗಿ ಸೂಕ್ತ ವ್ಯಕ್ತಿಯನ್ನು ನೇಮಿಸಿಕೊಳ್ಳುವುದು ಒಳ್ಳೆಯದು. ವಿದ್ಯಾರ್ಥಿಗಳು ಪಟ್ಟ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ಯುವಕರು ಆಕಸ್ಮಿಕವಾಗಿ ಉದ್ಯೋಗ ಕಳೆದುಕೊಳ್ಳುವ ಸಾಧ್ಯತೆ ಇದೆ. ದಿನಸಿ ವ್ಯಾಪಾರಿಗಳಿಗೆ ಹೊಸ ಶಾಖೆಯನ್ನು ತೆರೆಯುವ ಅವಕಾಶ ಸಿಗುತ್ತದೆ. ವಿದೇಶಿ ವಸ್ತುಗಳ ಖರೀದಿಗಾಗಿ ಧನವ್ಯಯ ಆಗುತ್ತದೆ. ಜೀವ ರಕ್ಷಕ ಔಷಧಿ ಮಾರಾಟಗಾರರಿಗೆ ಹೆಚ್ಚು ವ್ಯಾಪಾರ ನಡೆದು ಲಾಭವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಬಹಳ ದಿನಗಳಿಂದ ಹುಡುಕುತ್ತಿದ್ದ ವಸ್ತುವೊಂದು ದೊರೆಯುತ್ತದೆ. ಎಲ್ಲರ ಜೊತೆ ಸಂತೋಷದಿಂದ ಬೆರೆಯುವುದನ್ನು ಅಳವಡಿಸಿಕೊಳ್ಳಬೇಕು. ಬಂಧುಗಳ ಜೊತೆ ಸಂಬಂಧ ವೃದ್ಧಿ ಮಾಡಿಕೊಂಡು ಅವರ ಸಹಾಯಕ್ಕೆ ನಿಲ್ಲುವುದು ಒಳ್ಳೆಯದು. ಮಕ್ಕಳ ವ್ಯಾಸಂಗದ ಬಗ್ಗೆ ಸಂಬಂಧಿಕರಲ್ಲಿ ಚರ್ಚಿಸಿದಾಗ ಉತ್ತಮ ಮಾಹಿತಿ ದೊರೆಯುತ್ತದೆ. ನಿಂತಿದ್ದ ವಿದ್ಯೆಗಳನ್ನು ಈಗ ಮುಂದುವರಿಸಬಹುದು.

ಪದಬಂಧ 2806



ಮೇಲಿನಿಂದ ಕೆಳಕ್ಕೆ

1. ಇದು ಇಂದಿನದಲ್ಲ, ಅನುಷ್ಠಾನದಲ್ಲಿದೆ ಆದರೆ ಬಹಳ ಪುರಾತನವಾದದ್ದು 4
2. ಲಂಬೋದರನದು ಹಣದೊಡತಿಯ ಕೈ 5
3. ಎಲ್ಲರೂ ಒಂದೇ ಎಂಬ ಆಂತರಿಕ ಅನಿಸಿಕೆ 4
4. ಎಲ್ಲೆಲ್ಲೂ ಚೆಲ್ಲುವ ಆದಿತ್ಯನ ತೇಜಸ್ಸು 4
6. ಆಗಾಗ್ಗೆ ಏರುವ ಕಾಯಿಪಲ್ಯೆಗಳ ರೇಟು 6
8. ನಮ್ಮ ರಾಜ್ಯ ಯಾವಾಗಲೂ ಒಂಭತ್ತು ರೀತಿಯಲ್ಲಿ ಹೊಸದಾಗಿದೆ 6
14. ನದಿಗಳು ಸೇರುವ ಸ್ಥಳದ ಒಡೆಯ 5
15. ಭರತವರ್ಷ ಭರತಖಂಡವಿರುವ ಸಮುದ್ರ ಮಧ್ಯದ ನಡುಗಡ್ಡೆ 4
16. ತ್ರೇತಾ, ದ್ವಾಪರಗಳೆಲ್ಲಾ ಮುಗಿದ ನಂತರ ಇದು ನಮ್ಮ ಕಾಲ, ಕಲಿಕೆಯ ಮಹಾಕಾಲ 4
18. ನಕುಲನ ಜೊತೆಯಿದ್ದ ಪೂಜಾ ಪುರುಷ 4

ಎಡದಿಂದ ಬಲಕ್ಕೆ

1. ಒಡಲೆಲ್ಲಾ ಹಸಿರಾಗಿರುವ ನಮ್ಮ ಭೂಮಿತಾಯಿ ವೈಭವೋಪೇತವಾಗಿ ಹೀಗೆ 5
3. ಸುಪ್ತ ಸಾಗರವ ತಲುಪಲು ಈ ಏಳು ಸಮುದ್ರಗಳ ದಾಟಬೇಕೆ? 5
5. ಇಂಡಿಯಾ ಅಂದರೆ ಇದು, ನಮ್ಮ ದೇಶ! 3
7. ಹೇಗೆ ಮಾಡಿದರೂ ಇದು ಮನಸ್ಸಿನ ನಮಸ್ಕಾರ 3
9. ವ್ಯಾಜ್ಯದ ಕೀಲಿ ಹಿಡಿದಿರುವ ನ್ಯಾಯವಾದಿ ಹಿಂದುಮುಂದು 3
10. ಪಾವತಿಸಿದ ಹಣಕ್ಕೆ ಸಿಗುವ ಚೀಟಿ 3
11. ಸಮಯಕ್ಕೆ ಸರಿಯಾಗಿ ಬಂದು ಪಕ್ಷದ ಪರವಾಗಿ ಸುದ್ದಿ ಹೇಳುವವ 3
12. ಬದುಕಿನ ಕುದುರೆಬಂಡಿ 3
13. ಕುದುರೆ ಸವಾರನ ಕಾಲ್ತಡೆ 3
14. ಸಿರಿಯಿಂದ ತುಂಬಿದ ಸಮೃದ್ಧಿ 3
15. ಜೀವನದ ಗೊಜಲಿನಲ್ಲಿ ಪರಿಸ್ಥಿತಿಯ ಆಟ 3
16. ತಲೆಯ ಮೇಲೆ ಹೂವಿನ ಕಳಶವೇರಿಸುವ ಬೆಂಗಳೂರಿನ ಉತ್ಸವ 3
17. ಜೋರೋ ಜೋರು ವಿಪರೀತ ಸ್ಪೀಡು 3
19. ಸಂಸ್ಕೃತದ ಬಾಳೆ 3
20. ಪರಿಣಾಮ ಲೆಕ್ಕಿಸದೆ ಪದ ಬಳಕೆಯ ಹೊಸ ಪ್ರಯತ್ನ 5
21. ಬೆಳ್ಳಿ ಹಬ್ಬದ ಸಂಭ್ರಮ 5

ಪದಬಂಧ ಉತ್ತರ -2805

ಮೇಲಿಂದ ಕೆಳಕ್ಕೆ

1.ಅಣೋರಣೀಯ 2.ಸೆಣಸು 3.ಮರುತಸಖ 4.ಹರಿನಾಮ 5.ವರ್ಧನಾ 7.ಸಪ್ತಶತಿ 9.ಮುಖ್ಯಮಂತ್ರಿ 10.ರಮಣ 11.ಶಿರಸಿ 13.ಪ್ರಾಣಿಜಗತ್ತು 15.ವಂಚಕ 16.ಕೆಡಕುತನ 17.ರಾಣಿವಾಸ 19.ರದನ

ಎಡದಿಂದ ಬಲಕ್ಕೆ


1.ಅತ್ತೆಸೊಸೆ 3.ಮಧುಮೇಹ 5.ವಸುದೇವಸುತ 6.ಸರಿಸಮ 8.ಯಮುನಾತೀರ 11.ಶಿಖ 12.ಮಥುರ 13.ಪ್ರಾಣ 14.ಸಿರಿವಂತಿಕೆ 17.ರಾತ್ರಿರಾಣಿ 18.ಜಗದ್ಧೋದ್ಧಾರಕ 20.ಸರಿಹೊತ್ತು 21.ನಮ್ಮಜನ

ಮರಳಿ ಐಡಿಎಸ್ ಗೂಡಿಗೆ!

ರೂಪ ಹಾಸನ

ಎಸ್.ಆರ್.ಹಿರೇಮಠ ಅವರ ರಚನಾತ್ಮಕ ಪ್ರಯೋಗಗಳ ಕುರಿತು ಲೇಖಕಿ ರೂಪ ಹಾಸನ ಅವರು ನಿರೂಪಿಸಿರುವ 'ಮಹಾಸಂಗ್ರಾಮಿ' ಕೃತಿ ಸೆಪ್ಟೆಂಬರ್ 10ರಂದು ಬಿಡುಗಡೆಯಾಗುತ್ತಿದೆ. ಅದರಿಂದ ಆಯ್ದ 'ಮರಳಿ ಐಡಿಎಸ್ ಗೂಡಿಗೆ!' ಅಧ್ಯಾಯದ ಒಂದು ಭಾಗ...

ತುರ್ತು ಪರಿಸ್ಥಿತಿ ವಿರುದ್ಧದಾಗಿನ ಒಂದೂ ಮುಕ್ಕಾಲು ವರ್ಷದ ಅವಿರತ ಚಳವಳಿ, ಹೋರಾಟಗಳು ಒಂದು ದಡಕ್ಕೆ ಬಂದು ಮುಟ್ಟಿದ್ದೂ ಆಯ್ತು, 'ಇಂಡಿಯನ್ಸ್ ಫಾರ್ ಡೆಮಾಕ್ರಸಿ' [ಐಎಫ್‌ಡಿ] ಯ ವಿಸರ್ಜನೆ ಕೂಡ ಆಯ್ತು. ಈಗೊಮ್ಮೆ ಹಿಂತಿರುಗಿ ನೋಡೋದಾದರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಮ್ಮ ಪಾತ್ರವನ್ನು ಅವಲೋಕನ ಮಾಡಿಕೊಳ್ಳುವಾಗ, ನನಗೆ ಅನೇಕ ವಿಷಯಗಳು ನೆಮ್ಮದಿಯನ್ನ ತರ್ತವೆ. ಏಕೆಂದರೆ, ತುರ್ತು ಪರಿಸ್ಥಿತಿ ಘೋಷಣೆಯಾದ ಕ್ಷಣದಿಂದ ಹಿಡಿದು ಅದರ ಅಂತ್ಯ ಕಾಣೂವರೆಗೆ ನಾವು ಬಿಡದೆ ಹೋರಾಟ ಮಾಡುತ್ತಲೇ ಇದ್ದೆವು. ಇಂಡಿಯನ್ಸ್ ಫಾರ್ ಡೆಮಾಕ್ರಸಿ, ದಿ ಫ್ರೀ ಜೆ.ಪಿ. ಕ್ಯಾಂಪೇನ್ ಮತ್ತು ಕಮಿಟಿ ಫಾರ್ ಫ್ರೀಡಂ ಇನ್ ಇಂಡಿಯಾ ಸಂಘಟನೆಗಳು- ತುರ್ತು ಪರಿಸ್ಥಿತಿ ವಿರುದ್ಧವಾಗಿ ಪ್ರಬಲ ಜನಸಂಘಟನೆಯನ್ನ ಮಾಡಿದ್ದವು. ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿಪ್ರಾಯ ರೂಪಿಸುವಲ್ಲಿ ಅವಿರತ ಶ್ರಮಿಸಿದ್ದವು. ಇವು ಮೂರೂ ಸಂಘಟನೆಗಳು ಅನೇಕ ಪ್ರತಿಭಟನಾ ಮೆರವಣಿಗೆ, ಧರಣಿ, ಕಾರ್ಯಕ್ರಮಗಳನ್ನ ನಿರಂತರವಾಗಿ ಆಯೋಜಿಸಿದ್ದವು. ನಮ್ಮ ಇಂಡಿಯನ್ಸ್ ಫಾರ್ ಡೆಮಾಕ್ರಸಿ, ವಾಷಿಂಗ್ಟನ್ ಡಿಸಿ, ನ್ಯೂಯಾರ್ಕ್, ಶಿಕಾಗೋ, ಹಾರ್ಟ್‌ಫೋರ್ಡ್ ಮತ್ತೆ ಅಮೆರಿಕದ ಅನೇಕ ನಗರಗಳಲ್ಲಿ ರಾಷ್ಟ್ರೀಯ ವಿಚಾರಸಂಕಿರಣಗಳನ್ನು ನಡೆಸಿ, ಜನರಲ್ಲಿ ತುರ್ತು ಪರಿಸ್ಥಿತಿಯ ಕರಾಳತೆಯನ್ನ ಮನದಟ್ಟು ಮಾಡಿತ್ತು. ಮೊದಲಿಗೆ ದಿ ಫ್ರೀ ಜೆ.ಪಿ. ಕ್ಯಾಂಪೇನ್ 'ಸ್ವರಾಜ್' ಹೆಸರಿನ ಸುದ್ದಿಪತ್ರವನ್ನ ಹೊರತಂದಿತು. ನಿಮಗೆ ತಿಳಿದಿರೋಹಂಗೆ ನಮ್ಮ ಇಂಡಿಯನ್ಸ್ ಫಾರ್ ಡೆಮಾಕ್ರಸಿ, 'ಇಂಡಿಯನ್ ಒಪೀನಿಯನ್' ಪತ್ರಿಕೆ ಹೊರತಂದಿತು. ಈ ಪತ್ರಿಕೆಗಳ ಓದುಗರು ಕೇವಲ ಭಾರತೀಯರಷ್ಟೇ ಆಗಿರಲಿಲ್ಲ! ಸ್ವಾತಂತ್ರ್ಯವನ್ನ ಪ್ರೀತಿಸೋ ವಿದೇಶಿ ಮಂದಿನೂ ಇದಕ್ಕೆ ಚಂದಾದಾರರಾಗಿದ್ದರು. ಜೊತೆಗೆ ನಾವು ಐಎಫ್‌ಡಿ ವತಿಯಿಂದ ಅನೇಕ ಮುಖ್ಯ ಪುಸ್ತಕಗಳನ್ನೂ ಪ್ರಕಾಶಿಸಿದೆವು. ಅದರಾಗ ಮರೆಯಲಾಗದಂಥದ್ದೆಂದರೆ ಜಾರ್ಜ್ ಫರ್ನಾಂಡಿಸ್ ಅವರ 'ಅನಾಟಮಿ ಆಫ್ ಡಿಕ್ಟೇಟರ್‌ಶಿಪ್', ಮತ್ತೆ ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕರು ಮಾಡುತ್ತಿದ್ದ ಭಾಷಣಗಳ ಕಿರುಹೊತ್ತಿಗೆಗಳು. ಜೊತೆಗೆ, ಕಮಿಟಿ ಫಾರ್ ಫ್ರೀಡಂ ಇನ್ ಇಂಡಿಯಾ ಸಂಸ್ಥೆ ಮುದ್ರಿಸಿದ, ಡಾ.ಆನಂದ್ ಕುಮಾರ್ ಅವರ, 80 ಪುಟಗಳ 'ಡೆಮಾಕ್ರಸಿ ಆರ್ ಡಿಕ್ಟೇಟರ್‌ಶಿಪ್ ಇನ್ ಇಂಡಿಯಾ'- ಇದರಲ್ಲಿ ಸೆನ್ಸಾರ್‌ಗೆ ಒಳಗಾಗದ ಭಾರತದ ಅನೇಕ ದಾಖಲೆಗಳು, ಜೆಪಿಯವರು ಚಂಡೀಗಢ ಜೈಲಿನಿಂದ ಬರೆದ ಪತ್ರಗಳು, ಹೀಗೆ ಮಹತ್ವದ ವಿಷಯಗಳಿದ್ದವು. ಈ ಕಿರುಹೊತ್ತಿಗೆ ಬಹಳಷ್ಟು ಪ್ರಚಾರವನ್ನ ಪಡೆಯಿತು. ಜೊತೆಗೆ ಪ್ರಮುಖವಾದ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನ ದಾಖಲಿಸಿ ನಾವು ಪ್ರಕಟಿಸಿದ 73 ಪುಟಗಳ ಪುಸ್ತಿಕೆ, ಚರಿತ್ರೆಯಲ್ಲಿ ದಾಖಲಾರ್ಹವಾಗಿ ಉಳಿಯುವಂಥದ್ದಾಗಿತ್ತು. ಭಾರತದಿಂದ ಅಮೆರಿಕೆಗೆ ಬರುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರು, ತಜ್ಞರು, ಮಾನವಹಕ್ಕುಗಳ ಕಾರ್ಯಕರ್ತರ ಭಾಷಣಗಳಂತೂ ಜನರಲ್ಲಿ ಕಿಚ್ಚು ಹೆಚ್ಚಿಸುತ್ತಿದ್ದವು. ಅಮೆರಿಕದ ಪತ್ರಿಕೆಗಳಲ್ಲಿ ತುರ್ತು ಪರಿಸ್ಥಿತಿ ವಿರೋಧಿಸಿ ನಾವು ನಿರಂತರವಾಗಿ ನೀಡುತ್ತಿದ್ದ ಜಾಹೀರಾತುಗಳು, ಹೊರಡಿಸುತ್ತಿದ್ದ ಕರಪತ್ರಗಳು ಪ್ರಭಾವಶಾಲಿಯೂ, ಪ್ರೇರಣಾದಾಯಕವೂ ಆಗಿದ್ದವು. ತುರ್ತು ಪರಿಸ್ಥಿತಿ ಸಂದರ್ಭದಾಗ ನಮ್ಮ ಮೂರೂ ಸಂಸ್ಥೆಗಳು ಅಂತರಾಷ್ಟ್ರೀಯ ಸಂಸ್ಥೆ, ಸಂಘಟನೆಗಳ ಜೊತೆಗೆ ಸಶಕ್ತವಾಗಿ ಕೆಲಸ ಮಾಡಿದ್ದು ನಮ್ಮ ಶಕ್ತಿಯನ್ನ ಹೆಚ್ಚಿಸಿತ್ತು. ಒಂದು ದೊಡ್ಡ ಸಮೂಹದ ನೆಟ್‌ವರ್ಕ್ ನಮಗೆ ಸಿಕ್ಕಿದ್ದರಿಂದಾಗಿ ನಮ್ಮ ತುರ್ತು ಪರಿಸ್ಥಿತಿ ವಿರೋಧಿ ಚಟುವಟಿಕೆಗೆ ಬಲ ಬಂದಿತ್ತು. ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಇಂಟರ್‌ನ್ಯಾಷನಲ್ ಕಮಿಷನ್ ಆಫ್ ಜ್ಯೂರಿಸ್ಟ್, ಸೋಷಿಯಲಿಷ್ಟ್ ಇಂಟರ್‌ನ್ಯಾಷನಲ್, ವರ್ಲ್ಡ್ ಅಸೋಸಿಯೇಷನ್ ಆಫ್ ವರ್ಲ್ಡ್ ಫೆಡರಲಿಸ್ಟ್ ಮತ್ತು ಅನೇಕ ಪ್ರಮುಖ ಟ್ರೇಡ್ ಯೂನಿಯನ್ ಸಂಘಟನೆಗಳು, ಶಾಂತಿಗಾಗಿ ಸಂಘಟಿತರಾಗಿದ್ದ ಕ್ವೇಕರ್‌ಗಳು... ಹೀಗೆ ನಾವು ಊಹಿಸಿಯೇ ಇರದಿದ್ದ ರೀತಿಯಲ್ಲಿ ಪ್ರತಿಷ್ಠಿತ ಸಂಘಟನೆಗಳ ಕೂಡೆ ಒಡನಾಟ, ನಮ್ಮ ವೈಶಾಲ್ಯವನ್ನು ಹೆಚ್ಚಿಸಿತ್ತು.



ಮಹಾಸಂಗ್ರಾಮಿ
ಲೇ: ರೂಪ ಹಾಸನ
ಪ್ರ:ಅಭಿರುಚಿ ಪ್ರಕಾಶನ
ಸಂ:9480227576
ಪು: 464 ₹600

ಮುಂದೆ 'ಇಂಡಿಯಾ ಡೆವಲಪ್‌ಮೆಂಟ್ ಸರ್ವೀಸ್' [ಐಡಿಎಸ್] ಕೆಲ್ಸಗಳಾಗೆ ಮತ್ತೆ ಗಂಭೀರವಾಗಿ ತೊಡಗಿಸಿಕೊಂಡೆ! ಇದುವರೆಗೆ ರಾಜಕೀಯ ಚಟುವಟಿಕೆಯಲ್ಲೇ ಬಿಡುವಿಲ್ಲದಂಗ ಮುಳುಗಿಹೋಗಿದ್ದರಿಂದ ಭಾರತದ ಅಭಿವೃದ್ಧಿ ಕೆಲ್ಸಗಳಿಗಾಗಿ ಹುಟ್ಟುಹಾಕಿದ್ದ ನಮ್ಮ ಈ ಮೂಲ ಸಂಸ್ಥೆಯ ಚಟುವಟಿಕೆಯಾಗ ಹೆಚ್ಚು ತೊಡಗಿಸಿಕೊಳ್ಳಲಿಕ್ಕೆ ಆಗಿರಲಿಲ್ಲ. ತಕ್ಷಣ ಐಡಿಎಸ್‌ನ ತುರ್ತು ಸಭೆ ಕರೆದೆ. 'ನನ್ನ ಆಸಕ್ತಿಗಳು ವಿಸ್ತರಿಸಿರೋದ್ರಿಂದ ಸಮಯ ಸಾಕಾಗ್ತಿದ್ದಿಲ್ಲ. ಈ ಸಂಸ್ಥೆಗೆ ರಾಜೀನಾಮೆ ಕೊಡ್ತೀನಿ' ಅಂದೆ. ಅದಕ್ಕೆಲ್ಲರೂ ಆಕ್ಷೇಪಣೆ ಮಾಡಿದ್ರು. 'ನಿಮಗೆ ಏನೂ ಹೊರೆಯಾಗಂಗಿಲ್ಲ, ನಾವೂ ಜೊತೆ ಸೇರಿ ಎಲ್ಲಾ ಕೆಲ್ಸ ಮಾಡ್ತೀವಿ. ನೀವು ಮುಂದುವರೀಬೇಕು' ಅಂದ್ರು. ಆಗ ನಾನು `ಒಂದು ವರ್ಷದವರೆಗಷ್ಟೇ ಮುಂದುವರೀತೇನೆ' ಎಂದು ಒಪ್ಪಿದೆ. ಮತ್ತೆ ಸಂಸ್ಥೆಯ ಕೆಲಸಗಳನ್ನೆಲ್ಲಾ ಪುನರ್ ವ್ಯವಸ್ಥೆ ಮಾಡಿಕೊಂಡು, ಚಟುವಟಿಕೆಯ ವೇಗ ಹೆಚ್ಚಿಸ್ಕೊಂಡ್ವಿ. ಆಗ ಎಲ್ಲರಿಂದ ಮೊದಲಿಗಿಂತ ಒಳ್ಳೆಯ ಪ್ರತಿಕ್ರಿಯೆ ಬಂದವು. ಆ ವರ್ಷ ಕೆಲ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಸಂಗ್ರಹಿಸಿದ 33,000 ಡಾಲರ್ಸ್ ನಮಗೆ ದೇಣಿಗೆಯಾಗಿ ಬಂತು! ಅಮೆರಿಕದ ಐಡಿಎಸ್ ಸಂಸ್ಥೆಗೆ ನಾನು ಒಟ್ಟು ನಾಲ್ಕು ವರ್ಷ ಅಧ್ಯಕ್ಷನಾಗಿ ಕೆಲಸ ಮಾಡಿದ್ದೆ. ನಾನು ಬಿಟ್ಟಿದ್ದು ಐದನೇ ವರ್ಷದಲ್ಲಿ, ಅವಾಗ ಐದನೇ ವರ್ಷದ ವಾರ್ಷಿಕೋತ್ಸವವನ್ನೂ ವಿಜೃಂಭಣೆಯಿಂದ ಮಾಡಿದೆವು. ಜೊತೆಗೆ ಒಂದು ನೆನಪಿನ ಸಂಚಿಕೆಯನ್ನೂ ತಂದೆವು.

ಪಾಸ್‌ಪೋರ್ಟ್ ಮುಟ್ಟುಗೋಲು ಹಾಕ್ಕೊಂಡಿದ್ದ ಸಂದರ್ಭದಲ್ಲಿ 'India Abroad' ಪತ್ರಿಕೆಯಾಗ ನನ್ನ 2-3 ಸುದೀರ್ಘ ಸಂದರ್ಶನಗಳು ಕೂಡ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನ ಹೇಳಿದ್ದೆನಲ್ಲಾ, ಅವೆಲ್ಲವೂ ನನ್ನ ಪಾಲಿಗೆ ಬಹಳೇ ಮುಖ್ಯವಾದಂಥವು. ಕರ್ನಾಟಕದ ಪ್ರಸಿದ್ಧ ಪ್ರಜಾವಾಣಿ ಬಳಗದ, 'ಸುಧಾ' ವಾರಪತ್ರಿಕೆಯನ್ನ ಆಗ ಎಸ್.ಆರ್.ರಾಮಸ್ವಾಮಿ ಅಂತ ಸಹಾಯಕ ಸಂಪಾದಕರು ನೋಡ್ಕೊಳ್ತಿದ್ದರು. ಅವರು ಬಹಳೇ ಬಾರಿ ನನಗೆ ಫೋನ್ ಮಾಡಿ ನಮ್ಮ ಚಟುವಟಿಕೆ ಬಗ್ಗೆ, ವರದಿಗಳ ಬಗ್ಗೆ, ಜೊತೆಗೆ ಫೋಟೊ ಕೂಡ ಕೇಳಿದ್ರು. ನಾನೆಲ್ಲಾ ಅವರಿಗೆ ಕಳಿಸಿದ್ದೆ. ಅವರದನ್ನ ಇಟ್ಟುಕೊಂಡು ಬಹಳೇ ಆಕರ್ಷಕವಾಗಿ ಜೋಡಿಸಿ, 1977ರ ತುರ್ತು ಪರಿಸ್ಥಿತಿ ಕೊನೆಗೊಂಡ ಸಂದರ್ಭದಾಗ ನಾಲ್ಕು ವಾರ ಸುದೀರ್ಘ ಲೇಖನ ಪ್ರಕಟಿಸಿದ್ದಾರೆ! ಬಹುಶಃ ವಿದೇಶದಲ್ಲಿ ನೆಲೆಸಿರುವ ಭಾರತೀಯರು ನಡೆಸಿದ ತುರ್ತು ಪರಿಸ್ಥಿತಿ ವಿರುದ್ಧದ ಹೋರಾಟದ ಕುರಿತು ಕನ್ನಡದಲ್ಲಿ ಆದ ಒಂದು ದಾಖಲೆ ಎಂದರೆ ಬಹುಶಃ ಇದು ಮಾತ್ರವೇ ಇರಬೇಕು.

ನನ್ನ ಚಿಂತನಾ ಕ್ರಮದಲ್ಲಿ ಅತಿ ಹೆಚ್ಚಿನ ಬದಲಾವಣೆಯಾಗಿದ್ದೆಂದರೆ ಇಂದಿರಾ ಗಾಂಧಿ ಅವರು ಹೇರಿದ ತುರ್ತು ಪರಿಸ್ಥಿತಿಯಿಂದ! 4ರಿಂದ 5 ವರ್ಷ ನಮ್ಮ ದೇಶಕ್ಕಾಗಿ ತುರ್ತು ಪರಿಸ್ಥಿತಿ ವಿರುದ್ಧ ಅಮೆರಿಕದಾಗೆ ಇದ್ದುಕೊಂಡೆ ತೀವ್ರವಾಗಿ ಕೆಲಸವನ್ನು ಮಾಡಿದ್ದು, ನನ್ನ ಜೀವಮಾನದಲ್ಲೇ ಮರೆಯಲಾಗದಂತಹಾ ಅನುಭವ. ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಹೇರಿದಾಗ ನಮಗೇನನ್ನಿಸ್ತು ಅಂದ್ರ 'ಇಂತಹ ಒಂದು ಸರ್ವಾಧಿಕಾರಿ ವಾತಾವರಣದೊಳಗೆ ಕಟ್ಟಕಡೆಯ ವ್ಯಕ್ತಿಯನ್ನ ಮೊದಲು ಮಾಡಿಕೊಂಡು, ಯಾರೂ ಅಭಿವೃದ್ಧಿಯಾಗೋದು ಯಾವಾಗಲೂ ಸಾಧ್ಯವಾಗಲ್ಲ. ಇದು ಮನುಷ್ಯನ ವ್ಯಕ್ತಿತ್ವ ವಿಕಾಸಕ್ಕೆ ಅನುಕೂಲ ಆಗೂದಿಲ್ಲ' ಎನ್ನವಂಥ ಮೂಲಭೂತವಾದ ತಿಳಿವಳಿಕೆ ಆಗ ನನಗೆ ಬಂತು. ಇದರ ಬಗ್ಗೆ ಆಗ ಆಳವಾದ ವೈಚಾರಿಕ ಜ್ಞಾನ ಇದ್ದಿಲ್ಲ. ಒಬ್ಬ ವ್ಯಕ್ತಿಯ ಪರಮಾಧಿಕಾರ ಏನು ಅನಾಹುತ ಮಾಡ್ತದೆ ಎನ್ನೋದು ಮಾತ್ರ ತಿಳೀತಿತ್ತು. ಈ ಅವಧಿ ನಮ್ಮ ಜೀವನದ ಅತ್ಯಂತ ಸೃಜನಶೀಲ ಕಾಲ. ಅವತ್ತು ನಾನು ರಾಜಕೀಯ ಬದಲಾವಣೆ ಬಗ್ಗೆ ಹಂತ ಹಂತವಾಗಿ ಏನು ಕಲಿತೆ, ಅದು ಇವತ್ತಿನವರೆಗೂ ನನ್ನ ರಕ್ತದಾಗೆ ಉಳಿದು ಬಂದದಾ. ಹೀಗಾಗೇ ನಾನು ಮೂಲಭೂತವಾಗಿ ರಾಜಕೀಯ ಆಕ್ಟಿವಿಸ್ಟ್ ಇದ್ದೀನಿ ಅಂತ ಹೇಳ್ತೀನಿ. ❖

ಆಳದನುಭವ ಕೈ ಹಿಡಿವ ಗಳಿಗೆಗೆ ಕಾದ ಚಿತ್ರಗಳು

ಗೌರಿ

ಹನ್ನೆರಡು ಕಥೆಗಳ ಸಂಗ್ರಹ 'ಪದುಮ ಪುರುಷ'. ಇವುಗಳನ್ನು ಒಂದೇ ಕಥೆಯ ಹನ್ನೆರಡು ಭಾಗಗಳಾಗಿಯೂ ನೋಡಲು ಸಾಧ್ಯವಿದೆ. ಬಿಡಿ ಬಿಡಿಯಾಗಿ ಶುರುವಾಗಿ ಮುಗಿಯುವ ಈ ಕಥೆಗಳು ಅಡಿಯಲ್ಲಿ ಒಂದಕ್ಕೊಂದು ಬೆಸೆದುಕೊಂಡಿವೆ. ಒಂದು ಇನ್ನೊಂದಕ್ಕೆ ಖೋ ಕೊಟ್ಟುಕೊಂಡು ಮುಂದೆ ಸಾಗುವ ಹರಿವಿದೆ.


ಇಲ್ಲಿನ ಕಥೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. 'ಪದುಮಳ ದಳಗಳು' ಮತ್ತು 'ಬಿಡಿ–ಇಡಿ ಕತೆಗಳು'. ಇನ್ನೊಂದು ಭಾಗಕ್ಕೆ ಹೆಸರಿಲ್ಲವಾದರೂ ಅವು ಈ ಸಂಕಲನದ ಉಳಿದೆಲ್ಲ ಕಥೆಗಳಿಗಿಂತ ಭಿನ್ನವಾಗಿ ನಿಲ್ಲುತ್ತವಾದ್ದರಿಂದ ಅವುಗಳು ಇರುವ ಜಾಗವನ್ನು ಮತ್ತೊಂದು ಭಾಗವಾಗಿಯೇ ನೋಡಲು ಸಾಧ್ಯವಿದೆ.

ಇಲ್ಲಿನ ಬಹುತೇಕ ಎಲ್ಲ ಕಥೆಗಳ ವಸ್ತು, ನಿರೂಪಣಾ ತಂತ್ರಗಳಲ್ಲಿ ಸಾಕಷ್ಟು ಸಾಮ್ಯವಿದೆ. ಇಲ್ಲೊಬ್ಬ ನಿರೂಪಕಿಯಿದ್ದಾಳೆ. ಅವಳು ಆರ್ಥಿಕವಾಗಿಯೂ ಸಾಕಷ್ಟು ಅನುಕೂಲವುಳ್ಳ ಮೇಲ್ಮಧ್ಯಮ ಎನ್ನಬಹುದಾದ ವರ್ಗದ ಹೆಣ್ಣು. ಕೆಳವರ್ಗದ, ಅದರಲ್ಲಿಯೂ ಹೆಣ್ಣುಮಕ್ಕಳ ಕಷ್ಟಕ್ಕೆ ಕರಗುವ, ಅಂತಃಕರಣದಿಂದ ಅವರಿಗೆ ಸಹಾಯ ಮಾಡಲು ಹೋಗುವ ಹೆಣ್ಣು ಅವಳು. ಅವಳ ಈ ಸ್ವಭಾವದಿಂದಾಗಿಯೇ ಕೆಳ ವರ್ಗದ ಹೆಣ್ಣುಮಕ್ಕಳು ಅವಳ ಬಳಿ ತಮ್ಮ ಬದುಕಿನ ಕಥೆಗಳನ್ನು ಹೇಳಿಕೊಳ್ಳುತ್ತಾರೆ. ಅವರು ಹಾಗೆ ಹೇಳಿಕೊಂಡ ಮಾತುಗಳು, ಹಂಚಿಕೊಂಡ ತಮ್ಮ ಬದುಕಿನ ವಿವರಗಳೇ ಇಲ್ಲಿ ಕಥೆಗಳಾಗಿವೆ.

ಈ ಕಥೆಗಳ ನಿರೂಪಣಾ ತಂತ್ರ ಕನ್ನಡದ ಹಿರಿಯ ಕಥೆಗಾರ ಮಾಸ್ತಿ ಅವರ ಕಥೆಗಳ ನಿರೂಪಣಾ ತಂತ್ರವನ್ನು ನೆನಪಿಸುವಂತಿದೆ. ಆದರೆ ಆ ತಂತ್ರದಲ್ಲಿ ಒಂದು ಮೂಲಭೂತ ವ್ಯತ್ಯಾಸವೂ ಇದೆ. ಮಾಸ್ತಿ ಅವರಿಗೆ ತಾವು ಕೇಳಿದ, ಕಂಡ ಕಥೆಗಳನ್ನು ಹೇಳುವುದು ಬದುಕಿನ, ಸಮಾಜದ ಒಳಾರ್ಥದ, ವೈರುಧ್ಯಗಳ ಶೋಧವೂ ಆಗಿತ್ತು. ಆ ಕಥೆಗಳು ನಮ್ಮೊಳಗನ್ನು ನಾವು ನೋಡಿಕೊಳ್ಳುವಂತೆ ಪ್ರೇರೇಪಿಸುತ್ತಿದ್ದವು. ಆದರೆ ಇಲ್ಲಿನ ಕಥೆಗಳು ಒಳಗನ್ನು ನೋಡಿಕೊಂಡಿದ್ದರಿಂದ ಹುಟ್ಟಿದ ಕಥೆಗಳಲ್ಲ; ಹೊರಗನ್ನು ನೋಡಿದಾಗ ಹುಟ್ಟಿದ ಕಥೆಗಳು.

'ಕನಸಿನ.... ಒಳಗೊಂದು... ಮನಸು...' ಎಂಬ ಕಥೆಯ ಆರಂಭದಲ್ಲಿಯೇ ತೆರೆದುಕೊಳ್ಳುವ ಒಂದು ಚಿತ್ರದಲ್ಲಿ, ಕಥೆಯ ನಿರೂಪಕಿ ಕಾರಿನಲ್ಲಿದ್ದಾರೆ. ಅವರ ಕಣ್ಣೆದುರೇ ಬಸ್ಸೊಂದು ರಭಸದಲ್ಲಿ ಬಂದು ರಸ್ತೆ ಪಕ್ಕ ನಿಂತಿದ್ದ ಹುಡುಗನೊಬ್ಬನ ಕಾಲಮೇಲೆ ಹಾದು ಮುಂದೋಡುತ್ತದೆ. ಅದನ್ನು ಕಂಡ ಕ್ಷಣ ಕಥೆಯಲ್ಲಿ ಹೀಗಿದೆ: 'ಅವನ ಕಣ್ಣಲ್ಲಿದ್ದ ನೋವು, ಎಷ್ಟು ತೀವ್ರವಾಗಿತ್ತು ಎಂದರೆ ಆ ಹುಡುಗ ನನ್ನದೇ ಒಂದು ಭಾಗವೇನೋ ಅನ್ನಿಸುವಂತೆ, ಆ ನೋವು ತಾಕಿತು. ನನ್ನ ಮುಖವೂ ಅಷ್ಟೇ ನೋವಿನಿಂದ ಹಿಂಡಿತು. ಹೊಟ್ಟೆಯ ನಾಭಿಯಲ್ಲಿ ಸಂಕಟವೆದ್ದಿತು. ಆದರೆ ಅಷ್ಟರಲ್ಲಿ ನಮ್ಮ ಕಾರು ಬೇರೆ ತಿರುವಿಗೆ ತಿರುಗಿಕೊಂಡಿತ್ತು. ರಸ್ತೆಗಳೆರಡೂ ಬೇರೆ ಬೇರೆಯಾಗಿದ್ದವು.
ಕಣ್ಣಿಗೆ ಕಾಣಿಸಿದ ಸಂಕಟ!
ಎದೆಯೊಳಗೆ ಉಂಡ ಸಂಕಟ!
ಎರಡೂ ಒಂದೇ ಆಗಿ ತಟ್ಟನೆ ಎಚ್ಚರವಾಯಿತು.'

ಪದ್ಯ ರೂಪದಲ್ಲಿರುವ ಈ ಕಥೆಯ ಸಾಲುಗಳಲ್ಲಿ ಇರುವ ತೀವ್ರವಾದ ನೋವು, ಸಂಕಟ ನಮ್ಮನ್ನೂ ಅಷ್ಟೇ ತೀವ್ರವಾಗಿ ತಾಕುತ್ತವೆ. ಒಂದು ಕನಸಿನ ವಿವರಣೆಯಂತಿರುವ ಈ ಭಾಗ ಒಟ್ಟಾರೆ ಸೃಜನಶೀಲ ಸೃಷ್ಟಿ, ಕಥನಗಾರಿಕೆಯ ಕುರಿತೂ ಅಷ್ಟೇ ತೀವ್ರವಾಗಿ ಜಿಜ್ಞಾಸೆ ನಡೆಸುತ್ತಿರುವಂತೆ ಕಾಣಿಸುತ್ತದೆ. ಕಥೆಗಾರ್ತಿ ಹಾಗೆ ಕಂಡದ್ದು, ಉಂಡದ್ದು ಎರಡೂ ಒಂದೇ ಆಗುವ ಗಳಿಗೆಯೇ ಸೃಜನಶೀಲತೆ ಒಸರುವ ಜಾಗವಲ್ಲವೇ? ಅಂಥ ಅನುಭವವನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸಿದಾಗ ಅದು ಎಲ್ಲರ ಸಂಕಟವೂ ಆಗುವುದೇ ಸೃಜನಶೀಲ ಸೃಷ್ಟಿಯ ಗೆಲುವಲ್ಲವೇ? ಇಲ್ಲಿನ ಒಂದು ಅನುಭವದಲ್ಲಿ ಈ ಎಲ್ಲವೂ ಇದೆ. ಅದು ಒಂದು ಘಟನೆಯ ಬಗ್ಗೆ, ಒಂದು ಅನುಭವದ ಬಗ್ಗೆ ಹೇಳುತ್ತಲೇ ಕತೆಯ ಬಗ್ಗೆಯೂ, ಕಲೆಯ ಬಗ್ಗೆಯೂ ಮಾತಾಡುತ್ತಿದೆ!



ಪದುಮ ಪುರುಷ
(ಕಥಾಸಂಕಲನ)
ಲೇ: ಎಚ್. ಆರ್. ಸುಜಾತಾ
ಪ್ರ: ಕೌದಿ ಪ್ರಕಾಶನ
ಸಂ: 9008660371
ಪು: 104 ₹140

ಆದರೆ ಈ 'ಕಂಡದ್ದು ಉಂಡದ್ದು' ಒಂದೇ ಆಗಿ ಒಂದು ಪಾಕದಲ್ಲಿ ಅಭಿವ್ಯಕ್ತಿಗೊಳ್ಳುವ ಮಾಯಕಶಕ್ತಿ ಈ ಸಂಕಲನದ ಉಳಿದ ಕಥೆಗಳಲ್ಲಿ ಕಾಣಿಸುವುದಿಲ್ಲ.

ಮೇಲೆ ಹೇಳಿದ ಹಾಗೆ ಇಲ್ಲೊಬ್ಬಳು ನಿರೂಪಕಿ ಇದ್ದಾಳೆ. ಆ ನಿರೂಪಕಿ ತನ್ನ ಒಡನಾಟದಲ್ಲಿ ಬರುವ ಕೆಲವರ ಬದುಕನ್ನು ಅವರ ಮಾತುಗಳಲ್ಲಿಯೇ ಕೇಳಿ ಅವುಗಳನ್ನು ದಾಖಲಿಸುತ್ತಿದ್ದಾಳೆ. ಅವರ ಬದುಕಿನ ಬಗ್ಗೆ ಈ ನಿರೂಪಕಿಗೆ ಕುತೂಹಲವಿದೆ. ಕೆಲವೊಮ್ಮೆ ಆ ಕುತೂಹಲದಲ್ಲಿ 'ರಂಜನೆ'ಯ ಅಭೀಪ್ಸೆಯೂ ಇದ್ದಂತಿದೆ. ತನ್ನ ಮನೆಯ ಕೆಲಸದವಳು ತನ್ನ ಬದುಕಿನ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರೆ ಆ ನಿರೂಪಕಿ ಕುತೂಹಲದಿಂದ ಪ್ರಶ್ನೆ ಹಾಕುತ್ತ ಹೋಗುತ್ತಾಳೆ. ಅವಳ ಬದುಕಿನ ಎಷ್ಟೋ ಸಂಕಟದ ವಿವರಗಳು ಇವಳಿಗೆ ನಗು ತರಿಸುತ್ತವೆ. 'ಎತ್ತು ಏರಿಗೆ ಎಳೆದ್ರೆ ಎಮ್ಮೆ ನೀರಿಗೆಳೆಯಿತು' ಎಂಬ ಗಾದೆಯನ್ನೂ ನೆನಪಿಸುತ್ತವೆ. ಆದರೆ ಯಾವ ಹಂತದಲ್ಲಿಯೂ ಅವರ ನೋವು ತನ್ನದೂ ಹೌದು ಎಂದು ಅವಳಿಗೆ ಅನಿಸುವುದಿಲ್ಲ. ಹಾಗಾಗಿ ಇಲ್ಲಿನ ಪಾತ್ರಗಳ ನೋವು, ಅವರ ಬದುಕಿನ ವಿವರಗಳ ವರದಿಗಾರಿಕೆಯಂತೆ, ಅಂಕಣಬರಹದಂತೆ ಭಾಸವಾಗುತ್ತದೆ. ಬಹುತೇಕ ಎಲ್ಲವೂ ಮಾತುಗಳಲ್ಲಿಯೇ ಮುಗಿದುಹೋವುದೂ ಇದಕ್ಕೆ ಕಾರಣವಿರಬಹುದು. ಬಹುತೇಕ ಕಥೆಗಳಲ್ಲಿ 'ಅನೈತಿಕ' ಎಂದು ಸಮಾಜ ಹಣೆಪಟ್ಟಿ ಕಟ್ಟಿರುವ ಗಂಡು-ಹೆಣ್ಣಿನ ಸಂಬಂಧಗಳಿವೆ. ಅವೂ ಕೆಳವರ್ಗದವರ ಬದುಕಿನ ಸಂಬಂಧಗಳು. ಆದರೆ ಆ ಸಂಬಂಧಗಳ ಹಲವು ಸನ್ನಿವೇಶಗಳನ್ನು, ಸಂದರ್ಭಗಳನ್ನು, ಪಾತ್ರಗಳ ವರ್ತನೆಗಳನ್ನು ಈ ಕಥೆಗಳು ವರದಿರೂಪದಲ್ಲಿ ಒಪ್ಪಿಸುತ್ತವೆಯೇ ಹೊರತು, ಅಲುಗಾಡಿಸುವ ಅನುಭವವಾಗಿ ಒಳಗೆ ಇಳಿಯುವುದೇ ಇಲ್ಲ. ಹಾಗಾಗಿ ಒಳ್ಳೆಯ ಕಥೆಗಳಾಗುವ ಸಾಧ್ಯತೆಗಳಿದ್ದ ಕಚ್ಚಾ ಸಾಮಗ್ರಿಗಳೆಲ್ಲವೂ ಹಾಗ್ಗಾಗೆಯೇ ಇಲ್ಲಿ ಹರಡಿಕೊಂಡಂತೆ ಭಾಸವಾಗುತ್ತವೆ. ❖

ಪೋಸ್ಟ್ ಕಾರ್ಡಲ್ಲ... ಕ್ಯಾನ್ವಾಸ್

ಅಭಿಲಾಷ್ ಪಿ.ಎಸ್

'ಆಗಿನ್ನೂ ಟೆಲಿಫೋನ್ ಅಷ್ಟಾಗಿ ಚಾಲ್ತಿಯಲ್ಲಿ ಇಲ್ಲದ ಕಾಲ. ನಾನು ಹಿಮಾಲಯಕ್ಕೆ ಟ್ರೆಕ್ಕಿಂಗ್ ಹೊರಟಿದ್ದೆ. ಆ ಸಂದರ್ಭದಲ್ಲಿ ತಂದೆ 15 ಪೋಸ್ಟ್ ಕಾರ್ಡ್‌ಗಳನ್ನು ತಂದು ನನ್ನ ಕೈಯಲ್ಲಿಟ್ಟಿದ್ದರು. ಎಲ್ಲಾ ಕಾರ್ಡ್‌ಗಳಲ್ಲಿ ವಿಳಾಸ ಆಗಲೇ ಬರೆದಿದ್ದರು. 'ಖಾಲಿಯಾದರೂ ಸರಿ, ಹೋಗುವ ದಾರಿಯಲ್ಲಿ ಸಿಗುವ ಪೋಸ್ಟ್ ಬಾಕ್ಸ್‌ಗೆ ಒಂದೊಂದು ಪತ್ರವನ್ನು ಹಾಕುತ್ತಾ ಹೋಗು' ಎನ್ನುವ ಆಜ್ಞೆ. ಹೀಗೆ ಅಪ್ಪನ ಆಜ್ಞೆಯನ್ನು ಪಾಲಿಸುತ್ತಾ, ಖಾಲಿ ಕಾರ್ಡ್ ಹಾಕದೆ ಅದರಲ್ಲಿ ತಲುಪಿದ ಸ್ಥಳ, ದಿನ, ಪಯಣದ ವಿವರವನ್ನು ಬರೆದು ಅಂಚೆ ಡಬ್ಬಿಗೆ ಹಾಕುತ್ತಿದ್ದೆ...' ಹೀಗೆ ಪೋಸ್ಟ್ ಕಾರ್ಡ್‌ಗಳ ನೆನಪಿನ ಸಾಗರದಲ್ಲಿ ಕುತೂಹಲಕಾರಿ ಘಟನೆಯೊಂದನ್ನು ತೇಲಿಬಿಟ್ಟವರು ಕಲಾ ವಿಮರ್ಶಕ ಗಿರಿಧರ್ ಖಾಸನೀಸ್.

ಅಂದಿನ ಕಾಲದ 'ಇನ್‌ಸ್ಟಾಗ್ರಾಂ' ಆಗಿದ್ದ ಬಣ್ಣಬಣ್ಣದ ಛಾಯಾಚಿತ್ರಗಳಿದ್ದ ಪೋಸ್ಟ್ ಕಾರ್ಡ್‌ಗಳು ಇತ್ತೀಚೆಗೆ ಕಾಣಸಿಗುವುದೂ ಅಪರೂಪ. ದೊಡ್ಡ ದೊಡ್ಡ ಕ್ಯಾನ್ವಾಸ್‌ಗಳಲ್ಲಿ ಕಲಾವಿದರು ಮೂಡಿಸಿದ ಬಣ್ಣಗಳನ್ನು ಅಗಲಗಣ್ಣುಗಳಿಂದ ನೋಡಿದ ನಾವೀಗ ದೃಷ್ಟಿಯನ್ನು ಕೊಂಚ ಸೂಕ್ಷ್ಮಗೊಳಿಸಿ ನೋಡುವ ಕ್ಷಣ. ಪೋಸ್ಟ್ ಕಾರ್ಡ್‌ಗಳೇ ಕ್ಯಾನ್ವಾಸ್‌ಗಳಾಗಿ ಕಥೆ ಹೇಳುವ ಸಮಯ...

ಆರಂಭದಲ್ಲಿ ಕೇವಲ ಮುದ್ರಿತ ಸ್ಟ್ಯಾಂಪ್ ಇದ್ದ ಪೋಸ್ಟ್ ಕಾರ್ಡ್‌ಗಳು ಬಂದವು. ಕ್ರಮೇಣ ಅವುಗಳ ಒಂದು ಬದಿಯಲ್ಲಿ ವರ್ಣಚಿತ್ರಗಳ ಯುಗ ಆರಂಭವಾಯಿತು. ಸಂದರ್ಭಕ್ಕೆ ಅನುಗುಣವಾಗಿ ಬಗೆಬಗೆಯ ಪೋಸ್ಟ್ ಕಾರ್ಡ್‌ಗಳು ಬಂದವು. ದೀಪಾವಳಿ, ಜನ್ಮದಿನಕ್ಕೆ ಹಾರೈಸುವ ಛಾಯಾಚಿತ್ರಗಳುಳ್ಳ ಕಾರ್ಡ್‌ಗಳು ಹೆಚ್ಚು ಜನರನ್ನು ಆಕರ್ಷಿಸಿದವು. ಅಷ್ಟೇ ಅಲ್ಲ ಕೆಲ ಹವ್ಯಾಸಿ, ವೃತ್ತಿಪರ ಚಿತ್ರಕಲಾವಿದರು ಇಂತಹ ಕಾರ್ಡ್‌ಗಳಲ್ಲಿ ಸ್ವತಃ ಚಿತ್ರಗಳನ್ನು, ರೇಖಾಚಿತ್ರಗಳನ್ನು ಬಿಡಿಸಿ ತಮ್ಮ ಬಳಗಕ್ಕೆ ಕಳುಹಿಸುತ್ತಿದ್ದರು. 'ತನ್ನ ಸರಳ ರೂಪದಲ್ಲಿ ಕಲಾವಿದರಿಗೆ ಕಲಾಕೃತಿಗಳನ್ನು ರಚಿಸಲು ಪೋಸ್ಟ್‌ಕಾರ್ಡ್ ಒಂದು ಅಗ್ಗ ಹಾಗೂ ಆಕರ್ಷಕ ಮಾಧ್ಯಮವಾಯಿತು. ಆಧುನಿಕ ಭಾರತೀಯ ಕಲೆಯ ಪ್ರವರ್ತಕರಲ್ಲಿ ಒಬ್ಬರಾದ ನಂದಲಾಲ್ ಬೋಸ್ (1882-1966) ಈ ಸಂಪ್ರದಾಯವನ್ನು ಪ್ರಾರಂಭಿಸಿದರು ಎನ್ನಲಾಗುತ್ತದೆ. ಪೋಸ್ಟ್‌ಕಾರ್ಡ್‌ಗಳಲ್ಲಿ ಕಲೆಯನ್ನು ರಚಿಸಿದ್ದು ಮಾತ್ರವಲ್ಲದೆ ನಂದಲಾಲರು ಸಹ ಕಲಾವಿದರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಅದೇ ರೀತಿ ಮಾಡಲು ಪ್ರೇರೇಪಿಸಿದರು ಕೂಡ' ಎನ್ನುತ್ತಾರೆ ಗಿರಿಧರ್.


ಇಂತಹ ಪರಿಕಲ್ಪನೆಯನ್ನು ಜೀವಂತವಾಗಿರಿಸುವ ಪ್ರಯತ್ನ ಈ ಪ್ರದರ್ಶನದ್ದು. ಇಲ್ಲಿರುವ ಕಲಾವಿದರು ವಿದೇಶಿಗರಲ್ಲ. ನಮ್ಮದೇ ರಾಜ್ಯದ ಹಲವು ಹಳ್ಳಿಗಳಿಂದ ಬಂದವರು. ಧಾರವಾಡ, ಗದಗ, ಚಿತ್ರದುರ್ಗ, ಬಿಜಾಪುರ, ಕೊಪ್ಪಳ, ಉಡುಪಿಯವರು. ತಮ್ಮೊಳಗಿನ ಕಲ್ಪನೆಯನ್ನು ಈ ಪುಟ್ಟ ಆಯತಾಕಾರದೊಳಗೆ ಬಿಚ್ಚಿಟ್ಟು, ಜಗತ್ತಿನೆದುರಿಗಿರಿಸಿದವರು. ಇವರಲ್ಲಿ ವೇಣುಗೋಪಾಲ ಎಚ್.ಎಸ್., ವಾಮನ ಪೈ ಅವರಂತಹ ಹಿರಿಯ ಕಲಾವಿದರೂ ಇದ್ದಾರೆ; 20–25 ವರ್ಷ ವಯಸ್ಸಿನ ಬೆರಗುಗಣ್ಣಿನ ಕಲಾವಿದರೂ ಇದ್ದಾರೆ. ಅವರು ದೊಡ್ಡ ದೊಡ್ಡ ನಗರವನ್ನು, ಪ್ರಸ್ತುತ ಸನ್ನಿವೇಶ/ಸಂದರ್ಭಗಳನ್ನು ನೋಡುವ ಬಗೆ ಇಲ್ಲಿ ಮಿನಿಯೇಚರ್ ರೂಪ ಪಡೆದಿವೆ. ❖



ಕಲೆ: ರುದ್ರಗೌಡ ಎಲ್ ಇಂಡಿ



ಕಲೆ: ಗಿರಿಧರ್ ಖಾಸನೀಸ್



ಕಲೆ: ಪ್ರದೀಪ್ ಕುಮಾರ್ ಡಿ.ಎಂ

ಮನೆಯಲ್ಲಿ ಪ್ರದರ್ಶನ!


ಈ ಪೋಸ್ಟ್ ಕಾರ್ಡ್ ಪೇಂಟಿಂಗ್ ಪ್ರದರ್ಶನ ಸಂಜಯನಗರದ ರಂಗಾಭರಣ ಕಲಾಕೇಂದ್ರದ ಸಮೀಪ ಇರುವ ಮೀತಾ ಜೈನ್ ಅವರ ಮನೆಯಲ್ಲಿ ನಡೆಯಲಿದೆ. ಪ್ರದರ್ಶನದಲ್ಲಿ 11 ಕಲಾವಿದರು ರಚಿಸಿದ ಸುಮಾರು 120 ಪೋಸ್ಟ್ ಕಾರ್ಡ್ ಪೇಂಟಿಂಗ್‌ಗಳ ಪ್ರದರ್ಶನವಿರಲಿದೆ. ಶನಿವಾರ(ಸೆ.9) ಈ ಪ್ರದರ್ಶನ ಆರಂಭವಾಗಿದ್ದು, ಭಾನುವಾರ(ಸೆ.10)ಸಂಜೆ 6ರವರೆಗೂ ತೆರೆದಿರಲಿದೆ. ಸೆ.10ರ ಸಂಜೆ 4 ಗಂಟೆಗೆ ಕಲಾವಿದರನ್ನು ಭೇಟಿಯಾಗುವ ಅವಕಾಶವೂ ಸಿಗಲಿದೆ. ಸಂಪರ್ಕ: ಗಿರಿಧರ್ ಖಾಸನೀಸ್– 94482 57518 ವಿಳಾಸ: ನಂ.6, 2ನೇ ಅಡ್ಡ ರಸ್ತೆ, ಎಂ.ಆರ್. ಗಾರ್ಡನ್, ಕೆಇಬಿ ಲೇಔಟ್ 1ನೇ ಹಂತ, (ರಂಗಾಭರಣ ಕಲಾಕೇಂದ್ರದ ಸಮೀಪ) ಸಂಜಯನಗರ, ಬೆಂಗಳೂರು.

ಮೊದಲ ಓದು

ನೆನ್ನೆಯ ಕನಸುಗಳಿಗೆ ಇಂದಿನ 'ವಾಚಿಕೆ'

ನೆನ್ನೆ ಕಂಡ ಕನಸುಗಳೇ ಎಷ್ಟೋ ಸಲ 'ಹಳತು ಹೊನ್ನು' ಎನಿಸುವುದು. ಅ.ನ. ಸುಬ್ಬರಾಯರು 'ಕಲಾಮಂದಿರ' ಸ್ಥಾಪಿಸಿ ನೂರಾಐದು ವರ್ಷಗಳು ಕಳೆದಿವೆ. ಕಲಾಮಂದಿರದ ಉದ್ದೇಶದ ಮುಂದುವರಿಕೆಯಾಗಿ 'ಕಲಾ' ಎಂಬ ಪತ್ರಿಕೆಯು 1931ರಿಂದ 33ರ ಅವಧಿಯಲ್ಲಿ ಪ್ರಕಟವಾಗಿತ್ತು. ಆ ಪತ್ರಿಕೆಯ ಆಯ್ದ ಬರಹಗಳ 'ವಾಚಿಕೆ'ಯನ್ನು ಸುಬ್ಬರಾಯರ ಮಾರ್ಗದರ್ಶನದಲ್ಲಿಯೇ ಎಚ್.ಎಸ್. ರಾಘವೇಂದ್ರರಾವ್ ಅವರು ಸಂಪಾದಿಸಿ ಕೊಟ್ಟಿದ್ದಾರೆ. ವಿಚಾರ–ಕಲೆಗಳು, ವೈವಿಧ್ಯ, ಸಂಪಾದಕರ ಸಂಪತ್ತು ಎಂಬ ಮೂರು ಭಾಗಗಳಲ್ಲದೆ, ಅನುಬಂಧವನ್ನೇ ಪ್ರತ್ಯೇಕ ಭಾಗವಾಗಿ ನೀಡಲಾಗಿದೆ. ರವೀಂದ್ರನಾಥ ಟ್ಯಾಗೋರ್, ಅ.ನ.ಕೃ, ಮಧುರಚೆನ್ನ, ಡಿವಿಜಿ, ಆನಂದ ಕುಮಾರಸ್ವಾಮಿ, ಪೇಜಾವರ ಸದಾಶಿವರಾಯರು, ದೇವುಡು, ಜಿ.ಪಿ. ರಾಜರತ್ನಂ ಮೊದಲಾದ ದಿಗ್ಗಜರ ಬರಹಗಳನ್ನು ಈ ಅಧ್ಯಯನಯೋಗ್ಯ ವಾಚಿಕೆ ಒಳಗೊಂಡಿದೆ. 'ಕಲೆ ಮತ್ತು ಸ್ವದೇಶಿ' ಎಂಬ ಆನಂದ ಕುಮಾರಸ್ವಾಮಿಯವರ ಬರಹ, 'ರಂಗವಲ್ಲೀ ಕಲೆ'ಯ ಕುರಿತು ಎಸ್. ಗೌರಮ್ಮ ಅವರ ಲೇಖನ, 'ದರಿದ್ರನಿಗೂ ಕಲೆಯ ಅಗತ್ಯ ಉಂಟೆ' ಎಂಬ ಎ.ಎನ್. ಸುಬ್ಬರಾವ್ ಬರಹ ಎಲ್ಲ ಕಾಲಕ್ಕೂ ಮುಖ್ಯವಾದಂಥವು.

'ಕಲಾ ಪತ್ರಿಕೆಯ ಮೊದಲ ಸಂಚಿಕೆಯ ಮೊಟ್ಟಮೊದಲ ವರ್ಣಚಿತ್ರವೇ ಈ ಪತ್ರಿಕೆಯ ಸೆಕ್ಯುಲರ್ ಮನೋಧರ್ಮಕ್ಕೆ ಸಾಕ್ಷಿಯಾಗಿದೆ. ಸ್ವದೇಶಿಯೂ ಭಾರತೀಯವೂ ಆದ ಕಲೆಯ ಮುಖ್ಯ ನೆಲೆಗಳ ಹುಡುಕಾಟವು ಇಲ್ಲಿರುವ ಅನೇಕ ಲೇಖನಗಳಲ್ಲಿ ನಡೆದಿದೆ' ಎಂದು ಎಚ್.ಎಸ್. ರಾಘವೇಂದ್ರರಾವ್ ಅವರೇ ಬೆನ್ನುಡಿಯಲ್ಲಿ ಬರೆದಿದ್ದಾರೆ. ಕಲೆ–ಸಾಹಿತ್ಯ ಹಾಗೂ ಇವೆರಡೂ ಬೆರೆತ ಸಂಸ್ಕೃತಿ ವೈವಿಧ್ಯದಲ್ಲಿ ಆಸಕ್ತಿ ಇರುವವರಿಗೆ ಕೃತಿಯ ಓದು ಖುಷಿ ಕೊಡಬಲ್ಲದು.




ಕಲಾಲೋಕ–ನಿನ್ನೆ ಕಂಡ ಕನಸು
ಸಂಪಾದನೆ: ಅ.ನ. ಸುಬ್ಬರಾಯರ ಮಾರ್ಗದರ್ಶನದಲ್ಲಿ ಎಚ್.ಎಸ್. ರಾಘವೇಂದ್ರರಾವ್
ಪ್ರ: ಕಲಾಮಂದಿರ
ಸಂ: 9886330207
ಪು: 308 ₹300

ವಲಸಿಗರ ಕಷ್ಟ–ಸುಖ ಬಿಚ್ಚಿಡುವ ಕೃತಿ

ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ವಲಸಿಗರ ಕುರಿತು ಇರುವ ಅಭಿಪ್ರಾಯಗಳು, ವಲಸೆ ಸೃಷ್ಟಿಸುತ್ತಿರುವ ಸಮಸ್ಯೆಗಳ ಸ್ಥೂಲ ಚಿತ್ರಣ ಕಟ್ಟಿಕೊಡುವ ಕೃತಿ 'ನಿಂತ ನೆಲವೇ ಬಾಯ್ಬಿಟ್ಟಾಗ'. ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಅಭಿಜಿತ್ ಬ್ಯಾನರ್ಜಿ, ಎಸ್ತರ್ ಡುಫ್ಲೋ ಈ ಕೃತಿಯ ಲೇಖಕರು. ಹೀಗಾಗಿ ವಲಸೆಯನ್ನು ಲಾಭ–ನಷ್ಟಗಳ ತಕ್ಕಡಿಯಲ್ಲಿಯೇ ಅವಲೋಕಿಸಿದ್ದಾರೆ. ಅಮೆರಿಕ, ಯೂರೋಪ್ ರಾಷ್ಟ್ರಗಳಲ್ಲಿ ವಲಸೆ ಎಂಬುದು ಹೇಗೆ ರಾಜಕೀಯ ದಾಳವಾಗಿ ಬಳಕೆಯಾಗುತ್ತಿದೆ ಎಂಬುದನ್ನು ಕೃತಿ ಹೇಳುತ್ತದೆ. ವಲಸೆ ಕುರಿತಾದ ಆತಂಕ, ತಪ್ಪುಕಲ್ಪನೆಗಳನ್ನು ಮನದಟ್ಟು ಮಾಡಿಕೊಡುವ ಯತ್ನ ಮಾಡುತ್ತದೆ.

ಯಾರು ತಾನೇ ಮನೆ ಬಿಟ್ಟು
ಹೊರಡುವರು
ಮನೆ ಶಾರ್ಕಿನ ಬಾಯಿ ಆಗದಿದ್ದರೆ
ನೀವು ಗಡಿರೇಖೆಯತ್ತ ಓಡುವುದು
ಇಡೀ ನಗರವೇ ಓಡಲಾರಂಭಿಸಿದಾಗ
ಮಾತ್ರ ಎಂಬ ಬ್ರಿಟಿಷ್ ಕವಿ ವಾರ್ಸನ್ ಶೈರ್‌ರ ಸಾಲುಗಳನ್ನು ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಇದು ವಲಸಗೆ ಮೂಲ ಕಾರಣವನ್ನು ತಿಳಿಸಿಕೊಡುತ್ತದೆ. ವಲಸಿಗರಿಂದ ಮೂಲನಿವಾಸಿಗಳು ಅವಕಾಶ ಕಳೆದುಕೊಳ್ಳುತ್ತಾರೆ, ದೇಶದ ಆರ್ಥಿಕತೆಗೆ ಪೆಟ್ಟು ಬೀಳುತ್ತದೆ ಎಂಬಿತ್ಯಾದಿ ವಾದಗಳು ಆರ್ಥಿಕತೆಯ ಆಯಾಮದಿಂದ ಹೇಗೆ ತಪ್ಪು ಎಂಬುದನ್ನು ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಇರಾಕ್, ಸಿರಿಯಾ, ಗ್ವಾಟೆಮಾಲಾ ಮತ್ತು ಯೆಮನ್‌ನಂತಹ ರಾಷ್ಟ್ರಗಳಲ್ಲಿನ ವಲಸೆಗೆ ದೇಶದೊಳಗಿನ ಬಡತನ ಕಾರಣವಲ್ಲ. ಅಶಾಂತಿ, ಧರ್ಮಯುದ್ಧ, ಡ್ರಗ್ಸ್ ಇತ್ಯಾದಿ ಸಮಸ್ಯೆಗಳು ಅಲ್ಲಿನ ನಿವಾಸಿಗಳಲ್ಲಿ ಹೇಗೆ ಅಸುರಕ್ಷಿತ ಭಾವನೆಯನ್ನು ಮೂಡಿಸುತ್ತಿವೆ ಎಂಬುದನ್ನು ಹೇಳಲಾಗಿದೆ.

ಭಾರತಕ್ಕೆ ಬಾಂಗ್ಲಾ ವಲಸಿಗರು ಚಿಂತೆಯ ವಿಷಯ. ರೋಹಿಂಗ್ಯ ಸಮಸ್ಯೆ ದೇಶದ ಗಡಿಯಲ್ಲಿ ಹೆಚ್ಚಿದೆ. ಬಾಂಗ್ಲಾದಲ್ಲಿ ಆಂತರಿಕ ಸಮಸ್ಯೆ, ನೇಪಾಳದಿಂದ ವಲಸೆ ಬರುವುದಕ್ಕೆ ಕಾರಣಗಳತ್ತಲೂ ಈ ಕೃತಿ ಬೆಳಕು ಚೆಲ್ಲುತ್ತದೆ. ವಲಸಿಗರ ಕುರಿತಾದ ಆತಂಕ, ಭಯವನ್ನು ದೂರ ಸರಿಸಿ ವಾಸ್ತವಾಂಶವನ್ನು ಅರ್ಥ ಮಾಡಿಸುವ ಯತ್ನ ಇಡೀ ಕೃತಿಯಲ್ಲಿ ಕಾಣುತ್ತದೆ.



ನಿಂತ ನೆಲವೇ ಬಾಯ್ಬಿಟ್ಟಾಗ
ಲೇ: ಮೂಲ: ಅಭಿಜಿತ್ ಬ್ಯಾನರ್ಜಿ, ಎಸ್ತರ್ ಡುಫ್ಲೋ
ಅನುವಾದ: ಟಿ.ಎಸ್. ವೇಣುಗೋಪಾಲ್, ಶೈಲಜಾ
ಪ್ರ:ಋತುಮಾನ ಬೆಂಗಳೂರು
ಸಂ:9480035877
ಪು: 88 ₹100

ಲಲಿತ ಪ್ರಬಂಧ ರೂಪದ ಆತ್ಮಕಥನ

ಬ್ಯಾಂಕ್ ಉದ್ಯೋಗಿಯಾಗಿದ್ದ ಎಸ್.ಎನ್. ಲಕ್ಷ್ಮೀನಾರಾಯಣ ಅವರ ಆತ್ಮಕಥನ ಈ ಕೃತಿ. ಲೇಖಕರೇ ಹೇಳುವಂತೆ ಇದೊಂದು 'ಆಕಸ್ಮಿಕ' ಆತ್ಮಕಥನ. ಓದುಗರಿಗೂ ಹೊಸ ಲೇಖಕರೊಬ್ಬರ ಆಕಸ್ಮಿಕ ಭೇಟಿ. ಆದರೆ ಬರವಣಿಗೆ ಅಷ್ಟೇ ಪಕ್ವ, ಹಾಸ್ಯಭರಿತ.

ಲಕ್ಷ್ಮೀನಾರಾಯಣ ಅವರು ಬರವಣಿಗೆ ಪ್ರಾರಂಭಿಸಿದ್ದೇ 60ರ ನಂತರ. 'ಜನತಾಮಾಧ್ಯಮ' ಎಂಬ ಪತ್ರಿಕೆಯಲ್ಲಿ 'ಹಾಸನ್–ಮುಖಿ' ಎಂಬ ಅಂಕಣವನ್ನು ಬರೆಯಲು ಆರಂಭಿಸುವುದರ ಮೂಲಕ ಅಕ್ಷರ ಲೋಕಕ್ಕೆ ಕಾಲಿಟ್ಟವರು. ಇವರ ಬದುಕಿನ ಚದುರಿದ ಚಿತ್ರಗಳೇ ಈ ಕೃತಿ. ಮೂರು ಭಾಗಗಳಲ್ಲಿ ವಿಭಿನ್ನ ಶೀರ್ಷಿಕೆಗಳ ಮೂಲಕ ತಮ್ಮ ಜೀವನದ ಘಟನೆಗಳನ್ನು ಅವರಿಲ್ಲಿ ತೆರೆದಿಟ್ಟಿದ್ದಾರೆ. ಹುಟ್ಟಿದ ಊರಾದ ಹಾಸನ, ಅಲ್ಲಿನ ಬಾಲ್ಯ ಹಾಗೂ ವಿದ್ಯಾಭ್ಯಾಸ, ಸುತ್ತಮುತ್ತಲ ಜನರ ಬದುಕು, ರಾಜಕೀಯ, ಜನಪರ ಹೋರಾಟಗಳು, ಕೃಷಿ ವಿಜ್ಞಾನ ಪದವಿಯ ನೆನಪುಗಳ ಬುತ್ತಿ, ಬ್ಯಾಂಕ್‌ನಲ್ಲಿನ ತಮ್ಮ ಸುದೀರ್ಘ ವೃತ್ತಿ ಬದುಕಿನ ಪುಟಗಳನ್ನು ಈ ಮೂರು ಅಧ್ಯಾಯಗಳಲ್ಲಿ ಆಕರ್ಷಕವಾಗಿ ದಾಖಲಿಸಿದ್ದಾರೆ. ಹೀಗಾಗಿ ಇದೊಂದು ಕಿವಿಮಾತಿನ ಆತ್ಮಕಥನವಲ್ಲ. ಸಾಮಾನ್ಯ ವ್ಯಕ್ತಿಯೊಬ್ಬನ ಅಸಾಮಾನ್ಯ ದಾಖಲೀಕರಣ ಎನ್ನಬಹುದು.

ಲಕ್ಷ್ಮೀನಾರಾಯಣ ಅವರ ಬರವಣಿಗೆಯಲ್ಲಿ ಸೆಳೆತವಿದೆ. 'ಕೆಂಚಾಂಬಾ ಲಾಡ್ಜ್ ನಮ್ ಹಾಸುಂದವರ್ದು ಕಣ್ಲಾ!' ಎನ್ನುವ ಅಧ್ಯಾಯವೊಂದೇ ಸಾಕು ಅವರ ಬರವಣಿಗೆಯ ಓದಿಗಿರುವ ವೇಗವನ್ನು ಅಳೆಯಲು. ತಮ್ಮದೇ ಪ್ರಾದೇಶಿಕ ಭಾಷೆಯ ಸೊಗಡನ್ನು ಓದುಗರಿಗೆ ಉಣಿಸುತ್ತಾ, ಲಲಿತ ಪ್ರಬಂಧದ ರೂಪದಲ್ಲಿ ಒಂದು ಘಟನೆ, ಒಬ್ಬ ವ್ಯಕ್ತಿ ಅಥವಾ ಒಂದು ವಿಷಯವನ್ನು ತಿಳಿ ಹಾಸ್ಯವಾಗಿ ಇಲ್ಲಿ ಅವರು ಹರಿಬಿಟ್ಟಿದ್ದಾರೆ.



ಕೀಟಲೆಯ ದಿನಗಳು
ಲೇ: ಎಸ್.ಎನ್.ಲಕ್ಷ್ಮೀನಾರಾಯಣ
ಪ್ರ: ಅಮೂಲ್ಯ ಪುಸ್ತಕ
ಸಂ: 9448676770
ಪು: 456 ₹450

ಮನಾಲಿಯ ಮೇಘ‘ಸ್ಫೋಟ’

ಸುಪ್ರೀತಾ ಹೆಬ್ಬಾರ್

ಇಲ್ಲಿ ಕಣ್ಣೆತ್ತಿ ನೋಡಿದಲ್ಲೆಲ್ಲಾ ಬೆಟ್ಟಗಳ ಸಾಲು. ಹಸಿರು ಹೊದ್ದ ಕಣಿವೆಗಳನ್ನು ಬಂದಪ್ಪಿ ಮುಂದಕ್ಕೋಡುವ ಹತ್ತಿ ಉಂಡೆಯಂತಹ ಬಿಳಿ ಮೋಡಗಳ ಹಿಂಡು.. ಆದರೆ, ಇಂತಹ ಸೌಂದರ್ಯವೇ ಘನೀಭ್ವವಿಸಿದ ಪ್ರದೇಶದ ಕೆಳಗೆ ನೋಟ ಹರಿಸಿದರೆ, ಕಾಣುವುದು ಹಲವಾರು ಜನರನ್ನು ಬಲಿತೆಗೆದುಕೊಂಡ ಮೇಘಸ್ಫೋಟದ ಅಳಿದುಳಿದ ಅವಶೇಷಗಳು, ಮನಕಲಕುವ ರಸ್ತೆಗಳ ನಾಮಾವಶೇಷವೇ ಇಲ್ಲದ ದಾರಿಗಳು.

ಇದು ಉತ್ತರ ಭಾರತದ ಪ್ರವಾಸಿ ತಾಣಗಳಲ್ಲೇ ‘ಹನಿಮೂನ್ ಸ್ಪಾಟ್’ ಎಂದು ಗುರುತಿಸಿಕೊಂಡಿರುವ ಮನಾಲಿ. ತನ್ನ ಪ್ರಕೃತಿ ಸೌಂದರ್ಯ, ಚಳಿಗಾಲದ ಹಿಮಾವೃತ ಪ್ರದೇಶ ಮತ್ತು ಸಾಹಸಮಯ ಕ್ರೀಡೆಗಳಿಗೆ ಹೆಸರುವಾಸಿಯಾಗಿರುವ ‘ಕಣಿವೆಗಳ ರಾಣಿ’ ಮನಾಲಿ ಈಗ ದುರಂತಮಯ ನಾಡಾಗಿ ಬದಲಾಗಿದೆ.

ಮಳೆಗಾಲದಲ್ಲಿ ಪ್ರಕೃತಿ ಸೌಂದರ್ಯ ದುಪ್ಪಟ್ಟಾಗುತ್ತದೆ. ಹಸಿರು ಮೈತಳೆದು ಕಂಗೊಳಿಸುತ್ತದೆ. ಇಂತಹ ಸೌಂದರ್ಯದ ವರದಾನದಿಂದ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದ್ದ ಮನಾಲಿ, ಇತ್ತೀಚಿನ ಮೇಘಸ್ಫೋಟ ಹಾಗೂ ಮಳೆಯ ರುದ್ರನರ್ತನದಿಂದ ಪ್ರಕೃತಿಯ ಮುನಿಸಿಗೆ ಸಾಕ್ಷಿಯಾಗಿದೆ.

ದೆಹಲಿಯಂತಹ ವಿಪರೀತ ಹವಾಮಾನಗಳ ಪ್ರದೇಶದಲ್ಲಿರುವ ನಾವು ಮಳೆಗಾಲದ ಸವಿಯನ್ನು ಸವಿಯುವ ಹಾಗೂ ಪ್ರಕೃತಿ ಮಡಿಲಿನಲ್ಲಿ ಸಂಭ್ರಮಿಸುವ ಉದ್ದೇಶದಿಂದ ಆಗಸ್ಟ್ ತಿಂಗಳಲ್ಲಿ ಮನಾಲಿಯತ್ತ ಪ್ರಯಾಣ ಬೆಳೆಸಿದ್ದೆವು. ಆದರೆ, ನಮ್ಮನ್ನು ಸ್ವಾಗತಿಸಿದ್ದು, ಮೇಘಸ್ಫೋಟಗಳಿಂದ ತತ್ತರಿಸಿ, ಅಸ್ತವ್ಯಸ್ತ ಸ್ಥಿತಿಯಲ್ಲಿದ್ದ ಮನಾಲಿ.

ಚಂಡೀಗಢದಿಂದ ರಸ್ತೆ ಮಾರ್ಗದಲ್ಲಿ ಮನಾಲಿ ತಲುಪಲು 280 ಕಿ.ಮೀ. ಕ್ರಮಿಸಬೇಕಾಗುತ್ತದೆ. ಕಣಿವೆ ರಸ್ತೆಯಾದ ಕಾರಣ ಈ ದೂರ ಕ್ರಮಿಸಲು 9 ರಿಂದ 10 ಗಂಟೆ ಹಿಡಿಯುತ್ತದೆ. ಆದರೆ, ಮಳೆಯ ಕಾರಣದಿಂದ ಗುಡ್ಡ ಕುಸಿದು ಅಲ್ಲಲ್ಲಿ ರಸ್ತೆಗಳು ಮುಚ್ಚಿದ್ದರಿಂದ ನಮಗೆ ಹೆಚ್ಚೇ ಸಮಯ ಹಿಡಿಯಿತು. ಮಳೆಯ ಹನಿಗಳು ಕಣಿವೆಯ ಹಸಿರಿಗೆ ಇನ್ನಷ್ಟು ಮೆರುಗು ನೀಡಿದ್ದರಿಂದ, ದಾರಿಯುದ್ದಕ್ಕೂ ನೈಸರ್ಗಿಕ ಸೌಂದರ್ಯದ ಉಣಬಡಿಸುವಿಕೆ ನಡೆದೇ ಇತ್ತು.

ಮರುದಿನ ಮುಂಜಾನೆ ನಮ್ಮನ್ನು ಸಾಲು ಸಾಲು ಬೆಟ್ಟಗಳು, ಅದನ್ನು ಕ್ಷಣಕಾಲ ಮುಚ್ಚಿ ಮುಂದೆ ಓಡುವ ಮೋಡಗಳ ಹಿಂಡು ಸ್ವಾಗತಿಸಿದವು. ಮೊದಲನೇ ದಿನ ಇಲ್ಲಿನ ಪ್ರಸಿದ್ಧ ಹಿಡಿಂಬಾ ದೇಗುಲಕ್ಕೆ ಭೇಟಿ ನೀಡಿದೆವು. ಇಲ್ಲಿ ಕೂಡ ಪ್ರವಾಸಿಗರ ಸಂಖ್ಯೆ ಬೆರಳಣಿಕೆಯಷ್ಟಿತ್ತು. ಇದು ಭೀಮನ ಪತ್ನಿ ಹಿಡಿಂಬಿಯ ದೇಗುಲವಾಗಿದ್ದು, 16ನೇ ಶತಮಾನದ ದೇವಸ್ಥಾನ ಎಂದು ಹೇಳಲಾಗುತ್ತದೆ. ಚಳಿಗಾಲದಲ್ಲಿ ಇದು ಹಿಮಾವೃತಗೊಳ್ಳುವುದರಿಂದ ಇಲ್ಲಿನ ಪ್ರಮುಖ ಆಕರ್ಷಣೆಯಾಗಿದೆ.

ಡಿಸೆಂಬರ್-ಜನವರಿಯನ್ನು ಹೊರತುಪಡಿಸಿ ವರ್ಷದ ಉಳಿದ ಸಮಯದಲ್ಲಿ ಇಲ್ಲಿ ವ್ಯೂ ಪಾಯಿಂಟ್ ಹಾಗೂ ಸ್ನೋ ಪಾಯಿಂಟ್ ಎಂಬ ಎರಡು ವರ್ಗೀಕರಣ ಕಾಣುತ್ತದೆ. ಇತರ ಸಮಯದಲ್ಲಿ ಇಲ್ಲಿನ ರೋಹತಾಂಗ್ ಪಾಸ್‌ನಲ್ಲಿ ಮಂಜಿನಲ್ಲಿ ಆಟವಾಡಬಹುದು. ಆದರೆ, ಇದಕ್ಕೆ ಸೇನೆಯಿಂದ ವಿಶೇಷ ಅನುಮತಿ ಪಡೆಯಬೇಕಾಗುತ್ತದೆ. ಉಳಿದಂತೆ ಸೋಲಾಂಗ್ ವ್ಯಾಲಿ ಇಲ್ಲಿನ ವ್ಯೂ ಪಾಯಿಂಟ್ ಆಗಿದ್ದು, ಅಲ್ಲಿಂದ ಪ್ರಕೃತಿ ಸೌಂದರ್ಯವನ್ನು ಸವಿಯಬಹುದು. ಜೊತೆಗೆ ಇಲ್ಲಿ ನೀವು ಟ್ರೆಕಿಂಗ್ ಅನುಭವವನ್ನು ಕೂಡ ಪಡೆಯಬಹುದು. ಸುಮಾರು 45 ನಿಮಿಷಗಳ ಈ ಟ್ರೆಕಿಂಗ್ ಸ್ವಲ್ಪ ಕಷ್ಟವೆನಿಸಿದರೂ, ಮೇಲ್ಭಾಗದ ನೋಟ ಎಲ್ಲಾ ಆಯಾಸ ಮರೆಸುತ್ತದೆ.

ಇದರ ಜೊತೆಗೆ, ಮಾಲ್ ರೋಡ್‌ನಲ್ಲಿ ಮನಾಲಿಯ ಶಾಲು, ಟೋಪಿ ಮತ್ತಿತರರ ವಸ್ತುಗಳ ಶಾಪಿಂಗ್ ಮಾಡಬಹುದು. ಇಲ್ಲಿನ ಟಿಬೆಟಿಯನ್ ಮಾರುಕಟ್ಟೆಯ ಬಗಲಲ್ಲೇ ಒಂದು ಟಿಬೆಟಿಯನ್ ಮಾನೆಸ್ಟ್ರೀ ಇದೆ. ಇದು ಟಿಬೆಟಿಯನ್ನರ ದೇಗುಲ. ಧ್ಯಾನಕ್ಕೆ ಇದು ಸೂಕ್ತ ಸ್ಥಳ.

ತಲುಪುವುದು ಹೇಗೆ?

ಕುಲು ವಿಮಾನ ನಿಲ್ದಾಣ ತಲುಪಿ ಅಲ್ಲಿಂದ ಮನಾಲಿಗೆ ಪ್ರಯಾಣ ಬೆಳೆಸಬಹುದು. ಇಲ್ಲಿಗೆ ನೇರ ರೈಲು ಮಾರ್ಗ ಇಲ್ಲ. ಕಲ್ಕಿ ಅಥವಾ ಚಂಡೀಗಢಕ್ಕೆ ರೈಲಿನಲ್ಲಿ ಹೋಗಿ ಅಲ್ಲಿಂದ ರಸ್ತೆ ಮಾರ್ಗದಲ್ಲಿ ಚಲಿಸಬಹುದು. ಪ್ಯಾಕೇಜ್ ಪ್ರವಾಸದಲ್ಲಿ ದೆಹಲಿಯಿಂದಲೇ ಮನಾಲಿಗೆ ವಾಹನ ವ್ಯವಸ್ಥೆಯೂ ಮಾಡಲಾಗುತ್ತದೆ. ಇದು ಚಂಡೀಗಢದ ಮೂಲಕವೇ ಸಾಗುತ್ತದೆ.



ಬೆಟ್ಟಗಳ ಸಾಲು, ಅದಕ್ಕೆ ಮುತ್ತಿಡಲು ಓಡುವ ಮೋಡಗಳು... ಮನಾಲಿಯ ವಾತಾವರಣ ಹೀಗಿದ್ದಾಗ ಹಿತವೋ ಹಿತ...

ಮೇಘಸ್ಫೋಟಕ್ಕೆ ಜರ್ಜರಿತ ಮನಾಲಿ

ಪ್ರತಿ ವರ್ಷ ಮಳೆಗಾಲದ ಸಮಯದಲ್ಲಿ ವಿಪರೀತ ಮಳೆ ಹಾಗೂ ಗುಡ್ಡ ಕುಸಿತದಿಂದ ಹಿಮಾಚಲ ಪ್ರದೇಶದ ಹಲವೆಡೆ ರಸ್ತೆಗಳು ಪ್ರಯಾಣಕ್ಕೆ ಸ್ಥಗಿತಗೊಳ್ಳುವುದು ಸಾಮಾನ್ಯ. ಆದರೆ, ಈ ಬಾರಿ ಮನಾಲಿಯಲ್ಲಿ ಭಾರಿ ಮೇಘಸ್ಫೋಟ ಸಂಭವಿಸಿದ ಪರಿಣಾಮ, ಇಡೀ ನಗರವೇ ತತ್ತರಿಸಿದೆ. ಮೋಡಗಳು ಸ್ಫೋಟಗೊಂಡ ಸ್ಥಳದಲ್ಲಿ ಇದ್ದ ಬಸ್ ನಿಲ್ದಾಣ, ಸರ್ವಿಸ್ ಸ್ಟೇಷನ್, ಪಾರ್ಕ್‌ನಂತಹ ಸ್ಥಳಗಳ ಅವಶೇಷವೂ ಈಗ ಉಳಿದಿಲ್ಲ. ದುರಂತವೆಂದರೆ, ಮನಾಲಿಗೆ ಪ್ರಯಾಣಿಕರನ್ನು ಕರೆತಂದ ಅನೇಕ ಪ್ರವಾಸಿ ಕಾರುಗಳನ್ನು ಇದೇ ಸ್ಥಳದಲ್ಲಿ ನಿಲ್ಲಿಸಲಾಗಿತ್ತು. ರಾತ್ರಿ ವೇಳೆ ಸಂಭವಿಸಿದ ಮೇಘಸ್ಫೋಟ ಬೆಳಕು ಹರಿಯುವಷ್ಟರಲ್ಲಿ, ಅಲ್ಲಿದ್ದ ಎಲ್ಲಾ ವಾಹನಗಳನ್ನು ನೀರುಪಾಲಾಗಿಸಿತ್ತು. ಅವುಗಳಲ್ಲಿ ಮಲಗಿದ್ದ ಚಾಲಕರಲ್ಲಿ ಕೆಲವರು ಇದುವರೆಗೂ ಪತ್ತೆಯಾಗಿಲ್ಲ. ಹಲವು ವಾಹನಗಳ ನಾಮಫಲಕಗಳು ಮಾತ್ರ ನದಿಯಲ್ಲಿ ತೇಲುತ್ತಿರುವುದು ಕಂಡುಬಂದಿದೆಯಂತೆ. ಆ ಘಟನೆಯ ನಂತರ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಪದೇ ಪದೇ ಮೇಘಸ್ಫೋಟ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಅನೇಕ ಪ್ರವಾಸಿ ವಾಹನಗಳನ್ನು ಇಂದಿಗೂ ಮನಾಲಿಯಲ್ಲಿಯೇ ನಿಲ್ಲಿಸಲಾಗಿದೆ. ಇಲ್ಲಿನ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದ್ದು, ನಗರದ ಒಳಗೆ ಕೂಡ ಕಡಿದಾದ ರಸ್ತೆಗಳಲ್ಲಿ ಬಹುಕಷ್ಟದಿಂದ ಸಂಚರಿಸುವಂತಾಗಿದೆ. ಜೊತೆಗೆ, ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ರಸ್ತೆಗಳ ರಿಪೇರಿ ಕೆಲಸ ಕೂಡ ಕೈಗೊಳ್ಳುವಂತಿಲ್ಲ. ಆದ್ದರಿಂದ ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ಮನಾಲಿ ಈಗ ಪ್ರಕೃತಿ ವಿಕೋಪಕ್ಕೆ ಸಿಲುಕಿ ಅಕ್ಷರಶಃ ಜರ್ಜರಿತವಾಗಿದೆ.



ಮೇಘಸ್ಫೋಟದ ಪರಿಣಾಮ ಹಾಳಾಗಿರುವ ರಸ್ತೆ

ಪ್ರಮುಖ ಸ್ಥಳಗಳು

- ಹಿಡಿಂಬಾ ದೇಗುಲ
- ರೋಹತಾಂಗ್ ಪಾಸ್
- ಸೋಲಂಗ್ ವ್ಯಾಲಿ
- ಟಿಬೆಟಿಯನ್ ಮಾನೆಸ್ಟ್ರೀ
- ವಸಿಷ್ಠ ದೇಗುಲ
- ಮಾಲ್ ರಸ್ತೆ



ಪ್ರವಾಸಿಗರ ಸಂಖ್ಯೆ ಇಳಿಕೆ

ಸ್ಥಳೀಯರ ಪ್ರಕಾರ, ವಿಪರೀತ ಮಳೆಯ ಕಾರಣದಿಂದ ಉಂಟಾದ ಸಾವು-ನೋವು, ಆಸ್ತಿ-ಪಾಸ್ತಿ ನಾಶದ ಪ್ರಮಾಣ ದೊಡ್ಡದಾಗಿದೆ. ಆದರೆ, ಅದು ಪ್ರವಾಸೋದ್ಯಮಕ್ಕೆ ಪೆಟ್ಟು ಬೀಳುವ ಆತಂಕದಿಂದ ಸರ್ಕಾರ ನೈಜ ಅಂಕಿಅಂಶಗಳನ್ನು ಜಗತ್ತಿನಿಂದ ಮುಚ್ಚಿಟ್ಟಿದೆ. ಕಾರಣವೇನೆಂದರೆ, ಮನಾಲಿಯ ಮುಖ್ಯ ಆದಾಯವಿರುವುದೇ ಅದರ ಪ್ರವಾಸೋದ್ಯಮದಲ್ಲಿ. ಸಾಮಾನ್ಯವಾಗಿ ಡಿಸೆಂಬರ್-ಜನವರಿಯಲ್ಲಿ ಇಲ್ಲಿ ಮಂಜು ಬೀಳುವುದರಿಂದ ಈ ಸಮಯದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿರುತ್ತದೆ. ಉಳಿದಂತೆ, ಲೇಹ್-ಲಡಾಕ್ ಮತ್ತು ಹಿಮಾಲಯ ಸುತ್ತಮುತ್ತಲಿನ ಪ್ರದೇಶಗಳಿಗೆ ಬೈಕ್ ಟ್ರಿಪ್ ಹೋಗುವವರು ಅಥವಾ ಇತರ ಪ್ರವಾಸಿಗರು ನಿರಂತರವಾಗಿ ಮನಾಲಿಗೆ ಭೇಟಿ ನೀಡುವುದರಿಂದ ಇಲ್ಲಿ ವರ್ಷವಿಡೀ ಪ್ರವಾಸಿಗರು ಕಂಡು ಬರುತ್ತಾರೆ. ಆದರೆ, ಈ ಪ್ರಕೃತಿ ವಿಕೋಪದಿಂದ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದ್ದು, ಇಲ್ಲಿನ ಜನನಿಬಿಡ ಪ್ರದೇಶವಾದ ಮಾಲ್ ರೋಡ್ ಕೂಡ ಭಣಗುಟ್ಟುತ್ತಿದೆ. ಇಲ್ಲಿನ ಹಲವು ಅಂಗಡಿಗಳು ಮುಚ್ಚಬೇಕಾದ ಪರಿಸ್ಥಿತಿಗೆ ಬಂದಿವೆ. ಇಲ್ಲಿನ ಬಹುತೇಕ ಮೂಲಸೌಕರ್ಯಗಳು ಹಾಳಾಗಿದ್ದು, ಅದರ ದುರಸ್ತಿ ಕಾರ್ಯ ನಿಧಾನವಾಗಿ ಆರಂಭಗೊಂಡಿದ್ದು, ಮತ್ತೊಮ್ಮೆ ಪ್ರವಾಸೋದ್ಯಮ ಚಿಗಿತುಕೊಳ್ಳುವ ಮುನ್ನ ಮನಾಲಿಯನ್ನು ಮೊದಲಿನಂತೆ ಮಾಡುವ ಎಲ್ಲಾ ಪ್ರಯತ್ನ ಆರಂಭಗೊಂಡಿದೆ. ಮೇಘಸ್ಫೋಟದಿಂದ ನಿರ್ನಾಮವಾಗಿರುವ ಬಸ್ ನಿಲ್ದಾಣದ ನಿರ್ಮಾಣ ಕಾರ್ಯ ಕೂಡ ಆರಂಭಗೊಂಡಿದೆ. ಆದರೆ, ಮನಾಲಿಯಿಂದ ಚಂಡೀಗಢವನ್ನು ಸಂಪರ್ಕಿಸುವ ರಸ್ತೆಯ ನಡುವಿನ ಮಂಡಿ ಜಿಲ್ಲೆಯಲ್ಲಿ ಕೂಡ ಮೇಘಸ್ಫೋಟ ಸಂಭವಿಸಿರುವುದರಿಂದ ರಸ್ತೆಗಳು ಉತ್ತಮ ಸ್ಥಿತಿಯಲ್ಲಿಲ್ಲ. ಈಗಲೂ ಮನಾಲಿಯಿಂದ ಚಂಡೀಗಢ ತಲುಪುವ ರಸ್ತೆಯಲ್ಲಿ ದೊಡ್ಡ ವಾಹನಗಳಿಗೆ ಅನುವು ಮಾಡಿಕೊಡುತ್ತಿಲ್ಲ. ಕೇವಲ ಸಣ್ಣ ವಾಹನಗಳು ಮಾತ್ರ ಸಂಚರಿಸುತ್ತಿವೆ.



ಚಂಡೀಗಢ-ಮನಾಲಿ ಹೆದ್ದಾರಿಯಲ್ಲಿ ಇತ್ತೀಚಿಗೆ ಸಂಭವಿಸಿದ ಭೂಕುಸಿತದ ಈ ದೃಶ್ಯ ಈ ಪ್ರದೇಶದ ಹವಾಮಾನ ವೈಪರೀತ್ಯದ ಪರಿಣಾಮಕ್ಕೆ ಕನ್ನಡಿ



• ಎಂ.ಎಸ್.ಪೂಜಾರ

ನಾಲಗೆ ತೊಡರು

ಕೆಳಗಿನ ಸಾಲುಗಳನ್ನು ಬೇಗ ಬೇಗನೆ ಹೇಳಲು ಪ್ರಯತ್ನಿಸಿ

1. ಚಿಂಪ್ರ ಕೆಂಪ ಪಂಪಣ್ಣ
2. ಗೌಡ್ರ ಮನ್ಯಾಗ ಗುಡಾರ ಐತಿ ದಡಾನ ಹೋಗಿ ಬಡಾನ ತೊಂಬಾ

ಸ್ವಲ್ಪ ಯೋಚ್ನೆ ಮಾಡಿ

ಗೌಡರ ಹೊಲದ ಔಡಲ

(ಔಡಲ:ಹರಳು ಗಿಡ)

ಇದನ್ನು ಒತ್ತಕ್ಷರ ಬಳಸಿ ನಾಲ್ಕೇ ಅಕ್ಷರಗಳಲ್ಲಿ ಬರೆಯಬಲ್ಲಿರಾ?


ಕೊಂಚ ತಂತ್ರ

ಭಾರತ ದೇಶದ ಪಂಚವಾರ್ಷಿಕ ಯೋಜನೆ ಪ್ರಾರಂಭವಾದ ವರ್ಷವನ್ನು ಸುಲಭವಾಗಿ ನೆನಪಿಡಬಹುದು. ಹೇಗೆ ಅನ್ನುತ್ತೀರಾ?

ಹೀಗೆ: 5 ವರ್ಷಕ್ಕೆ 1 ಸಾರಿ ಈ ಯೋಜನೆ ಜಾರಿಯಾಗುವುದರಿಂದ ಆ 5 ಮತ್ತು 1 ಅಂಕಿಗಳೇ ಹೇಳುತ್ತವೆ ಆ ಇಸ್ವಿ =

1951






ಡಣ್ಣ ಚಿಕ್ಕ ಕೀರ್ತಿ ಕಥೆಯ

ಪೂರಿ ಮೇಲಕೆ ಹಾರಿ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಬೆಳಗಿನ ತಿಂಡಿಗೆ ಏನು ಮಾಡುವುದು ಎಂದು ಬಹಳಷ್ಟು ಯೋಚಿಸಿ ಕೊನೆಗೆ ಪೂರಿ–ಪಲ್ಯ ತಿನ್ನುವ ಆಸೆಯಾಗಿ ಅದನ್ನೇ ಸಿದ್ಧಪಡಿಸೋಣ ಎಂದು ತೀರ್ಮಾನಿಸಿದ. ಹೀಗೆ ಹಿಟ್ಟು ಕಲಸಿ, ದೊಡ್ಡ ದೊಡ್ಡ ಗಾತ್ರದ ಪೂರಿ ಒತ್ತಿ ಅದನ್ನು ಕಾದ ಎಣ್ಣೆಯಲ್ಲಿ ಬಿಟ್ಟ. ಪೂರಿಯ ಗಾತ್ರ ಇಡೀ ಬಾಣಲೆಯನ್ನು ಆಕ್ರಮಿಸಿತ್ತು. ಕೆಲ ಕ್ಷಣದಲ್ಲೇ ಪೂರಿ ಉಬ್ಬಿ ಉಬ್ಬಿ ಬಲೂನ್ ರೂಪ ಪಡೆಯಿತು. ಪೂರಿ ಒಳಗಡೆ ಅದೇನು ತುಂಬಿತೋ, ಅದು ಬಿಸಿಗಾಳಿಯ ಬಲೂನ್‌ನಂತೆ ಮೇಲಕ್ಕೆ ಹಾರಲಾರಂಭಿಸಿತು!



ಜಾಣಪದ ಆಟ

ಇಲ್ಲಿ ಕೊಟ್ಟಿರುವ ಲಂಬ ಸಾಲಿನಲ್ಲಿರುವ ಸಂಯುಕ್ತ ಪದಕ್ಕೆ ಪಟ್ಟಿಯಲ್ಲಿ ಕೊಟ್ಟಿರುವ ಎರಡಕ್ಷರ ಪದಗಳಲ್ಲಿ ಸೂಕ್ತವಾದ ಪದ ಆರಿಸಿ. ಆ ಪದವನ್ನು ಹಿಗ್ಗಿಸಿ ಹಿಂದೆ ಮುಂದೆ ತುಂಬಿದರೆ ಮೂರಕ್ಷರಗಳ ಪದಗಳಾಗುತ್ತವೆ. ಯಾವ ಅಕ್ಷರಕ್ಕೆ ಯಾವ ಪದ ಹಿಗ್ಗಿಸಿ ತುಂಬುವಿರಿ ಯೋಚಿಸಿ.

1		ಜೋ	
2		ಗು	
3		ಳ	
4		ಹಾ	
5		ಡು	
6		ವ	
7		ತಾ	
8		ಯಿ	
9		ಸ್ವ	
10		ರ	

ಪದಪಟ್ಟಿ

ಬಗೆ	ಕಾಲು	ತಿರಿ	ಸುರ	ನವೆ
ನೇರ	ಗತಿ	ಬಿರಿ	ಕಾಸು	ಹರ

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಬಳ ಕಟ ಜಗ

ವಾರಿ ಗರು ನಾದಿ

ಅಕ್ಷರ ಪಟ್ಟಿ

ಗೀ	ಸಿಂ	ಸ	ಲಿ	ಧಿ	ಸಂ
ಟ	ಪ	ಕ	ಡ	ನಿ	ಸ

ಮರಳಿ ಮೂಲ ಸಂಖ್ಯೆಗೆ

ಹತ್ತರೊಳಗಿನ ಒಂದು ಅಂಕಿಯನ್ನು ಮೇಲೆ ಬರೆದುಕೊಳ್ಳಿ, ಕೆಳಗೆ ಮತ್ತೊಂದು ಅಂಕಿಯನ್ನು ಬರೆದುಕೊಳ್ಳಿ. ಅವೆರಡನ್ನೂ ಕೂಡಿಸಿ ಬಂದ ಬಿಡಿಸ್ಥಾನದ ಅಂಕಿಯನ್ನು ಮತ್ತೆ ಮೊದಲಿನ ಸಂಖ್ಯೆಯ ಬದಿಗೆ ಬರೆಯಿರಿ. ಅದರ ಕೆಳಗೆ ಹಿಂದಿನ ಸಾಲಿನ ಮೇಲಿನ ಅಂಕಿಯನ್ನೇ ಮತ್ತೆ ಬರೆಯಿರಿ. ಈಗ ಎರಡನೇ ಸಾಲಿನ ಅಂಕಿಗಳನ್ನು ಮತ್ತೆ ಕೂಡಿಸಿ, ಬಿಡಿ ಅಂಕಿಯನ್ನು ಹಿಂದಿನಂತೆ ಅದರ ಪಕ್ಕದಲ್ಲಿ ಬರೆದು, ಎರಡನೇ ಸಾಲಿನ ಮೇಲಿನ ಅಂಕಿಯನ್ನೇ ಮೂರನೆ ಅಂಕಿಯ ಕೆಳಗೆ ಬರೆಯಿರಿ...ಹೀಗೆ ಮುಂದುವರಿಸಿ, ಮೊಟ್ಟ ಮೊದಲು ಬರೆದುಕೊಂಡಿದ್ದ ‘ಅಂಕಿ ಜೋಡಿ’ಯೇ ಪುನಃ ಬರುವವರೆಗೂ ಕೂಡಿಸಿರಿ. ಅಲ್ಲಿಗೆ ಆಟ ಮುಕ್ತಾಯ. ಈ ಆಟದಿಂದ ಮನಸ್ಸಿನಲ್ಲೇ ಸಂಕಲನ ಮಾಡುವ ಕ್ರಿಯೆ ತೀವ್ರವಾಗುವುದು.

ಉದಾ:- 7/6 ಮೊಟ್ಟ ಮೊದಲ ‘ಜೋಡಿ ಅಂಕಿ’ಗಳು

ಈಗ ಆಟ ಪ್ರಾರಂಭ

```
+ [7] 3 0 3 3 6 9 5 4 9 3 2 5 7 2 9 1 0 1 1 2 3 5 8 3 1 4 5 9 4 →
  [6] 7 3 0 3 3 6 9 5 4 9 3 2 5 7 2 9 1 0 1 1 2 3 5 8 3 1 4 5 9
-------------------------------------------------------------------
→ 3 7 0 7 7 4 1 5 6 1 7 8 5 3 8 1 9 0 9 9 8 7 5 2 7 9 6 5 1 6 [7]
  4 3 7 0 7 7 4 1 5 6 1 7 8 5 3 8 1 9 0 9 9 8 7 5 2 7 9 6 5 1 [6]
```

ಇಂಥ ಬೇರೆ ‘ಅಂಕಿ ಜೋಡಿ’ಗಳನ್ನು ಬಳಸಿಕೊಂಡು ನೀವೂ ಆಡಿ ನೋಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಪ್ರವಾಸನೆ 2.ಸವಾರಿಧಿ 3.ಪ್ರಮಾದರಿ 4.ನಿಧನಸ್ಸು 5.ವಾನರಳು 6.ಗಿರವಿಕೆ

ಜಾಣಪದ ಆಟ: 1.ಅಂಗಡಿ 2.ಕಂಬಳಿ 3.ಇಂಚರ 4.ಉಂಬಳಿ 5.ಹಂಬಲ 6.ಚಂದನ 7.ಚುಂಬಕ 8.ನಂದನ 9.ಪಂಜರ 10.ಮಂದಾರ 11.ಶಂಕರ 12.ಹಂದರ 13.ಜಂಜಡ 14.ಇಂಧನ 15.ರಂಜನ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಯಶಿಕ ಸಿ.
ಬೆಂಗಳೂರು




ಯಶಸ್ ಗೌಡ ಎಸ್.
ಹಾಸನ



ಪೂರ್ವಿ ಎಂ.ತಾಳಿಕೋಟಿ
ಹುಬ್ಬಳ್ಳಿ



ಗೌರಿಕ ಸಿ.
ಹೊನ್ನಾಳಿ



ಚಿರಾಗ್ ಅದ್ವೈತ್
ಮೈಸೂರು




ದಿಶಾ ಆರ್.ಜಿ.
ಉತ್ತರ ಕನ್ನಡ

ಕ್ರಿಕೆಟ್: ಕಣಕ್ಕಿಳಿಯಲು ರಾಹುಲ್, ಇಶಾನ್ ಕಿಶನ್ ಪೈಪೋಟಿ • ಪಂದ್ಯಕ್ಕೆ ಮಳೆ ಭೀತಿ

ರೋಹಿತ್ ಪಡೆಗೆ ಪಾಕ್ ಸವಾಲು

ಪ್ರಜಾವಾಣಿ ವಾರ್ತೆ



ಕೆ.ಎಲ್ ರಾಹುಲ್ ಹಾಗೂ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಕೊಲಂಬೊ: ಕ್ರಿಕೆಟ್ ರಂಗದ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಎಂಟು ದಿನಗಳ ನಂತರ ಮತ್ತೊಮ್ಮೆ ಮುಖಾಮುಖಿಯಾಗಲಿವೆ.

ಭಾನುವಾರ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಈ ಎರಡೂ ತಂಡಗಳು ಸೆಣಸಲಿವೆ. ಹೋದವಾರ ಗುಂಪು ಹಂತದ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗ ಮತ್ತು ಬಾಬರ್ ಆಜಂ ನಾಯಕತ್ವದ ತಂಡ ಆಡಿದ್ದವು. ಆದರೆ, ಮಳೆ ಬಂದ ಕಾರಣ ಪಂದ್ಯ ಪೂರ್ಣಗೊಳ್ಳದೇ ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಲಾಗಿತ್ತು.

ಆ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು 266 ರನ್ ಮೊತ್ತ ಗಳಿಸಲು ಇಶಾನ್ ಕಿಶನ್ ಹಾಗೂ ಹಾರ್ದಿಕ್ ಪಾಂಡ್ಯ ಅವರ ಚೆಂದದ ಬ್ಯಾಟಿಂಗ್ ನೆರವಾಗಿತ್ತು. ಭಾರತ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳಾದ ರೋಹಿತ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ ಹಾಗೂ ಶ್ರೇಯಸ್ ಅಯ್ಯರ್ ವೈಫಲ್ಯ ಅನುಭವಿಸಿದ್ದರು. ಪಾಕ್ ಬೌಲರ್‌ಗಳಾದ ಶಾಹೀನ್ ಆಫ್ರಿದಿ, ನಸೀಂ ಶಾ ಹಾಗೂ ಹ್ಯಾರಿಸ್ ರವೂಫ್ ಅವರ ದಾಳಿಗೆ ಕುಸಿದಿದ್ದರು.

ಗಾಯಗೊಂಡು ದೀರ್ಘ ಕಾಲದಿಂದ ಹೊರಗುಳಿದಿದ್ದ ಕೆ.ಎಲ್. ರಾಹುಲ್ ತಂಡಕ್ಕೆ ಮರಳಿದ್ದಾರೆ. ಅವರಿಗೆ ಈ ಪಂದ್ಯದಲ್ಲಿ ಕಣಕ್ಕಿಳಿಯುವ ಅವಕಾಶ ಲಭಿಸುವುದು ಬಹುತೇಕ ಖಚಿತ. ಅವರಿಗೆ ವಿಕೆಟ್‌ಕೀಪಿಂಗ್ ಹೊಣೆ ನೀಡುವ ನಿರೀಕ್ಷೆಯೂ ಇದೆ. ಆದರೆ ಇಶಾನ್ ಕಿಶನ್ ಕಳೆದ ಪಂದ್ಯಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಆದ್ದರಿಂದ ಇವರಿಬ್ಬರಲ್ಲಿ ಯಾರಿಗೆ ಮಣೆ ಹಾಕಲಾಗುತ್ತದೆ ಎಂಬ ಕುತೂಹಲ ಗರಿಗೆದರಿದೆ.

ಆದರೆ ಭಾರತದ ಬೌಲರ್‌ಗಳಾದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ ಹಾಗೂ ಮೊಹಮ್ಮದ್ ಸಿರಾಜ್ ಅವರಿಗೆ ಆ ಪಂದ್ಯದಲ್ಲಿ ಬೌಲಿಂಗ್ ಮಾಡುವ ಅವಕಾಶ ಲಭಿಸಿರಲಿಲ್ಲ. ನೇಪಾಳ ತಂಡದ ಎದುರು ಆಡಿದ್ದರು.

ಪಾಕ್ ಬೌಲಿಂಗ್ ಚೆನ್ನಾಗಿದೆ: ಗಿಲ್

ಕೊಲಂಬೊ (ಪಿಟಿಐ): ಪಾಕಿಸ್ತಾನದ ಬೌಲಿಂಗ್ ಉತ್ತಮವಾಗಿದೆ. ಅದರೆ ಅವರ ಎದುರು ನಮ್ಮ ತಂಡವು ಹೆಚ್ಚು ಪಂದ್ಯಗಳನ್ನು ಆಡದ ಕಾರಣ ಮುಖ್ಯ ಟೂರ್ನಿಗಳಲ್ಲಿ ಎದುರಾದಾಗ ತುಸು ಕಷ್ಟವಾಗುತ್ತದೆ ಎಂದು ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಶುಭಮನ್ ಗಿಲ್ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾವು ಬೇರೆ ಕೆಲವು ತಂಡಗಳ ಎದುರು ಆಗಾಗ ಪಂದ್ಯಗಳನ್ನು ಆಡುತ್ತೇವೆ. ಆ ರೀತಿ ಪಾಕಿಸ್ತಾನ ವಿರುದ್ಧ ಆಡಿಲ್ಲ. ಆದ್ದರಿಂದ ಸ್ವಲ್ಪ ವ್ಯತ್ಯಾಸವಾಗುತ್ತದೆ' ಎಂದರು.

ಏಷ್ಯಾ ಕಪ್ 2023

ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಆದರೆ ಆ ಪಂದ್ಯದಲ್ಲಿ ಬೂಮ್ರಾ ಆಡಿರಲಿಲ್ಲ. ಶಮಿ, ಸಿರಾಜ್, ಶಾರ್ದೂಲ್ ಹಾಗೂ ಪಾಂಡ್ಯ ಅವರ ಬೌಲಿಂಗ್‌ಗೆ ನೇಪಾಳದ ಉದಯೋನ್ಮುಖ ಆಟಗಾರರು ದಿಟ್ಟ ಉತ್ತರ ನೀಡಿ ಗಮನ ಸೆಳೆದರು. ಈ ಪಂದ್ಯಕ್ಕೂ ಮಳೆ ಅಡ್ಡಿಯಾಗಿತ್ತು. ಡಿಎಲ್‌ಎಸ್ ನಿಯಮದ ಅನ್ವಯ ಭಾರತ ಜಯಿಸಿತು.

ಇದೀಗ ನಾಲ್ಕರ ಘಟ್ಟದಲ್ಲಿ ಭಾರತ ತಂಡವು ತನ್ನ ಪಾಲಿನ ಮೂರು ಪಂದ್ಯಗಳ ಪೈಕಿ ಮೊದಲನೆಯದನ್ನು ಪಾಕ್ ಎದುರು ಆಡಲಿದೆ. ಆದರೆ ಬಾಬರ್ ಬಳಗಕ್ಕೆ ಇದು ಎರಡನೇ ಪಂದ್ಯವಾಗಿದೆ. ಮೊದಲನೇ ಪಂದ್ಯದಲ್ಲಿ ಪಾಕ್ ತಂಡವು ಬಾಂಗ್ಲಾದೇಶವನ್ನು ಸೋಲಿಸಿದೆ. ಇಲ್ಲಿ ಗೆದ್ದರೆ ಫೈನಲ್ ಹಾದಿ ಸುಗಮ.

ಪಾಕ್ ತಂಡದ ಬ್ಯಾಟಿಂಗ್ ವಿಭಾಗವೂ ಚೆನ್ನಾಗಿದೆ. ಬೌಲಿಂಗ್ ಕೂಡ ಬಲಾಢ್ಯವಾಗಿರುವುದರಿಂದ ಅಪಾರ ಆತ್ಮವಿಶ್ವಾಸದಲ್ಲಿದೆ.


ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಶಾರ್ದೂಲ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಜಸ್‌ಪ್ರೀತ್ ಬೂಮ್ರಾ, ಅಕ್ಷರ್ ಪಟೇಲ್, ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ಪ್ರಸಿದ್ಧಕೃಷ್ಣ, ತಿಲಕ್ ವರ್ಮಾ.

ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಇಮಾಮ್ ಉಲ್ ಹಕ್, ಫಕರ್ ಜಮಾನ್, ಮೊಹಮ್ಮದ್ ರಿಜ್ವಾನ್, ಆಘಾ ಸಲ್ಮಾನ್, ಇಫ್ತಿಕಾರ್ ಅಹಮದ್, ಶಾದಾಬ್ ಖಾನ್, ಫಾಹೀಂ ಅಶ್ರಫ್, ಶಾಹೀನ್ ಆಫ್ರಿದಿ, ನಸೀಮ್ ಷಾ, ಹ್ಯಾರಿಸ್ ರವೂಫ್, ಸೌದ್ ಶಕೀಲ್, ಮೊಹಮ್ಮದ್ ನವಾಜ್, ಉಸಾಮಾ ಮೀರ್, ಅಬ್ದುಲ್ಲಾ ಶಫೀಕ್, ಮೊಹಮ್ಮದ್ ಹ್ಯಾರಿಸ್, ಮೊಹಮ್ಮದ್ ವಾಸೀಂ ಜೂನಿಯರ್.

ಸೂಪರ್ ಜೈಂಟ್ಸ್‌ಗೆ ಶ್ರೀಧರನ್

ಲಖನೌ (ಪಿಟಿಐ): ಶ್ರೀಧರನ್ ಶ್ರೀರಾಮ್ ಅವರನ್ನು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಲಖನೌ ಸೂಪರ್ ಜೈಂಟ್ಸ್ ತಂಡದ ಸಹಾಯಕ ಕೋಚ್ ಆಗಿ ನೇಮಕ ಮಾಡಲಾಗಿದೆ.

ಮುಂದಿನ ವರ್ಷದ ಲೀಗ್ ವೇಳೆಗೆ ಅವರು ಕಾರ್ಯಾರಂಭ ಮಾಡುವರು.



ಭಾರತದಲ್ಲಿ 2023 ರ ಜಿ20 ಶೃಂಗ ಸಭೆ

ಏಷ್ಯಾ ಕಪ್: ಬಾಂಗ್ಲಾ ವಿರುದ್ಧ ಶ್ರೀಲಂಕಾಕ್ಕೆ ಗೆಲುವು

ಸಮರವಿಕ್ರಮ ಸುಂದರ ಬ್ಯಾಟಿಂಗ್

ಕೊಲಂಬೊ (ಪಿಟಿಐ): ಏಳು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡ ಸದೀರ ಸಮರವಿಕ್ರಮ ಅವರ ಸೊಗಸಾದ ಬ್ಯಾಟಿಂಗ್ ಮತ್ತು ಬೌಲರ್‌ಗಳ ಶಿಸ್ತಿನ ದಾಳಿಯ ನೆರವಿನಿಂದ ಶ್ರೀಲಂಕಾ ತಂಡ, ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು 21 ರನ್‌ಗಳಿಂದ ಮಣಿಸಿತು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೆಯ ತಂಡ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 257 ರನ್ ಗಳಿಸಿತು. ಸಮರವಿಕ್ರಮ (93; 72ಎ, 4X8, 6X2) ಹಾಗೂ ಮೆಂಡಿಸ್ (50; 73ಎ; 4X6, 6X1) ಅವರು ಚೆಂದದ ಬ್ಯಾಟಿಂಗ್ ಮಾಡಿದರು.

ಗುರಿ ಬೆನ್ನಟ್ಟಿದ ಬಾಂಗ್ಲಾ ತಂಡ 48.1 ಓವರ್‌ಗಳಲ್ಲಿ 236 ರನ್‌ಗಳಿಗೆ ಆಲೌಟಾಯಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ತೌಹೀದ್ ಹೃದಯ್ (82 ರನ್; 97 ಎ.) ಹೊರತುಪಡಿಸಿ ಇತರರು ವಿಫಲರಾದರು.

ತಲಾ ಮೂರು ವಿಕೆಟ್ ಪಡೆದ ಮಹೀಶ್ ತೀಕ್ಷಣ, ದಸುನ್ ಶನಕ ಮತ್ತು ಮತೀಶ ಪಥಿರಾಣ ಅವರು ಬಾಂಗ್ಲಾ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದರು.



ಸದೀರ ಸಮರವಿಕ್ರಮ –ಎಎಫ್‌ಪಿ ಚಿತ್ರ

ಸಮರವಿಕ್ರಮ ಆಸರೆ: ಇದಕ್ಕೂ ಮುನ್ನ ಟಾಸ್ ಗೆದ್ದ ಬಾಂಗ್ಲಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಲಂಕಾ ತಂಡದ ಆರಂಭಿಕ ಬ್ಯಾಟರ್ ಕರುಣಾರತ್ನೆ ಆರನೇ ಓವರ್‌ನಲ್ಲಿ ಹಸನ್ ಮೆಹಮೂದ್ ಎಸೆತಕ್ಕೆ ಔಟಾದರು.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ನಿಸಾಂಕ (40; 60ಎ) ಅವರೊಂದಿಗೆ ಸೇರಿದ ಮೆಂಡಿಸ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 74 ರನ್ ಸೇರಿಸಿದರು. ಶೊರಿಫುಲ್ ಇಸ್ಲಾಂ 24ನೇ ಓವರ್‌ನಲ್ಲಿ ಹಾಕಿದ ಎಸೆತದಲ್ಲಿ ನಿಸಾಂಕ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಎರಡು ಓವರ್‌ಗಳ ಅಂತರದಲ್ಲಿ ಮೆಂಡಿಸ್ ಕೂಡ ಇಸ್ಲಾಂ ಬೌಲಿಂಗ್‌ನಲ್ಲಿ ಔಟಾದರು. ಆಗ ಕ್ರೀಸ್‌ನಲ್ಲಿದ್ದ ಸಮರವಿಕ್ರಮ ಏಕಾಂಗಿಯಾಗಿ ಹೋರಾಟ ಮಾಡಿದರು. ಒಂದು ಬದಿಯಲ್ಲಿ ವಿಕೆಟ್‌ಗಳು ಪತನವಾಗುತ್ತಿದ್ದರೂ ದಿಟ್ಟತನದ ಬ್ಯಾಟಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 257 (ಪಥುಮ್ ನಿಸಾಂಕ 40, ಕುಶಾಲ ಮೆಂಡಿಸ್ 50, ಸದೀರ ಸಮರವಿಕ್ರಮ 93, ತಸ್ಕಿನ್ 62ಕ್ಕೆ3, ಶೊರಿಫುಲ್ ಇಸ್ಲಾಂ 48ಕ್ಕೆ2, ಹಸನ್ 57ಕ್ಕೆ3) **ಬಾಂಗ್ಲಾದೇಶ:** 48.1 ಓವರ್‌ಗಳಲ್ಲಿ 236 (ತೌಹೀದ್ ಹೃದಯ್ 82, ಮುಷ್ಫಿಕುರ್ ರಹೀಂ 29, ಮೆಹದಿ ಹಸನ್ ಮಿರಾಜ್ 28, ಮಹೀಶ್ ತೀಕ್ಷಣ 69ಕ್ಕೆ 3, ದಸುನ್ ಶನಕ 28ಕ್ಕೆ 3, ಮತೀಶ ಪಥಿರಾಣ 58ಕ್ಕೆ 3) ಫಲಿತಾಂಶ: ಶ್ರೀಲಂಕಾಕ್ಕೆ 21 ರನ್ ಗೆಲುವು

ಅಮೆರಿಕ ಓಪನ್: ಫೈನಲ್‌ನಲ್ಲಿ ಅನುಭವಿ ಜೊಕೊವಿಚ್ ಎದುರಾಳಿ


ಮೆಡ್ವೆಡೇವ್‌ಗೆ ಮಣಿದ ಅಲ್ಕರಾಜ್

ನ್ಯೂಯಾರ್ಕ್ (ಎಎಫ್‌ಪಿ): ಅಗ್ರ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರನ್ನು ಹಾಲಿ ಚಾಂಪಿಯನ್ ಪಟ್ಟದಿಂದ ಶುಕ್ರವಾರ ಪದಚ್ಯುತಗೊಳಿಸಿದ ಡೇನಿಯಲ್ ಮೆಡ್ವೆಡೇವ್, ಅಮೆರಿಕ ಓಪನ್ ಪುರುಷರ ಸಿಂಗಲ್ಸ್ ಫೈನಲ್ ತಲುಪಿದರು.

ಭಾನುವಾರ ನಡೆಯುವ ಫೈನಲ್‌ನಲ್ಲಿ ಅವರು 23 ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್, ಎರಡನೇ ಶ್ರೇಯಾಂಕದ ನೊವಾಕ್ ಜೊಕೊವಿಚ್ ಅವರನ್ನು ಎದುರಿಸಲಿದ್ದಾರೆ. 2021ರಲ್ಲೂ ಇವರಿಬ್ಬರು ಫೈನಲ್ ಎದುರಾಳಿಗಳಾಗಿದ್ದರು.

ರಷ್ಯಾದ ಮೆಡ್ವೆಡೇವ್ 7–6 (7–3), 6–1, 3–6, 6–3 ರಿಂದ ಅಲ್ಕರಾಜ್ ಅವರನ್ನು ಸೋಲಿಸಿ ಐದನೇ ಬಾರಿ ಗ್ರ್ಯಾನ್‌ಸ್ಲಾಮ್ ಫೈನಲ್ ತಲುಪಿದರು. 2008ರ ನಂತರ ಸತತ ಎರಡು ವರ್ಷ ಚಾಂಪಿಯನ್ ಆದ ಮೊದಲ ಆಟಗಾರನಾಗುವ ಅಲ್ಕರಾಜ್ ಕನಸನ್ನೂ ಭಗ್ನಗೊಳಿಸಿದರು. ರೋಜರ್ ಫೆಡರರ್ 2004 ರಿಂದ 2008ರವರೆಗೆ ಐದು ವರ್ಷ ಸತತವಾಗಿ ಗೆದ್ದ ನಂತರ ಫ್ಲಷಿಂಗ್ ಮಿಡೋಸ್‌ನಲ್ಲಿ ಯಾರೂ ಬೆನ್ನುಬೆನ್ನಿಗೆ ಪ್ರಶಸ್ತಿ ಗೆದ್ದಿಲ್ಲ.

'ಅವರು (ಅಲ್ಕರಾಜ್) ನಂಬಲಸಾಧ್ಯ ರೀತಿಯ ಆಟಗಾರ. ಅವರನ್ನು ಸೋಲಿಸಬೇಕಾದರೆ ನಮ್ಮ ಆಟ ಮಾಮೂಲಿ ಆಟಕ್ಕಿಂತ ಎತ್ತರದಲ್ಲಿರಬೇಕು. ನಾನು ಹೇಗೊ ಅದನ್ನು ನಿಭಾಯಿಸಿದೆ' ಎಂದು 27 ವರ್ಷದ ಮೆಡ್ವೆಡೇವ್ ಪ್ರತಿಕ್ರಿಯಿಸಿದರು.



ಶುಕ್ರವಾರ ಕಾರ್ಲೋಸ್ ಅಲ್ಕರಾಜ್ ವಿರುದ್ಧದ ಸೆಮಿಫೈನಲ್ ಗೆಲುವಿನ ನಂತರ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರ ಪ್ರತಿಕ್ರಿಯೆ –ಎಎಫ್‌ಪಿ ಚಿತ್ರ

ಇನ್ನೊಂದೆಡೆ 36 ವರ್ಷದ ಜೊಕೊವಿಚ್ ಅವರು 24ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ಆಸ್ಟ್ರೇಲಿಯಾ ಆಟಗಾರ್ತಿ ಮಾರ್ಗರೆಟ್ ಕೋರ್ಟ್ ಹೆಸರಿನಲ್ಲಿರುವ ಸರ್ವಾಧಿಕ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲುವಿನ ದಾಖಲೆಯನ್ನು ಸರಿಗಟ್ಟುವ ಪ್ರಯತ್ನದಲ್ಲಿದ್ದಾರೆ. ಆ ಮೂಲಕ ಇಲ್ಲಿನ ಕಿರೀಟದೊಂದಿಗೆ ಅಗ್ರಕ್ರಮಾಂಕಕ್ಕೆ ಮರುಗು ನೀಡುವ ಅವಕಾಶ ಹೊಂದಿದ್ದಾರೆ.

3ನೇ ಶ್ರೇಯಾಂಕದ ಮೆಡ್ವೆಡೇವ್ ತಮ್ಮ ಏಕೈಕ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು 2021ರಲ್ಲಿ ಇಲ್ಲಿಯೇ ಗೆದ್ದುಕೊಂಡಿದ್ದರು. ಆ ವರ್ಷ ಅವರು ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ಅವರನ್ನೇ ನೇರ ಸೆಟ್‌ಗಳಲ್ಲಿ ಸೋಲಿಸಿದ್ದರು. ಇತರ ಮೂರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಚಾಂಪಿಯನ್ ಆಗಿದ್ದು ಕ್ಯಾಲೆಂಡರ್ ಗ್ರ್ಯಾಂಡ್‌ಸ್ಲಾಮ್ ಕೈತಪ್ಪಿದ ಹತಾಶೆಯಲ್ಲಿ ಜೊಕೊ ಅವರಿಗೆ ಆಗ ಕಣ್ಣೀರು ತಡೆಯಲಾಗಿರಲಿಲ್ಲ.

ಇಲ್ಲೂ ಅಮೋಘ ಆಟದ ಪ್ರದರ್ಶನವನ್ನೇ ನೀಡಿದ ಮೆಡ್ವೆಡೇವ್, ಸ್ಪೇನ್‌ನ ಗಟ್ಟಿಗನನ್ನು ಸೋಲಿಸಿ, ವಿಂಬಲ್ಡನ್ ಸೆಮಿಫೈನಲ್‌ನಲ್ಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡರು.

'ಬಹುಶಃ ಇಂಥ ಪಂದ್ಯಗಳನ್ನು ನಿಭಾಯಿಸಲು ಬೇಕಾದ ಪ್ರಬುದ್ಧತೆ ಇನ್ನೂ ಬರಬೇಕಾಗಿದೆ. ಅದನ್ನು ನಾನು ಕಲಿತುಕೊಳ್ಳಬೇಕಿದೆ' ಎಂದರು ಅಲ್ಕರಾಜ್.

ಜೊಕೊವಿಚ್ ಇನ್ನೊಂದು ಸೆಮಿಫೈನಲ್‌ನಲ್ಲಿ ಶ್ರೇಯಾಂಕರಹಿತ ಆಟಗಾರ ಬೆನ್ ಶೆಲ್ಟನ್ನ(ಅಮೆರಿಕ) ಅವರ ಯಶಸ್ಸಿನ ಓಟವನ್ನು 6–3, 6–2, 7–6 (7/4) ರಿಂದ ಅಂತ್ಯಗೊಳಿಸಿ 17 ಯತ್ನಗಳಲ್ಲಿ ಹತ್ತನೇ ಬಾರಿ ಇಲ್ಲಿ ಫೈನಲ್ ತಲುಪಿದರು.

'ಇನ್ನೊಂದು ಗ್ರ್ಯಾನ್‌ಸ್ಲಾಮ್ ಫೈನಲ್! ಈ ಸ್ಥಾನದಲ್ಲಿ ಇದಕ್ಕಿಂತ ಹೆಚ್ಚು ಖುಷಿ ಬೇರೆಯೇನಿಲ್ಲ' ಎಂದು ಸರ್ಬಿಯಾದ ಆಟಗಾರ ಹೇಳಿದರು.

ಕರ್ನಾಟಕ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಬಾಲಕರ ತಂಡದವರು 2–0 ಯಿಂದ ಮಣಿಪುರ ತಂಡವನ್ನು ಮಣಿಸಿ, 46ನೇ ಅಂತರ ರಾಜ್ಯ ಬ್ಯಾಡ್ಮಿಂಟನ್ ಟೂರ್ನಿ ಗೆದ್ದುಕೊಂಡರು.

ಶುಕ್ರವಾರ ನಡೆದ ಬಾಲಕರ ವಿಭಾಗದ ಮೊದಲ ಸಿಂಗಲ್ಸ್‌ನಲ್ಲಿ ಕರ್ನಾಟಕದ ಆಯುಷ್ ಶೆಟ್ಟಿ 21–14, 21–9 ರಿಂದ ಮಲೆಂಗಾಂಬ ಸಿಂಗ್ ಹೆಮಮ್ ಅವರನ್ನು ಮಣಿಸಿ ಮುನ್ನಡೆ ತಂದಿತ್ತರು. ಬಳಿಕ ನಡೆದ ಡಬಲ್ಸ್‌ನಲ್ಲಿ ನಿಕೊಲಸ್ ನಥಾನ್ ರಾಜ್– ತುಷಾರ್ ಸುವೀರ್ ಜೋಡಿ 21–19, 21–17 ರಿಂದ ರೋಹನ್‌ಕುಮಾರ್ ಸಿಂಗ್–ಅಲೆನ್ ಸಿಂಗ್ ರಾಜ್‌ಕುಮಾರ್ ಅವರನ್ನು ಮಣಿಸಿ ಪ್ರಶಸ್ತಿ ತಂದುಕೊಟ್ಟಿತು.

ವಿಶ್ವಕಪ್ : ಶ್ರೀನಾಥ್, ಮೆನನ್ ನೇಮಕ

ದುಬೈ (ಪಿಟಿಐ): ಭಾರತದ ನಿತಿನ್ ಮೆನನ್ ಮತ್ತು ಜಾವಗಲ್ ಶ್ರೀನಾಥ್ ಅವರು ಮುಂದಿನ ತಿಂಗಳು ಆರಂಭವಾಗಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಕ್ರಮವಾಗಿ ಅಂಪೈರ್ ಹಾಗೂ ರೆಫರಿಯಾಗಿ ನೇಮಕವಾಗಿದ್ದಾರೆ.

ಅಕ್ಟೋಬರ್ 5ರಂದು ನಡೆಯುವ ಇಂಗ್ಲೆಂಡ್ ಹಾಗೂ ನ್ಯೂಜಿಲೆಂಡ್ ನಡುವಣ ಉದ್ಘಾಟನೆ ಪಂದ್ಯದಲ್ಲಿ ನಿತಿನ್ ಮತ್ತು ಶ್ರೀನಾಥ್ ಅವರು ಕಾರ್ಯನಿರ್ವಹಿಸುವರು. ಪಾಲ್ ವಿಲ್ಸನ್ ಮತ್ತು ಸೈಕತ್ ಅವರು ಕ್ರಮವಾಗಿ ಟಿ.ವಿ ಹಾಗೂ ನಾಲ್ಕನೇ ಅಂಪೈರ್ ಆಗಿರುವರು.

ಈ ಟೂರ್ನಿಯಲ್ಲಿ ಕಾರ್ಯನಿರ್ವಹಿಸಲು 16 ಅಂಪೈರ್‌ಗಳನ್ನು ಆಯ್ಕೆ ಮಾಡಲಾಗಿದೆ. ಅದರಲ್ಲಿ 12 ಮಂದಿ ಐಸಿಸಿಯ ಎಮಿರೆಟ್ಸ್ ಎಲೀಟ್ ಪ್ಯಾನಲ್ ಅಂಪೈರ್‌ಗಳಾಗಿದ್ದಾರೆ. ಐಸಿಸಿ ಉದಯೋನ್ಮುಖ ಅಂಪೈರ್ ಪ್ಯಾನಲ್‌ನಿಂದ ನಾಲ್ವರು ಆಯ್ಕೆಯಾಗಿದ್ದಾರೆ.



ಶ್ರೀನಾಥ್

2019ರ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಕಾರ್ಯನಿರ್ವಹಿಸಿದ್ದ ಕುಮಾರ ಧರ್ಮಸೇನ, ಮರೈಸ್ ಎರಸ್ಮಸ್ ಹಾಗೂ ರಾಡ್ ಟಕರ್ ಅವರೂ ಈ ತಂಡದಲ್ಲಿದ್ದಾರೆ. ಆದರೆ ಪಾಕಿಸ್ತಾನದ ಅಲೀಂ ದಾರ್ ಒಬ್ಬರು ಇಲ್ಲ. ಅವರು ಈಚೆಗೆ ನಿವೃತ್ತರಾಗಿದ್ದರು.

ಕನ್ನಡಿಗ ಜಾವಗಲ್ ಶ್ರೀನಾಥ್, ಜೆಫ್ ಕ್ರೋವ್, ಆ್ಯಂಡಿ ಪೈಕ್ರಾಫ್ಟ್ ಹಾಗೂ ರಿಚಿ ರಿಚರ್ಡ್ಸನ್ ಅವರು ರೆಫರಿಗಳ ಪ್ಯಾನಲ್‌ನಲ್ಲಿ ದ್ದಾರೆ.

ಲೀಗ್ ಹಂತದ ಪಂದ್ಯಗಳಿಗೆ ಮಾತ್ರ ಈ ನೇಮಕವನ್ನು ಮಾಡಲಾಗಿದೆ. ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳಿಗೆ ನಂತರ ನೇಮಕ ಮಾಡಲಾಗುವುದು ಎಂದು ಐಸಿಸಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಂಪೈರ್‌ಗಳು: ನಿತಿನ್ ಮೆನನ್, ಕ್ರಿಸ್ ಬ್ರೌನ್, ಕುಮಾರ ಧರ್ಮಸೇನ, ಮರೈಸ್ ಯರಸ್ಮಸ್, ಕ್ರಿಸ್ ಗಫಾನಿ, ಮಿಚೆಲ್ ಗಾಫ್, ಆಡ್ರಿಯನ್ ಹೋಲ್ಡ್‌ಸ್ಟಾಕ್, ರಿಚರ್ಡ್ ಇಲಿಂಗ್‌ವರ್ಥ್, ರಿಚರ್ಡ್ ಕೆಟಲ್‌ಬರೊ, ಎಹಸಾನ್ ರಝಾ, ಪಾಲ್ ರೀಫೆಲ್, ಶರ್ಫುದ್ದೌಲಾ ಇಬ್ನಿ ಶೈದ್ ಸೈಕತ್, ರಾಡ್ ಟಕರ್, ಅಲೆಕ್ಸ್ ವಾರ್ಫ್, ಜೊಯೆಲ್ ವಿಲ್ಸನ್, ಪಾಲ್ ವಿಲ್ಸನ್.

ಟಾಟಾ ಸ್ಟೀಲ್ ಚೆಸ್: ಪ್ರಜ್ಞಾನಂದಗೆ 3ನೇ ಸ್ಥಾನ

ಗ್ರಿಶ್ಚುಕ್‌ಗೆ ಬ್ಲಿಟ್ಜ್ ವಿಭಾಗದ ಪ್ರಶಸ್ತಿ

ಕೋಲ್ಕತ್ತ: ಫಿಡೆ ಪ್ರತಿನಿಧಿಸುತ್ತಿರುವ ರಷ್ಯಾದ ಆಟಗಾರ ಅಲೆಕ್ಸಾಂಡರ್ ಗ್ರಿಶ್ಚುಕ್ ಅವರು ಶನಿವಾರ ಮುಕ್ತಾಯಗೊಂಡ ಟಾಟಾ ಸ್ಟೀಲ್ ಚೆಸ್ ಇಂಡಿಯಾ ಟೂರ್ನಿಯ ಬ್ಲಿಟ್ಜ್ ವಿಭಾಗದಲ್ಲಿ ಚಾಂಪಿಯನ್ ಆದರು. ಅವರು 18 ಸುತ್ತುಗಳಲ್ಲಿ 12 ಪಾಯಿಂಟ್ಸ್ ಪಡೆದರು.

ಭಾರತದ ಆಟಗಾರರ ಪೈಕಿ ಪ್ರಜ್ಞಾನಂದ ಅವರ ಸಾಧನೆ ಉತ್ತಮವಾಗಿದ್ದು ಒಟ್ಟಾರೆ ಮೂರನೇ ಸ್ಥಾನ ಪಡೆದರು. ಪ್ರಜ್ಞಾನಂದ ಮತ್ತು ಉಜ್ಬೇಕಿಸ್ತಾನದ ಅಬ್ದುಸತ್ತಾರೋವ್ ನೋದಿರ್ಬೆಕ್ ತಲಾ 11 ಪಾಯಿಂಟ್ಸ್ ಕಲೆಹಾಕಿದ್ದರು. ಆದರೆ ಉಜ್ಬೇಕ್ ಆಟಗಾರನ ಟೈಬ್ರೇಕ್ ಸ್ಕೋರ್ ಉತ್ತಮವಾಗಿದ್ದ ಕಾರಣ ಎರಡನೇ ಸ್ಥಾನ ಪಡೆದರು.



ಟ್ರೋಫಿಯೊಂದಿಗೆ ಗ್ರಿಶ್ಚುಕ್

ಶುಕ್ರವಾರ ಮೊದಲ ದಿನದ (9 ಸುತ್ತುಗಳ ಬಳಿಕ) ಮುನ್ನಡೆ ಹಂಚಿಕೊಂಡಿದ್ದ ಪ್ರಗ್ದು ಅವರು 13ನೇ ಸುತ್ತಿನಲ್ಲಿ ಅಬ್ದುಸತ್ತಾರೋವ್, 15ನೇ ಸುತ್ತಿನಲ್ಲಿ ಗ್ರಿಶ್ಚುಕ್ ಮತ್ತು 16ನೇ ಸುತ್ತಿನಲ್ಲಿ ಸ್ವದೇಶದ ವಿದಿತ್ ಗುಜರಾತಿ ಅವರಿಗೆ ಸೋತಿದ್ದು ದುಬಾರಿ ಆಯಿತು.

ಭಾರತದ ಅರ್ಜುನ್ ಎರಿಗೇಶಿ (10.5) ನಾಲ್ಕನೇ, ಪಿ.ಹರಿಕೃಷ್ಣ (8.5) ಆರನೇ, ವಿದಿತ್ ಗುಜರಾತಿ (8) ಏಳನೇ ಮತ್ತು ದೊಮ್ಮರಾಜು ಗುಕೇಶ್ (7.5) ಎಂಟನೇ ಸ್ಥಾನ ಪಡೆದರು. ಎರಡು ದಿನಗಳ ಹಿಂದೆ ರ‍್ಯಾಪಿಡ್ ವಿಭಾಗದಲ್ಲಿ ಚಾಂಪಿಯನ್ ಆಗಿದ್ದ ಮ್ಯಾಕ್ಸಿಮ್ ವಾಷಿಯರ್ ಲಗ್ರಾವ್ ಅವರು (9.5) ಅವರು ಇಲ್ಲಿ ಐದನೇ ಸ್ಥಾನಕ್ಕೆ ಸರಿದರು.

ಬಾಕ್ಸಿಂಗ್: ಫೈನಲ್‌ಗೆ ಮನೀಶ್

ನವದೆಹಲಿ (ಪಿಟಿಐ): ಭಾರತದ ಮಂಜು ರಾಣಿ ಮತ್ತು ಮನೀಶ್ ಕೌಶಿಕ್, ಬೋಸ್ನಿಯಾ– ಹರ್ಜೆಗೋವಿನಾದ ಸರಯೇವೊದಲ್ಲಿ ನಡೆಯುತ್ತಿರುವ ಮುಸ್ತಾಫಾ ಹಜ್ರುಲಹೋವಿಕ್ ಸ್ಮಾರಕ ಬಾಕ್ಸಿಂಗ್ ಟೂರ್ನಿಯಲ್ಲಿ ಫೈನಲ್ ತಲುಪಿದರು.

63 ಕೆ.ಜಿ ವಿಭಾಗದಲ್ಲಿ ಮನೀಶ್ ಕೌಶಿಕ್ ತಮ್ಮ ಅನುಭವ ಬಳಸಿಕೊಂಡು ಅಫ್ಗಾನಿಸ್ತಾನದ ಮೊಹಮ್ಮದ್ ಸರ್ವಾರಿ ಅವರನ್ನು ಶುಕ್ರವಾರ 5–0 ಯಿಂದ ಸೋಲಿಸಿದರು.

ಮಹಿಳೆಯರ 50 ಕೆ.ಜಿ. ವಿಭಾಗದಲ್ಲಿ ಮಂಜು ಪ್ರಾಬಲ್ಯ ಮೆರೆದು ಹಂಗೆರಿಯ ಪೆಟ್ರಾ ಮೆಝಿ ಅವರನ್ನು 5–0 ಯಿಂದ ಮಣಿಸಿದರು. ಅವರು ಚಿನ್ನದ ಪದಕಕ್ಕಾಗಿ ಅಫ್ಗಾನಿಸ್ತಾನದ ಸದಿಯಾ ಬ್ರೋಮಂಡ್ ವಿರುದ್ಧ ಸೆಣಸಲಿದ್ದಾರೆ.

ಡಿಎಚ್ ಕಪ್: ಬಾಷ್, ಅಡೋಬಿಗೆ ಜಯ



ಬೆಂಗಳೂರು: ಬಾಷ್ ಮತ್ತು ಅಡೋಬಿ ತಂಡಗಳು ಇಲ್ಲಿ ಆರಂಭವಾದ ಟ್ರೂಆಲ್ಟ್ ಬಯೊಎನರ್ಜಿ ಡಿಎಚ್ ಕಪ್–2023 'ಫೈವ್ ಎ ಸೈಡ್' ಕಾರ್ಪೊರೇಟ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ಶನಿವಾರ ನಡೆದ ತನ್ನ ಮೊದಲ ಪಂದ್ಯದಲ್ಲಿ ಬಾಷ್ 4–2 ಗೋಲುಗಳಿಂದ ಎಂಯು ಸಿಗ್ಮಾ ತಂಡವನ್ನು ಮಣಿಸಿದರೆ, ಎರಡನೇ ಪಂದ್ಯದಲ್ಲಿ 7–1 ರಿಂದ ಮಶ್ರೆಖ್ ವಿರುದ್ಧ ಗೆದ್ದಿತು.

ಅಡೋಬಿ 7–2 ರಿಂದ ಮಾಯಾ ಎಸ್ಟೇಟ್ಸ್ ತಂಡವನ್ನು ಸೋಲಿಸಿತು. ದಿ ಟಿಮ್‌ಕೆನ್ ಕಂಪನಿ ತಂಡವು ಬಿಗ್ ಬ್ರೂಸ್ಕಿ ಮತ್ತು ಟ್ರೂಆಲ್ಟ್ ತಂಡಗಳ ವಿರುದ್ಧ ಕ್ರಮವಾಗಿ 5–0 ಹಾಗೂ 12–0 ಯಿಂದ ಗೆದ್ದಿತು.

ಇತರ ಪಂದ್ಯಗಳಲ್ಲಿ ಬ್ರಿಗೇಡ್ ಗ್ರೂಪ್ 7–0 ಯಿಂದ ಟ್ರೂಆಲ್ಟ್ ಬಯೊಎನರ್ಜಿ ವಿರುದ್ಧ; ಜಾನ್ ಡಿಸ್ಟಿಲರೀಸ್ 8–1 ರಿಂದ ಜೆನೆಕ್ಸ್ ವಿರುದ್ಧ; ಎಂಯು ಸಿಗ್ಮಾ 2–0 ರಿಂದ ಕಾರ್ಲೆ ಇನ್ಫೋಟೆಕ್ ವಿರುದ್ಧ; ಟಿವಿಎಸ್ ಮೋಟರ್ ಕಂ. 2–1 ರಿಂದ ಕಾರ್ಲೆ ಇನ್‌ಫ್ರಾ ವಿರುದ್ಧ; ಸ್ವಿಸ್ ರೇ 7–0 ಯಿಂದ ಮಶ್ರೆಖ್ ವಿರುದ್ಧ ಜಯ ಸಾಧಿಸಿದವು.

ಐಕ್ವಿಯಾ– ವಿಸೆನ್ ನಡುವಣ ಪಂದ್ಯ 2–2 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಇಂಡಿಯನ್ ಗ್ರ್ಯಾನ್‌ಪ್ರಿ ಕೂಟ ಇಂದಿನಿಂದ

ಚಂಡೀಗಢ (ಪಿಟಿಐ): ಭಾನುವಾರ ಇಲ್ಲಿ ಆರಂಭವಾಗಲಿರುವ ಇಂಡಿಯನ್ ಗ್ರ್ಯಾನ್ ಪ್ರಿ ಕೂಟದಲ್ಲಿ ಅರ್ಹತಾ ಮಟ್ಟ ಸಾಧಿಸಿದಲ್ಲಿ, ಈಗಾಗಲೇ ಆಯ್ಕೆಯಾಗಿರುವ 65 ಅಥ್ಲೀಟುಗಳ ಜೊತೆ ಅಂಥ ಇನ್ನೂ 15 ಮಂದಿಯನ್ನು ಏಷ್ಯನ್‌ಗೇಮ್ಸ್ ತಂಡಕ್ಕೆ ಸೇರ್ಪಡೆಗೊಳಿಸುವ ವಿಶ್ವಾಸವನ್ನು ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾ ವ್ಯಕ್ತಪಡಿಸಿದೆ.

ಏಷ್ಯನ್ ಗೇಮ್ಸ್ ಇದೇ 23 ರಂದು ಆರಂಭವಾಗಲಿದೆ. 'ಈಗಾಗಲೇ 65 ಮಂದಿಯ ಅಥ್ಲೆಟಿಕ್ಸ್ ತಂಡವನ್ನು ಆಯ್ಕೆ ಮಾಡಿದ್ದೇವೆ. ಇನ್ನೂ 15 ಮಂದಿಯ ಆಯ್ಕೆಗೆ ಅವಕಾಶವಿದೆ. ಆದರೆ ಅವರು ಇಂಡಿಯನ್ ಗ್ರ್ಯಾನ್‌ಪ್ರಿ ಕೂಟದಲ್ಲಿ ಎಎಫ್‌ಐ ನಿಗದಿಪಡಿಸಿದ ಅರ್ಹತಾ ಮಟ್ಟ ತಲುಪಬೇಕಷ್ಟೇ' ಎಂದು ಎಎಫ್‌ಐ ಮುಖ್ಯಸ್ಥ ಅದಿಲ್ ಸುಮರಿವಾಲಾ ತಿಳಿಸಿದರು.

ಏಷ್ಯಾಡ್‌ಗೆ ಆಯ್ಕೆಯಾದ 12 ಮಂದಿ ಇಲ್ಲಿ ಹೆಸರು ನೊಂದಾಯಿಸಿದ್ದಾರೆ. 100 ಮೀ. ಹರ್ಡಲ್ಸ್ ಓಟಗಾರ್ತಿ ಜ್ಯೋತಿ ಯರ್ರಾಜಿ ಇಲ್ಲಿ 400 ಮೀ. ಓಟಕ್ಕೂ ಹೆಸರು ಕೊಟ್ಟಿದ್ದಾರೆ.